ಹುಬ್ಬಳ್ಳಿ
ಬುಧವಾರ, 27 ಮೇ 2026
ಸಂಪುಟ 16, ಸಂಚಿಕೆ 63, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಪರಿಷತ್‌ಗೆ ಜೂ.18ಕ್ಕೆ ಮತದಾನ | ೦೪

ಸುಪ್ರೀಂಗೆ ಡಿಕೆಶಿ ಧನ್ಯವಾದ | ೦೫

ದಿಲ್ಲಿಯಲ್ಲಿ ವರಿಷ್ಠರಿಂದ ಸರಣಿ ಸಭೆ

ಹೈಕಮಾಂಡ್‌ನ ಪರಿಹಾರ ಸೂತ್ರ



• **ಹೊಸದಿಲ್ಲಿ:** ಕಳೆದ ಕೆಲ ದಿನಗಳಿಂದ ಕರ್ನಾಟಕದಲ್ಲಿ ಉಂಟಾಗಿದ್ದ ನಾಯಕತ್ವ ಗೊಂದಲಕ್ಕೆ ಕಾಂಗ್ರೆಸ್ ಹೈಕಮಾಂಡ್ ಕೊನೆಗೂ ಮಂಗಳವಾರ ಪರಿಹಾರ ಸೂತ್ರವನ್ನು ಕಂಡುಕೊಂಡಿದೆ. ಶೀಘ್ರದಲ್ಲೇ ಅದು ಅನುಷ್ಠಾನಕ್ಕೆ ಬರಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದಿಲ್ಲಿಗೆ ಬರುವಂತೆ ಕಾಂಗ್ರೆಸ್ ಹೈಕಮಾಂಡ್ ಸೋಮವಾರ ಸೂಚನೆ ನೀಡಿತ್ತು. ಅದರಂತೆ ಸಿದ್ದರಾಮಯ್ಯ ದಿಲ್ಲಿಗೆ ತೆರಳಿದ್ದರು. ಇತ್ತ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ದಿಲ್ಲಿಗೆ ದೌಡಾಯಿಸಿದ್ದರು. ಮಂಗಳವಾರ ಎಐಸಿಸಿ ಕಚೇರಿಯ ಇಂದಿರಾ ಭವನಕ್ಕೆ ಉಭಯ ನಾಯಕರನ್ನು ಕರೆಸಿಕೊಂಡ ಕಾಂಗ್ರೆಸ್ ಹೈಕಮಾಂಡ್ ಅವರೊಂದಿಗೆ ಸರಣಿ ಸಭೆಗಳನ್ನು ನಡೆಸಿದೆ. ಪುಟ ೪

ಇಂದು ಬೆಂಗಳೂರಿಗೆ ಕೆಸಿವಿ, ಸುರ್ಜೆವಾಲಾ

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ಕರ್ನಾಟಕ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರು ಬುಧವಾರ ಬೆಂಗಳೂರಿಗೆ ಆಗಮಿಸಲಿದ್ದಾರೆ. ಬೆಂಗಳೂರಿನಲ್ಲಿ ಸಭೆ ನಡೆಸುವ ಸಾಧ್ಯತೆಗಳಿವೆ. ಬೆಳಗ್ಗೆ 10.30ಕ್ಕೆ ಕೆಪಿಸಿಸಿ ಕಚೇರಿಯಲ್ಲಿ ಪಂಡಿತ್ ಜವಾಹರಲಾಲ್ ನೆಹರು ಅವರ ಪುಣ್ಯಸ್ಮರಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಾಲ್ಗೊಳ್ಳಲಿದ್ದು, ಬಳಿಕ ವಿಧಾನಸೌಧದ ಆವರಣದಲ್ಲಿರುವ ನೆಹರು ಅವರ ಪ್ರತಿಮೆಯ ಬಳಿ ಅವರ ಭಾವಚಿತ್ರಕ್ಕೆ ಗೌರವಾರ್ಪಣೆ ಮಾಡಲಿದ್ದಾರೆ.

ಜನಜಾಗೃತಿ ಅಭಿಯಾನಕ್ಕೆ ಸಿದ್ಧತೆ

ಮೋದಿ ಸರ್ಕಾರಕ್ಕೆ 12 ವರ್ಷದ ಹರ್ಷ

- ಜೂ.5ರಿಂದ 21ರವರೆಗೆ ಜನಜಾಗೃತಿ
- ರಾಷ್ಟ್ರವ್ಯಾಪಿ ಅಭಿಯಾನದಲ್ಲಿ ಜನರಿಗೆ ಅರಿವು
- 22 ಪ್ರಮುಖ ಸಾಧನೆಗಳ ಬಗ್ಗೆ ಮಾಹಿತಿ



• **ಹೊಸದಿಲ್ಲಿ:** ಕೇಂದ್ರದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರದ ಆಡಳಿತಕ್ಕೆ ಮಂಗಳವಾರ 12 ವರುಷಗಳು ತುಂಬಿದವು. ಈ ಸಾಧನೆ ಸಂಭ್ರಮಿಸುವ ಅನ್ವಯ ಮತ್ತು ಮೋದಿ ಸರಕಾರದ ಜನಪರ ಯೋಜನೆಗಳನ್ನು ರಾಷ್ಟ್ರವ್ಯಾಪಿ ಪರಿಚಯಿಸುವ, ಅರ್ಥೈಸುವ ಜನಜಾಗೃತಿ ಅಭಿಯಾನಕ್ಕೆ ಬಿಜೆಪಿ ಮತ್ತದರ ಮಿತ್ರಪಕ್ಷಗಳು ಅಣಿಯಾಗುತ್ತಿವೆ. ಎನ್‌ಡಿಎ ಸರಕಾರ ಜನರಿಗೆ ನೀಡಿರುವ, ನೀಡುತ್ತಿರುವ ಕಲ್ಯಾಣಪರ ಆಡಳಿತ, ಬಿಗು ಪಾರದರ್ಶಿತ್ವದ ವ್ಯವಸ್ಥೆಗಳು ಮತ್ತು ಜಾಗತಿಕ ರಂಗದಲ್ಲಿ ಬೆಳೆಯುತ್ತಿರುವ ಭಾರತದ ರಾಜತಾಂತ್ರಿಕ ಪ್ರಭಾವ ಇತ್ಯಾದಿ ಎಲ್ಲಕ್ಕೂ ಪ್ರಧಾನಿ ನರೇಂದ್ರ ಮೋದಿ ಅವರ ಸಮರ್ಥ ನಾಯಕತ್ವ ಮೂಲ ಕಾರಣವೆಂದು ಬಿಜೆಪಿ ಮತ್ತು ಮಿತ್ರಪಕ್ಷ ಜೆಡಿಯು ನಾಯಕರು ಹೆಮ್ಮೆಯಿಂದ ಹೇಳಿದ್ದಾರೆ.

ಮೋದಿ ಸರಕಾರ ಜನಪರವಾಗಿ ಜಾರಿಗೊಳಿಸಿರುವ ಕಲ್ಯಾಣ ಕಾರ್ಯಕ್ರಮಗಳು, ಮೂಲಸೌಕರ್ಯ, ವಿದೇಶಾಂಗ ನೀತಿಸಹಿತ ಸರಕಾರದ 22 ಪ್ರಮುಖ ಸಾಧನೆಗಳ ಮಾಹಿತಿಯನ್ನು ಅಭಿಯಾನದಲ್ಲಿ ರಾಷ್ಟ್ರವ್ಯಾಪಿ ಜನರಿಗೆ ಪರಿಚಯಿಸಲಾಗುವುದು, ಪ್ರದರ್ಶಿಸಲಾಗುವುದು. ಪುಟ ೪

ಬಲಿಷ್ಠ ಜಾಗತಿಕ ಮಾನ್ಯತೆ

ಹಿಂದಿನ ಸರಕಾರಗಳಿಗೆ ಹೋಲಿಸಿದಲ್ಲಿ, ಭಾರತದ ಜಾಗತಿಕ ಮಾನ್ಯತೆ ಇಂದು ಅದೆಷ್ಟೋ ಪಾಲು ಬಲಿಷ್ಠವಾಗಿರುವುದು ನಿರ್ವಿವಾದ ಸಂಗತಿ. ಸಂಘರ್ಷ ನಿರತ ಹಲವು ರಾಷ್ಟ್ರಗಳು ಇದೀಗಲೂ ಸಮಾನ ಭರವಸೆಯೊಂದಿಗೆ ಭಾರತದತ್ತ ನೋಡುತ್ತಿವೆ. ಪುಟ ೪

ಜನಸಂಖ್ಯೆ ಸ್ವರೂಪ ಪರಾಮರ್ಶೆ ಹಿನ್ನೆಲೆ

ಉನ್ನತ ಅಧ್ಯಯನ ತಂಡ ರಚನೆ: ಶಾ ಘೋಷಣೆ

• **ಹೊಸದಿಲ್ಲಿ:** ರಾಷ್ಟ್ರೀಯ ಭದ್ರತೆ, ಸಾರ್ವಭೌಮತೆ ಮತ್ತು ಸಾಮಾಜಿಕ ಸ್ಥಿರತೆಗೆ ತೊಡಕುಗಳೊಂದಿಗೆ ಗಂಭೀರ ಸವಾಲಾಗಿ ಪರಿಣಮಿಸಿರುವ, ಜನಸಂಖ್ಯಾ



ಸ್ವರೂಪದಲ್ಲಿನ ಬದಲಾವಣೆಗಳ ಸಮಗ್ರ ಪರಾಮರ್ಶೆ ಮತ್ತು ಅಧ್ಯಯನಕ್ಕಾಗಿ, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ನ್ಯಾಯಮೂರ್ತಿ ಪ್ರಕಾಶ್ ಪ್ರಭಾಕರ್ ನಾವೊಲೇಕರ್ ನೇತೃತ್ವದಲ್ಲಿ, ಉನ್ನತ ಮಟ್ಟದ ಅಧ್ಯಯನ ತಂಡ ರಚಿಸಲಾಗಿದೆ. ತಂಡವು ದೇಶಾದ್ಯಂತ ಜನಸಂಖ್ಯಾ ಸ್ವರೂಪದಲ್ಲಾಗಿರುವ ಬದಲಾವಣೆಗಳ ಅಧ್ಯಯನ ನಡೆಸಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದಾರೆ. ಪುಟ ೪


ರಾಷ್ಟ್ರದ ವರ್ತಮಾನ, ಭವಿಷ್ಯಕ್ಕೆ ತೊಂದರೆ

ಅಕ್ರಮ ನುಸುಳುವಿಕೆ ಮತ್ತು ಜನಸಂಖ್ಯಾ ಸ್ವರೂಪದಲ್ಲಿ ಅಸ್ವಾಭಾವಿಕ ಬದಲಾವಣೆಗೆ ಕಾರಣಕರ್ತ ಇತರ ಅಂಶಗಳು ಯಾವುದೇ ರಾಷ್ಟ್ರದ ವರ್ತಮಾನ ಮತ್ತು ಭವಿಷ್ಯಕ್ಕೆ ಗಂಭೀರ ಸವಾಲೊಡ್ಡಲಿವೆ. ಪ್ರಧಾನಿ ನರೇಂದ್ರ ಮೋದಿ ಅವರು 2025ರ ಆ.15ರಂದು ಘೋಷಿಸಿದಂತೆ, ಇದೀಗ ಈ ಸಮಸ್ಯೆಯ ಅಧ್ಯಯನಕ್ಕಾಗಿ ಉನ್ನತಾಧಿಕಾರ ತಂಡ ರಚಿಸಲಾಗಿದೆ. ಜನಗಣತಿ ಆಯುಕ್ತ ಮತ್ತು ಮಾಜಿ ಐಎಎಸ್ ಅಧಿಕಾರಿ ದುರ್ಗಾ ಶಂಕರ್ ಮಿಶ್ರಾ, ಮಾಜಿ ಐಪಿಎಸ್ ಅಧಿಕಾರಿ ಬಾಲಾಜಿ ಶ್ರೀವಾಸ್ತವ, ಆರ್ಥಿಕ ತಜ್ಞರಾದ ಶಮಿಕಾ ರವಿ ತಂಡದಲ್ಲಿರುವರು. ಗೃಹ ವ್ಯವಹಾರ ಖಾತೆಯಲ್ಲಿನ ಜಂಟಿ ಕಾರ್ಯದರ್ಶಿ (ವಿದೇಶೀಯರು-1)ಗಳು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ರುವರು ಎಂದು ಸಚಿವ ಶಾ ಮಾಹಿತಿ ನೀಡಿದ್ದಾರೆ.

ಕರ್ನಾಟಕ ಸರ್ಕಾರಕ್ಕೆ ಕೇಂದ್ರ ಮಾಹಿತಿ

ದ್ವೇಷದ ಭಾಷಣ ತಡೆ ಕಾನೂನು ಅಗತ್ಯವಿಲ್ಲ

• **ಹೊಸದಿಲ್ಲಿ:** ದೇಶದಲ್ಲಿ ಪ್ರಸಕ್ತ ಅಸ್ತಿತ್ವದಲ್ಲಿರುವ ಕಾನೂನುಗಳು ದ್ವೇಷ ಭಾಷಣ-ದ್ವೇಷಯುಕ್ತ ಅಪರಾಧಗಳ ನಿಯಂತ್ರಿಸಲು ಸಂಪೂರ್ಣ ಶಕ್ತವಿವೆ ಮತ್ತು ಸಮರ್ಥವಾಗಿವೆ. ಹಾಗಾಗಿ ಈ ವಿಚಾರದಲ್ಲಿ ಪ್ರತ್ಯೇಕ



ಕಾನೂನಿನ ಅಗತ್ಯವಿಲ್ಲವೆಂದು ಕೇಂದ್ರ ಸರಕಾರ ಕರ್ನಾಟಕ ಸರಕಾರಕ್ಕೆ ಸ್ಪಷ್ಟವಾಗಿ ಹೇಳಿದೆ. ಈ ಮೂಲಕ ಪ್ರತ್ಯೇಕ ಕಾನೂನು ಜಾರಿ ಮಾಡುವ ಕರ್ನಾಟಕ ಸರಕಾರದ ಪ್ರಯತ್ನಕ್ಕೆ ಹಿನ್ನಡೆಯಾಗಿದೆ.

ಕರ್ನಾಟಕದ ಪ್ರಸ್ತಾವಿತ ದ್ವೇಷ ಭಾಷಣ ನಿಯಂತ್ರಣ ಶಾಸನ ಬೆಂಬಲಿಸಲು ಕೇಂದ್ರ ಗೃಹ ಖಾತೆ ನಿರಾಕರಿಸಿದೆ. ಅಂತಹ ಅಪರಾಧ ನಿಯಂತ್ರಿಸಲು ಸದ್ಯ ಅಸ್ತಿತ್ವದಲ್ಲಿರುವ ಕಾನೂನುಗಳು ಸಾಕಷ್ಟು ಸಮರ್ಥವಿವೆ. ಪ್ರತ್ಯೇಕ ಕಾನೂನು ಜಾರಿಗೊಳಿಸುವ ಕರ್ನಾಟಕ ಸರಕಾರದ ಕ್ರಮವು ಕಾನೂನು ಅತಿಕ್ರಮಣ ಮತ್ತು ಅಸಂಗತತೆಗೆ ಕಾರಣವಾಗಲಿದೆ ಎಂದು ಕೇಂದ್ರ ಗೃಹ ಸಚಿವಾಲಯ ಎಚ್ಚರಿಸಿದೆ. ಪುಟ ೪

ಏಕರೂಪತೆ ಕೊರತೆ, ನಕಲಿತನಕ್ಕೆ ಎಡೆ

ರಾಜ್ಯಮಟ್ಟದಲ್ಲಿ ಪ್ರತ್ಯೇಕ ಶಾಸನ ರಚನೆಯ ಅಗತ್ಯವಿಲ್ಲ. ಇದು ಕಾನೂನು ನಿಯಮಾವಳಿಗಳ ನಕಲಿತನ ಮತ್ತು ದೇಶಾದ್ಯಂತ ಪ್ರಸ್ತುತ ಕಾನೂನು ಅನುಷ್ಠಾನದಲ್ಲಿನ ಏಕರೂಪತೆಗೆ ತೊಡಕುಂಟು ಮಾಡಲಿದೆ ಎಂದು ಗೃಹ ಖಾತೆ ಕರ್ನಾಟಕ ಸರಕಾರಕ್ಕೆ ಸ್ಪಷ್ಟಪಡಿಸಿದೆ. ಬೆನ್ನಲ್ಲೇ, ಕೇಂದ್ರ, ಸರಕಾರ ವ್ಯಕ್ತಪಡಿಸಿರುವ ಆಕ್ಷೇಪಗಳಿಗೆ ಪ್ರತಿಯಾಗಿ, ವಿಸ್ತೃತವಾದ ಪ್ರತ್ಯುತ್ತರ ನೀಡುವಂತೆ ಕರ್ನಾಟಕದ ಕಾನೂನು ಇಲಾಖೆ ರಾಜ್ಯದ ಗೃಹ ಇಲಾಖೆಯನ್ನು ಕೋರಿದೆ.

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ಇಂದು

ಹುಬ್ಬಳ್ಳಿ: ನವನಗರದ 110/11 ಕೆ.ವಿ ವಿದ್ಯುತ್ ಉಪಕೇಂದ್ರದ, 1ನೇ ತ್ರೈಮಾಸಿಕ ನಿರ್ವಹಣಾ ಕಾರ್ಯದ ನಿಮಿತ್ತ ಮೇ 27ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಅಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 3ರ ವರೆಗೆ ನವನಗರ, ಅಮರಗೋಳ, ಅಮರಗೋಳ ಕೆ.ಎಚ್.ಬಿ, ಅಶ್ವಮೇಧ ಪಾರ್ಕ್, ನಂದಿ ಬಡಾವಣೆ, ಕಾನೂನು ವಿಶ್ವವಿದ್ಯಾಲಯ, ಸಿಟಿ ಆರ್ಚರ್ಡ್ ಪಾರ್ಕ್, ಸುತಗಟ್ಟಿ, ಶಾನ್‌ಬಾರ್ಡ್, ಅಮರನಗರ, ಪ್ರಜಾ ನಗರ, ಶಾಂತ ನಗರ, ನೀಲಗುಂದ ಲೇಔಟ್, ಪಂಚಾಕ್ಷರಿ ನಗರ, ಶಿವಾನಂದ ನಗರ, ಕೆ.ಸಿ.ಸಿ ಬ್ಯಾಂಕ್ ಲೇಔಟ್, ಶಿವಪಾರ್ವತಿ ನಗರ, ಮೈಲಾರ ನಗರ, ವಾಸುದೇವ ನಗರ, ಗಾಮನಗಟ್ಟಿ, ಗಾಮನಗಟ್ಟಿ ತಾರಿಹಾಳ ರಸ್ತೆಯಲ್ಲಿರುವ ನೀರಾವರಿ ಪಂಪ್‌ಸೆಟ್‌ಗಳು, ಶಾಂತಿನಿಕೇತನ, ಬಸವೇಶ್ವರ ಪಾರ್ಕ್, ಸಪ್ತಗಿರಿ ಲೇಔಟ್, ಮಲ್ಲಿಕಾರ್ಜುನ ನಗರ, ಸಂಗೊಳ್ಳಿ ರಾಯಣ್ಣ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಉಪನ್ಯಾಸ

ಧಾರವಾಡ: ಕರ್ನಾಟಕ ವಿದ್ಯಾವರ್ಧಕ ಸಂಘದ ಮಹಿಳಾ-ಮಕ್ಕಳ ಮಂಟಪದ ವತಿಯಿಂದ ವೃದ್ಧಾಪ್ಯದಲ್ಲಿ ಮಹಿಳೆಯರ ಸಮಸ್ಯೆಗಳು-ಪರಿಹಾರೋಪಾಯ ಉಪನ್ಯಾಸ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಮೇ 27ರ ಬೆಳಗ್ಗೆ 11ಕ್ಕೆ ಸೇವಾ ಜೇರಿಗವಾಡ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದೆ. ಕವಿವಿ ಪ್ರಾಧ್ಯಾಪಕಿ ಡಾ.ಗೀತಾ ಮಹಾಲೆ, ಪಿಡಿಒ ಶಶಿರೇಖಾ ಚಿಕ್ಕಸಾಲಿ ಸಂಪನ್ಮೂಲ ವ್ಯಕ್ತಿಗಳಾಗಿ ಬರಲಿದ್ದು, ಸಮಾಜ ಸೇವಕ ಪ್ರಭಾಕರ ದೇಶಪಾಂಡೆ ಅಧ್ಯಕ್ಷತೆ ವಹಿಸುವರು ಎಂದು ಸಂಘದ ಕಾರ್ಯದರ್ಶಿ ಶಂಕರ ಹಲಗತ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಲ್ಲಕಂಬ ಪ್ರದರ್ಶನ ಇಂದು

ಧಾರವಾಡ: ಕರ್ನಾಟಕ ವಿದ್ಯಾವರ್ಧಕ ಸಂಘದ ಯುವಜನ-ಕ್ರೀಡಾ ಮಂಟಪದ ವತಿಯಿಂದ ಮಲ್ಲಕಂಬ ಅಕ್ಯಾಡೆಮಿ, ಟ್ಯಾಂಡೋ ಸಂಸ್ಥೆಯ ಸಹಯೋಗದಲ್ಲಿ ಮಲ್ಲಕಂಬ ಹಾಗೂ ಸ್ವರಕ್ಷಣಾ ಪ್ರದರ್ಶನ ಕಾರ್ಯಕ್ರಮ ಮೇ 27ರಂದು ಬೆಳಗ್ಗೆ 10.30ಕ್ಕೆ ಸಂಘದ ನಾಡೋಜ ಪಾಟೀಲ ಪುಟ್ಟಪ್ಪ ಸಭಾಂಗಣದಲ್ಲಿ ಜರುಗಲಿದೆ. ಕವಿವಿ ವಿಶ್ರಾಂತ ಕುಲಪತಿ ಡಾ. ಬಿ.ಎಂ.ಪಾಟೀಲ ಉದ್ಘಾಟಿಸಲಿದ್ದು, ಯುವಜನ-ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಸಂತೋಷ ಅಮರಾಪುರ, ಜಿಮ್ನಾಸ್ಟಿಕ್ ತರಬೇತುದಾರ ವಿಠ್ಠಲ ಮಂತಗಟ್ಟಿ, ಮಲ್ಲಕಂಬ ಅಕ್ಯಾಡೆಮಿ ಸಂತೋಷ ಸಂತಣಿ, ಆದಿತಿ ಕ್ಷೇತ್ರತೇಜ ಪಾಲ್ಗೊಳ್ಳಲಿದ್ದು, ಪ್ರೊ. ಬಸವರಾಜ ತಾಳಿಕೋಟಿ ಅಧ್ಯಕ್ಷತೆ ವಹಿಸುವರು ಎಂದು ಸಂಘದ ವಿಶ್ವೇಶ್ವರಿ ಹಿರೇಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಯಾಗಾರ ನಾಳೆ

ಹುಬ್ಬಳ್ಳಿ: ಭವಾನಿ ನಗರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಶ್ರೀ ಸುಜಯೀಂದ್ರ ಭವನದಲ್ಲಿ ಅಖಿಲ ಭಾರತ ಬ್ರಾಹ್ಮಣ ಕ್ಷೇಮಾಭಿವೃದ್ಧಿ ನಿಧಿ ವತಿಯಿಂದ ಜೀವನಂ ಸ್ವಾವಲಂಬನಮ್ ಕಾರ್ಯಾಗಾರ ಮೇ 28ರಂದು ಬೆಳಗ್ಗೆ 10ಕ್ಕೆ ಏರ್ಪಡಿಸಲಾಗಿದೆ ನಿಧಿ ಕಾರ್ಯದರ್ಶಿ ನರಸಿಂಹರಾವ್ ಸೋಮಲಾಪೂರ ತಿಳಿಸಿದರು.

ನಗರದಲ್ಲಿ ಸುದ್ದಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10ಕ್ಕೆ ಉದ್ಯಮಿ ಎಚ್.ಎನ್. ನಂದಕುಮಾರ ಉದ್ಘಾಟಿಸುವರು. ಶಿಕ್ಷಣ ಹಾಗೂ ಸ್ವ ಉದ್ಯೋಗ ಮಾರ್ಗದರ್ಶನ ಕೇಂದ್ರವನ್ನು ಮಾಜಿ ಮಹಾಪೌರ ಹನುಮಂತ ಡಂಬಳ ಅವರು ಉದ್ಘಾಟಿಸುವರು. ಆಯುರ್ವೇದ ಕಾಲೇಜ್ ಮತ್ತು ಆಸ್ಪತ್ರೆಯ ಅಧ್ಯಕ್ಷ ಗೋವಿಂದ ಜೋಶಿ, ಉದ್ಯಮಿಗಳಾದ ಬಿ.ಎಂ. ಪುರೋಹಿತ, ರವಿ ದೇಶಪಾಂಡೆ, ಶ್ರೀಕಾಂತ ಕರಿ, ನೇತ್ರ ತಜ್ಞ ಡಾ. ಗೌತಮ ಹಳದಿಪುರ ಅತಿಥಿಗಳಾಗಿ ಆಗಮಿಸುವರು. ಅಖಿಲ ಭಾರತ ಬ್ರಾಹ್ಮಣ ಕ್ಷೇಮಾಭಿವೃದ್ಧಿ ನಿಧಿ ಹು-ಧಾ ಅಧ್ಯಕ್ಷ ವಾದಿರಾಜ ಪಾಟೀಲ ಅಧ್ಯಕ್ಷತೆ ವಹಿಸುವರು ಎಂದರು. ಮಧ್ಯಾಹ್ನ 11.45ಕ್ಕೆ ನಡೆಯಲಿರುವ ಶಿಕ್ಷಣ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ವೆಂಕಪ್ಪಯ್ಯ ದೇಸಾಯಿ ವಹಿಸುವರು. ನಂತರ ವಿವಿಧ ತಜ್ಞರು ವಿಶೇಷ ಉಪನ್ಯಾಸ ನೀಡುವರು. ಮಧ್ಯಾಹ್ನ 1ರಿಂದ ಸ್ವ ಉದ್ಯೋಗ ಗೋಷ್ಠಿಯ ನಡೆಯಲಿದ್ದು, ಜಿ.ಕೆ. ಕುಲಕರ್ಣಿ ಅಧ್ಯಕ್ಷತೆ ವಹಿಸುವರು. ಮಧ್ಯಾಹ್ನ 3ರಿಂದ ನಡೆಯಲಿರುವ ಮಹಿಳಾ ಗೋಷ್ಠಿಯ ಅಧ್ಯಕ್ಷತೆಯನ್ನು ನಿವೃತ್ತ ಬ್ಯಾಂಕ್ ಅಧಿಕಾರಿ ರಮಾದೇವಿ ಚಿದಂಬರ ಜೋಶಿ ವಹಿಸುವರು. ನಂತರ ಸಂಪನ್ಮೂಲ ವ್ಯಕ್ತಿಗಳು ಉಪನ್ಯಾಸ ನೀಡುವರು ಎಂದರು. ಸಂಜೆ 4.45ಕ್ಕೆ ಸನಾತನ ಸಂಸ್ಕಾರ ಗೋಷ್ಠಿ ನಡೆಯಲಿದ್ದು, ನಿವೃತ್ತ ಪ್ರಾಧ್ಯಾಪಕ ವಿದ್ವಾನ್ ಶಂಕರಭಟ್ಟ ಜೋಶಿ ಅಧ್ಯಕ್ಷತೆ ವಹಿಸುವರು. ಸಂಜೆ 6ರಿಂದ ಸಮಾರೋಪ ಸಮಾರಂಭ ನಡೆಯಲಿದೆ. ವಾದಿರಾಜ ಪಾಟೀಲ ಅಧ್ಯಕ್ಷತೆ ವಹಿಸುವರು. ಎ.ಸಿ. ಗೋಪಾಲ, ಗೋಪಾಲ ಕುಲಕರ್ಣಿ, ರಾಜೀವ ಪಾಟೀಲ ಕುಲಕರ್ಣಿ, ಲಕ್ಷ್ಮಣ ಕುಲಕರ್ಣಿ ಅತಿಥಿಗಳಾಗಿ ಆಗಮಿಸುವರು ಎಂದರು.

ಚಿಕಿತ್ಸೆ ಫಲಿಸದೆ ಸಾವು

ಕುಂದಗೋಳ: ತಾಲೂಕಿನ ಸಂಶಿ ಗ್ರಾಮದ ಹುಬ್ಬಳ್ಳಿ-ಲಕ್ಷ್ಮೇಶ್ವರ ರಸ್ತೆಯ ಮಾರ್ಗ ಮಧ್ಯದಲ್ಲಿನ ಗುಡಗೇರಿ ಕ್ರಾಸ್ ಬಳಿ ಭಾನುವಾರ ಬೈಕ್ ಮತ್ತು ನೀರಿನ ಟ್ಯಾಂಕರ್ ನಡುವೆ ಸಂಭವಿಸಿದ ಅಪಘಾತದಲ್ಲಿ ಆನಂದ ಬಸಪ್ಪ ಮುಂಡರಗಿ (20) ತಲೆಗೆ ಗಂಭೀರವಾಗಿ ಗಾಯಗೊಂಡು ಹುಬ್ಬಳ್ಳಿ ಕಿಮ್ಸಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಿಸದೆ ಸೋಮವಾರ ಸಾವನಪ್ಪಿದ್ದಾನೆ. ಈ ಕುರಿತು ಕುಂದಗೋಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಧಾರವಾಡ: ಮೈಸೂರಿನಲ್ಲಿ ನಡೆದ ಭಾರತೀಯ ಜೈನ ಮಿಲನ 20ನೇ ಮಹಾಸಮ್ಮೇಳನದಲ್ಲಿ ಧಾರವಾಡ ಸೆಂಟ್ರಲ್ ಜೈನ್ ಮಿಲನ ಪ್ರಥಮ ಸ್ಥಾನ ಗಳಿಸಿದ ಹಿನ್ನೆಲೆ ಜೈನ ಮಿಲನ ಸಂಸ್ಥಾಪಕ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಅವರಿಗೆ ಸನ್ಮಾನಿಸಿದರು.

ನಾಯಕತ್ವ ಬದಲಾವಣೆ ಪ್ರಶ್ನೆ ಬಂದಿಲ್ಲ: ಅಬ್ಬಯ್ಯ

ಹುಬ್ಬಳ್ಳಿ: ನಾಯಕತ್ವ ಬದಲಾವಣೆ ಬಗ್ಗೆ ಪ್ರಶ್ನೆ ಬಂದಿಲ್ಲ, ಹೈಕಮಾಂಡ್ ಈ ಬಗ್ಗೆ ಚರ್ಚೆ ನಡೆಸಿಲ್ಲ. ರಾಜ್ಯದ ರಾಜಕೀಯ ಬೆಳವಣಿಗೆ ಬಗ್ಗೆ ಚರ್ಚಿಸಲು ಸಿಎಂ ಹಾಗೂ ಡಿಸಿಎಂ ಅವರನ್ನು ಹೈಕಮಾಂಡ್ ಕರೆದಿದ್ದಾರೆ ಎಂದು ಶಾಸಕ ಪ್ರಸಾದ ಅಬ್ಬಯ್ಯ ತಿಳಿಸಿದರು.



ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಹಾಗೂ ಡಿಸಿಎಂ ಕರೆದಿರುವುದರ ಕುರಿತು ಸ್ಪಷ್ಟತೆ ಇಲ್ಲ, ರಾಜ್ಯಸಭಾ ಹಾಗೂ ವಿಧಾನ ಪರಿಷತ್ ಸದಸ್ಯರ ಆಯ್ಕೆ ಸೇರಿದಂತೆ ವಿವಿದ ವಿಷಯ ಕುರಿತು ಚರ್ಚಿಸಬಹುದು. ಸಚಿವ ಸಂಪುಟ ವಿಸ್ತರಣೆ ಮಾಡುತ್ತಾರೆ. ಸದ್ಯ ಯಾಕೆ ಕರೆದಿದ್ದಾರೆ ಎಂಬುವುದು ಗೊತ್ತಿಲ್ಲ. ಸಿಎಂ ಹಾಗೂ ಡಿಸಿಎಂ ಹೋದಾಗ ಸಚಿವರು ಹಾಗೂ ಪಕ್ಷದ ನಾಯಕರು ಹೋಗುವುದು ಸಾಮಾನ್ಯ. ಅದಕ್ಕೆ ವಿಶೇಷ ಅರ್ಥ ಕಲ್ಪಿಸುವುದು ಬೇಡ. ನಾನು ಸಚಿವ ಸ್ಥಾನ ಪ್ರಬಲ ಆಕಾಂಕ್ಷಿಯಾಗಿದ್ದು, ಹೈಕಮಾಂಡ್ ಅವರ ತೀರ್ಮಾನಕ್ಕೆ ಬದ್ಧನಾಗಿದ್ದೇನೆ. ಪಶ್ಚಿಮ ಬಂಗಾಲ ಹಾಗೂ ರಾಜ್ಯ ಎರಡು ಕಡೆ ಉಪಚುನಾವಣೆ ಬಂದ ಹಿನ್ನೆಲೆ ಸಚಿವ ಸಂಪುಟ ವಿಸ್ತರಣೆ ವಿಳಂಬವಾಗಿದೆ ಎಂದರು. ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರು ಅನಾರೋಗ್ಯದಿಂದ ಸಮುದಾಯ ಭವನ ಉದ್ಘಾಟನೆಗೆ ಬರಲು ಸಾಧ್ಯವಾಗಿಲ್ಲ. ಈ ಸಮುದಾಯ ಭವನ ಬಹಳ ವರ್ಷದ ಕನಸಾಗಿದೆ. ಬಿಜೆಪಿ ಸರ್ಕಾರ ಅವರ ಅವಧಿಯಲ್ಲಿ ಒಂದು ರೂಪಾಯಿ ಬಂದಿಲ್ಲ. ನಮ್ಮ ಸರ್ಕಾರ 8.5 ಕೋಟಿ ಅನುದಾನ ನೀಡಿದ್ದು, ಕಾಮಗಾರಿ ಸಂಪೂರ್ಣವಾಗಿದೆ ಎಂದು ತಿಳಿಸಿದರು.



ಹುಬ್ಬಳ್ಳಿ: ನಗರದ ಕರ್ನಾಟಕ ವೈದ್ಯಕೀಯ ಕಾಲೇಜ್ ಹಾಗೂ ಸಂಶೋಧನಾ ಸಂಸ್ಥೆಗೆ ಎಲ್‌ಐಸಿ ಗೋಲ್ಡನ್ ಜುಬಿಲಿ ಫೌಂಡೇಶನ್‌ಸಂಚಾರಿ ರಕ್ತ ಸಂಗ್ರಹ ವಾಹನವನ್ನು ಹಸ್ತಾಂತರಿಸಿತು. ಎಲ್‌ಐಸಿ ಆಫ್ ಇಂಡಿಯಾ ಹಿರಿಯ ವಿಭಾಗೀಯ ವ್ಯವಸ್ಥಾಪಕ ಬಿ.ಎಸ್. ಚಕ್ರವರ್ತಿ ಹಾಗೂ ಉದ್ಯಮಿ ಗೋವಿಂದ ಜೋಶಿ ಮಾತನಾಡಿದರು. ಕೆಎಂಸಿ ಆರ್‌ಐ ನಿರ್ದೇಶಕ ಡಾ. ಈಶ್ವರ ಹೊಸಮನಿ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಡಾ. ಸೂರ್ಯಕಾಂತ ಕಲ್ಲೂರಾಯ, ವೈದ್ಯಕೀಯ ಅಧೀಕ್ಷಕರಾದ ಡಾ. ಈಶ್ವರ ಹಸಬಿ, ಡಾ. ಎಸ್. ರಾಜಾಶಂಕರ, ಎಲ್‌ಐಸಿ ಧಾರವಾಡ ಮಾರ್ಕೆಟಿಂಗ್ ಮ್ಯಾನೇಜರ್ ಎಸ್. ಪ್ರಮೋದ, ರೋಟರಿ ಕ್ಲಬ್ ಧಾರವಾಡ ಅಧ್ಯಕ್ಷ ಲಕ್ಷ್ಮೀಕಾಂತ ನಾಯಕ್, ಆರ್‌ಎಂಒ ಡಾ. ನಾಗರಾಜ ಚಾಂದಿ, ಡಾ. ಸುನಿತಾ ಇದ್ದರು.

ರೈತ ಸಮುದಾಯಕ್ಕೆ ಸ್ಪಂದಿಸಿ

ನವಲಗುಂದ: ರೈತರನ್ನು ವ್ಯಥಾ ಅಲೆದಾಡಿಸದೇ ಅಧಿಕಾರಿಗಳು ರೈತ ಸಮುದಾಯಕ್ಕೆ ಸ್ಪಂದಿಸಬೇಕು. ರೈತರಿಗೆ ಕಾಲ-ಕಾಲಕ್ಕೆ ಸರ್ಕಾರದಿಂದ ಬರುವ ಸೌಲಭ್ಯಗಳ ಕುರಿತು ಪ್ರಾಮಾಣಿಕವಾಗಿ ಮಾಹಿತಿ ಮುಟ್ಟಿಸಬೇಕು ಎಂದು ಶಾಸಕ ಎನ್.ಎಚ್. ಕೋನರಡ್ಡಿ ಹೇಳಿದರು.

ಅವರು ಮಂಗಳವಾರ ನಗರದ ಪಶು ಆಸ್ಪತ್ರೆಯಲ್ಲಿ ಜಿ.ಪಂ.ಧಾರವಾಡ, ತಾ.ಪಂ. ನವಲಗುಂದ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ರೈತರಿಗೆ ಮೇವು ಕತ್ತರಿಸುವ ಯಂತ್ರ, ರಬ್ಬರ್ ನೆಲಹಾಸು, ಕುರಿಗಾಯಿಗಳ ಗುರುತಿನ ಚೀಟಿ ವಿತರಣೆಕಾರ್ಯಕ್ರಮದಲ್ಲಿ ಮಾತನಾಡಿದರು. ಮಾಜಿ ಶಾಸಕ ಆರ್. ಬಿ. ಶಿರಿಯಣ್ಣವರ, ಶಂಕರ ಪಾಟೀಲ ಮುನೇನಕೊಪ್ಪ, ಮುಖಂಡರಾದ ವಿಜಯ ಕುಲಕರ್ಣಿ, ಎ. ಬಿ.ಹಿರೇಮಠ, ಗಣ್ಯರಾದ ಅಣ್ಣಪ್ಪ ಭಾಗಿ, ಲಿಂಗರಾಜ ಸರದೇಸಾಯಿ, ಅಶೋಕ ಮಜಿಗುಡ್ಡ, ಸಿದ್ದನಗೌಡ ಪಾಟೀಲ ಸೇರಿದಂತೆ ಅನೇಕರಿದ್ದರು. ಬಿತ್ತನೆ ಬೀಜಗಳ ವಿತರಣಾ ಸಂದರ್ಭದಲ್ಲಿ ಅಣ್ಣಿಗೇರಿ ತಹಶೀಲ್ದಾರ್ ಮಂಜುನಾಥ ದಾಸಪ್ಪನವರ, ತಾಪಂ.ಇಒ ರವೀಂದ್ರಗೌಡ ಪಾಟೀಲ, ಸದುಗೌಡ ಪಾಟೀಲ, ವರ್ಧಮಾನಗೌಡ್ರ, ಹಿರೇಗೌಡ್ರ, ಮನೋಹರ ದ್ಯಾಬೇರಿ, ಸಿಪಿಐ ರವಿಕುಮಾರ ಕಪ್ಪತ್ತನವರ, ಮಂಜುನಾಥ ಹರ್ಲಾಪುರ, ದಾವಲಸಾಬ್ ಖುದ್ದನವರ, ಪಿಎಸ್‌ಐ ಜನಾರ್ಧನ್ ಭಟ್ರಳ್ಳಿ, ಜೀವನ ಪವಾರ, ಸಂತೋಷ ಪಾಟೀಲ, ಆನಂದ ಹವಳಕೋಡ ಇತರರಿದ್ದರು.

- ಆಪತ್ತು ನಿರ್ವಹಣಾ ಅಡಿ ಇಬ್ಬರು ಫಲಾನುಭವಿಗಳಿಗೆ ಚೆಕ್ ವಿತರಣೆ
- ಶ್ರೀ ವೀರಶೈವ ಲಿಂಗಾಯತ ಭವನದ 1.00 ಕೋಟಿ ವೆಚ್ಚದಲ್ಲಿ ಕಟ್ಟಡದ ಅಭಿವೃದ್ಧಿ ಮುಂದುವರೆದ ಕಾಮಗಾರಿಗೆ ಭೂಮಿಪೂಜೆ
- ನಗರದ ಎ.ಪಿ.ಎ.ಸಿ ಆವರಣದಲ್ಲಿ ನವಲಗುಂದ ಕೃಷಿ ಇಲಾಖೆಯಿಂದ ಹೆಸರು, ಉದ್ದು ಹಾಗೂ ಇತರೆ ಮುಂಗಾರು ಬಿತ್ತನೆ ಬೀಜಗಳ ವಿತರಣಾ ಕಾರ್ಯಕ್ರಮ

ಶೇ.50ರಷ್ಟು ರಿಯಾಯಿತಿ

ಮೇವು ಕತ್ತರಿಸುವ ಯಂತ್ರ ಒಂದಕ್ಕೆ 33 ಸಾವಿರ ಇದ್ದು, ಪಶು ಇಲಾಖೆ ವತಿಯಿಂದ ಶೇ.50ರ ರಿಯಾಯಿತಿ ದರದಲ್ಲಿ ಪೂರೈಕೆ ಮಾಡಲಾಗುತ್ತಿದೆ. ಫಲಾನುಭವಿ ರೈತರು 17ಸಾವಿರ ಪಾವತಿ ಮಾಡಬೇಕಾಗುತ್ತದೆ. ಉಳಿದ ಅರ್ಧದಷ್ಟು ಹಣ ಸರ್ಕಾರವೇ ಭರಿಸುತ್ತದೆ ಈ ಯಂತ್ರಗಳಿಂದ ಪ್ರತಿ ಗಂಟೆಗೆ 300 ರಿಂದ 350 ಕೆ.ಜಿ.ಕುಟಾವು ಮಾಡಬಹುದು ಎಂದು ಪಶು ವೈದ್ಯಾಧಿಕಾರಿ ಮನೋಹರ ದ್ಯಾಬೇರಿ ಹೇಳಿದರು.

> ಹೈನುಗಾರಿಕೆ ರೈತರಿಗೆ ವರದಾನವಾಗಿದ್ದು, ಕೃಷಿ ಜೊತೆಗೆ ಹೈನುಗಾರಿಕೆ ಅಳವಡಿಸಿಕೊಳ್ಳಬೇಕು.
> ■ ಎನ್.ಎಚ್. ಕೋನರಡ್ಡಿ, ಶಾಸಕ



ಸರ್ವತೋಮುಖ ಅಭಿವೃದ್ಧಿ ಸಾಧಿಸಿ

ನವಲಗುಂದ: ವಿದ್ಯಾರ್ಥಿಗಳು ಕೇವಲ ಪಠ್ಯಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸರ್ವತೋಮುಖ ಅಭಿವೃದ್ಧಿ ಸಾಧಿಸಬೇಕು ಎಂದು ನವಲಗುಂದ ಶಾಸಕರು ಹಾಗೂ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಎನ್. ಎಚ್. ಕೋನರಡ್ಡಿ ಹೇಳಿದರು. ಅವರು ಮಂಗಳವಾರ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜದಲ್ಲಿ 2025-26ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಎನ್.ಎಸ್.ಎಸ್., ರೆಡ್ ಕ್ರಾಸ್, ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳ ಸಮಾರೋಪ ಹಾಗೂ ಬಿ.ಎ. ಮತ್ತು ಬಿ.ಕಾಂ. ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಧಾರವಾಡದ ಸ.ಪ್ರ.ದ.ಮ. ಕಾಲೇಜಿನ ಖ್ಯಾತ ಗಾಯಕ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಎಸ್. ಬಿ. ತಟಗಾರ ಮತ್ತು ಪ್ರಾಂಶುಪಾಲ ಡಾ. ಎಂ. ಬಿ. ಬಾಗಡಿ ಮಾತನಾಡಿದರು. ಐ.ಕ್ಯೂ.ಎ.ಸಿ. ಸಹ ಸಂಚಾಲಕ ಡಾ. ಪ್ರಸನ್ನ ಪಂಢರಿ ವಾರ್ಷಿಕ ವರದಿ ಮಂಡಿಸಿದರು. ಪ್ರಶಸ್ತಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಡಾ. ಸಂತೋಷ ಹುಬ್ಬಳ್ಳಿ ಸ್ವಾಗತಿಸಿದರು, ಡಾ. ಐ. ಬಿ. ಸಾತಿಹಾಳ ಅತಿಥಿ ಪರಿಚಯಿಸಿದರು. ಚೈತ್ರಾ ಪಾಟೀಲ ನಿರೂಪಿಸಿದರು. ಸುಜಾತಾ ಬರದೂರ ವಂದಿಸಿದರು. ಪಿಎಸ್‌ಐ ಜನಾರ್ಧನ್ ಬಿ., ಪುರಸಭೆ ಮಾಜಿ ಅಧ್ಯಕ್ಷ ಜೀವನ ಪವಾರ ಇತರರಿದ್ದರು.



ಸಮಾಜದಲ್ಲಿ ಮೇಲು, ಕೀಳು ತೊಲಗಲಿ



ಹುಬ್ಬಳ್ಳಿ: ಡಾ. ಬಾಬು ಜಗಜೀವನರಾಮ್ ಅವರು ಸಮಾಜದಲ್ಲಿರುವ ಬಡವರ ಏಳ್ಗೆಗಾಗಿ ಶ್ರಮಿಸಿದ್ದರು. ಸಮಾಜದಲ್ಲಿ ಮೇಲು, ಕೀಳು ಎಂಬ ಭಾವನೆ ಹೋಗಬೇಕು. ಜನಪ್ರತಿನಿಧಿಗಳು ಜನರು ನೆನೆಯುವಂತ ಕಾರ್ಯಗಳ ಮಾಡಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಮಂಗಳವಾರ ಇಲ್ಲಿಯ ನ್ಯೂ ಇಂಗ್ಲಿಷ್ ಸ್ಕೂಲ್ ಹತ್ತಿರದ ಪಡದಯ್ಯನ ಹಕ್ಕಲ್‌ದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಡಾ.ಬಾಬು ಜಗಜೀವನರಾಮ್ ಸಮುದಾಯ ಭವನವನ್ನು ಉದ್ಘಾಟಿಸಿ ಮಾತನಾಡಿದರು. ಸಮುದಾಯ ಭವನ 9.15 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಅಡುಗೆ ಮನೆ, ಇತರೆ ಕಾಮಗಾರಿಗಳು ಉಳಿದಿವೆ. ರೂ.4.50 ಕೋಟಿ ಹಣ ಬಿಡುಗಡೆ ಆಗಬೇಕಿದೆ ಎಂದರು.

ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಪ್ರಸಾದ ಅಬ್ಬಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಂಬೇಡ್ಕರ್ ಹಾಗೂ ಬಾಬು ಜಗಜೀವನರಾಮ್ ಅವರನ್ನು ಒಂದೇ ಜಾತಿಗೆ ಸೀಮಿತಗೊಳಿಸಬಾರದು. ಇಬ್ಬರೂ ಜಾತಿ ಮೀರಿ ಬೆಳೆದ ವ್ಯಕ್ತಿತ್ವಗಳಾಗಿದ್ದಾರೆ. ಶಿಕ್ಷಣದಿಂದ ಮಾತ್ರ ಸರ್ವಾಂಗೀಣ ಅಭಿವೃದ್ಧಿ ಸಾಧಿಸಲು ಸಾಧ್ಯ ಎಂದರು.

ಜಿಲ್ಲಾಧಿಕಾರಿ ಸ್ನೇಹಲ್ ಆರ್. ಮಾತನಾಡಿ, ಡಾ.ಬಾಬು ಜಗಜೀವನರಾಮ್ ಸಮುದಾಯ ಭವನವು ಮಾದರಿ ಕಟ್ಟಡವಾಗಿದೆ. ಭವನವನ್ನು ಅಚ್ಚುಕಟ್ಟಾಗಿ ನಿರ್ಮಾಣ ಮಾಡಲಾಗಿದೆ ಎಂದರು. ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು. ಕೊನೆ ಕ್ಷಣದಲ್ಲಿ ಅವರು ಸಮಾರಂಭಕ್ಕೆ ಬರಲಿಲ್ಲ, ಈ ಹಿನ್ನೆಲೆ ವೇದಿಕೆ ಹಿಂದೆ ಅವರ ಬೃಹತ್ ಆಕಾರ ಭಾವಚಿತ್ರವುಳ್ಳ ಬ್ಯಾನರ್ ತೆಗೆದು ಹಾಕಿದರು. ಬಳಿಕ ಸಿಎಂ, ಡಿಸಿಎಂ, ವಿಪ ಸಭಾಪತಿ ಬಸವರಾಜ ಹೊರಟ್ಟಿ, ಸಚಿವ ಎಚ್.ಸಿ. ಮಹಾದೇವಪ್ಪ, ಶಾಸಕ ಪ್ರಸಾದ ಅಬ್ಬಯ್ಯ ಇರುವ ಬ್ಯಾನರ್ ಅಳವಡಿಸಲಾಯಿತು. ಸಚಿವ ಲಾಡ್ ಬಾರದ ಕಾರಣ ಸಮಾರಂಭ 1.30 ಗಂಟೆ ತಡವಾಗಿತ್ತು. ಮಾಜಿ ಸಚಿವ ಎ.ಎಂ.ಹಿಂಡಸಗೇರಿ, ಪಾಲಿಕೆ ಸದಸ್ಯ ನಜೀರ್ ಹೊನ್ಯಾಳ, ವಿರೋಧ ಪಕ್ಷದ ನಾಯಕ ಇಮ್ರಾನ್ ಯಲಿಗಾರ, ಶ್ರೀನಿವಾಸ ಬೆಳದಡ್ಡಿ, ಮಾಜಿ ಪಾಲಿಕೆ ಸದಸ್ಯ ಗಣೇಶ ಟಗರಗುಂಟಿ, ಮೋಹನ ಹಿರೇಮನಿ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ, ಉಪವಿಭಾಗಾಧಿಕಾರಿ ಶಾಲಂ ಹುಸೇನ್, ಶಹರ ತಹಶೀಲ್ದಾರ ಮಹೇಶ ಭಗವಂತ ಗಸ್ತೆ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಜಗದೀಶ ಹೆಬ್ಬಳ್ಳಿ, ಸಹಾಯಕ ನಿರ್ದೇಶಕ ಎಂ.ಬಿ.ಸಣ್ಣೇರ, ಸಮಾಜದ ಮುಖಂಡರಾದ ಗುರುನಾಥ ಉಳ್ಳಿಕಾಶಿ, ಪ್ರೇಮನಾಥ ಚಿಕ್ಕತುಂಬಳ ಇದ್ದರು.

ಮಹಾವಿದ್ಯಾಲಯದ ಕ್ಯಾಂಪಸ್‌ನಲ್ಲಿ ಟ್ವಿನ್ಸ್ ಡೇ ಸಂಭ್ರಮ

ನವಲಗುಂದ: ನ.ತಾ.ಶಿ.ಸಮಿತಿಯ ಶ್ರೀ ಶಂಕರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಕ್ಯಾಂಪಸ್‌ನಲ್ಲಿ ಟ್ವಿನ್ಸ್ ಡೇ ಸಂಭ್ರಮ ಮನೆಮಾಡಿತ್ತು. ಮಂಗಳವಾರ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಟ್ವಿನ್ಸ್ ಡೇ ಸಾಂಸ್ಕೃತಿಕಕಾರ್ಯಕ್ರಮವು ಜರುಗಿತು. ಕಾಲೇಜಿನ ಸಾಂಸ್ಕೃತಿಕ ವೇದಿಕೆಯ ಆಶ್ರಯದಲ್ಲಿ ನಡೆದ ಈ ಅಪರೂಪದ ದಿನಾಚರಣೆ ಇಡೀ ಕ್ಯಾಂಪಸ್‌ನಲ್ಲಿ ಹಬ್ಬದ ವಾತಾವರಣವನ್ನು ಸೃಷ್ಟಿಸಿತ್ತು. ಕಾಲೇಜಿನ ಆವರಣದಲ್ಲಿ ಸಾಮಾನ್ಯವಾಗಿ ಸಾಂಪ್ರದಾಯಿಕ ಉಡುಪಿನ ದಿನ ಅಥವಾ ಸೀರೆ ದಿನಗಳನ್ನು ಆಚರಿಸುವುದು ಸಾಮಾನ್ಯ. ಆದರೆ,ಈ ಬಾರಿ ವಿಭಿನ್ನವಾಗಿ ಆಯೋಜಿಸಲಾಗಿದ್ದ ಟ್ವಿನ್ಸ್ ಡೇಗೆ ವಿದ್ಯಾರ್ಥಿಗಳಿಂದ ಅಭೂತಪೂರ್ವ ಬೆಂಬಲ ವ್ಯಕ್ತವಾಯಿತು. ಕಾಲೇಜಿನ ನೂರಾರು ವಿದ್ಯಾರ್ಥಿಗಳು ತಮ್ಮ ಆಪ್ತ ಸ್ನೇಹಿತರೊಂದಿಗೆ ಒಂದೇ ಮಾದರಿಯ, ಒಂದೇ ಬಣ್ಣದ ಉಡುಪುಗಳನ್ನು ಧರಿಸಿ, ಒಂದೇ ತರಹದ ಹೇರ್ ಸ್ಟೈಲ್ ಮಾಡಿಕೊಂಡು ಬಂದು ಗಮನ ಸೆಳೆದರು.

ಕ್ಯಾಂಪಸ್‌ನ ತುಂಬಾ ಒಂದೇ ತರಹದ ಜೋಡಿಗಳು ಓಡಾಡುತ್ತಿದ್ದುದನ್ನು ಕಂಡು ಸಹಪಾಠಿಗಳು ಹಾಗೂ ಪ್ರಾಧ್ಯಾಪಕರು ಮತ್ತು ಸಿಬ್ಬಂದಿ ಒಂದು ಕ್ಷಣ ಗಲಿಬಿಲಿಗೊಂಡರು. ನಿಜವಾದ ಅವಳಿ-ಜವಳಿಗಳಲ್ಲದಿದ್ದರೂ, ಆತ್ಮೀಯ ಸ್ನೇಹಿತರು ಕನ್ನಡಿಯ ಬಿಂಬಗಳಂತೆ ಸಿದ್ಧವಾಗಿ ಬಂದು ಕಣ್ಣಿನ ಸೆಳೆದರು. ತರಗತಿಗಳಲ್ಲಿ ಮತ್ತು ಕಾಲೇಜು ಆವರಣದಲ್ಲಿ ಗ್ರೂಪ್ ಫೋಟೋ ಹಾಗೂ ಸೆಲ್ಫಿ ಕ್ಲಿಕ್ಕಿಸಿಕೊಳ್ಳಲು ವಿದ್ಯಾರ್ಥಿಗಳು ಮುಗಿಬಿದ್ದಿದ್ದರು.

ಕಾರ್ಯಕ್ರಮದ ಅಂಗವಾಗಿ ಕಾಲೇಜು ಸಭಾಂಗಣದಲ್ಲಿ ವಿಶೇಷ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಅತ್ಯುತ್ತಮವಾಗಿ ಮೂಡಿಬಂದ ಟ್ವಿನ್ ಜೋಡಿಗಳಿಗೆ ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ವಿ.ಬಡಿಗೇರ ಅವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿ ಮಾತನಾಡಿ, ಒಗ್ಗಟ್ಟೇ ಬಲ, ನಾವೆಲ್ಲ ಒಂದು ನಾವೆಲ್ಲ ಬಂದು ಎಂಬ ಸಂದೇಶ ನೀಡಿ, ಎಂದಿಗೂ ದ್ವೇಷ, ಅಸೂಹೆ, ಮನಸ್ತಾಪ ದೂರ ಮಾಡಿ, ನೀವು ಇದೇ ತರಹ ಕೂಡಿ ಬಾಳಬೇಕು ಎಂದರು. ವಿದ್ಯಾರ್ಥಿ ಒಕ್ಕೂಟದ ಕಾರ್ಯಾಧ್ಯಕ್ಷ ಡಾ. ಎಂ. ಎನ್ ಹಾರೋಗೇರಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಒಗ್ಗಟ್ಟು, ಸ್ನೇಹ ಮನೋಭಾವ ಮತ್ತು ಸೃಜನಶೀಲತೆಯನ್ನು ಹೆಚ್ಚಿಸಲು ಇಂತಹ ವಿನೂತನ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದರು. ಸಾಂಸ್ಕೃತಿಕ ಕಾರ್ಯಾಧ್ಯಕ್ಷ ಡಾ.ಆರ್.ಎಸ್. ಹಿರೇಮಠ ಮಾತನಾಡಿ, ಕೇವಲ ಓದಷ್ಟೇ ಅಲ್ಲದೆ, ವಿದ್ಯಾರ್ಥಿಗಳ ಮಾನಸಿಕ ಉಲ್ಲಾಸಕ್ಕೂ ಇದು ಸಹಕಾರಿ ಎಂದರು. ಕಾಲೇಜಿನ ಪ್ರಾಧ್ಯಾಪಕರಾದ ಡಾ.ಶೀಲಾ ತುಬಚಿ, ಡಾ.ಎ.ಜಿ.ಜಕ್ಕನಗೌಡ್ರ, ಡಾ. ಆರ್.ಪಿ ಚವ್ಹಾಣ, ಡಾ. ಆರ್.ಎಂ. ಸರ್ವದೆ, ಡಾ. ಜಿ.ಎಸ್.ಚಿಣಗಿ, ಪ್ರೊ. ವಿಜಯಲಕ್ಷ್ಮಿ ಸಾವಂತ, ಪ್ರೊ. ದಾವಲಸಾಬ ಕಲಬುರಗಿ, ಪ್ರೊ. ಅಂದಾನಿಗೌಡ ಕಿತ್ತೂರ, ಎಂ.ವಿ.ಹೊಳೆಯಣ್ಣವರ, ಬಿ.ಕೆ. ಮಹೇಶ ಸಮಿತಿಯ ಸಂಚಾಲಕರು, ಎಲ್ಲಾ ವಿಭಾಗದ ಮುಖ್ಯಸ್ಥರು, ಉಪನ್ಯಾಸಕರು ಹಾಗೂ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು. ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು ನಿರೂಪಿಸಿ, ವಂದಿಸಿದರು.



ಪುಸ್ತಕಗಳನ್ನು ಖರೀದಿಸಿ ಓದಿ: ಹೊರಟ್ಟಿ



ಹುಬ್ಬಳ್ಳಿ: ಕನ್ನಡ ಧ್ವನಿ ಟ್ರಸ್ಟ್‌ನಿಂದ ನಗರದ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಸಭಾಭವನದಲ್ಲಿ ಏರ್ಪಡಿಸಿದ್ದ 'ಕನ್ನಡ ಧ್ವನಿ ಸಂಭ್ರಮ-26' ರಾಜ್ಯಮಟ್ಟದ ಕಥೆ, ಕವನ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಜರುಗಿತು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಭಾಗವಹಿಸಿ ಮಾತನಾಡಿ, ಎಲ್ಲರೂ ಪುಸ್ತಕಗಳನ್ನು ಖರೀದಿಸಿ ಓದಬೇಕು. ಇದರಿಂದ ಲೇಖಕರನ್ನು ಪ್ರೋತ್ಸಾಹಿಸಿದಂತಾಗುತ್ತದೆ. ರಾಜ್ಯಮಟ್ಟದ ಕಥೆ, ಕವನ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಕೃತಿಗಳನ್ನು ಗ್ರಂಥಾಲಯ ಇಲಾಖೆಯಿಂದ ಖರೀದಿಸುವಂತೆ ಸಂಬಂಧಿಸಿದವರೊಂದಿಗೆ ಮಾತನಾಡುತ್ತೇನೆ ಎಂದರು.

ಸಾಹಿತಿ ಸತೀಶ ಕುಲಕರ್ಣಿ ಮಾತನಾಡಿ, ಅನೇಕ ಯುವಸಾಹಿತಿಗಳು ಎಲೆಮರೆಯ ಕಾಯಿಯಂತೆ ಇದ್ದಾರೆ. ಸ್ಪರ್ಧೆ ಏರ್ಪಡಿಸಿ, ಬಹುಮಾನ ನೀಡಿ ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ. ಪುಸ್ತಕ ಪ್ರಕಟಣೆ ಸೇರಿ ಇನ್ನಿತರ ವಿಷಯಗಳಲ್ಲಿ ಹೊಸ ಸಾಹಿತಿಗಳಿಗೆ ಮಾರ್ಗದರ್ಶನ ಕೊರತೆ ಇದ್ದು, ಈ ಬಗ್ಗೆ ಕಾರ್ಯಾಗಾರವನ್ನು ಆಯೋಜಿಸಬೇಕು ಎಂದರು.

ಟ್ರಸ್ಟ್ ಅಧ್ಯಕ್ಷ ಗಣಪತಿ ಗಂಗೊಳ್ಳಿ ಪ್ರಾಸ್ತಾವಿಸಿದರು. ರಾಜ್ಯಮಟ್ಟದ ಕವನ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾಸಾಗರ ದೀಕ್ಷಿತ್ (ಪ್ರಥಮ), ಮಂಜುನಾಥ ಹೊಸ್ಮನೆ (ದ್ವಿತೀಯ), ಎಸ್.ಎಲ್. ವರಲಕ್ಷ್ಮಿ (ತೃತೀಯ) ಹಾಗೂ ಕಥಾ ಸ್ಪರ್ಧೆಯ ವಿಜೇತರಾದ ಜಮೀರ ರಿತ್ತಿ (ಪ್ರಥಮ), ಲತಾ ಹೆಗಡೆ (ದ್ವಿತೀಯ), ಎನ್.ಆರ್. ರೂಪಶ್ರೀ (ತೃತೀಯ) ಅವರಿಗೆ ಬಹುಮಾನ ವಿತರಿಸಲಾಯಿತು. ಕಥೆ, ಕವನ ಸ್ಪರ್ಧೆಯಲ್ಲಿ ಸಮಾಧಾನಕರ ಬಹುಮಾನ ಪಡೆದ ವಿವೇಕ ಹೆಗಡೆ, ಸುಷ್ಮಾ ಸವಸುದ್ದಿ, ಮಲ್ಲಿಕಾರ್ಜುನ ಶೆಲ್ಲಿಕೇರಿ, ದಿವ್ಯಾ ಹೆಗಡೆ, ಎನ್. ಶಂಕರರಾವ್, ಸಂಧ್ಯಾ ಬದಾಮಿ ಮತ್ತು ವಿವಿಧ ಕ್ಷೇತ್ರಗಳ ಸಾಧಕರಾದ ಅಭಿಜೀತ್ ಬೆಂಗೇರಿ, ಎಂ.ಜೆ. ಜೀವಣ್ಣವರ, ಮುರುಗೇಶ ಚನ್ನಣ್ಣವರ, ಶಾಂತಣ್ಣ ಕಡಿವಾಲ, ಜಯರಾಮ ಶೆಟ್ಟಿ, ಸವಿತಾ ಅಮರಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಮಜೇಥಿಯಾ ಫೌಂಡೇಶನ್ ಅಧ್ಯಕ್ಷ ಜಿತೇಂದ್ರ ಮಜೇಥಿಯಾ ಅಧ್ಯಕ್ಷತೆ ವಹಿಸಿದ್ದರು. ಪತಂಜಲಿ ಯೋಗ ಸಮಿತಿ ದಕ್ಷಿಣ ಭಾರತ ಪ್ರಭಾರಿ ಭವರ್‌ಲಾಲ್ ಆರ್ಯ, ನಿವೃತ್ತ ಎಸ್‌ಪಿ ಎ.ಆರ್.ಬಡಿಗೇರ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಜಿ.ಕೆ.ಆದಪ್ಪಗೌಡರ ಇದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯ

ಕುಂದಗೋಳ: ತಾಲೂಕಿನ ಸರ್ಕಾರಿ ಶಾಲೆಗಳ ದುರಸ್ತಿ ಹಾಗೂ ವಿವಿಧ ಸಮಸ್ಯೆಗಳನ್ನು ಶೀಘ್ರ ಪರಿಹರಿಸುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕಾಧ್ಯಕ್ಷ ಕಲ್ಲಪ್ಪ ಹರಕುಣಿ ನೇತೃತ್ವದಲ್ಲಿ ಮಂಗಳವಾರ ಶಿರಸ್ತೆದಾರ ಶಾನಬಾಗ ಅವರಿಗೆ ಮನವಿ ಸಲ್ಲಿಸಿ ರಾಜ್ಯ ಸರ್ಕಾರದ ಗಮನ ಸೆಳೆಯುವಂತೆ ಆಗ್ರಹಿಸಿದರು.

ಮನವಿಯಲ್ಲಿ ತಾಲೂಕಿನ ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯಗಳ ಕೊರತೆ ನೀಗಿಸಿ, ಶಿಥಿಲಗೊಂಡ ಕೊಠಡಿಗಳ ದುರಸ್ತಿ ಕಾರ್ಯ ಕೈಗೊಳ್ಳಬೇಕು. ರೈತರಿಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರವನ್ನು ಸಮರ್ಪಕವಾಗಿ ಮತ್ತು ಸಕಾಲದಲ್ಲಿ ವಿತರಿಸಲು ಕ್ರಮ ಕೈಗೊಳ್ಳಬೇಕು. ಸಂಬಂಧಪಟ್ಟ ಅಧಿಕಾರಿಗಳಿಗೆ ಅಗತ್ಯ ಮಾರ್ಗಸೂಚಿ ನೀಡುವ ಮೂಲಕ ರೈತರಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಎಂದು ಒತ್ತಾಯಿಸಲಾಗಿದೆ.

ಇತ್ತೀಚೆಗೆ ತಾಲೂಕಿನ ತರ್ಲಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೆಲಗುಡ್ಡ ಗ್ರಾಮದಲ್ಲಿ ಅಪರಿಚಿತ ಮುಸುಕುದಾರಿ ವ್ಯಕ್ತಿಗಳು ಬಾಲಕನಿಗೆ ಚುಚ್ಚುಮದ್ದು ನೀಡಿ ಪರಾರಿಯಾಗಿರುವ ಘಟನೆ ಸಾರ್ವಜನಿಕರಲ್ಲಿ ಆತಂಕ ಸೃಷ್ಟಿಸಿದ್ದು, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚಿಸಬೇಕು. ಇಲ್ಲವಾದಲ್ಲಿ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಮನವಿಯಲ್ಲಿ ಎಚ್ಚರಿಸಲಾಗಿದೆ.

ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಕಲ್ಲಪ್ಪ ಹರಕುಣಿ, ಅಡಿವೆಪ್ಪ ಹೆಬಸೂರ, ಮಂಜುನಾಥ ಹಾದಿಮನಿ, ರವಿ ಶಿರಸಂಗಿ, ಅಡಿವೆಪ್ಪ ತಳವಾರ, ನೂರಸಾಬ ನದಾಫ, ಮನಿತ ಅಡಿವೆಣ್ಣವರ, ಮಂಜು ಪೂಜಾರ, ಮನೋಜ ಕಮತರ, ಉಮೇಶ ಸಂದಿಮನಿ, ಮನೋಜ ಉಪ್ಪಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ನಡೆಯುವ ದಾರಿ ಹೆದ್ದಾರಿಯನ್ನಾಗಿಸಿ



ಅಳ್ನಾವರ: ಬದುಕುವ ದಾರಿ ಬಹಳಷ್ಟಿವೆ. ಆದರೆ ನಾವು ನಡೆಯುವ ದಾರಿಯನ್ನು ಹೆದ್ದಾರಿಯನ್ನಾಗಿಸುವ ಕಾಯಕ ನಮ್ಮದಾಗಬೇಕು ಎಂದು ಬೆಳಗಾವಿ ಜಿಲ್ಲೆಯ ಪ್ರಗತಿ ಪರ ರೈತ ಮಹಿಳೆ ಲಕ್ಷ್ಮೀ ಲೋಕುರ ಹೇಳಿದರು.

ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿ, ಇಂದಿನ ಎಐ ಯುಗದಲ್ಲಿ ಸ್ವಂತಿಕೆ ಮತ್ತು ಸಂವಹನ ಎಂಬುದು ವಿದ್ಯಾರ್ಥಿಗಳಲ್ಲಿ ದೂರಾಗುತ್ತಿರುವುದು ಸ್ವಾವಲಂಬಿ ಬದುಕಿಗೆ ಬಹುದೊಡ್ಡ ಹಿನ್ನಡೆಯಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕಾಲೇಜಿನಲ್ಲಿ ವರ್ಷವಿಡೀ ಜರುಗಿದ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿ ಸಾಧನೆ ಮಾಡಿದವರು ಮತ್ತು ಉತ್ತಮ ಫಲಿತಾಂಶ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ರಾಜ್ಯ ಶಾಸ್ತ್ರ ಮತ್ತು ಅರ್ಥಶಾಸ್ತ್ರ ವಿಭಾಗಗಳಲ್ಲಿ ಹೆಚ್ಚು ಅಂಕ ಗಳಿಸಿದವರಿಗೆ ಡಾ. ಪರವೀನ ಶೇಖ ಮತ್ತು ಅಶ್ವಿನಿ ನಿಪ್ಪಾಣಿಯವರು ನಗದು ಬಹುಮಾನ ವಿತರಿಸಿದರು. ಪ್ರಾಂಶುಪಾಲೆ ಡಾ.ಉಮಾ ಪೂಜಾರ ಅಧ್ಯಕ್ಷತೆ ವಹಿಸಿದ್ದರು. ಸಾಂಸ್ಕೃತಿಕ ಒಕ್ಕೂಟ, ಕ್ರೀಡಾ ವಿಭಾಗ, ಎನ್.ಎಸ್.ಎಸ್ ,ರೋವರ್ಸ್ ಮತ್ತು ರೇಂಜರ್ಸ್, ಯೂಥ ರೆಡ್ ಕ್ರಾಸ್, ಪಠ್ಯೇತರ ಚಟುವಟಿಕೆಗಳ ವಿಭಾಗದ ಡಾ.ಆರ್.ಬಿ.ಸೋನೆಖಾನ, ಡಾ.ಸುರೇಶ ದೊಡಮನಿ, ಭೀಮಗೌಡ ಪಾಟೀಲ, ಡಾ.ಪರವೀನ ಶೇಖ, ದೇವೇಂದ್ರ ತಳವಾರ, ಅಶ್ವಿನಿ ನಿಪ್ಪಾಣಿ, ತೇಜಸ್ವಿನಿ ಝುಂಜರವಾಡ, ವಿದ್ಯಾರ್ಥಿ ಪ್ರತಿನಿಧಿ ಕೋಮಲ ಶರ್ಮಾ, ಡಾ.ಸುಮಾ ಸಾವಂತ, ಗ್ಯಾರಂಟಿ ಯೋಜನೆಯ ತಾಲೂಕು ಅಧ್ಯಕ್ಷ ವಿನಾಯಕ ಕುರುಬರ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು ಇದ್ದರು. ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಧರಣಿ ಸ್ಥಳದಲ್ಲಿ ಸ್ನಾನ-ಪೂಜೆ: ಪ್ರತ್ಯೇಕ ಪಾಲಿಕೆಗೆ ಆಗ್ರಹಿಸಿ ರಕ್ತ ಫಲಕ

ಧಾರವಾಡ: ಪ್ರತ್ಯೇಕ ಪಾಲಿಕೆಗೆ ಆಗ್ರಹಿಸಿ ನಡೆದ ಸತ್ಯಪ್ರತಿಪಾದನೆ ಸತ್ಯಾಗ್ರಹ 12ನೇ ದಿನಕ್ಕೆ ಮುಂದುವರಿದಿದ್ದು, ಸೋಮವಾರ ಅಹೋರಾತ್ರಿ ಧರಣಿ ನಡೆಸಿ, ಮಂಗಳವಾರ ಸತ್ಯಾಗ್ರಹ ಸ್ಥಳದಲ್ಲಿ ಸ್ನಾನ ಮತ್ತು ಲಿಂಗಪೂಜೆ ಮೂಲಕ ಧರಣಿ ಕೈಗೊಂಡರು. ಪಾಲಿಕೆ ಸದಸ್ಯೆ ದೀಪಾ ನೀರಲಕಟ್ಟಿ, ಮುಖಂಡ ಬಸವರಾಜ ಜಾಧವ, ಅನೇಕ ಯುವಕರು ತಮ್ಮ ರಕ್ತದ ಮೂಲಕ 'ಮಹಾನಗರ ಪಾಲಿಕೆ ಆಂದೋಲನ ಆಗಬೇಕು. ಧಾರವಾಡ ಜನರ ತಾಳ್ಮೆ ಪರೀಕ್ಷಿಸದಂತೆ' ಫಲಕ ಬರೆದು ಆಗ್ರಹಿಸಿದರು.

ಧಾರವಾಡ ಪ್ರತ್ಯೇಕ ಪಾಲಿಕೆ ಕಡತಕ್ಕೆ ರಾಜ್ಯಪಾಲರಿಗೆ ಅಂಕಿತ ಹಾಕಬೇಕೆಂದು ಭಗವಂತ ಸದ್ಬುದ್ಧಿ ನೀಡಲಿ ಅಂತ ಲಿಂಗಪೂಜೆ ಮಾಡಿ ಪ್ರಾರ್ಥಿಸಿದೆ. ಅಂಕಿತ ಹಾಕದಿದ್ದರೆ ಮೇ 30ರಿಂದ ಉಪವಾಸ ಸತ್ಯಾಗ್ರಹ ಮಾಡುವುದಾಗಿ ಹಿರೇಮಠ ಎಚ್ಚರಿಸಿದರು.

ಸತ್ಯಾಗ್ರಹ ಸ್ಥಳಕ್ಕೆ ಆಗಮಿಸಿದ ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರು ಬೆಂಬಲ ಸೂಚಿಸಿದರು. ಈ ವೇಳೆ ನೆರೆದಿದ್ದ ಬಿಜೆಪಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ತೀವ್ರ ವಾಕ್ಸಮರ ನಡೆದಿದೆ. ಕೆಲಕಾಲ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಸರ್ಕಾರ ಪ್ರತ್ಯೇಕ ಪಾಲಿಕೆ ರಚನೆಗೆ ಅನುಮೋದನೆ ನೀಡಿದೆ. ಆದರೆ ಬಿಜೆಪಿ ನಾಯಕರು ರಾಜ್ಯಪಾಲರ ಮೇಲೆ ಒತ್ತಡ ಹೇರಿ ಪ್ರಕ್ರಿಯೆ ವಿಳಂಬ ಮಾಡಿರುವ ಕುರಿತು ಕಾಂಗ್ರೆಸ್ ಕಾರ್ಯಕರ್ತರು ವೇದಿಕೆ ಭಾಷಣದಲ್ಲಿ ಗಂಭೀರ ಆರೋಪ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಬಿಜೆಪಿ ನಾಯಕರು, ರಾಜ್ಯಪಾಲರು ಕಡತಕ್ಕೆ ಸಹಿ ಹಾಕಿದ್ದಾರೆ. ಪಕ್ಷಾತೀತ ಹೋರಾಟದಲ್ಲಿ ರಾಜಕೀಯ ಮಾಡದಂತೆ ಆಕ್ರೋಶ ವ್ಯಕ್ತವಾದಾಗ ಉಭಯ ಕಾರ್ಯಕರ್ತರ ನಡುವೆ ಕೆಲಕಾಲ ಮಾತಿನ ಚಕಮಕಿ ನಡೆದಿದೆ. ಮಧ್ಯೆ ಪ್ರವೇಶಿಸಿದ ಹೋರಾಟಗಾರ ಹಿರೇಮಠ, ಇದು ಪಕ್ಷಾತೀತ ಹೋರಾಟ. ನಿಮ್ಮ ರಾಜಕೀಯ ಇಲ್ಲಿ ತರಬೇಡಿ. ಧಾರವಾಡದ ಹಿತದೃಷ್ಟಿಯಿಂದ ಮಾತ್ರವೇ ಹೋರಾಟಕ್ಕೆ ಬೆಂಬಲಿಸಲು ತಾಕೀತು ಮಾಡಿದಾಗ ಉಭಯ ಕಾರ್ಯಕರ್ತರು ತಣ್ಣಗಾದರು. ವಾಗ್ವಾದದ ನಡುವೆಯೂ ಮಾತನಾಡಿದ ಹುಧಾ ಮೇಯರ್ ಜ್ಯೋತಿ ಪಾಟೀಲ, ವಿದ್ಯಾಕಾಶಿ ಧಾರವಾಡಕ್ಕೆ ಸ್ವತಂತ್ರ ಆಡಳಿತದ ಅಗತ್ಯವಿದೆ. ಈ ಹೋರಾಟದಲ್ಲಿ ಯಾವುದೇ ರಾಜಕೀಯ ಇಲ್ಲ, ಸತ್ಯಪ್ರತಿಪಾದನೆ ಹೋರಾಟಕ್ಕೆ ತಮ್ಮ ಬೆಂಬಲ ಘೋಷಿಸಿದರು. ಗುರುರಾಜ ಹುಣಸಿಮರದ, ತಿಪ್ಪಣ್ಣ ಮಜ್ಜಗಿ, ಅರವಿಂದ ಏಗನಗೌಡರ, ಶಂಕರ ಶೇಳಕೆ, ಈಶ್ವರ ಶಿವಳ್ಳಿ, ಮಂಜುನಾಥ ಮಲ್ಲಿಗವಾಡ, ಆನಂದ ಯಾವಗಲ್, ದಾನಪ್ಪ ಕಬ್ಬೇರ, ಸುರೇಶ ಬೆದರೆ, ಶಿವಶಂಕರ ಹಂಪಣ್ಣವರ ಸೇರಿದಂತೆ ಅನೇಕರು ಭಾಗವಹಿಸಿದ್ದರು.



ಬಿಜೆಪಿ ಬೆಂಬಲ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಬರಬೇಕಾದ ರೂ.390 ಕೋಟಿ ನೀಡದ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಶಿವು ಹಿರೇಮಠ, ಮೋಹನ ರಾಮದುರ್ಗ, ಮಂಜುಳಾ ಅಕ್ಕೂರ, ರೂಪಾ ಚೌದರಿ ಮತ್ತು ಅನಸೂಯಾ ಹಿರೇಮಠ ಇದ್ದರು.

ಭವ್ಯ ಮೆರವಣಿಗೆ


ಧಾರವಾಡ ಪ್ರತ್ಯೇಕ ಪಾಲಿಕೆ ಹೋರಾಟ ಬೆಂಬಲಿಸಿ ಮುಖಂಡ ನಾಗರಾಜ ಗೌರಿ ನೇತೃತ್ವದಲ್ಲಿ ನೂರಾರು ಸಾರ್ವಜನಿಕರು ಸಕಲವಾದ್ಯಮೇಳದೊಂದಿಗೆ ನಗರದಲ್ಲಿ ಮೆರವಣಿಗೆ ನಡೆಸಿದರು. ಟಿಕಾರೆ ರಸ್ತೆಯಿಂದ ಆರಂಭವಾದ ಮೆರವಣಿಗೆ ವಿವಿಧ ರಸ್ತೆಗಳಲ್ಲಿ ಸಂಚರಿಸಿ, ಹೋರಾಟದ ವೇದಿಕೆಗೆ ಬಂದು ಬೆಂಬಲ ಸೂಚಿಸಿತು. ಈ ಹೋರಾಟದಲ್ಲಿ ನೂರಾರು ಸಾರ್ವಜನಿಕರು, ಸಂಘ ಸಂಸ್ಥೆಗಳು ಮುಖಂಡರು ಸಹ ಪಾಲ್ಗೊಂಡಿದ್ದರು.

ರಾಷ್ಟ್ರೀಯ ಕಲ್ಪಿತ ನ್ಯಾಯಾಲಯ ಸ್ಪರ್ಧೆ


ಹುಬ್ಬಳ್ಳಿ: ಇಲ್ಲಿಯ ನವನಗರದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಕಾನೂನು ಶಾಲೆಯಲ್ಲಿ ಆಯೋಜಿಸಿದ್ದ ಎರಡು ದಿನಗಳ 12ನೇ ರಾಷ್ಟ್ರೀಯ ಕಲ್ಪಿತ ನ್ಯಾಯಾಲಯ ಸ್ಪರ್ಧೆ ಸಮಾರೋಪ ಸಮಾರಂಭ ನಡೆಯಿತು.

ಕಲ್ಪಿತ ನ್ಯಾಯಾಲಯ ಸ್ಪರ್ಧೆಯಲ್ಲಿ ಹುಬ್ಬಳ್ಳಿಯ ಕೆಎಲ್‌ಇ ಸಂಸ್ಥೆಯ ಜಿ.ಕೆ. ಕಾನೂನು ಕಾಲೇಜು ಜಯ ಗಳಿಸಿದೆ. ಮೈಸೂರಿನ ವಿದ್ಯಾವಿಕಾಸ ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡಿಸ್ ರನ್ನರ್ ಅಪ್ ಆಗಿ ಹೊರಹೊಮ್ಮಿದೆ. ಬೆಸ್ಟ್ ಲೇಡಿ ಅಡ್ವಕೇಟ್ ಆಗಿ ವಿದ್ಯಾವಿಕಾಸ ಸಂಸ್ಥೆಯ ಚಾರುಮತಿ ಎಸ್., ಬೆಸ್ಟ್ ಜಂಟಲಮನ್ ಅಡ್ವಕೇಟ್ ಆಗಿ ಜೀವನ ಎಂ. ಪ್ರಶಸ್ತಿ ಪಡೆದರು. ಬೆಸ್ಟ್ ಮೆಮರಿಯಲ್ಸ್ ಅವಾರ್ಡ್‌ಗೆ ಬೆಂಗಳೂರಿನ ರಾಮಯ್ ಕಾಲೇಜ್ ಆಫ್ ಲಾ ವನ್ನು ಆಯ್ಕೆ ಮಾಡಲಾಯಿತು. ಕರ್ನಾಟಕ ಉಚ್ಚನ್ಯಾಯಾಲಯ ನಿವೃತ್ತ ನ್ಯಾಯಾಧೀಶ ಎಚ್. ಬಿಳ್ಳಪ್ಪ ಬಹುಮಾನ ವಿತರಿಸಿದರು. ವಿಶಾಖಪಟ್ಟಣದ ದಾಮೋದರಂ ಸಂಜೀವಯ್ಯ ನ್ಯಾಷನಲ್ ಲಾ ವಿವಿ ಅಸೋಸಿಯೇಟ್ ಪ್ರೊ. ಡಾ. ದಯಾನಂದ ಮೂರ್ತಿ ಮಾತನಾಡಿದರು. ಕುಲಪತಿ ಡಾ. ಸಿ. ಬಸವರಾಜು ಅಧ್ಯಕ್ಷತೆ ವಹಿಸಿದ್ದರು. ಮೌಲ್ಯಮಾಪನ ಕುಲಸಚಿವೆ ಡಾ. ರತ್ನಾ ಭರಮಗೌಡರ್, ಹಿರಿಯ ವಕೀಲ ಕೆ.ಎಲ್. ಪಾಟೀಲ್ ಉಪಸ್ಥಿತರಿದ್ದರು. ಕಲ್ಪಿತ ನ್ಯಾಯಾಲಯ ಸಂಯೋಜಕರಾದ ಡಾ. ಸುನೀಲ್ ಬಾಗಡೆ, ಡಾ. ರಾಜೇಂದ್ರಕುಮಾರ ಹಿಟ್ಟಣಗಿ, ಡಾ. ಕುಮುದಾ ಕರೊಗಲ್ ಮತ್ತು ಮನಿಶಾ ಎಂ. ಅವರ ತಂಡ ಅಚ್ಚುಕಟ್ಟಾಗಿ ಸ್ಪರ್ಧೆ ನಿರ್ವಹಿಸಿದರು.





ರಾಷ್ಟ್ರೀಯ ಸ್ವಯಂಸೇವಕ ಸಂಘ(ಸಂಘ)ದ ಜ್ಯೇಷ್ಠ ಪ್ರಚಾರಕ, ಅಪ್ರತಿಮ ಸಂಘಟಕ, ಮೇರು ಚಿಂತಕ, ಸಿದ್ಧಹಸ್ತ ಲೇಖಕ ಹೊ. ವೆ. ಶೇಷಾದ್ರಿ ಅವರ ಜನ್ಮ ಶತಾಬ್ದಿ. ಸೃಜನಶೀಲ, ಸಂವೇದನಾಶೀಲ, ಸ್ಥಿತಪ್ರಜ್ಞ ವ್ಯಕ್ತಿತ್ವದ ಶೇಷಾದ್ರಿ ಅವರು ವಿದ್ವಾಂಸದರೂ ಹೌದು. ಅವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಅವರ ಕುರಿತಾದ ಸ್ಮರಣೆ ಇಲ್ಲಿದೆ.





ನಮ್ಮೆಲ್ಲರನ್ನೂ ಪ್ರೀತಿಯಿಂದ ತಿದ್ದಿ ತೀಡಿ ಬೆಳೆಸಿದ, ತಮ್ಮ ಬದುಕಿನ ಉಜ್ವಲ ಉದಾಹರಣೆಯಿಂದ ನಮಗೆ ಆದರ್ಶವಾಗಿದ್ದ ಶ್ರೇಷ್ಠ ವಿದ್ವಾಂಸ, ಸಂಘಟಕ, ಲೇಖಕ, ಬೌದ್ಧಿಕ ಮಹಾಮೇರು, ಸಂವೇದನೆಯ ಉನ್ನತ ಮಾದರಿ ಮಾನ್ಯ ಹೊ. ವೆ. ಶೇಷಾದ್ರಿಗಳ ದಿವ್ಯ ಸ್ಮೃತಿಗೆ ಅವರ ಜನ್ಮ ಶತಾಬ್ದಿಯಂದು ಶ್ರದ್ಧಾಭಕ್ತಿಗಳ ಸಹಿತ ಶತ ಶತ ನಮನಗಳು. ಅವರ ದಯಾಮಯ ಕೃಪೆ ನನ್ನ ಮೇಲಿರಲಿ ಎಂದು ಭಗವಂತನಲ್ಲಿ ಪ್ರಾರ್ಥನೆ.

■ **ದತ್ತಾತ್ರೇಯ ಹೊಸಬಾಳೆ**, ಸರಕಾರ್ಯವಾಹ
ರಾಷ್ಟ್ರೀಯ ಸ್ವಯಂಸೇವಕ ಸಂಘ



ನನಗೆ ಹೊ.ವೆ. ಶೇಷಾದ್ರಿ ಅವರ ಬಗ್ಗೆ ಗೌರವ, ಅಭಿಮಾನ ಇರುವುದು ಶೋಷಿತ ವರ್ಗಗಳ ಬಗ್ಗೆ ಅವರಿಗಿದ್ದ ಕಳಕಳಿಗಾಗಿ. ಈ ವರ್ಗಗಳ ಉನ್ನತಿಯ ಬಗ್ಗೆ ಎಲ್ಲಾ ಮಗ್ಗಲುಗಳಿಂದ ಅವರು ಚಿಂತನೆ ಮಾಡಿದ್ದರು. ಆರ್ಥಿಕ ಅಭಿವೃದ್ಧಿಯ ಜೊತೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಉನ್ನತಿಯ ಮಹತ್ವವನ್ನು ತುಂಬಾ ಚೆನ್ನಾಗಿ ತಿಳಿದು ಕೊಂಡಿದ್ದರು. ಅದನ್ನೇ ಅವರು ಪ್ರತಿಪಾದಿಸುತ್ತಿದ್ದರು. ಅವರು ಭಾರತೀಯ ಸಂಸ್ಕೃತಿಯ ಉದಾರವಾದಿ ಹಾಗೂ ಮಾನವತಾವಾದಿ ಚಿಂತನೆಗಳ ಪ್ರತಿರೂಪವಾಗಿದ್ದರು. ನಮ್ಮ ಸಂಸ್ಕೃತಿಯಲ್ಲಿರುವ ಉದಾರವಾದಿ ಚಿಂತನೆಗಳನ್ನು ಪುನರುಜ್ಜೀವನಗೊಳಿಸುವುದೇ ಶೋಷಿತ ವರ್ಗದವರಿಗೆ ನೀಡುವ ಒಂದು ದೊಡ್ಡ ಶಕ್ತಿಯಾಗಿದೆ. ಈ ವಿಶಿಷ್ಟ ಚಿಂತನೆಯನ್ನು ನಾನು ಕಲಿತಿದ್ದು ಶೇಷಾದ್ರಿಯವರಿಂದ. ಅವರ ನೆನಪು ಎಂದೆಂದೂ ಹಸಿರಾಗಿರಲಿ, ಅವರ ವಿಚಾರಗಳು ಸದಾ ಬೆಳಕಾಗಿರಲಿ.

■ **ಡಾ. ಸಿದ್ದಲಿಂಗಯ್ಯ**, ಸಾಹಿತಿ (ಶೇಷಾದ್ರಿ ಅವರ ಜೀವನದರ್ಶನ ಕೃತಿ ಧ್ಯೇಯಯಾತ್ರಿ ಪುಸ್ತಕದ ಬೆನ್ನುಡಿಯಿಂದ)

ಜ್ಯೇಷ್ಠ ಪ್ರಚಾರಕ ಹೊ.ವೆ.ಶೇಷಾದ್ರಿ ಶತಸಂಭ್ರಮ



ಭಾರತೀಯ ವೈಚಾರಿಕ ಪ್ರಜ್ಞೆಯ ಅಸಾಮಾನ್ಯ ಅಧ್ವರ್ಯು

▸ **ಮಂಜುನಾಥ ಅಜ್ಜಂಪುರ, ಅಂಕಣಕಾರರು**



ಕಳೆದ ಒಂದೆರಡು ಶತಮಾನಗಳ ಅಂಧಕಾರದ ಕಾಲಘಟ್ಟದಲ್ಲಿ, ಬ್ರಿಟಿಷರು – ಮೆಕಾಲೆವಾದಿಗಳು – ಜಿಹಾದಿಗಳು – ಮಿಷನರಿಗಳು, ಭಾರತದ ಅಸ್ಮಿತೆ – ಆತ್ಮಾಭಿಮಾನಗಳನ್ನೇ ನಾಶ ಮಾಡಿಬಿಟ್ಟರು. ಭಾರತೀಯ ಕೃಷಿ, ಉದ್ಯಮ ಮತ್ತು ಶಿಕ್ಷಣ ವ್ಯವಸ್ಥೆಯನ್ನು ಬ್ರಿಟಿಷರು ಅಷ್ಟರಲ್ಲಿಯೇ ಬುಡಮೇಲು ಮಾಡಿದ್ದರು. ಅನೇಕ ದೇಶಗಳಿಂದ ವಿದ್ಯಾರ್ಥಿಗಳು ಇಲ್ಲಿನ ವಿಶ್ವವಿದ್ಯಾಲಯಗಳಿಗೆ ವಿದ್ಯಾರ್ಜನೆಗಾಗಿ ಬರುತ್ತಿದ್ದ ಕಾಲ ಹೋಗಿ, ಎಲ್ಲ ಭಾರತೀಯರೂ ನಿರಕ್ಷರಕುಕ್ಷಿಗಳಾಗಿಬಿಟ್ಟರು. ಉದ್ಯಮ, ತಂತ್ರಜ್ಞಾನಗಳನ್ನು ಇಲ್ಲಿಂದ ವಿದೇಶೀಯರು ಕೊಂಡೊಯ್ಯುತ್ತಿದ್ದ ಕಾಲ ಹೋಗಿ, ನಮ್ಮ ಜನರೇ ಅವಿವೇಕಿ ದಿಕ್ಕುಗೇಡಿಗಳಾಗಿಹೋದರು. ವಿದೇಶೀಯರಿಗೂ ಉಚಿತ ಅನ್ನ – ವಿದ್ಯೆ ನೀಡುತ್ತಿದ್ದ ಈ ದೇಶವು ಭಿಕ್ಷುಕರ, ದರಿದ್ರರ, ರೋಗಿಷ್ಠರ ನಾಡಾಗಿಹೋಯಿತು. ಇಷ್ಟು ಸಾಲದೆಂದು ಬ್ರಿಟಿಷರು ಮತ್ತು ಅವರ ದುಷ್ಟವಾರಸಿಕೆಯವರು, ತಮ್ಮ ಪಠ್ಯಪುಸ್ತಕಗಳ ಮೂಲಕ ನಮ್ಮದೊಂದು ದೇಶವೇ ಅಲ್ಲ, ನಮ್ಮದು ಒಂದು ಸಂಸ್ಕೃತಿಯೂ ಅಲ್ಲ ಎನ್ನುವ ಪ್ರಥೆಯನ್ನೇ ನಮ್ಮ ತಲೆಗೆ ತುಂಬಿದರು.

ಡಾ. ಕೇಶವ ಬಲಿರಾಮ್ ಹೆಡಗೆವಾರ್ ಅವರು 1925ರಲ್ಲಿ ಹಿಂದು ಸಂಘಟನೆಗಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಪ್ರಾರಂಭಿಸಿದ ಪೂರ್ವಕಾಲದಲ್ಲಿ ಧರ್ಮ ಮತ್ತು ಹಿಂದು ಪದಗಳ ವ್ಯಾಖ್ಯಾನವು ಸಹ ಒಂದು ಸವಾಲೇ ಆಗಿತ್ತು. ಈ ವ್ಯಾಖ್ಯಾನವು ಇಂದಿಗೂ ಒಂದು ಸಮಸ್ಯೆಯೇ ಆಗಿದೆ, ಸವಾಲಾಗಿಯೇ ಉಳಿದಿದೆ. ಅನಂತರದ ಮುಖ್ಯಸ್ಥರಾದ ಗುರೂಜಿ ಮಾಧವ ಸದಾಶಿವ ಗೋಲ್ವಲ್ಕರ್ ಅವರು ಬಹಳ ದೊಡ್ಡ ವಿದ್ವಾಂಸರು. ಭಾರತೀಯ ಗುರುಕುಲಗಳು ನಾಶವಾಗಿ, 19 ಮತ್ತು 20ನೆಯ ಶತಮಾನಗಳಲ್ಲಿ ಪ್ರಕಟವಾದ ಅಪ-ವ್ಯಾಖ್ಯಾನದ ಇಂಗ್ಲಿಷ್ ಗ್ರಂಥಗಳನ್ನು ಸೋಸಿ, ಭಾರತೀಯತೆಯ ಸತ್ಯದ ಬಂಗಾರವನ್ನು ತೆಗೆಯಬೇಕಿತ್ತು. ಕಾಲದ ಅಗತ್ಯವಾಗಿ, ಅಪಾರ ಚಿಂತನ – ಮಂಥನಗಳಿಂದ ಸೂಕ್ತ ವ್ಯಾಖ್ಯಾನ-ನವನೀತದ ಸೃಷ್ಟಿಯಾಗಬೇಕಿತ್ತು.

ನಿಜ. ಸನಾತನ ಧರ್ಮ ಮತ್ತು ಹಿಂದು ಸಮಾಜಗಳನ್ನು ಉಳಿಸಲು ಬೆಳೆಸಲು ಚಿಂತನೆಯ ಒಂದು ಅಧಿಕೃತ ಅಧಿಕರಣವು ಅವಶ್ಯಕವೂ ಆಗಿತ್ತು. ಗುರೂಜಿ ಅವರ ಹಿಂದೀ ಭಾಷೆಯ ಉಪನ್ಯಾಸಗಳೂ ಸೇರಿದಂತೆ, ಅವರ ಅಮೂಲ್ಯ ಚಿಂತನೆಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿ ಅತಿಮಹತ್ವದ Bunch of Thoughts ಗ್ರಂಥವನ್ನು 1966ರಲ್ಲಿ ಹೊರತರಲಾಯಿತು. ಈ ಸಾಗರೋಪಮ ಸಾಹಿತ್ಯ-ಸಾಹಸದ ಹಿಂದೆ ಜ್ಞಾನಿ, ವಿದ್ವಾಂಸ, ಲೇಖಕ, ಅಂಕಣಕಾರ, ಚಿಂತಕ ಹೊ.ವೆ.ಶೇಷಾದ್ರಿ ಅವರ ಕಠಿಣತಮ ಪರಿಶ್ರಮವಿತ್ತು. ಮುಂದೆ ಈ ಗ್ರಂಥವನ್ನು ಕನ್ನಡಕ್ಕೆ ತಂದಾಗಲೂ (ಚಿಂತನಗಂಗಾ) ಅವರದ್ದೇ ಪರಿಶ್ರಮ-ಪರಿಪಾಕ. ಹತ್ತಾರು ಸಹಸ್ರ ವರ್ಷಗಳ ಅತ್ಯದ್ಭುತ ಧಾರ್ಮಿಕ ಪರಂಪರೆಯನ್ನು ಮತ್ತು ಅದನ್ನು ಉಳಿಸಿ ಬೆಳೆಸುವ ಚಿಂತನೆಗಳನ್ನು ಗ್ರಂಥವೊಂದರಲ್ಲಿ ಹಿಡಿದಿಡುವುದು ಸಾಮಾನ್ಯ ಕೆಲಸವಲ್ಲ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಮರ್ಪಿತ ಪ್ರಚಾರಕರಾಗಿ ಸರಕಾರ್ಯವಾಹ ಸ್ಥಾನದವರೆಗಿನ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿ, ಜೊತೆಜೊತೆಯಲ್ಲಿಯೇ ತಮ್ಮ ಬರೆಹಗಳಿಂದ, ಉಪನ್ಯಾಸಗಳಿಂದ ಹಿಂದು ಸಮಾಜಕ್ಕೆ ಮಾರ್ಗದರ್ಶನ ನೀಡಿದ ಶೇಷಾದ್ರಿ ಅವರದ್ದು ಅನುಪಮ ಸಾಧನೆ. ಆರು ದಶಕಗಳ ಹಿಂದಿನಿಂದಲೇ ಅವರ ಅಂಕಣಗಳನ್ನು, ಬರೆಹಗಳನ್ನು ಓದುತ್ತ ಬೆಳೆದ ನನಗೆ ಅವರೊಂದು ವಿಸ್ಮಯ. ಅವರ ಹರಿತವಾದ ಭಾಷೆ, ವ್ಯಂಗ್ಯ, ಅವರು ನೀಡುತ್ತಿದ್ದ ಉದಾಹರಣೆಗಳು, ಅವರ ಉಲ್ಲೇಖಗಳು ಬಹಳ ಪರಿಣಾಮಕಾರಿಯಾಗಿರುತ್ತಿದ್ದವು. ಅವರ ಅಧ್ಯಯನ ವೈಶಾಲ್ಯವೂ ವಿಸ್ತೃತ ಆಯಾಮದ್ದು.

ಅಷ್ಟು ಹಿಂದೆಯೇ, ಅಂಕಣಗಳಿಗೆ ಅವರಂತೆ ಶೀರ್ಷಿಕೆಗಳನ್ನು ಕೊಟ್ಟವರೂ, ಅವರಂತೆ ಭಾಷೆಯನ್ನು ಬಳಸಿದವರೂ ಯಾರೂ ಇಲ್ಲ. ಅವರೇ ಮೊದಲಿಗರು:

''ಶ್ರದ್ಧಾಂಜಲಿಯೋ, ತಿಲಾಂಜಲಿಯೋ''
''ಬರಲಿನ್ನು ಸಾಮಾನ್ಯರ ಯುಗ''
''ಅಮ್ಮಾ, ಬಾಗಿಲು ತೆಗಿ''
''ಈ ಪರಿಯ ಮಹಿಮೆ ಇನ್ನಾವ ಶಬ್ದದೊಳು ಕಾಣೆ''
''ಅಗ್ಗದ ಆಸೆಗೆ ಗೊಬ್ಬರ ಕೊಂಡರು''

ಅದು 1960ರ ದಶಕ ಎಂಬುದನ್ನು ಕಣ್ಮುಂದೆ ತಂದುಕೊಂಡಾಗ ಶೇಷಾದ್ರಿಗಳ ಕಥನ-ವೈಶಿಷ್ಟ್ಯದ ಅನುಭೂತಿ ನಮ್ಮದಾಗುತ್ತದೆ. ದೇಶವಿಭಜನೆಯ ನಿಜ-ಇತಿಹಾಸವೇ ಅಪರಿಚಿತವಾಗಿ ಹೋಗಿದ್ದಾಗ ಅವರು ಬರೆದ ಆ ಕಾಳರಾತ್ರಿಯ ಪ್ರಶ್ನೆ ಮತ್ತು ದೇಶವಿಭಜನೆಯ ದುರಂತ ಕಥೆ, ಇಂಗ್ಲಿಷಿನಲ್ಲಿ ಬರೆದ The Tragic Story of Partition ಗ್ರಂಥಗಳು ಸಾಹಿತ್ಯ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ತಲ್ಲಣವನ್ನೇ ಹುಟ್ಟಿಸಿದವು. ಬಹಳ ದೊಡ್ಡ ಲೇಖಕರಾದ ಸೀತಾರಾಮ ಗೋಯಲ್, ಅರುಣ್ ಶೌರಿ ಮುಂತಾದವರು ಸಹ ಈ ಮಹತ್ಕೃತಿಗಳ ಉಲ್ಲೇಖವನ್ನು ಮಾಡಿದ್ದಾರೆ.

1975ರ ಕರಾಳ ತುರ್ತುಪರಿಸ್ಥಿತಿಯ ಅತಿರೇಕಗಳ ಬಗೆಗೆ, ಅನ್ಯಾಯಗಳ ಬಗೆಗೆ ಅವರು ಸಂಪಾದಿಸಿದ ಭುಗಿಲು (ಪ್ರಕಟಣೆ 1977) ಅಪರೂಪದ ಸಾಕ್ಷ್ಯಾಧಾರಗಳ ದಾಖಲೆಯ ಕೃತಿಯೇ ಆಗಿದೆ. ಇಂಗ್ಲಿಷ್, ಹಿಂದೀ ಮತ್ತಿತರ ಭಾಷೆಗಳಲ್ಲಿ ತುರ್ತುಪರಿಸ್ಥಿತಿಯ ಅತಿರೇಕಗಳ ಬಗೆಗೆ ಅಕ್ಷರಶಃ ನೂರಾರು ಗ್ರಂಥಗಳು ಪ್ರಕಟವಾದವು. ಭುಗಿಲು ಕರ್ನಾಟಕದಲ್ಲಿ, ಕನ್ನಡದಲ್ಲಿ ಕಾರಣಾಂತರದಿಂದ ಏಕಮೇವ ಆಗಿಹೋಯಿತು.

ಅಸ್ಸಾಂ ಎಲ್ಲಿದೆ ಎಂಬುದೇ ಬಹಳ ಜನರಿಗೆ ಗೊತ್ತಿರಲಿಲ್ಲ ಎನ್ನುವ ಕಾಲಘಟ್ಟದಲ್ಲಿ ಶೇಷಾದ್ರಿ ಅವರ ಅಸ್ಸಾಮಿನ ಆರ್ತಸ್ವರ (1980) ಅಲ್ಲಿನ ಬಹು-ಆಯಾಮದ ಸಮಸ್ಯೆಗಳ ಚಿತ್ರಣ ನೀಡಿತು. ಮತಾಂತರವೆಂದರೆ ರಾಷ್ಟ್ರಾಂತರ ಎಂದು ಎಚ್ಚರಿಸಿದ ಅವರ ಮೀನಾಕ್ಷಿಪುರಂ, ಒಂದು ಎಚ್ಚರಿಕೆ (1981) ಆ ಕುರಿತ ಒಂದು ಸಾಮಾಜಿಕ – ಚಾರಿತ್ರಿಕ ಪುರಾವೆಯೂ ಆಗಿದೆ.

ಶೇಷಾದ್ರಿಗಳ ನಿಧನಾನಂತರ ಅವರ ಜೀವನದರ್ಶನ ಕೃತಿ ಧ್ಯೇಯಯಾತ್ರಿ ರಚಿಸುವಾಗ ನನಗೆ ಅಚ್ಚರಿಯ ಅಪೂರ್ವಾನುಭವ. ಅಂತಹ ಧ್ಯೇಯಸಮರ್ಪಿತ ಮಹಾಚೇತನಗಳ ಜೀವನದಲ್ಲಿ ಸಾಮಾನ್ಯರ ಜೀವನದಲ್ಲಿ ನಾವು ಕಾಣುವ ಸಾಮಾನ್ಯ ಅನುಭವಗಳೇ ಇರುವುದಿಲ್ಲ, ಎಲ್ಲವೂ ಸಂಘ, ಹಿಂದು ಸಮಾಜ, ಸನಾತನ ಧರ್ಮ, ರಾಷ್ಟ್ರಜೀವನ, ಇತ್ಯಾದಿ ಧ್ಯೇಯಗಳ ಪರಿಧಿಯಲ್ಲಿಯೇ ಇರುತ್ತವೆ (ಎಷ್ಟೆಂದರೆ, ನನ್ನ ಕಿಡಿಗೇಡಿ ಬಾಲ್ಯಸ್ನೇಹಿತರು ಧ್ಯೇಯಯಾತ್ರಿ ಕೃತಿಯಲ್ಲಿ ಶೇಷಾದ್ರಿ ಅವರ ವಿಷಯವನ್ನೇ ಏಕೆ ಬರೆದಿಲ್ಲ ಎಂದು ಹಾಸ್ಯ ಮಾಡುತ್ತಿದ್ದರು).



******

ಸುಮಾರು ಮೂರು ದಶಕಗಳ ಹಿಂದೆ ಶೇಷಾದ್ರಿ ಅವರು ಶಿವಮೊಗ್ಗಕ್ಕೆ ಬಂದಿದ್ದರು. ವೃತ್ತಿನಿಮಿತ್ತ ನಾನಾಗ ಶಿವಮೊಗ್ಗದಲ್ಲಿದ್ದೆ ಮತ್ತು ಸಂಘದ ಸಂಪರ್ಕ ತುಂಬಾ ಕಡಿಮೆಯಾಗಿಹೋಗಿತ್ತು. 1974ರ ದಾಂಡೇಲಿಯ ಸಂಘ ಶಿಕ್ಷಾ ವರ್ಗದ ಅನಂತರ ಅವರೊಂದಿಗೆ ವಿಸ್ತೃತವಾದ ಚರ್ಚೆ ಸಾಧ್ಯವಾಗಿರಲಿಲ್ಲ. ಆದರೂ, ಶಿವಮೊಗ್ಗದಲ್ಲಿ ಅವರೊಂದಿಗೆ ಒಂದಿಷ್ಟು ಮಾತನಾಡುವ ಮತ್ತು ಪ್ರಶ್ನೆ ಕೇಳುವ ಅವಕಾಶ ಸಿಕ್ಕಿತ್ತು.

ಜಾತಿ, ಉಪಜಾತಿ, ಜಾತೀಯತೆ, ಜಾತಿವಿನಾಶ ಆಂದೋಲನ, ಮತಾಂತರ, ಮರಳಿ ಮಾತೃಧರ್ಮಕ್ಕೆ ಅಭಿಯಾನ, ಮತೀಯ ಆಕ್ರಮಣಕಾರೀ ದುಃಶಕ್ತಿಗಳು ದೇಶಗಳ ಜನಸಂಖ್ಯಾ ಸಮತೋಲನವನ್ನೇ (Demographic Imbalance) ತಮ್ಮ ಜನಸಂಖ್ಯಾಸ್ಫೋಟದಿಂದ ನಾಶಮಾಡಿಬಿಡುವುದು, ಮುಸ್ಲಿಮರಾಗಲೀ – ಕ್ರೈಸ್ತರಾಗಲೀ ಮರಳಿ ಮಾತೃಧರ್ಮಕ್ಕೆ ಬಂದಾಗ ಯಾವ ಸಮುದಾಯಕ್ಕೆ ಸೇರಬೇಕಾಗುತ್ತದೆ, ಅವರದ್ದೇ ಪ್ರತ್ಯೇಕ ಸಮುದಾಯವಾಗಬೇಕೇ...... ಸಮಸ್ಯೆಗಳು – ಪ್ರಶ್ನೆಗಳು..... ಒಂದೇ ಎರಡೇ.... ಸಿಕ್ಕ ಅವಕಾಶದಲ್ಲಿಯೇ ಪ್ರಶ್ನಿಸಿದೆ. ಅವರ ಉತ್ತರಗಳು ದಶಕಗಳಿಂದ ಎದೆಯಲ್ಲಿ – ತಲೆಯಲ್ಲಿ ಅನುರಣಿಸುತ್ತಿವೆ.

''... ನೋಡಪ್ಪಾ, ಮಂಜೂ. ನಮ್ಮ ಹಿಂದು ಸಮಾಜದಲ್ಲಿ ಜಾತಿಗಳು ವಾಸ್ತವ. ಜಾತಿಗಳು ಹೋಗುವುದಿಲ್ಲ, ನಮಗೆ ಬೇಕಾದುದು ಜಾತಿಜಾತಿಗಳ ನಡುವಿನ ಸಾಮರಸ್ಯ. ಸಾಮರಸ್ಯಕ್ಕೇ ಸಂಘವೂ ಒತ್ತು ಕೊಡುತ್ತಿದೆ. ಸಾಮರಸ್ಯವೇ ಪರಿಹಾರ ಕಣಪ್ಪಾ.

ಹಿಂದಿನ ಅನೇಕ ಶತಮಾನಗಳಲ್ಲಿ, ದೇಶಾದ್ಯಂತ ತುಂಬ ತುಂಬ ಮತಾಂತರ ಆಗಿದೆ. ಬಹುತೇಕ ಸಮುದಾಯಗಳು (ಕ್ರೈಸ್ತರಾದರೂ ಮುಸ್ಲಿಮರಾದರೂ) ಅಲ್ಲಿಯೂ ಉಪ-ಸಮುದಾಯಗಳಾಗಿಯೇ ಮುಂದುವರಿದಿವೆ. ಮಾತೃಧರ್ಮಕ್ಕೆ ಮರಳಿದ ಮೇಲೆ ಆಯಾ ಸಮುದಾಯಗಳು ಹಿಂದು ಸಮಾಜದ ಅದೇ ಜಾತಿಗೇ ಸೇರಬೇಕಾಗುತ್ತದೆ. ಬೇರೆ ಪರಿಹಾರ, ಇಲ್ಲಪ್ಪಾ....'' ಎಂದರು.

ಅವರ ಮಾತುಗಳನ್ನು ಅರ್ಥ ಮಾಡಿಕೊಳ್ಳಲು, ಜೀರ್ಣಿಸಿಕೊಳ್ಳಲು, ಒಪ್ಪಿಕೊಳ್ಳಲು ಸಾಕಷ್ಟು ಕಾಲವೇ ಬೇಕಾಯಿತು. ಇಡೀ ದೇಶದಲ್ಲಿ ಜಾತಿ, ಉಪಜಾತಿ, ಕೋಮುಗಳ ನಡುವಿನ ನಿಲ್ಲದ ರಾಜಕೀಯವು ಅನೇಕ ದಶಕಗಳಿಂದ ದೊಡ್ಡ ಸಮಸ್ಯೆಯೇ ಆಗಿದೆ. ಮೀಸಲಾತಿಯು ಇದಕ್ಕೆ ಇನ್ನೊಂದೇ ಆಯಾಮ ನೀಡಿದೆ. ಅನೇಕ ಚಿಂತನಧಾರೆಗಳ ಪ್ರಭೃತಿಗಳು ದೊಡ್ಡ ದೊಡ್ಡ ಮಾತುಗಳನ್ನು ಆಡಿದರೂ, ವಾಸ್ತವದಲ್ಲಿ ಸಾಮರಸ್ಯದ ಪರಿಕಲ್ಪನೆಗೆ ಒತ್ತು ಕೊಡುವ ಮಾತೇ ಆಡುವುದಿಲ್ಲ.

ವಾಸ್ತವವಾಗಿ, ಶೇಷಾದ್ರಿ ಅವರು ಹೇಳಿದ ಪರಿಹಾರಕ್ಕಿಂತ ಉತ್ತಮವಾದುದು ಈವರೆಗೆ ಯಾವುದೂ ಕಾಣಲಿಲ್ಲ. ಈ ದಿಸೆಯಲ್ಲಿ ಜಾತಿ – ಉಪಜಾತಿ – ಉಪಉಪಜಾತಿಗಳಲ್ಲಿ ಮುಳುಗಿಹೋಗಿರುವ ನಮ್ಮ ಮಠಾಧೀಶರು, ಸ್ವಾಮಿಗಳು ಈಗಲಾದರೂ ಎಚ್ಚೆತ್ತುಕೊಂಡು ಇಸ್ಲಾಂ ಮತ್ತು ಕ್ರೈಸ್ತ ಮತಗಳಿಗೆ ಹೋಗಿರುವ ಸಮುದಾಯಗಳನ್ನು ಮರಳಿ ಮಾತೃಧರ್ಮಕ್ಕೆ ಕರೆದುಕೊಂಡು ಬರುವ ಮೂಲಕ ಅರ್ಥಪೂರ್ಣವಾದ ಸೇವೆ ಮಾಡಬಹುದು. ನನ್ನ ಅನೇಕ ಬರೆಹಗಳಲ್ಲಿ ಮತ್ತು ಮಾತುಗಳಲ್ಲಿ ಈ ಸೈದ್ಧಾಂತಿಕ ಅಂಶವನ್ನೇ ಪ್ರತಿಪಾದಿಸಿದ್ದೇನೆ.

ಹಿಂದು ಧರ್ಮ, ಹಿಂದು ಸಂಘಟನೆ, ಹಿಂದು ಸಮಾಜಗಳಿಗಾಗಿಯೇ ಸಮರ್ಪಿತರಾಗಿದ್ದ ಶೇಷಾದ್ರಿ ಅವರು ನಮ್ಮ ದೇಶ ಕಂಡ ಬಹಳ ದೊಡ್ಡ ಚಿಂತಕರು, ಬರೆಹಗಾರರು. ಕಮ್ಯೂನಿಸಂ, ಇಸ್ಲಾಂ ಮತ್ತು ಕ್ರೈಸ್ತ ಮತಗಳ ಸಾಮ್ರಾಜ್ಯಶಾಹಿ ಆಕ್ರಮಣ ಮತ್ತು ಅಪಾಯಗಳ ಬಗೆಗೆ ಬಹುಮೂಲ್ಯ ಚಿಂತನೆಗಳನ್ನು ಅವರು ನೀಡಿದ್ದಾರೆ. ಕನ್ನಡ, ಇಂಗ್ಲಿಷ್ ಮತ್ತು ಇತರ ಭಾಷೆಗಳಲ್ಲೂ ಲಭ್ಯವಿರುವ ಅವರ ಕೃತಿಗಳು ಭಾರತವನ್ನು ಮತ್ತು ಸನಾತನ ಧರ್ಮವನ್ನು ಉಳಿಸುವೆಡೆಗೆ ಅಪೂರ್ವ ಕೊಡುಗೆಗಳಾಗಿವೆ. ಅವರ ಚಿಂತನೆಗಳ ಅಧ್ಯಯನ ಮತ್ತು ಅನುಷ್ಠಾನಗಳು ಅವರಿಗೆ ನಾವು ನೀಡಬಹುದಾದ ನೈಜ ಶ್ರದ್ಧಾಂಜಲಿ, ಸ್ಮರಣಾಂಜಲಿ.

ವಿಶೇಷವೆಂದರೆ, ಯಾವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಮರ್ಪಿತ ಪ್ರಚಾರಕರಾಗಿ ಶೇಷಾದ್ರಿ ಅವರು ತಮ್ಮ ಪೂರ್ಣ ಜೀವನವನ್ನು ಹಿಂದು ಸಮಾಜಕ್ಕಾಗಿ ಮುಡುಪಿಟ್ಟರೋ, ಈಗ ಆ ಸಂಘದ ಶತಮಾನೋತ್ಸವವೂ ಹೌದು. ಶೇಷಾದ್ರಿ ಅವರು ಹುಟ್ಟಿದ್ದು 26ನೆಯ ಮೇ 1926ರಂದು. ಇದೀಗ ಅವರ ಶತಮಾನೋತ್ಸವ ವರ್ಷ ಪೂರ್ಣಗೊಂಡಿದೆ.



ಶೇಷಾದ್ರಿ ಅವರ ಪುಸ್ತಕಗಳು

1. ಯುಗಾವತಾರ (1967)
2. ತಾಯಿ ಕಾದಿಹಳು (1969)
3. ಕ್ರಾಂತಿಯಲ್ಲ ಭ್ರಾಂತಿ (1970)
4. ಅಮ್ಮಾ ಬಾಗಿಲು ತೆಗಿ (1970)
5. ಶಿವಾಜಿ (1972)
6. ಕೋರಿಕೆ (1973)
7. ಗುರು ಗೋವಿಂದ ಸಿಂಹ (1974)
8. ಭುಗಿಲು (1977)
9. ಅಸ್ಸಾಮಿನ ಆರ್ತಸ್ವರ (1980)
10. ಮೀನಾಕ್ಷಿಪುರಂ – ಒಂದು ಎಚ್ಚರಿಕೆ (1981)
11. ತೋರ್ ಬೆರಳು (1981)
12. ಆ ಕಾಳರಾತ್ರಿಯ ಪ್ರಶ್ನೆ (1981)
13. ಆಧುನಿಕ ಮಾನವ ಜೀವನದ ಕುರುಕ್ಷೇತ್ರದಲ್ಲಿ ಪಾರ್ಥಸಾರಥಿ ಯಾರು? (1982)
14. ಮೃಗಜಲ, ನಿಜಜಲ (1983)
15. ಭಾರತದಲ್ಲಿ ಕ್ರೈಸ್ತ ಚಟುವಟಿಕೆಗಳು (1985)
16. ಪರಿಪ್ರಶ್ನ (1986)
17. ಕೃತಿರೂಪ ಸಂಘದರ್ಶನ (1990)
18. ಇದೊಂದೇ ದಾರಿ (1995)
19. ವಿಕೃತಿಯಿಂದ ಸಂಸ್ಕೃತಿಯೆಡೆಗೆ (1995)
20. ದೇಶ ವಿಭಜನೆಯ ದುರಂತಕಥೆ (1995)
21. ನವನಿರ್ಮಾಣದ ಒಳಪದರಗಳು (1996)
22. ಚರೈವೇತಿ (1996)
23. ಕೈದೀವಿಗೆ (1996)
24. ದಿಶಾಬೋಧ (1998)
25. ನ್ಯಾಯಿಕ ಆಯೋಗಗಳ ಕಣ್ಣಲ್ಲಿ ಮತಾಂತರ (1999)
26. ಸಮರಸತೆಯ ಸವಾಲು (1999)
27. ಸಮಾಜಯೋಗ (2001)
28. ಹಿಂದು ಸಮಾಜಕ್ಕೆ ಸವಾಲುಗಳು– ಪರಿಹಾರಗಳು (2002)
29. ಜಾಗೃತಾತ್ಮರಿಗಾಗಿ (2004)
30. ಶ್ರೀ ಗುರೂಜಿ (2005)
31. Dr Hegdewar - Epoch Maker (1981)
32. Christian Missions in the eyes of Gandhiji (1981)
33. Warning of Meenakshipuram (1981)
34. The Tragic Story of Partition (1982)
35. RSS - A Vision in Action (1988)
36. Hindus abroad - The Dilemma: Dollar or Dharma (1990)
37. Universal Spirit of Hindu Nationalism (1991)
38. The Way (1991)
39. Implications of Christian Conversions (1999)
40. Yoga - A Science Imperative (2000)
41. Sri Guruji (2005)



ವೈಶ್ವಿಕ ವಿಚಾರಗಳ ಪ್ರತಿಪಾದಕ

▸ **ರಾಜೇಶ್ ಪದ್ಮಾರ್, ಪ್ರಚಾರ ಪ್ರಮುಖ್, ರಾಷ್ಟ್ರೀಯ ಸ್ವಯಂಸೇವಕ ಸಂಘ ದಕ್ಷಿಣ ಪ್ರಾಂತ**




ರಾಷ್ಟ್ರೀಯ ಸ್ವಯಂಸೇವಕ ಸಂಘ(ಸಂಘ)ದ ಜ್ಯೇಷ್ಠ ಪ್ರಚಾರಕ, ಅಪ್ರತಿಮ ಸಂಘಟಕ, ಮೇರು ಚಿಂತಕ, ಸಿದ್ಧಹಸ್ತ ಲೇಖಕ ಹೊ.ವೆ. ಶೇಷಾದ್ರಿ ಅವರ ನೂರನೆಯ ಜಯಂತಿಯ (26.5.1926–14.8.2005) ವರ್ಷ.

1926 ರ ಮೇ 26ರಂದು ಬೆಂಗಳೂರಿನಲ್ಲಿ ಜನಿಸಿದ ಹೊ. ವೆ. ಶೇಷಾದ್ರಿ ಅವರು 1942ರಲ್ಲಿ ಸಂಘದ ಸಂಪರ್ಕಕ್ಕೆ ಬಂದರು. ತಮ್ಮ ಎಂ.ಎಸ್ಸಿ ರಸಾಯನಶಾಸ್ತ್ರ ಸ್ನಾತಕೋತ್ತರ ಶಿಕ್ಷಣದ ಬಳಿಕ 1946ರಲ್ಲಿ ಸಂಘದ ಪ್ರಚಾರಕರಾದರು. ಕರ್ನಾಟಕದ ಮೊದಲ ತಂಡದ ಮೂವರು ಪ್ರಚಾರಕರಾದ ಕೃ. ಸೂರ್ಯನಾರಾಯಣ ರಾವ್, ಚಂಪಕನಾಥ್ ಜೊತೆಗೆ ಪ್ರಚಾರಕರಾದರು.

1947ರಲ್ಲಿ ಕೋಲಾರ ಜಿಲ್ಲಾ ಪ್ರಚಾರಕ್, 1948ರಲ್ಲಿ ಸಂಘದ ಮೇಲಿನ ನಿಷೇಧದ ವೇಳೆ ಬಂಧನ, 1953ರಲ್ಲಿ ಪ್ರಾಂತಕಾರ್ಯವಾಹ, 1953–1956 ಮಂಗಳೂರು ವಿಭಾಗ ಪ್ರಚಾರಕ್ ಆಗಿ ಹೆಚ್ಚುವರಿ ಹೊಣೆಗಾರಿಕೆ, 1960ರಲ್ಲಿ ಕರ್ನಾಟಕ ಪ್ರಾಂತ ಪ್ರಚಾರಕ್, 1980ರಲ್ಲಿ ಸಹಕ್ಷೇತ್ರ ಪ್ರಚಾರಕ್, 1981ರಲ್ಲಿ ದಕ್ಷಿಣ ಕ್ಷೇತ್ರ ಪ್ರಚಾರಕ್, 1983ರಲ್ಲಿ ಅಖಿಲ ಭಾರತೀಯ ಪ್ರಚಾರಕ ಪ್ರಮುಖ್, 1984ರಲ್ಲಿ ಸಹಸರಕಾರ್ಯವಾಹ, 1987–2000ರವರೆಗೆ ಸರಕಾರ್ಯವಾಹ, 2000ರಲ್ಲಿ ಸಹಸರಕಾರ್ಯವಾಹ, 2003ರಲ್ಲಿ ಅಖಿಲ ಭಾರತೀಯ ಪ್ರಚಾರಕ ಪ್ರಮುಖ್ ಜವಾಬ್ದಾರಿ ನಿರ್ವಹಿಸಿದರು.

2005ರ ಆಗಸ್ಟ್ 14 ರಂದು ಸಂಜೆ 6.57 ಕ್ಕೆ ಇಹಲೋಕದ ಯಾತ್ರೆ ಮುಗಿಸಿದರು. ''ಶೇಷಾದ್ರಿ ಅವರದು ಸೃಜನಶೀಲ, ಸಂವೇದನಾಶೀಲ, ಸ್ಥಿತಪ್ರಜ್ಞ ವ್ಯಕ್ತಿತ್ವ, ಅವರು ವೈಶ್ವಿಕ ವಿಚಾರಗಳ ಪ್ರತಿಪಾದಕ'' ಎಂದಿದ್ದರು ಐದನೇ ಸರಸಂಘಚಾಲಕರಾಗಿದ್ದ ಕು.ಸೀ. ಸುದರ್ಶನ್ ಜೀ. ಕನ್ನಡದಲ್ಲಿ 30, ಇಂಗ್ಲಿಷ್‌ನಲ್ಲಿ 11 ಸೇರಿ ಒಟ್ಟು 41 ಪುಸ್ತಕಗಳ ಕರ್ತೃ. ಉತ್ಥಾನ, ವಿಕ್ರಮ, ಆರ್ಗನೈಸರ್ ಸೇರಿದಂತೆ ವಿವಿಧ ಪತ್ರಿಕೆಗಳಲ್ಲಿ ನೂರಾರು ಲೇಖನಗಳು, ಅಂಕಣ ಬರಹಗಳು, ಪ್ರೇರಣಾದಾಯಿ ಪತ್ರಸಂದೇಶಗಳ ಮೂಲಕ ನಿರಂತರ ಬರವಣಿಗೆಯ ಕಾರ್ಯ ಹೊ.ವೆ. ಶೇಷಾದ್ರಿ ಅವರದು.

1982ರಲ್ಲಿ ಹೊ.ವೆ. ಶೇಷಾದ್ರಿ ಅವರ ತೋರ್ ಬೆರಳ್ ಕೃತಿಗೆ ಕರ್ನಾಟಕ ಸರ್ಕಾರದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಲಭಿಸಿತು. ವೈಚಾರಿಕ ವಲಯದಲ್ಲಿ ಬಹುಪ್ರಶಂಸೆಗೊಳಗಾದ ಪುಸ್ತಕಗಳ ಪೈಕಿ ಒಂದು. ತಮ್ಮ ಬಿಡುವಿಲ್ಲದ ಪ್ರವಾಸದ ಮಧ್ಯೆಯೂ ಅವಿರತ ಬರವಣಿಗೆಯ ಮೂಲಕ ಸ್ವಯಂಸೇವಕರ ವೈಚಾರಿಕ ಹಂದರವನ್ನು ವಿಸ್ತರಿಸಿ, ಗಟ್ಟಿಗೊಳಿಸಿದವರು. ಸಮಾಜದೊಂದಿಗೆ ಸಂಘದ ಆಶಯಗಳನ್ನು ಹಂಚಿದವರು.





ಮೇಲ್ಮನೆಗೆ ಅವಕಾಶ ನೀಡಲು ಕಾಂಗ್ರೆಸ್ ಆಕಾಂಕ್ಷಿಗಳ ಮನವಿ



ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದಿಂದ ಮೇಲ್ಮನೆಗೆ ಪ್ರವೇಶ ಬಯಸಿರುವ ಆಕಾಂಕ್ಷಿಗಳು ಮಂಗಳವಾರ ದಿಲ್ಲಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಡಾ. ಸೈಯದ್ ನಾಸಿರ್ ಹುಸೇನ್ ಮತ್ತು ಕರ್ನಾಟಕದ ಉಸ್ತುವಾರಿ ಅಭಿಷೇಕ್ ದತ್ ಅವರನ್ನು ಭೇಟಿಯಾಗಿ ಮನವಿ ಮಾಡಿದರು.

ಜೂ. 30ರಂದು ವಿಧಾನಪರಿಷತ್‌ನ ಏಳು ಸ್ಥಾನಗಳು ಖಾಲಿಯಾಗಲಿವೆ. ಈ ಹಿನ್ನೆಲೆಯಲ್ಲಿ ಅವಕಾಶ ನೀಡಬೇಕೆಂದು ಆಕಾಂಕ್ಷಿಗಳು ಪಕ್ಷದ ಸಂಘಟನೆಗಾಗಿ ತಳಮಟ್ಟದಿಂದ ನಿರಂತರವಾಗಿ ಶ್ರಮಿಸುತ್ತಿರುವ ನಿಷ್ಠಾವಂತ ಕಾರ್ಯಕರ್ತರು ಮತ್ತು ಮುಖಂಡರ ಸೇವೆಯನ್ನು ಗುರುತಿಸಿ, ಮುಂಬರುವ ವಿಧಾನಪರಿಷತ್ ಸ್ಥಾನಗಳಲ್ಲಿ ಸೂಕ್ತ ಅವಕಾಶ ಕಲ್ಪಿಸಿಕೊಡುವಂತೆ ಈ ಸಂದರ್ಭದಲ್ಲಿ ನಾಯಕರ ಬಳಿ ಒಕ್ಕೊರಲಿನ ಮನವಿ ಸಲ್ಲಿಸಿದರು. ನಿಯೋಗದಲ್ಲಿ ಎ.ಎನ್. ನಟರಾಜ್ ಗೌಡ, ಬಿ.ಆರ್ ನಾಯ್ಡು, ಮೆಹರೋಜ್ ಖಾನ್, ಶಾಕಿರ್ ಸನದಿ, ಮಂಜುನಾಥ್ ಸುಣಗಾರ್, ಸುನೀಲ್ ಹನುಮಣ್ಣನವರ್, ಕಾಂತಾ ನಾಯಕ್ ಮತ್ತು ರಾಜೇಶ್ವರಿ ಪಾಟೀಲ್ ಇದ್ದರು.

ರಾಮ ಬಾಣ



ಉನ್ನತ ಅಧ್ಯಯನ ತಂಡ ರಚನೆ: ಶಾ ಘೋಷಣೆ

ಪುಟ 1ರಿಂದ ಅಕ್ರಮ ವಲಸೆ ಮತ್ತಿತರ ಅಸ್ವಾಭಾವಿಕ ಅಂಶಗಳಿಂದಾಗಿ ದೇಶದ ಜನಸಂಖ್ಯಾ ಗಾತ್ರದಲ್ಲಾಗಿರುವ ಸ್ಥಿತ್ಯಂತರ ಅಥವಾ ಬದಲಾವಣೆಗಳ ಅಧ್ಯಯನಕ್ಕಾಗಿ, ಸಮರ್ಪಿತ ನಿಯೋಗವೊಂದನ್ನು ರಚಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ 2025ರ ಸ್ವಾತಂತ್ರ್ಯ ದಿನದಂದು ಘೋಷಿಸಿದ್ದರು. ದೇಶಾದ್ಯಂತ ಅಕ್ರಮ ನುಸುಳುವಿಕೆ ಮತ್ತು ಅಸ್ವಾಭಾವಿಕವಾದ ಜನಸಂಖ್ಯಾ ಬದಲಾವಣೆಗಳ ಪರಿಣಾಮಗಳ ಅಧ್ಯಯನ ಮಾಡಲಿರುವ ಉನ್ನತ ಮಟ್ಟದ ಸಮಿತಿಗೆ, ಸರಕಾರವೀಗ ವಿಧ್ಯುಕ್ತ ಚಾಲನೆ ನೀಡಿದೆ ಎಂದು ಅಮಿತ್ ಶಾ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.



ತಂಡದ ಕಾರ್ಯವೈಖರಿ: ಉನ್ನತಾಧಿಕಾರ ತಂಡವು ಭಾರತಾದ್ಯಂತ ಜನಸಂಖ್ಯಾ ಸ್ವರೂಪದಲ್ಲಾಗಿರುವ ಬದಲಾವಣೆಗಳ ಕುರಿತು ಸಮಗ್ರ ಅಧ್ಯಯನ ನಡೆಸಲಿದೆ. ಅಕ್ರಮ ವಲಸೆ ಮತ್ತು ಇತರ ಅಸ್ವಾಭಾವಿಕ ಕಾರಣಗಳಿಂದ ಆಗಿರುವ ಸ್ಥಿತ್ಯಂತರಗಳನ್ನು ಪರಿಶೀಲಿಸುವುದು, ಮತ-ಧರ್ಮೀಯ ಮತ್ತು ಸಾಮಾಜಿಕ ಗುಂಪುಗಳ ಜನಸಂಖ್ಯಾ ಬೆಳವಣಿಗೆ ದರದಲ್ಲಿ ಆಗಿರುವ ಅಸ್ವಾಭಾವಿಕ ವ್ಯತ್ಯಾಸಗಳನ್ನು ವಿಶ್ಲೇಷಿಸಲಿದೆ ಮತ್ತು ವ್ಯವಸ್ಥಿತವಾದ , ಕಾಲಮಿತಿ ಆಧಾರಿತ ಪರಿಹಾರವನ್ನು ಶಿಫಾರಸು ಮಾಡಲಿದೆ. ಜನಸಂಖ್ಯಾ ಡೇಟಾವನ್ನು ಮೀರಿದ ಸಮಸ್ಯೆ ಇದಾಗಿದೆ. ಜನಸಂಖ್ಯಾ ಸ್ವರೂಪದಲ್ಲಿನ ಬದಲಾವಣೆ ಅಥವಾ ವ್ಯತ್ಯಯವು ದೇಶದ ಸಾರ್ವಭೌಮತೆ, ಕಾನೂನು ಸುವ್ಯವಸ್ಥೆ, ಸಾಮಾಜಿಕ ಚೌಕಟ್ಟು, ದೇಶದ ಬುಡಕಟ್ಟು ಸಮುದಾಯಗಳ ಸಂರಕ್ಷಣೆಯೇ ಇತ್ಯಾದಿಗಳಿಗೆ ನೇರ ತೊಂದರೆಯೊಡ್ಡಲಿವೆ ಎಂದು ಸಚಿವ ಶಾ ಹೇಳಿದ್ದಾರೆ.

ಉನ್ನತಾಧಿಕಾರ ತಂಡವು ಜನಸಂಖ್ಯಾ ಡೇಟಾದ ವಿಶ್ಲೇಷಣೆ ನಡೆಸಲಿದೆ ಮತ್ತು ಸ್ಥಳೀಯ ಮುಖಂಡರು ಅಥವಾ ಸಂಬಂಧಪಟ್ಟ ಸಂಸ್ಥೆಗಳನ್ನು ಸಂಪರ್ಕಿಸಿ, ಎದುರಾಗಲಿರುವ ಸಮಸ್ಯೆಗಳ ನಿವಾರಣೆಗೆ ನೀತಿ ನಿಯಮಗಳ ಪ್ರಸ್ತಾವ ಮುಂದಿಟ್ಟು ಸಮಾಲೋಚನೆ ನಡೆಸಲಿದೆ. ಕ್ರಿಯಾತ್ಮಕ ಪರಿಹಾರ ಸಹಿತ ತನ್ನ ಶಿಫಾರಸುಗಳನ್ನು ನಿಗದಿತ ಕಾಲಮಿತಿಯೊಳಗೆ ಸಲ್ಲಿಸುವ ನಿರೀಕ್ಷೆಯಿದೆ. ಸಮಗ್ರ, ಮಾಹಿತಿ- ನಿರ್ಧಾರಾತ್ಮಕ ಕ್ರಮಗಳ ಬಲದಿಂದ ದೇಶದ ಸಮಗ್ರತೆ ಮತ್ತು ಸಾಮಾಜಿಕ ವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ, ಕ್ರಿಯಾಪರ ಪ್ರಯತ್ನಗಳಿಗೆ ಸಾಕ್ಷಿಯಾಗಿದೆ ಪ್ರಸ್ತುತ ಉಪಕ್ರಮ ಎಂದು ಅಧಿಕಾರಿಗಳು ವಿಶ್ಲೇಷಿಸಿದ್ದಾರೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಮೊದಲು ಒಳ್ಳೆಯವನಾಗು , ಬಳಿಕ ಸಂಪಾದನೆ ಮಾಡು ಅಂತ ಹಿಂದಿನ ಕಾಲದಲ್ಲಿ ಹೇಳುತ್ತಿದ್ದರು. ಸಂಪಾದನೆಯ ಮೂಲಕ ಸಮಾಜದಲ್ಲಿ ಒಳ್ಳೆಯವನೆನಿಸಿಕೊ ಅಂತ ಇಂದಿನ ಕಾಲದಲ್ಲಿ ಹೇಳುತ್ತಾರೆ

- ಕೇಮಾರು ಶ್ರೀಗಳು

- ಆಗ ಒಳ್ಳೆಯವನಾಗು ಅಂತ ಹೇಳಿದರೆ ಗುಣದಲ್ಲಿ ಎನ್ನುವ ಅರ್ಥವಿತ್ತು, ಈಗ ಒಳ್ಳೆಯವನಾಗು ಅಂತ ಹೇಳಿದರೆ ಹಣದಲ್ಲಿ ಎನ್ನುವ ಅರ್ಥವಿದೆ!

ದಿನ ಭವಿಷ್ಯ

ಮೇಷ
ನೆಗೆಟಿವ್ ಚಿಂತನೆ ಜನರನ್ನು ದೂರವಿಡಿ. ಅವರ ಪ್ರಭಾವಕ್ಕೆ ಸಿಲುಕಬೇಡಿ. ನಿಜವಾಗಿ ಉತ್ತಮ ಫಲವನ್ನು ಗ್ರಹಗತಿ ಸೂಚಿಸುತ್ತಿದೆ.

ವೃಷಭ
ಎಲ್ಲವೂ ನಿಮಗೆ ಪೂರಕವಾಗಿಲ್ಲವೆ? ನಿಮ್ಮ ಕಾರ್ಯಶೈಲಿಯಲ್ಲಿ ಕೆಲ ಬದಲಾವಣೆ ಮಾಡಿಕೊಳ್ಳಿ. ಗಣೇಶನನ್ನು ಪ್ರಾರ್ಥಿಸಿ. ನಿಮಗೆ ಒಳಿತಾಗಲಿದೆ.

ಮಿಥುನ
ಸಂಬಂಧದಲ್ಲಿ ದೊಡ್ಡ ತಿರುವು ಉಂಟಾದೀತು. ವಿವಾಹ ಸಂಬಂಧ ಒದಗಬಹುದು. ವದಂತಿಗೆ ಕಿವಿಗೊಡಬೇಡಿ. ಆರ್ಥಿಕ ಪರಿಸ್ಥಿತಿ ಸುಧಾರಣೆ.

ಕಟಕ
ಇಂದು ಗಂಭೀರ ಮನಸ್ಥಿತಿ ತೋರುವಿರಿ. ಲಘು ಧೋರಣೆ ತೊರೆಯುವಿರಿ. ಇದು ನಿಮಗೆ ಒಳಿತನ್ನೇ ತರಲಿದೆ. ಆರ್ಥಿಕ ದೃಢತೆ.

ಸಿಂಹ
ಕೆಲಸದಲ್ಲಿ ಬದ್ಧತೆ ಇರಲಿ. ಕಾಟಾಚಾರದ ಕೆಲಸ ಮಾಡಬೇಡಿ. ಹಿರಿಯರ ಕಿವಿಮಾತು ಗಂಭೀರವಾಗಿ ಪರಿಗಣಿಸಿ. ಸಂಬಂಧದಲ್ಲಿ ಒಡಕು.

ಕನ್ಯಾ
ಎಲ್ಲರಿಂದ ಮೆಚ್ಚುಗೆ ಪಡೆಯುವ ದಿನ. ನಿಮ್ಮ ಕ್ಷೇತ್ರದಲ್ಲಿ ಸಾಧನೆಯ ಗರಿ. ಹಣದ ವಿಚಾರದಲ್ಲಿ ರಿಸ್ಕ್ ಬೇಡ. ಎಚ್ಚರಿಕೆಯ ಹೆಜ್ಜೆ ಇಡುವುದೊಳಿತು.

ತುಲಾ
ಆತ್ಮೀಯರ ಬೆಂಬಲದಿಂದ ನಿಮ್ಮ ಕಾರ್ಯ ಸುಗಮ. ಕಾಡುವ ಒತ್ತಡಕ್ಕೆ ಶೀಘ್ರ ಪರಿಹಾರ ಸಿಗಲಿದೆ. ಆರ್ಥಿಕ ಹಿನ್ನಡೆ ಸಂಭವ.

ವೃಶ್ಚಿಕ
ಇಂದು ಆರಂಭಿಸುವ ಕೆಲಸದಲ್ಲಿ ಸಫಲತೆ ಖಚಿತ. ಎಲ್ಲರ ಜತೆ ಸೌಹಾರ್ದ ಸಂಬಂಧ ಕಾಯ್ದುಕೊಳ್ಳಿ. ಕ್ಷುಲ್ಲಕ ವಿಷಯ ಬಂಧುತ್ವ ಕೆಡಿಸದಿರಲಿ.

ಧನು
ಪ್ರೀತಿಯಲ್ಲಿ ಅಪಯಶಸ್ಸು. ಹಳೆಯ ಅನುಭವ ಕಹಿಯಾಗಿ ಕಾಡಲಿದೆ. ಮಾನಸಿಕ ಉದ್ವಿಗ್ನತೆ. ಬಂಧುಗಳ ಅಸಹಕಾರ.

ಮಕರ
ವೈರುಧ್ಯಮಯ ಭಾವನೆಗಳ ತಾಕಲಾಟ. ಹೊಣೆಗಾರಿಕೆ ಹೆಚ್ಚಳ. ಸಹಕಾರ ಕಡಿಮೆ. ತಾಳ್ಮೆಯಿಂದ ಕಾಯಿರಿ. ಒಳ್ಳೆದಿನ ಬರಲಿದೆ.

ಕುಂಭ
ಕಳೆದ ಕೆಲದಿನಗಳ ಗೊಂದಲ ಇಂದು ಇತ್ಯರ್ಥ. ನಿಶ್ಚಿತ ನಿರ್ಧಾರಕ್ಕೆ ಬರುವಿರಿ. ಸಂಕಷ್ಟಗಳು ಪರಿಹಾರ. ಸಂಬಂಧ ಸುಧಾರಣೆ.

ಮೀನ
ಅನಿರೀಕ್ಷಿತ ಕಾರ್ಯದೊತ್ತಡ. ಆದರೂ ಸರಿಯಾಗಿ ನಿಭಾಯಿಸುವಿರಿ. ಆರ್ಥಿಕ ಲಾಭ. ಚರ್ಮದ ಅಲರ್ಜಿ ಕಾಡಬಹುದು.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 4,9,6,3

ವೀರಸಾವರ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಬಿ.ಎಲ್.ಸಂತೋಷ್ ಹೇಳಿಕೆ

ಗಾಂಧಿಯಿಂದ ನೆಹರು ಪ್ರಧಾನಿ

ಜಮಖಂಡಿ: ಸ್ವಾತಂತ್ರ್ಯ ನಂತರದ ದೇಶದಲ್ಲಿ ಗಾಂಧೀಜಿಯವರ ಬೆಂಬಲದಿಂದ ನೆಹರು ಪ್ರಧಾನಿಯಾದರೆ ಹೊರತು ಕಾಂಗ್ರೆಸ್ಸಿನ ಒಳಗಿನಿಂದ ಮತ್ತು ಹೊರಗಿನಿಂದಲ್ಲ, ಗಾಂಧಿಯ ಬೆಂಬಲವಿಲ್ಲದಿರದಿದ್ದರೆ ಅಂದು ಸರ್ದಾರ ಪಟೇಲರು ಪ್ರಧಾನಿಯಾಗಿರುತ್ತಿದ್ದರು ಎಂದು ಭಾರತೀಯ ಜನತಾ ಪಾರ್ಟಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹೇಳಿದರು.

ನಗರದ ಬಸವ ಭವನ ಆವರಣದಲ್ಲಿ ಸ್ವಾತಂತ್ರ್ಯ ವೀರ ಸಾವರ್ಕರ್ ಪ್ರತಿಷ್ಠಾನದ ಅಡಿಯಲ್ಲಿ ಏರ್ಪಡಿಸಿದ್ದ ವೀರಸಾವರ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ವಕ್ತಾರರಾಗಿ ಮಾತನಾಡಿದರು.

ಸಾವರ್ಕರ್ ಅವರೊಬ್ಬ ಶ್ರೇಷ್ಠ ಸಾಹಿತಿ, ಕ್ರಾಂತಿಕಾರಿ, ಸೃಜನಶೀಲ ಸಮಾಜೋದ್ಧಾರಕ, ಸಮಾನತಾವಾದಿಯಾಗಿದ್ದರು. ಅವರಿಂದಲೇ ರತ್ನಗಿರಿಯಲ್ಲಿ ಪತಿತ ಪಾವನ ಮಂದಿರ ಸ್ಥಾಪಿಸಿ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಪ್ರಯತ್ನಿಸಿದ ವ್ಯಕ್ತಿಯಾಗಿದ್ದರು. ನಾವೆಲ್ಲ ಓದಿದ ಸಿಪಾಯಿ ದಂಗೆಯನ್ನು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಘಂಟಾಘೋಷವಾಗಿ ಹೇಳಿ ಪುಸ್ತಕ ಬರೆದರು.

ಅದು ಬಿಡುಗಡೆಗೂ ಮುನ್ನವೇ ಬ್ಯಾನ್ ಆಗಿತ್ತು. ಆದರೂ ಸಹ 18 ಭಾಷೆಯಲ್ಲಿ ತರ್ಜುಮೆಯಾಗಿ ಹೊರ ಬಂದಿತ್ತು. ಅಂತಹ ಧೀರ ವ್ಯಕ್ತಿಗೆ ಪದೆ ಪದೇ ಕಾಂಗ್ರೆಸ್ ಮೋಸ ಮಾಡುತ್ತಲೇ ಬಂದಿದೆ ಎಂದರು. ದೇಶದಲ್ಲಿ ಎರಡು ಬಾರಿ ಕರಿ ನೀರಿನ ಶಿಕ್ಷೆ ಅನುಭವಿಸಿದ ವ್ಯಕ್ತಿಯೆಂದರೆ ಇವರೊಬ್ಬರೇ. 13 ವರ್ಷ ಅಂಡಮಾನ ಜೈಲು ನಂತರ ರತ್ನಾಗಿರಿಯಲ್ಲಿ 11 ವರ್ಷದ ಕಠಿಣ ಕಾರಾಗೃಹವಾಸ ಮಾಡಿದ್ದರು. ಕೆಲವೊಬ್ಬರು ದಾಖಲೆಗೆ ಜೈಲು ಸೇರಿದ್ದು ಆದರೆ ಇವರು ಜೈಲು ಸೇರಿದ್ದೇ ಒಂದು ದಾಖಲೆಯಾಗಿತ್ತು.



'ಕರ್ಮಯೋಗಿ ಪ್ರಶಸ್ತಿ' ಪ್ರದಾನ

ಚಿಕ್ಕೋಡಿ ತಾಲೂಕಿನ ಶಮನವೇವಾಡಿ ಗ್ರಾಮದಲ್ಲಿ ಮಂಗಳವಾರ ಎಜಿಎಂ ಇಂಜಿನಿಯರಿಂಗ್ ಕಾಲೇಜ್ ಉದ್ಘಾಟನೆ, 151 ಅಡಿ ಎತ್ತರದ ಭಗವಾನ ಪಾರ್ಶ್ವನಾಥರ ಮೂರ್ತಿ ಶಂಕುಸ್ಥಾಪನೆ ಹಾಗೂ ಸರಸ್ವತಿ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಸಮ್ಮುಖದಲ್ಲಿ ರಾಷ್ಟ್ರಸಂತ ಆಚಾರ್ಯ ಗುಣಧರನಂದಿ ಮಹಾರಾಜರು ಅವರು ಬಿಜೆಪಿ ರಾಷ್ಟ್ರೀಯ ಪ್ರದಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರಿಗೆ 'ಕರ್ಮಯೋಗಿ ಪ್ರಶಸ್ತಿ' ಪ್ರದಾನ ಮಾಡಿದರು. ಈ ವೇಳೆ ಧರ್ಮಸೇನ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ ಇದ್ದರು.

> **ಸ್ವಾತಂತ್ರ್ಯ ದೀವಿಗೆಯನ್ನು ಹಚ್ಚಿದ ಸಾವರ್ಕರ್ ಹೆಸರು ಇತಿಹಾಸದ ಪುಟದಲ್ಲಿಯೇ ಸೇರಿಸಲಿಲ್ಲ, ಅಂದು ಶಿಕ್ಷಣ ಮಂತ್ರಿಯಾಗಿದ್ದ ಮೌಲಾನಾ ಅಬ್ದುಲ್ ಕಲಾಂ ಆಜಾದ್‌ರ ಕೃಪೆಯಿಂದ ಅನೇಕ ಹೋರಾಟಗಾರರು ಇತಿಹಾಸದ ಪಠ್ಯಕ್ರಮದಿಂದ ಮರೆಮಾಚಿ ಹೋಗಿದ್ದಾರೆ. ಈಗ ಮತ್ತೆ ನಾವು ಮುನ್ನೆಲೆಗೆ ತರುವ ಪ್ರಯತ್ನ ಮಾಡುತ್ತಿದ್ದೇವೆ.**
> ■ **ಬಿ.ಎಲ್.ಸಂತೋಷ್, ಬಿಜೆಪಿ ಪ್ರಧಾನ ಕಾರ್ಯದರ್ಶಿ**

ಅಂತಹ ಅಂಡಮಾನ ಜೈಲನ್ನು ಕಾಂಗ್ರೆಸ್ಸಿಗರು ಆಸ್ಪತ್ರೆಯನ್ನಾಗಿ ಮಾಡಲು ಹೊರಟಿದ್ದು ಅಸಹ್ಯಕರವಾಗಿತ್ತು. ಏಕೆಂದರೆ ಅಲ್ಲಿ ಸುಮಾರು 860ಕ್ಕೂ ಅಧಿಕ ಕೈದಿಗಳು ತಮ್ಮ ಹೆಸರು ಬರೆದು ಆತ್ಮಾರ್ಪಣೆ ಮಾಡಿಕೊಂಡಿದ್ದರು. ಆದರೆ, ಆ ಹೆಸರಿನಲ್ಲಿ ಯಾವುದೇ ಓರ್ವ ಕಾಂಗ್ರೆಸ್ಸಿಗರ ಹೆಸರಿಲ್ಲ ಎಂದರು. ಸ್ವಾತಂತ್ರ್ಯ ಅನೇಕ ಕಾರಣದಿಂದ ಸಿಕ್ಕದೆ. ಸ್ವಾತಂತ್ರ್ಯಾ ನಂತರ ಕೆಲವೊಂದು ಸಂಗತಿಯನ್ನು ತೆಗೆದು ಹಾಕಿದ್ದಾರೆ. ನಮ್ಮೆಲ್ಲರ ಮತದ ಪ್ರಭಾವದಿಂದ ಮತ್ತೆ ಪಠ್ಯದಲ್ಲಿ ಸೇರ್ಪಡೆಯಾಗಿದೆ ಎಂದರು. ರುದ್ರಾವಧೂತ ಮಠದ ಕೃಷ್ಣಾನಂದ ಅವಧೂತರು ಸಾನ್ನಿಧ್ಯ ವಹಿಸಿದ್ದರು. ಡಾ. ತಾತಾಸಾಹೇಬ ಬಾಂಗಿ ಅಧ್ಯಕ್ಷತೆ ವಹಿಸಿದ್ದರು.

ಎಐ ಸಕ್ರಿಯ ಆಡಳಿತ ರಾಜ್ಯವಾಗಲಿದೆ: ಶಾಲಿನಿ

ಬೆಂಗಳೂರು: ಸಾರ್ವಜನಿಕ ಸೇವೆ ವಿತರಣೆ, ಆಡಳಿತಾತ್ಮಕ ಪ್ರತಿಕ್ರಿಯೆ ಮತ್ತು ಒಳಗೊಳ್ಳುವಿಕೆಯನ್ನು ಸುಧಾರಿಸುವ ಮೂಲಕ ಕರ್ನಾಟಕವನ್ನು ಎಐ ತಂತ್ರಜ್ಞಾನದ ಹಬ್ ಮಾತ್ರವಲ್ಲದೆ, ಎಐ-ಸಕ್ರಿಯ ಆಡಳಿತ ರಾಜ್ಯವನ್ನಾಗಿ ಮಾಡುವುದು ಸರ್ಕಾರದ ದೂರದೃಷ್ಟಿಯಾಗಿದೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ತಿಳಿಸಿದರು.



ಕರ್ನಾಟಕ ಸರ್ಕಾರದ ಇ-ಆಡಳಿತ ಕೇಂದ್ರದ ವತಿಯಿಂದ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಳ್ಳಲಾದ ಎಐ-ಸಿಒಇ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಸೆಂಟರ್ ಆಫ್ ಎಕ್ಸಲೆನ್ಸ್) ಅನುಷ್ಠಾನ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಎಐ ಎನ್ನುವುದು ಕೇವಲ ತಂತ್ರಜ್ಞಾನದ ಚರ್ಚೆಯಲ್ಲ, ಇದು ಮೂಲಭೂತವಾಗಿ ನಂಬಿಕೆ, ಜವಾಬ್ದಾರಿ, ಪಾರದರ್ಶಕತೆ ಮತ್ತು ನಾಗರಿಕರ ಮೇಲಿನ ಪ್ರಭಾವದ ಕುರಿತಾಗಿದೆ ಎಂದರು.

ಆಡಳಿತದಲ್ಲಿ ಸುರಕ್ಷಿತ ಮತ್ತು ನಾಗರಿಕ ಕೇಂದ್ರಿತ ಎಐ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ಕುರಿತು ಚರ್ಚಿಸಲು ವಿವಿಧ ರಾಜ್ಯಗಳ ಹಿರಿಯ ಸರ್ಕಾರಿ ಅಧಿಕಾರಿಗಳು, ನೀತಿ ನಿರೂಪಕರು, ಉದ್ಯಮದ ಮುಖಂಡರು, ಶಿಕ್ಷಣ ತಜ್ಞರು, ನವೋದ್ಯಮಗಳು ಮತ್ತು ಪರಿಸರ ವ್ಯವಸ್ಥೆಯ ಪಾಲುದಾರರು ಈ ಕಾರ್ಯಾಗಾರದಲ್ಲಿ ಒಟ್ಟಾಗಿ ಭಾಗವಹಿಸಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ತಿಳಿಸಿದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ ಮಾತನಾಡಿ, ಮರುಬಳಕೆ ಮಾಡಬಹುದಾದ ಎಐ ಸೇವೆಗಳು, ಬಹುಭಾಷಾ ಇಂಟರ್ಫೇಸ್‌ಗಳನ್ನು ಬೆಂಬಲಿಸಲು ಕರ್ನಾಟಕ ಎಐ ಸ್ಟಾಕ್ ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದ ಅವರು, ಕರ್ನಾಟಕದ ಶಕ್ತಿಯು ಕೇವಲ ತಂತ್ರಜ್ಞಾನ ಸೃಷ್ಟಿಯಲ್ಲಷ್ಟೇ ಅಲ್ಲ, ಅದನ್ನು ಜನಸಾಮಾನ್ಯರ ಒಳಿತಿಗಾಗಿ ಬಳಸುವುದಾಗಿದೆ ಎಂದರು.

ಎಲೆಕ್ಟ್ರಾನಿಕ್ಸ್, ಐಟಿ, ಬಿಟಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಡಾ. ಎನ್. ಮಂಜುಳಾ ಅವರು, ಕರ್ನಾಟಕದಲ್ಲಿ ವಿವಿಧ ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ 20 ಕ್ಕೂ ಹೆಚ್ಚು ಸೆಂಟರ್ ಆಫ್ ಎಕ್ಸಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ ಮೂರು ಎಐಗೆ ಮೀಸಲಾಗಿವೆ ಎಂದರು.

ಕಾರ್ಯಾಗಾರದಲ್ಲಿ ಆಂಧ್ರಪ್ರದೇಶ, ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳ ಪ್ರತಿನಿಧಿಗಳು ಹಾಗೂ ಇಂಡಿಯಾ ಎಐ ಮಿಷನ್‌ನ ಅಧಿಕಾರಿಗಳು ಭಾಗವಹಿಸಿದ್ದರು.

ಹೈಕಮಾಂಡ್‌ನ ಪರಿಹಾರ ಸೂತ್ರ

ಪುಟ 1ರಿಂದ ಮೊದಲಿಗೆ ಸಿದ್ದರಾಮಯ್ಯ ಅವರೊಂದಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸಭೆ ನಡೆಸಿದ್ದಾರೆ. ಬಳಿಕ ಡಿ.ಕೆ. ಶಿವಕುಮಾರ್ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ತರುವಾಯ ಉಭಯ ನಾಯಕರೊಂದಿಗೆ ಆಗಮಿಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮಾಧ್ಯಮಗಳೊಂದಿಗೆ ಮಾತನಾಡಿದ್ದಾರೆ. ಸಭೆಯಲ್ಲಿ ಮುಂಬರುವ ಚುನಾವಣೆಗಳ ಕುರಿತಾಗಿ ಚರ್ಚಿಸಿದ್ದಾಗಿ ತಿಳಿಸಿದ್ದಾರೆ. ಆದರೆ, ರಾಜ್ಯ ರಾಜಕಾರಣದಲ್ಲಿ ಮಹತ್ವದ ಬದಲಾವಣೆಗಳಾಗುವ ಮುನ್ಸೂಚನೆ ಲಭಿಸಿದೆ. ಸಚಿವರಾದ ಪರಮೇಶ್ವರ, ಸತೀಶ್ ಜಾರಕಿಹೊಳಿ, ಎಚ್.ಸಿ ಮಹದೇವಪ್ಪ, ಬೈರತಿ ಸುರೇಶ್, ಕೆ.ಜೆ ಜಾರ್ಜ್, ಎಂ.ಬಿ.ಪಾಟೀಲ ಅವರೂ ದಿಲ್ಲಿಗೆ ತೆರಳಿದ್ದರು. ಬೆಳಗ್ಗೆ ವರಿಷ್ಠರ ಸಭೆಯ ಮುಂಚೆ ಸಚಿವರೊಂದಿಗೆ ಸಿಎಂ ಸಿದ್ದರಾಮಯ್ಯ ಮಾತುಕತೆ ನಡೆಸಿದ್ದರು.

ಸಭೆಯ ನಂತರ ಸಚಿವ ಕೆ.ಜೆ ಜಾರ್ಜ್ ಅವರ ದಿಲ್ಲಿಯಲ್ಲಿರುವ ನಿವಾಸಕ್ಕೆ ತೆರಳಿದರು. ಹೈಕಮಾಂಡ್ ನಾಯಕರ ಕರೆಯ ಮೇಲೆ ಸೋಮವಾರವೇ ದಿಲ್ಲಿಗೆ ತೆರಳಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರಿಷ್ಠರ ಜೊತೆಗೆ ಮಾತುಕತೆ ನಡೆಸಿ ಮಂಗಳವಾರ ರಾತ್ರಿಯೇ ಆಪ್ತರೊಂದಿಗೆ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ವಾಪಸ್ಸಾಗಿದ್ದಾರೆ. ಆದರೆ, ರಾಜ್ಯದ ಜನ ಕುತೂಹಲಭರಿತಾಗಿ ರಾಜ್ಯ ರಾಜಕಾರಣದತ್ತ ದೃಷ್ಟಿ ನೆಟ್ಟಿದ್ದು, ಕಾಂಗ್ರೆಸ್ ಹೈಕಮಾಂಡ್ ಕಂಡುಕೊಂಡಿರುವ ಪರಿಹಾರ ಸೂತ್ರದ ಕುರಿತಾಗಿ ವ್ಯಾಪಕ ಚರ್ಚೆಯಲ್ಲಿ ತೊಡಗಿಕೊಂಡಿದ್ದಾರೆ.

ಮುಂಬರುವ ಚುನಾವಣೆ ಕುರಿತು ಚರ್ಚೆ

ಮುಂಬರುವ ವಿಧಾನ ಪರಿಷತ್ ಚುನಾವಣೆ ಮತ್ತು ರಾಜ್ಯಸಭಾ ಚುನಾವಣೆಗೆ ಸಂಬಂಧಿಸಿದಂತೆಯೂ ದಿಲ್ಲಿಯಲ್ಲಿ ಸುದೀರ್ಘವಾಗಿ ಚರ್ಚೆ ನಡೆಸಲಾಗಿದೆ. ಅಭ್ಯರ್ಥಿಗಳ ಆಯ್ಕೆ ಮತ್ತು ಚುನಾವಣಾ ಕಾರ್ಯತಂತ್ರಗಳ ಬಗ್ಗೆ ಮಾತುಕತೆಯಾಗಿದೆ. ಜೂನ್‌ನಲ್ಲಿ ರಾಜ್ಯಸಭೆಯ ನಾಲ್ಕು ಸ್ಥಾನಗಳು ಮತ್ತು ಕರ್ನಾಟಕ ವಿಧಾನ ಪರಿಷತ್‌ನ ಏಳು ಸ್ಥಾನಗಳು ತೆರವಾಗಲಿದ್ದು, ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಚರ್ಚೆ ನಡೆದಿದೆ.

ದ್ವೇಷದ ಭಾಷಣ ತಡೆ ಕಾನೂನು ಅಗತ್ಯವಿಲ್ಲ

ಪುಟ 1ರಿಂದ ಮಸೂದೆಗೆ ಮಂಜೂರಾತಿ ನೀಡಲು ಕರ್ನಾಟಕ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ನಿರಾಕರಿಸಿದ್ದ ಹಿನ್ನೆಲೆಯಲ್ಲಿ, ಕರ್ನಾಟಕ ದ್ವೇಷಭಾಷಣ, ದ್ವೇಷ ಅಪರಾಧಗಳ (ನಿಯಂತ್ರಣ) ಮಸೂದೆಗೆ ಸಂಬಂಧಿತ ಮಾಹಿತಿಯನ್ನು, ಗೃಹ ವ್ಯವಹಾರಗಳ ಖಾತೆಯ ಕೇಂದ್ರ-ರಾಜ್ಯ ವಿಭಾಗವು ಈ ವರ್ಷದ ಆರಂಭ ದಲ್ಲಿ ರಾಷ್ಟ್ರಪತಿಗಳ ಅಂಕಿತಕ್ಕೆ ರವಾನಿಸಿತ್ತು. ಪ್ರತಿಯಾಗಿ, ಯಾವ ಸಮಸ್ಯೆಗಳ ನಿವಾರಣೆ ಅಥವಾ ನಿಯಂತ್ರಣ ಪ್ರಸ್ತಾವಿತ ಮಸೂದೆಯ ಆಶಯವೋ, ಅವೆಲ್ಲವೂ ಈಗಾಗಲೆ ಅಸ್ತಿತ್ವದಲ್ಲಿರುವ ಕಾನೂನುಗಳ ಸಹಿತ 2023ರ ಭಾರತೀಯ ನ್ಯಾಯಸಂಹಿತೆಯ ವಿವಿಧ ನಿಯಮಾವಳಿಗಳಲ್ಲಿ ಬಹುತೇಕ ಅಡಕವಾಗಿವೆ ಎಂದು ಗೃಹ ವ್ಯವಹಾರಗಳ ಖಾತೆ ಮೇ 12ರಂದು ಪ್ರತ್ಯುತ್ತರಿಸಿತ್ತು.

ಚರ್ಚೆಗೆ ಸ್ಪೀಕರ್ ನಕಾರ: ವಿವಾದಾಸ್ಪದ ಮಸೂದೆಯನ್ನು ಕರ್ನಾಟಕ ಸರಕಾರ ಕಳೆದ ವರ್ಷ ಡಿಸೆಂಬರ್‌ನಲ್ಲಿ ವಿಪಕ್ಷಗಳ ವಿರೋಧದ ಮಧ್ಯೆ ಅಂಗೀಕರಿಸಿತ್ತು. ಮಸೂದೆ ಮೇಲೆ ಚರ್ಚೆ ಪೂರ್ತಿಯಾಗೋ ಮುನ್ನವೇ ಮಸೂದೆಯನ್ನು ಮಂಜೂರು ಮಾಡಲಾಗಿತ್ತು. ಮಸೂದೆ ಬಗ್ಗೆ ವಿಸ್ತೃತ ಚರ್ಚೆಯಾಗಬೇಕು ಮತ್ತು ಸದನ ಸಮಿತಿ ಮಸೂದೆಯನ್ನು ಪರಾಮರ್ಶಿಸಬೇಕೆಂಬ ವಿಪಕ್ಷೀಯರ ಬೇಡಿಕೆಯನ್ನು ಸಭಾಪತಿ ಯು.ಟಿ.ಖಾದರ್ ತಿರಸ್ಕರಿಸಿದ್ದು, ಸಭಾಪತಿ ನಡೆಯನ್ನು ವಿರೋಧಿಸಿ ವಿಪಕ್ಷ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದ್ದರು.

ಕರ್ನಾಟಕದ ಪ್ರಸ್ತಾವಿತ ಶಾಸನದಲ್ಲಿ ದ್ವೇಷಪೂರಿತ ಅಪರಾಧಗಳಿಗೆ ಕಠಿಣ ಸಜೆ ನಿಗದಿಪಡಿಸಲಾಗಿದೆ. ಮಸೂದೆಯಡಿ, ಮೊದಲ ಬಾರಿ ಅಪರಾಧವೆಸಗಿದರೆ 1ರಿಂದ 7ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 50ಸಾವಿರ ರೂ.ದಂಡ ವಿಧಿಸಲಾಗುವುದು. ಅಪರಾಧ ಪುನರಾವರ್ತನೆಯಾದಲ್ಲಿ ಗರಿಷ್ಠ 7ವರ್ಷ ಸಜೆ ಮತ್ತು 1ಲಕ್ಷ ರೂವರೆಗೆ ದಂಡ ವಿಧಿಸಲಾಗುವುದು. ಆದರೆ ಮಸೂದೆಯಲ್ಲಿನ ಹಲವು ನಿಯಮಗಳು ಸಾಂವಿಧಾನಿಕವಾಗಿ ಸಂರಕ್ಷಿತ ಪ್ರಜಾತಾಂತ್ರಿಕ ಅಭಿವ್ಯಕ್ತಿ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂಬ ಪ್ರತ್ಯುತ್ತರದೊಂದಿಗೆ, ಮಸೂದೆಗೆ ಮಂಜೂರಾತಿ ನೀಡಲು ರಾಜ್ಯಪಾಲ ಗೆಹ್ಲೋತ್ ನಿರಾಕರಿಸಿದ್ದರು ಮತ್ತು ಮಸೂದೆಯನ್ನು ರಾಜ್ಯ ಸರಕಾರಕ್ಕೆ ವಾಪಸ್ ಕಳುಹಿಸಿಕೊಟ್ಟಿದ್ದರು.

ರಾಜಧಾನಿಯಲ್ಲಿ ಇಬೋಲಾ ವೈರಸ್ ರೋಗದ ಶಂಕಿತ ಪ್ರಕರಣ ಪತ್ತೆ

ಬೆಂಗಳೂರು: ನಗರದಲ್ಲಿ ಇಬೋಲಾ ವೈರಸ್ ರೋಗದ ಶಂಕಿತ ಪ್ರಕರಣವೊಂದು ಪತ್ತೆಯಾಗಿದೆ ಎನ್ನಲಾಗುತ್ತಿದ್ದು, ರಾಜಧಾನಿ ಜನತೆಯಲ್ಲಿ ತೀವ್ರ ಆತಂಕ ಮೂಡಿಸಿದೆ. ಉಗಾಂಡಾ ದೇಶದ ಕ್ಯಾಂಪಲಾ ಮೂಲದ ನಾಗಿರೆ ಲತಿಫಾ (28) ಮಹಿಳೆಯಲ್ಲಿ ಜ್ವರದ ರೋಗ ಲಕ್ಷಣಗಳು ಕಾಣಿಸಿಕೊಂಡಿದ್ದು, ಸದ್ಯ ಅವರನ್ನು ತೀವ್ರ ನಿಗಾದಲ್ಲಿ ಇರಿಸಲಾಗಿದೆ. ಈಕೆ ಕಳೆದ ಮೇ 23ರಂದು ಬೆಂಗಳೂರಿಗೆ ಆಗಮಿಸಿದ್ದರು.



ರಾಯಲ್ ಎಸ್ ಬೂಟಿಕ್ ಹೋಟೆಲ್‌ನ ರೂಮ್ ನಂಬರ್ 303ರಲ್ಲಿ ತಂಗಿದ್ದರು ಎಂದು ತಿಳಿದುಬಂದಿದೆ.

ಮಹಿಳೆಯಲ್ಲಿ ಇಬೋಲಾ ಮಾದರಿಯ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಂಡ ಹಿನ್ನೆಲೆ ಆರೋಗ್ಯ ಇಲಾಖೆ ಎಚ್ಚೆತ್ತುಕೊಂಡಿದ್ದು, ಆ್ಯಂಬುಲೆನ್ಸ್ ಮೂಲಕ ಅವರನ್ನು ಆಸ್ಪತ್ರೆಗೆ ದಾಖಲಿಸಿ ಐಸೋಲೇಷನ್‌ನಲ್ಲಿ ಇರಿಸಲಾಗಿದೆ. ಮಹಿಳೆಯಿಂದ ಮೇ 25ರಂದು ರಕ್ತ ಹಾಗೂ ಇತರ ಅಗತ್ಯ ಮಾದರಿಗಳನ್ನು ಸಂಗ್ರಹಿಸಿ, ಹೆಚ್ಚಿನ ಪರೀಕ್ಷೆಗಾಗಿ ಪುಣೆಯ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ಬಳಿಕವಷ್ಟೇ ಸೋಂಕು ದೃಢವಾಗಲಿದೆ ಎಂದು ಆರೋಗ್ಯ ಇಲಾಖೆ ಮೂಲಗಳಿಂದ ತಿಳಿದುಬಂದಿದೆ. ಬುಧವಾರದೊಳಗೆ ಪರೀಕ್ಷಾ ವರದಿ ಲಭ್ಯವಾಗುವ ನಿರೀಕ್ಷೆಯಿದ್ದು, ವರದಿ ಆಧರಿಸಿ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು. ಸಾರ್ವಜನಿಕರು ಅನಗತ್ಯ ಆತಂಕಕ್ಕೆ ಒಳಗಾಗಬಾರದು, ಮುನ್ನೆಚ್ಚರಿಕಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ಸ್ಪಷ್ಟಪಡಿಸಿದೆ.

ವಿಧಾನ ಪರಿಷತ್‌ಗೆ ಜೂ.18ರಂದು ಮತದಾನ

ಬೆಂಗಳೂರು: ಭಾರತ ಚುನಾವಣಾ ಆಯೋಗವು ಕರ್ನಾಟಕ ವಿಧಾನ ಪರಿಷತ್‌ನಲ್ಲಿ ಖಾಲಿಯಾಗಲಿರುವ 7 ಸ್ಥಾನಗಳಿಗೆ ವೇಳಾಪಟ್ಟಿ ಪ್ರಕಟಿಸಿದೆ. ಜೂನ್ 18ರಂದು ಮತದಾನ ನಡೆಯಲಿದ್ದು, ಅದೇ ದಿನ ಫಲಿತಾಂಶ ಹೊರಬೀಳಲಿದೆ. ವಿಧಾನ ಪರಿಷತ್ ಸದಸ್ಯರಾದ ಗೋವಿಂದ ರಾಜು, ನಸೀರ್ ಅಹಮ್ಮದ್, ಎನ್.ನಾಗರಾಜು (ಎಂಟಿಬಿ), ಪ್ರತಾಪ ಸಿಂಹ ನಾಯಕ್ ಕೆ., ತಿಪ್ಪಣ್ಣಪ್ಪ, ಸುನೀಲ್ ವಲ್ಯಾಪುರ ಹಾಗೂ ಬಿ.ಕೆ.ಹರಿಪ್ರಸಾದ್ ಅವರ ಅವಧಿ ಜೂ.30 ರಂದು ಕೊನೆಗೊಳ್ಳಲಿದೆ. ತೆರವಾಗುವ ಈ ಸ್ಥಾನಗಳಿಗೆ ಹೊಸ ಸದಸ್ಯರ ಆಯ್ಕೆ ಮಾಡಬೇಕಾಗಿದೆ.

ಚುನಾವಣಾ ಆಯೋಗ ಪ್ರಕಟಿಸಿರುವ ವೇಳಾಪಟ್ಟಿ ಪ್ರಕಾರ, ಜೂ.1ರಂದು ಅಧಿಸೂಚನೆ ಹೊರಡಿಸಲಾಗುತ್ತದೆ. ಜೂ.8 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಜೂ.9 ನಾಮಪತ್ರ ಪರಿ ಶೀಲನೆ ನಡೆಯಲಿದ್ದು, ಜೂ.11ನಾಮಪತ್ರ ಹಿಂಪಡೆಯಲು ಕೊನೆ ದಿನವಾಗಿದೆ. ಜೂ.18ಕ್ಕೆ ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ಜರುಗಲಿದೆ. ತರುವಾಯ ಮತ ಎಣಿಕೆ ನಡೆಯಲಿದ್ದು, ಫಲಿತಾಂಶ ಪ್ರಕಟವಾಗಲಿದೆ.

ನರೇಂದ್ರ ಮೋದಿ ಸರ್ಕಾರಕ್ಕೆ 12 ವರ್ಷದ ಹರ್ಷ

ಪುಟ 1ರಿಂದ ಎಲ್ಲರನ್ನೂ ಒಳಗೊಂಡ ಆಡಳಿತ ಸಿದ್ಧಾಂತದ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೋದಿ ಸರಕಾರ, ದೇಶದ ಬಡವರ್ಗದ ಬದುಕನ್ನು ಗಮನಾರ್ಹವಾಗಿ ಸುಧಾರಿಸುತ್ತಿದೆ ಅಥವಾ ಇದಕ್ಕೆ ಪೂರಕ ಯೋಜನೆಗಳಿಗೆ ಆದ್ಯತೆ ನೀಡುತ್ತಿದೆ ಎಂದು ಬಿಹಾರದ ಸಚಿವ ರಾಮ್ ಕೃಪಾಲ್ ಯಾದವ್ ಸುದ್ದಿಗಾರರಿಗೆ ತಿಳಿಸಿದರು.

ಸಬ್‌ಕಾ ಸಾಥ್ , ಸಬ್‌ಕಾ ವಿಕಾಸ್, ಸಬ್‌ಕಾ ವಿಶ್ವಾಸ್: ಪ್ರಧಾನಿ ನರೇಂದ್ರ ಮೋದಿ ಸರಕಾರ 12 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ. ಈ ಅವಧಿಯಲ್ಲಿ ಪ್ರಧಾನಿ ಮೋದಿ ಅವರು ಸಬ್ ಕಾ ಸಾಥ್, ಸಬ್‌ಕಾ ವಿಕಾಸ್ ಮತ್ತು ಸಬ್‌ಕಾ ವಿಶ್ವಾಸ್ ಸಿದ್ಧಾಂತಗಳ ಆಧಾರದಲ್ಲಿ, ಮುಖ್ಯವಾಗಿ ದೇಶದ ಬಡವರ್ಗದ ಏಳಿಗೆಗಾಗಿ ಹಲವು ಜನಪರ ಉಪಕ್ರಮಗಳನ್ನು ಜಾರಿಗೊಳಿಸಿದ್ದಾರೆ. ಪರಿಣಾಮ, ದೇಶವಿಂದು ಸರ್ವತ್ರ ಮುನ್ನಡೆ ಸಾಧಿಸುತ್ತಿದೆ ಮತ್ತು ದೇಶದ 140 ಕೋಟಿ ಜನತೆ ತುಂಬು ನೆಮ್ಮದಿ -ಸಂತೃಪ್ತಿ ವ್ಯಕ್ತಪಡಿಸುತ್ತಿದ್ದಾರೆ ಎಂದವರು ಪ್ರಶಂಸಿಸಿದ್ದಾರೆ.

ಜಗದ ಜನಪ್ರಿಯ ನಾಯಕ: ಪ್ರಧಾನಿ ನರೇಂದ್ರ ಮೋದಿ ಸರಕಾರ 12 ವರುಷಗಳ ಆಡಳಿತವನ್ನು ಯಶಸ್ವಿಯಾಗಿ ಪೂರ್ತಿಗೊಳಿಸಿರುವ ದ್ಯೋತಕವಾಗಿ ಬಿಜೆಪಿಯು ಜೂ.5ರಿಂದ 21ರವರೆಗೆ ದೇಶಾದ್ಯಂತ ಕಾರ್ಯಕ್ರಮಗಳನ್ನು ಆಯೋಜಿಸಲಿದೆ ಎಂದು ಬಿಹಾರ ಬಿಜೆಪಿ ಅಧ್ಯಕ್ಷ ಸಂಜಯ್ ಸರೋಗಿ ತಿಳಿಸಿದ್ದಾರೆ. ರಾಷ್ಟ್ರ ಮೊದಲು ಎಂಬ ದೃಢ ಧ್ಯೇಯಕ್ಕೆ ಬದ್ಧರಾಗಿ ಪ್ರಧಾನಿ ನರೇಂದ್ರ ಮೋದಿ 12 ವರ್ಷಗಳ ಆಡಳಿತವನ್ನು ಪರಿಪೂರ್ಣವಾಗಿ ಮತ್ತು ಯಶಸ್ವಿಯಾಗಿ ಪೂರೈಸಿದ್ದಾರೆ. ಇಂದು ಜಗತ್ತಿನ ಅತ್ಯಂತ ಜನಪ್ರಿಯ ನಾಯಕರಲ್ಲೊಬ್ಬರಾಗಿರುವ ಪ್ರಧಾನಿ ಮೋದಿ ಅವರನ್ನು ದೇಶದ ಬಹುತೇಕ ಎಲ್ಲಾ ಪ್ರಜೆಗಳು ಅತ್ಯಂತ ಗೌರವ-ಆತ್ಮವಿಶ್ವಾಸದೊಂದಿಗೆ ಬೆಂಬಲಿಸುತ್ತಿದ್ದಾರೆ. ಮೋದಿಯವರು 12 ವರ್ಷ ಕಾಲ ಯಶಸ್ವೀ ಪ್ರಧಾನಿಯಾಗಿ ಸಾರ್ಥಕ ಆಡಳಿತ ನಿರ್ವಹಿಸಿದ ಸಾಧನೆಯ ದ್ಯೋತಕವಾಗಿ ಜೂ.5ರಿಂದ 21ರ ತನಕ ಪಾಕ್ಷಿಕ ಅವಧಿಗೆ ಪಕ್ಷವು ದೇಶಾದ್ಯಂತ ಅಭಿಯಾನ ನಡೆಸಲಿದೆ ಎಂದು ಸರೋಗಿ ಮಾಹಿತಿ ನೀಡಿದ್ದಾರೆ.

ಜನರ ಮನೆಬಾಗಿಲಿಗೆ ಎನ್‌ಡಿಎ ನಾಯಕರು: ರಾಷ್ಟ್ರವ್ಯಾಪಿ ಅಭಿಯಾನದಂಗವಾಗಿ ಕೇಂದ್ರ ಸಚಿವರು, ಮುಖ್ಯಮಂತ್ರಿಗಳು, ಸಂಸದರು ಮತ್ತು ಹಿರಿಯ ಬಿಜೆಪಿ ನಾಯಕರು ದೇಶಾದ್ಯಂತ ಜನರ ಮನೆಬಾಗಿಲಿಗೆ ತೆರಳಿ ನರೇಂದ್ರ ಮೋದಿ ಸರಕಾರದ ಭರ್ಜರಿ ಜನಪರ ಸಾಧನೆ -ಯೋಜನೆ-ಕಾರ್ಯಕ್ರಮಗಳನ್ನು ಪರಿಚಯಿಸುವರು. ಮುಖ್ಯವಾಗಿ ಮೋದಿ ಸರಕಾರವು ಕೈಗೊಂಡಿರುವ ಜನಪರ ಕಲ್ಯಾಣ ಕಾರ್ಯಕ್ರಮಗಳು, ಡಿಜಿಟಲ್ ಗವರ್ನೆನ್ಸ್, ಮೂಲಸೌಕರ್ಯ ಬೆಳವಣಿಗೆ, ಆರ್ಥಿಕ ಸುಧಾರಣೆಗಳು ಮತ್ತು ವಿದೇಶಾಂಗ ನೀತಿ ಉಪಕ್ರಮಗಳನ್ನು ಜನರಿಗೆ ಮನವರಿಕೆ ಮಾಡುವರೆಂದು ಪಕ್ಷ ನಾಯಕರು ತಿಳಿಸಿದ್ದಾರೆ.

ಬಹುತೇಕ ಕುಗ್ಗಿದೆ ಭ್ರಷ್ಟಾಚಾರಗಳು: ಮೋದಿ ಸರಕಾರ ಆಡಳಿತ ವ್ಯವಸ್ಥೆಯಲ್ಲಿ ಜಾರಿಗೊಳಿಸಿರುವ ಸುಧಾರಣೆಗಳು, ಭಾರತದ ವಿದೇಶಾಂಗ ಬಾಂಧವ್ಯಗಳು ಅದ್ಭುತವೆಂದು ಜೆಡಿಯು ರಾಷ್ಟ್ರೀಯ ವಕ್ತಾರ ರಾಜೀವ್ ರಂಜನ್ ಪ್ರಶಂಸಿಸಿದ್ದಾರೆ. 12 ವರ್ಷಗಳ ಅವಧಿಯಲ್ಲಿ ಮುಖ್ಯವಾಗಿ ಪಾರದರ್ಶಿತ್ವಕ್ಕೆ ಸಂಬಂಧಿಸಿ ನರೇಂದ್ರ ಮೋದಿ ಸರಕಾರ ಕೈಗೊಂಡ ಮಹತ್ತ್ವದ ನಿರ್ಧಾರಗಳಿಂದಾಗಿ ಭ್ರಷ್ಟಾಚಾರವಿಂದು ಬಹುತೇಕ ಕಡಿಮೆಯಾಗಿದೆ.

ಹಿಂದಿನ ಸರಕಾರಗಳಿಗೆ ಹೋಲಿಸಿದರೆ, ಹೊಣೆಗಾರಿಕೆಗಳ ಗುರುತಿಸುವುದು ಮತ್ತು ಲೋಪಗಳ ಗುರುತಿಸುವಿಕೆ ಬಲು ಸುಗಮವಾಗಿದೆ. ಈಚಿನ ವರ್ಷಗಳಲ್ಲಿ ಜಾಗತಿಕ ಅಂಗಣದಲ್ಲಂತು ಭಾರತದ ಸ್ಥಾನಮಾನ ಅತ್ಯಂತ ಬಲಿಷ್ಠವಾಗಿದೆ ಎಂದು ಭಾರತದ ರಾಜತಾಂತ್ರಿಕ ಧೋರಣೆಗಳನ್ನು ಉಲ್ಲೇಖಿಸಿ, ಮೋದಿ ಸರಕಾರದ ವಿದೇಶಾಂಗ ನೀತಿ ಮತ್ತು ಆಡಳಿತ ನಿರ್ವಹಣೆ ದಾಖಲೆಯನ್ನು ರಾಜೀವ್ ರಂಜನ್ ಹೊಗಳಿದ್ದಾರೆ.

ಬಲಿಷ್ಠ ಜಾಗತಿಕ ಮಾನ್ಯತೆ

ಪುಟ 1ರಿಂದ ಚೀನಾ ಇರಲಿ, ರಷ್ಯಾ ಅಥವಾ ಅಮೆರಿಕ ಹೀಗೆ ಪ್ರತಿಯೊಂದು ರಾಷ್ಟ್ರಗಳೊಂದಿಗೆ ಭಾರತವು ಸಮತೋಲಿತ ಬಾಂಧವ್ಯವನ್ನು ಕಾಯ್ದುಕೊಂಡಿರುವುದೇ ಇದಕ್ಕೆ ಕಾರಣವೆಂದು ಗಮನ ಸೆಳೆದ ರಾಜೀವ್‌ರಂಜನ್, ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ತೃತೀಯ ಅವಧಿಗೆ 2024ರಲ್ಲಿ ಅಧಿಕಾರಕ್ಕೆ ಮರಳಿದೆ ಮತ್ತು ಮೋದಿ ನೇತೃತ್ವದ ಎನ್‌ಡಿಎ ಸರಕಾರ ಜನಪರ ಕಲ್ಯಾಣ ಕಾರ್ಯಕ್ರಮಗಳ ವಿಸ್ತೃತತೆ, ಮೂಲಸೌಕರ್ಯಗಳ ಸೃಷ್ಟಿ ಮತ್ತು ಜಾಗತಿಕ ರಾಜತಾಂತ್ರಿಕತೆಗಳಿಗೆ ತಮ್ಮ ನಿರಂತರ ಆದ್ಯತೆಯೆಂಬ ರಾಜಕೀಯ ಸಂದೇಶ ರವಾನಿಸಿದೆ.

ದೇಗುಲ, ಶಾಲೆಗಳ ಬಳಿ ಮದ್ಯದಂಗಡಿ ಬಂದ್

ಕಲ್ಯಾಣಿ/ ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಶಾಲೆ, ಕಾಲೇಜು ಹಾಗೂ ದೇವಾಲಯಗಳ ಸುತ್ತಮುತ್ತ ಮದ್ಯದಂಗಡಿಗಳಿಗೆ ಕಟ್ಟುನಿಟ್ಟಿನ ನಿರ್ಬಂಧ ಹೇರಲು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಮುಂದಾಗಿದ್ದು, 1 ಕಿಲೋಮೀಟರ್ ವ್ಯಾಪ್ತಿಯೊಳಗೆ ಯಾವುದೇ ಮದ್ಯದಂಗಡಿಗೆ ಅನುಮತಿ ನೀಡುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

ನಾದಿಯಾ ಜಿಲ್ಲೆಯ ಕಲ್ಯಾಣಿಯಲ್ಲಿ ನಡೆದ ಆಡಳಿತಾತ್ಮಕ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಮತ್ತು ಕುಟುಂಬಗಳ ವಾತಾವರಣವನ್ನು ರಕ್ಷಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಶಿಕ್ಷಣ ಹಾಗೂ ಧಾರ್ಮಿಕ ಕೇಂದ್ರಗಳ ಸಮೀಪ ಮದ್ಯದಂಗಡಿಗಳ ಬಗ್ಗೆ ಸಾರ್ವಜನಿಕರಿಂದ ದೀರ್ಘಕಾಲದಿಂದಲೂ ಆಕ್ಷೇಪ ವ್ಯಕ್ತವಾಗುತ್ತಿತ್ತು ಎಂದು ಹೇಳಿದರು. ಇದೇ ವೇಳೆ ರಾಜ್ಯ ಸರ್ಕಾರ ಹಲವು ಜನಪರ ಯೋಜನೆಗಳನ್ನೂ ಘೋಷಿಸಿದೆ. ರಾಜ್ಯದಾದ್ಯಂತ ಸುಮಾರು 400 ಕ್ಯಾಂಟೀನ್‌ಗಳಲ್ಲಿ ಕೇವಲ 5 ರೂ.ಗೆ 'ಮಾಚ್-ಭಾತ್' (ಮೀನು-ಅನ್ನ) ಊಟ ಒದಗಿಸಲಾಗುವುದು ಎಂದು ಸುವೇಂದು ಅಧಿಕಾರಿ ತಿಳಿಸಿದರು. ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಕಡಿಮೆ ದರದಲ್ಲಿ ಪೌಷ್ಟಿಕ ಆಹಾರ ಒದಗಿಸುವುದು ಇದರ ಉದ್ದೇಶವಾಗಿದೆ. ಇದರ ಜೊತೆಗೆ 'ಅನ್ನಪೂರ್ಣ ಯೋಜನೆ' ಅಡಿಯಲ್ಲಿ ಅರ್ಹ ಮಹಿಳೆಯರಿಗೆ ಪ್ರತಿ ತಿಂಗಳು 3,000 ರೂ. ಆರ್ಥಿಕ ನೆರವು ನೀಡಲಾಗುವುದು ಎಂದು ಘೋಷಿಸಲಾಗಿದೆ. ಮೇ 27ರಿಂದ ಅರ್ಜಿ ವಿತರಣೆ ಆರಂಭವಾಗಲಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಹದಗೆಡುತ್ತಿದೆ ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ: ಆರ್.ಅಶೋಕ

ಹಾಸನ: ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿದ್ದು, ಗ್ಯಾರಂಟಿ ಯೋಜನೆಗಳ ಪರಿಣಾಮವಾಗಿ ರಾಜ್ಯದ ಸಾಲದ ಮೊತ್ತ 7 ಲಕ್ಷ ಕೋಟಿ ದಾಟಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಆರೋಪಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ




ಮಾತನಾಡಿದ ಅವರು, ಮುಂದಿನ ವರ್ಷಕ್ಕೆ ಸಾಲದ ಪ್ರಮಾಣ 8.5 ಲಕ್ಷ ಕೋಟಿಗೆ ಏರಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ಬಿಡುವ ವೇಳೆಗೆ ಅದು 10 ಲಕ್ಷ ಕೋಟಿಗೆ ತಲುಪಲಿದೆ. ಇದುವರೆಗೆ ರಾಜ್ಯದ ಎಲ್ಲಾ ಸಿಎಂಗಳು ಮಾಡಿದ ಸಾಲಕ್ಕಿಂತ ಹೆಚ್ಚು ಸಾಲವನ್ನು ಸಿದ್ದರಾಮಯ್ಯ ಮಾಡಿದ್ದಾರೆ ಎಂದು ಟೀಕಿಸಿದರು.

ರಾಜ್ಯದಲ್ಲಿ ಅಧಿಕಾರ ಹಂಚಿಕೆ ಕಿತ್ತಾಟದಲ್ಲಿ ಸರ್ಕಾರ ಕೋಮಾದಲ್ಲಿದೆ. ಯಾರು ಮುಖ್ಯಮಂತ್ರಿ ಆಗುತ್ತಾರೆ, ಯಾರು ಹೋಗುತ್ತಾರೆ ಎಂಬ ಗೊಂದಲವೇ ಆಡಳಿತವನ್ನು ಹಾಳು ಮಾಡಿದೆ. ಅವ್ಯವಸ್ಥೆ ಸರಿಪಡಿಸಲು ಕಾಂಗ್ರೆಸ್ ಹೈಕಮಾಂಡ್ ದುರ್ಬಲವಾಗಿದೆ. 2028ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದರು. ಗ್ಯಾರಂಟಿ ಯೋಜನೆ ಕುರಿತು ಪ್ರತಿಕ್ರಿಯಿಸಿದ ಅವರು, ಗ್ಯಾರಂಟಿ ವಿರೋಧಿ ನಾವುಗಳಲ್ಲ, ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಭಾಗ್ಯಲಕ್ಷ್ಮಿ, ಸೈಕಲ್ ವಿತರಣೆ ಯೋಜನೆ ಜಾರಿಗೆ ತಂದಿದ್ದೆವು. ನಾವು ಆದಾಯಕ್ಕೆ ಅನುಗುಣವಾಗಿ ಯೋಜನೆ ರೂಪಿಸಿದ್ದೆವು. ಆದರೆ ಕಾಂಗ್ರೆಸ್ ಚುನಾವಣೆ ಗೆಲ್ಲಲು ಗ್ಯಾರಂಟಿ ಘೋಷಿಸಿ ಈಗ ಅದಕ್ಕೆ ಕತ್ತರಿ ಹಾಕಲು ಹೊರಟಿದೆ ಎಂದು ಲೇವಡಿ ಮಾಡಿದರು.

ರಾಜ್ಯದಲ್ಲಿ ಪಡಿತರ ಅಕ್ಕಿ ವಿತರಣೆಯಲ್ಲಿಯೂ ಅವ್ಯವಸ್ಥೆ ಉಂಟಾಗಿದೆ. ಕೇಂದ್ರ ಸರ್ಕಾರದಿಂದ ಒಂದು ತಿಂಗಳಿಗೂ ಅಕ್ಕಿ ಬಾಕಿ ಇಲ್ಲ, ಆದರೂ ಅನೇಕ ಪಡಿತರ ಅಂಗಡಿಗಳಲ್ಲಿ ಅಕ್ಕಿ ಸಿಗುತ್ತಿಲ್ಲ, ಮೂರು ತಿಂಗಳಿಂದ ಪಿಂಚಣಿ ಸಹ ಸರಿಯಾಗಿ ವಿತರಣೆ ಆಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸನ್ಮಾನ



ಪದ್ಮಶ್ರೀ ಪುರಸ್ಕೃತರಾದ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಪುಸ್ತಕ ಮನೆ ರೂವಾರಿ ಎಂ. ಅಂಕೇಗೌಡ ಅವರನ್ನು ದಿಲ್ಲಿಯ ತಮ್ಮ ನಿವಾಸಕ್ಕೆ ಬರಮಾಡಿಕೊಂಡ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಮಂಗಳವಾರ ಆತ್ಮೀಯವಾಗಿ ಗೌರವಿಸಿದರು.

ಅನುಮತಿ ರಹಿತ ಕೇಂದ್ರಗಳಲ್ಲಿ ಕೋಚಿಂಗ್‌ಗೆ ಕಠಿಣ ಕ್ರಮ

ಬೆಂಗಳೂರು: ಇಲಾಖೆಯಿಂದ ಅನುಮೋದನೆ ಪಡೆದಿರುವ ಸ್ಥಳಗಳನ್ನು ಬಿಟ್ಟು ಬೇರೆ ಕಡೆಗಳಲ್ಲಿ ಪಾಠ ನಡೆಸುತ್ತಿರುವ ಹಾಗೂ ಖಾಸಗಿ ಕೋಚಿಂಗ್ ಕೇಂದ್ರಗಳಲ್ಲಿ ತರಗತಿಗಳನ್ನು ನಡೆಸುತ್ತಿರುವ ಕೆಲವು ಪದವಿ ಪೂರ್ವ ಕಾಲೇಜುಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಎಚ್ಚರಿಕೆ ನೀಡಿದೆ.

2026–27ನೇ ಶೈಕ್ಷಣಿಕ ಸಾಲಿನ ಪ್ರಥಮ ಹಾಗೂ ದ್ವಿತೀಯ ಪಿಯುಸಿ ಪ್ರವೇಶಕ್ಕೆ ಸಂಬಂಧಿಸಿ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ನಿರ್ದೇಶಕರು ಸಾರ್ವಜನಿಕ ಸಲಹೆ ಪ್ರಕಟಿಸಿದ್ದು, ಕೆಲವು ಕಾಲೇಜುಗಳು ಇಲಾಖೆಯ ಅನುಮೋದನೆ ಇಲ್ಲದ ಸ್ಥಳಗಳಲ್ಲಿ ಶೈಕ್ಷಣಿಕ ಚಟುವಟಿಕೆ ನಡೆಸುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆ. ವಿದ್ಯಾರ್ಥಿಗಳಿಗೆ ಮಾನ್ಯತೆ ಪಡೆದ ಕಾಲೇಜುಗಳಲ್ಲಿ ಪ್ರವೇಶ ನೀಡಿದರೂ, ವಾಸ್ತವವಾಗಿ ಪಾಠಗಳನ್ನು ಖಾಸಗಿ ತರಬೇತಿ ಮತ್ತು ಕೋಚಿಂಗ್ ಸಂಸ್ಥೆಗಳಲ್ಲಿ ನಡೆಸಲಾಗುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಇಂತಹ ಕ್ರಮಗಳು ಕರ್ನಾಟಕ ಶಾಲಾ ಶಿಕ್ಷಣ ನಿಯಮಗಳು–2024 ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ–1983ರ ನಿಯಮಗಳಿಗೆ ವಿರುದ್ಧವಾಗಿವೆ ಎಂದು ಇಲಾಖೆ ಸ್ಪಷ್ಟಪಡಿಸಿದೆ. ನಿಯಮ ಉಲ್ಲಂಘನೆ ನಡೆಸುವ ಸಂಸ್ಥೆಗಳಿಗೆ ಸ್ಪಷ್ಟೀಕರಣಕ್ಕೆ ಅವಕಾಶ ನೀಡಿ, ನಂತರ ಕಾಲೇಜುಗಳ ಮಂಜೂರಾತಿ ಮತ್ತು ಶೈಕ್ಷಣಿಕ ಮಾನ್ಯತೆ ರದ್ದುಪಡಿಸುವ ಕ್ರಮ ಜರುಗಿಸ ಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಪಾಲಕರು ಮತ್ತು ವಿದ್ಯಾರ್ಥಿಗಳು ಪ್ರವೇಶ ಪಡೆಯುವ ಮೊದಲು ಸಂಬಂಧಿತ ಪಿಯು ಕಾಲೇಜಿನ ಅನುಮೋದಿತ ವಿಳಾಸ, ಮಂಜೂರಾದ ವಿಭಾಗಗಳು, ಕಾಂಬಿನೇಶನ್‌ಗಳು ಹಾಗೂ ಪ್ರವೇಶ ಸಾಮರ್ಥ್ಯ (ಇಂಟೇಕ್) ಕುರಿತು ಇಲಾಖೆಯ ಅಧಿಕೃತ ಜಾಲತಾಣದಲ್ಲಿ ಪರಿಶೀಲಿಸಿ ಖಚಿತಪಡಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ತರಗತಿಗಳನ್ನು ಬೇರೆ ಸ್ಥಳಕ್ಕೆ ಸ್ಥಳಾಂತರಿಸಲಾಗುತ್ತದೆ ಎಂಬ ಮೌಖಿಕ ಭರವಸೆಗಳನ್ನು ನೀಡುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆ. ಇಂತಹ ಭರವಸೆಗಳು ಅಥವಾ ತಪ್ಪು ಮಾಹಿತಿಗಳನ್ನು ನಂಬಬಾರದು ಎಂದು ಪಾಲಕರಿಗೆ ಇಲಾಖೆ ಸಲಹೆ ನೀಡಿದೆ.

ಕಿರುಸುದ್ದಿ

ವಕೀಲರ ಧರಣಿಗೆ ಕೆ.ಎಸ್. ಈಶ್ವರಪ್ಪ ಬೆಂಬಲ

ಶಿವಮೊಗ್ಗ: ವಕೀಲರು ಧರಣಿ ಮಾಡುತ್ತಿದ್ದಾರೆ ಎಂದರೆ ಅದು ರಾಜ್ಯಕ್ಕೆ ಅಪಮಾನ. ಕೂಡಲೇ ರಾಜ್ಯ ಸರ್ಕಾರ ಈ ಕಡೆ ಗಮನ ಹರಿಸಬೇಕು ಎಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ರಾಷ್ಟ್ರಭಕ್ತರ ಬಳಗದ ಸಂಚಾಲಕ ಕೆ.ಎಸ್. ಈಶ್ವರಪ್ಪ ಒತ್ತಾಯಿಸಿದ್ದಾರೆ. ವಕೀಲರ ಭವನದ ಆವರಣದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಒತ್ತಾಯಿಸಿ ವಕೀಲರ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಹೋರಾಟ ಸ್ಥಳಕ್ಕೆ ರಾಷ್ಟ್ರಭಕ್ತರ ಬಳಗದ ಬೆಂಬಲಿಗರೊಂದಿಗೆ ತೆರಳಿ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದರು. ನ್ಯಾಯಯುತ ಬೇಡಿಕೆಗಳನ್ನು ಈಡೇರಿಕೆಗೆ ವಕೀಲರು ಕಳೆದ ಹಲವು ದಿನಗಳಿಂದ ಪ್ರತಿಭಟನೆ ಮಾಡುತ್ತಿದ್ದಾರೆ. ಶಿವಮೊಗ್ಗ ಕೇಂದ್ರವಾಗಿರಿಸಿ ಹೈಕೋರ್ಟ್ ಸಂಚಾರಿ ಪೀಠ ಬೇಕು ಎನ್ನುವ ಅವರ ಬೇಡಿಕೆಗೆ ರಾಷ್ಟ್ರಭಕ್ತರ ಬಳಗದ ಸಂಪೂರ್ಣ ಬೆಂಬಲವಿದೆ. ಕೊನೆಯವರೆಗೂ ನಾವು ಅವರೊಂದಿಗೆ ಇರುತ್ತೇವೆ ಎಂದು ಘೋಷಿಸಿದರು.

ಸಾಲಬಾಧೆ: ರೈತ ಆತ್ಮಹತ್ಯೆ

ಮೈಸೂರು: ಸಾಲ ಭಾದೆ ತಾಳದೆ ರೈತರೊಬ್ಬರು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಜಿಲ್ಲೆಯ ಹುಣಸೂರು ತಾಲೂಕಿನ ಮಂಟಿಕೊಪ್ಪಲು ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ದೇವರಾಜ್ (60) ಆತ್ಮಹತ್ಯೆ ಮಾಡಿಕೊಂಡವರು. ಇವರಿಗೆ ತಂದೆ–ತಾಯಿ, ಪತ್ನಿ, ಇಬ್ಬರು ಪುತ್ರರಿದ್ದಾರೆ. ದೇವರಾಜ್‌ಗೆ ಗ್ರಾಮದಲ್ಲಿ 4.5 ಎಕರೆ ಜಮೀನಿದ್ದು, ಡಬಲ್ ಬ್ಯಾರನ್ ಹೊಂದಿದ್ದಾರೆ. ತಂಬಾಕು ಮತ್ತು ಶುಂಠಿ ಬೆಳೆಗಾಗಿ ಹುಣಸೂರಿನ ಯೂನಿಯನ್ ಬ್ಯಾಂಕ್‌ನಲ್ಲಿ ಹಾಗೂ ಟ್ರ್ಯಾಕ್ಟರ್ ಖರೀದಿಗಾಗಿ ಖಾಸಗಿ ಫೈನಾನ್ಸ್‌ನಲ್ಲಿ ಲಕ್ಷಾಂತರ ರೂ. ಸಾಲ ಪಡೆದಿದ್ದರು. ಗ್ರಾಮದಲ್ಲಿ ಕೈಸಾಲವನ್ನು ಕೂಡಮಾಡಿದ್ದರು. ಬ್ಯಾಂಕಿನಿಂದ ಹಲವಾರು ಬಾರಿ ನೋಟಿಸ್ ಬಂದಿತ್ತಲ್ಲದೆ, ಸಾಲದ ಸಂಬಂಧ ನ್ಯಾಯಾಲಯದಲ್ಲೂ ಪ್ರಕರಣ ನಡೆದಿತ್ತು. ಈ ವರ್ಷ ತಂಬಾಕು, ಶುಂಠಿ ಸಾಲ ಬೆಳೆ ಕೈಕೊಟ್ಟಿದ್ದರಿಂದ ತೀರಿಸಲಾಗದೆ ಪರಿತಪಿಸುತ್ತಿದ್ದ ತಂದೆ ದೇವರಾಜ್ ಮನೆಯಲ್ಲಿದ್ದ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪುತ್ರ ಪ್ರದೀಪ್ ಕುಮಾರ್ ಹುಣಸೂರು ನಗರ ಠಾಣೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನಕ್ರಮಕ್ಕೆಗೊಂಡಿದ್ದಾರೆ.

ಟಿ–20 ಕ್ರಿಕೆಟ್ ಬೆಟ್ಟಿಂಗ್: 23 ಮಂದಿ ಬಂಧನ

ಬೆಂಗಳೂರು: ಟಾಟಾ ಐಪಿಎಲ್ ಟಿ–20 ಕ್ರಿಕೆಟ್ ಪಂದ್ಯಗಳ ಸಂದರ್ಭದಲ್ಲಿ ಅಕ್ರಮವಾಗಿ ಜೂಜಾಟ ನಡೆಸುತ್ತಿದ್ದ ಜಾಲದ ಮೇಲೆ ಸಿಸಿಬಿ ಪೊಲೀಸರು ನಗರದಾದ್ಯಂತ ಕಾರ್ಯಾಚರಣೆ ನಡೆಸಿ, ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ತೊಡಗಿದ್ದ 23 ಆರೋಪಿಗಳನ್ನು ಬಂಧಿಸಿ, ಅವರಿಂದ 13.39 ಕೋಟಿ ರೂ. ಮೌಲ್ಯದ ಡಿಜಿಟಲ್ ಚಿಪ್ಸ್ ಹಾಗೂ ನಗದನ್ನು ವಶಪಡಿಸಿಕೊಂಡಿದ್ದಾರೆ. ನಗರದ ವಿವಿಧ ಠಾಣಾ ವ್ಯಾಪ್ತಿಗಳಲ್ಲಿ ಐಪಿಎಲ್ ಪಂದ್ಯಗಳ ಮೇಲೆ ದೊಡ್ಡಮಟ್ಟದ ಬೆಟ್ಟಿಂಗ್ ನಡೆಯುತ್ತಿರುವ ಬಗ್ಗೆ ಸಿಸಿಬಿಯ ವಿಶೇಷ ವಿಚಾರಣಾ ದಳಕ್ಕೆ ಖಚಿತ ಮಾಹಿತಿ ಲಭ್ಯವಾಗಿತ್ತು. ಇದರ ಆಧಾರದ ಮೇಲೆ ತೀವ್ರ ನಿಗಾ ವಹಿಸಿದ್ದ ವಿಶೇಷ ತಂಡವು ನಗರದ ಬೇರೆ ಬೇರೆ ಕಡೆಗಳಲ್ಲಿ ದಾಳಿ ನಡೆಸಿ ಒಟ್ಟು 17 ಕ್ರಿಕೆಟ್ ಬೆಟ್ಟಿಂಗ್ ಪ್ರಕರಣಗಳನ್ನು ದಾಖಲಿಸಿಕೊಂಡಿದೆ. ಈ ಪೈಕಿ ಸಿಸಿಬಿ ಠಾಣೆಯೊಂದರಲ್ಲೇ 9 ಪ್ರಕರಣಗಳು ದಾಖಲಾಗಿವೆ. ದಾಳಿಯ ವೇಳೆ ಸಿಸಿಬಿ ಠಾಣೆಯಲ್ಲಿ ದಾಖಲಾದ ಪ್ರಮುಖ 4 ಪ್ರಕರಣಗಳಿಗೆ ಸಂಬಂಧಿಸಿದಂತೆ ಐದು ಮಂದಿ ಪ್ರಮುಖ ಆರೋಪಿಗಳನ್ನು ಬಂಧಿಸಲಾಗಿದೆ.

ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿಕೆ

ದಿಲ್ಲಿಯಲ್ಲಿ ಚುನಾವಣೆ ಚರ್ಚೆ

ಸುಬ್ರಹ್ಮಣ್ಯ: ಮುಂಬರುವ ರಾಜ್ಯಸಭಾ ಚುನಾವಣೆಯ ಕುರಿತು ವರಿಷ್ಠರೊಂದಿಗೆ ಚರ್ಚಿಸಲು ಮುಖ್ಯಮಂತ್ರಿಗಳು ಮತ್ತು ನಾಯಕರು ದೆಹಲಿಗೆ ಹೋಗಿದ್ದಾರೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ಕುಕ್ಕೆ ಸುಬ್ರಹ್ಮಣ್ಯದಲ್ಲಿ ದೇವರ ದರ್ಶನ ಮಾಡಿದ ತರುವಾಯ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಸಂಪುಟ ವಿಸ್ತರಣೆ ಮುಖ್ಯಮಂತ್ರಿಗಳ ಪರಮಾಧಿಕಾರವಾಗಿದ್ದು, ಊಹಾತ್ಮಕ ಪ್ರಶ್ನೆಗಳಿಗೆ ಉತ್ತರಿಸುವುದಿಲ್ಲ ಎಂದರು.

ಕುಕ್ಕೆಯಲ್ಲಿ ಏಕಬಳಕೆ ಪ್ಲಾಸ್ಟಿಕ್ ತಪಾಸಣೆ: ಶ್ರೀಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯಕ್ಕೆ ಬರಲು ಇರುವ ನಾಲ್ಕು ಪ್ರವೇಶ ರಸ್ತೆಗಳಲ್ಲಿ ಏಕಬಳಕೆ ಪ್ಲಾಸ್ಟಿಕ್ ತಪಾಸಣೆಗಾಗಿ ಚೆಕ್‌ಪೋಸ್ಟ್ ಸ್ಥಾಪಿಸಲು ಆದೇಶ ನೀಡಲಾಗಿದೆ. ಇಂದು ದೇವಾಲಯಕ್ಕೆ ಬರುವಾಗ ರಸ್ತೆಯ ಬದಿಯಲ್ಲಿ ಪ್ಲಾಸ್ಟಿಕ್ ಬಾಟಲಿ, ತಟ್ಟೆ ಇತ್ಯಾದಿ ಬಿದ್ದಿರುವುದನ್ನು ನೋಡಿ ಆತಂಕವಾಯಿತು. ಕೂಡಲೇ ಅಧಿಕಾರಿಗಳ ಸಭೆ ನಡೆಸಿ ಚೆಕ್‌ಪೋಸ್ಟ್ ಸ್ಥಾಪಿಸಿ 2 ಹಂತದ ತಪಾಸಣೆ ಮಾಡಲು ಸೂಚನೆ ನೀಡಲಾಗಿದೆ ಎಂದು ಸಚಿವರು ತಿಳಿಸಿದರು.

ಕಂದಾಯ ಇಲಾಖೆಯಲ್ಲಿ ಮೋಜಣಿದಾರರು ಕೆಲ ತಿಂಗಳಿಂದ ಮುಷ್ಕರ ನಡೆಸುತ್ತಿದ್ದಾರೆ. ಜತೆಗೆ ಸರ್ವೆಯರ್‌ಗಳ ಕೊರತೆ ಇರುವುದಾಗಿ ಉಡುಪಿ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ಅರಣ್ಯ ಜಂಟಿ ಸರ್ವೆಗಾಗಿಯೇ ವಿಶೇಷವಾಗಿ ಸಿಬ್ಬಂದಿ ನಿಯೋಜಿಸಲು ತಿಳಿಸಿದ್ದು ಈ ಬಗ್ಗೆ ಕಂದಾಯ ಸಚಿವರೊಂದಿಗೆ ಸಮಾಲೋಚಿಸುವುದಾಗಿ ಈಶ್ವರ್ ಖಂಡ್ರೆ ತಿಳಿಸಿದರು. ಮಾನವನ ಜೀವ ಅತ್ಯಮೂಲ್ಯವಾಗಿದ್ದು ಒಂದೇ ಒಂದು ಪ್ರಾಣ ಹಾನಿಯೂ ಆಗಬಾರದು. ಈ ನಿಟ್ಟಿನಲ್ಲಿ ಕ್ರಮ ವಹಿಸಲು ಅರಣ್ಯಾಧಿಕಾರಿಗಳಿಗೆ ತಿಳಿಸಲಾಗಿದೆ ಎಂದರು.



ವನ್ಯಜೀವಿಗಳ ಸಂಚಾರದ ಬಗ್ಗೆ ನಿಗಾ ಇಡಲು ಡ್ರೋನ್ ಸೇರಿದಂತೆ ಅತ್ಯಾಧುನಿಕ ಉಪಕರಣಗಳನ್ನು ಬಳಸಲಾಗುತ್ತಿದೆ. ಅಲ್ಲದೆ, ಕಮಾಂಡ್ ಸೆಂಟರ್ ತೆರೆಯಲಾಗಿದೆ.
■ ಈಶ್ವರ ಬಿ. ಖಂಡ್ರೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ

ಸಿಎಂ ಬದಲಾವಣೆ ಚರ್ಚೆ ಅನಗತ್ಯ: ಖಂಡ್ರೆ

ಹಾಸನ: ರಾಜಕೀಯ ವಲಯದಲ್ಲಿ ಹರಿದಾಡುತ್ತಿರುವ ಊಹಾಪೋಹ ಅಷ್ಟೇ, ಮುಖ್ಯಮಂತ್ರಿ ಬದಲಾವಣೆ ಕುರಿತ ಚರ್ಚೆ ಅನಗತ್ಯ ಮತ್ತು ಅಪ್ರಸ್ತುತ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದೆಹಲಿಯಲ್ಲಿ ಪ್ರತ್ಯೇಕವಾಗಿ ಸಭೆ ನಡೆಸಿರುವ ಚರ್ಚೆ ನಾಯಕತ್ವ ಬದಲಾವಣೆಗಲ್ಲ. ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಚುನಾವಣೆ ಘೋಷಣೆ ಆಗಿರುವ ಹಿನ್ನೆಲೆಯಲ್ಲಿ ಪಕ್ಷದ ಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿವೆ. ಅದನ್ನೇ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸುವ ಅಗತ್ಯವಿಲ್ಲ ಎಂದು ಹೇಳಿದರು. ಸಿಎಂ ಹಾಗೂ ಡಿಸಿಎಂ ಜೊತೆ ಪ್ರತ್ಯೇಕವಾಗಿ ಸಭೆ ನಡೆಸಿದ್ದರಲ್ಲಿ ವಿಶೇಷವೇನೂ ಇಲ್ಲ. ನಾವು ಎಲ್ಲರೂ ಒಂದೇ ಕುಟುಂಬದವರಂತೆ ಇದ್ದೇವೆ. ಸ್ನೇಹಿತರಾಗಿ ಟೀ ಕುಡಿಯುತ್ತೇವೆ, ಊಟಕ್ಕೆ ಹೋಗುತ್ತೇವೆ, ಪ್ರತ್ಯೇಕವಾಗಿ ಮಾತುಕತೆ ನಡೆಸುತೇವೆ. ಅದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು. ಮುಖ್ಯಮಂತ್ರಿ ಬದಲಾವಣೆ ಕುರಿತು ಕೆಲ ಕಾಂಗ್ರೆಸ್ ಶಾಸಕರು ನೀಡುತ್ತಿರುವ ಹೇಳಿಕೆಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು ಆ ಹೇಳಿಕೆ ನೀಡಿದವರನ್ನೇ ಕೇಳಬೇಕು. ನಾನು ಸರ್ಕಾರದ ಭಾಗವಾಗಿ ಹೇಳುವುದೇನೆಂದರೆ, ಸರ್ಕಾರ ಅತ್ಯಂತ ಗಟ್ಟಿಯಾಗಿದ್ದು, ಜನಪರ ಆಡಳಿತ ನೀಡುತ್ತಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸಚಿವ ಕೆ.ಎನ್.ರಾಜಣ್ಣ ಅವರ ಹೇಳಿಕೆ ಕುರಿತು ಪ್ರಶ್ನಿಸಿದಾಗ, ಅದರ ಬಗ್ಗೆ ಅವರನ್ನೇ ಕೇಳಿ. ನಾನು ಈಗಾಗಲೇ ಹೇಳಿರುವಂತೆ ಈ ಚರ್ಚೆ ಅಪ್ರಸ್ತುತ ಎಂದು ಉತ್ತರಿಸಿದರು. ತಮ್ಮ ದೆಹಲಿ ಭೇಟಿ ಕುರಿತು ಕೇಳಿದ ಪ್ರಶ್ನೆಗೆ ಖಂಡ್ರೆ ನಗೆ ಚಟಾಕಿ ಹಾರಿಸಿ, ನಾನೇಕೆ ದೆಹಲಿಗೆ ಹೋಗಬೇಕು ಎಂದು ಮರು ಪ್ರಶ್ನೆ ಹಾಕಿದರು.

ಮೇಕೆದಾಟು: ಸುಪ್ರೀಂಗೆ ಧನ್ಯವಾದ ಹೇಳಿದ ಡಿಕೆಶಿ

ಬೆಂಗಳೂರು: ಮೇಕೆದಾಟು ಯೋಜನೆ ವಿಚಾರವಾಗಿ ತಮಿಳುನಾಡು ಸಲ್ಲಿಸಿದ್ದ ಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠ ವಜಾಗೊಳಿಸಿದೆ. ಇದು ಕರ್ನಾಟಕ ಪಾಲಿಗೆ ಶುಭಸುದ್ದಿ. ಕರ್ನಾಟಕ ರಾಜ್ಯದ ಜನರ ಪರವಾಗಿ ನಾವು ಸುಪ್ರೀಂ ಕೋರ್ಟಿಗೆ ಧನ್ಯವಾದ ಅರ್ಪಿಸುತ್ತೇವೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.



» ಪರಿಷ್ಕೃತ ಡಿಪಿಆರ್ ಸಲ್ಲಿಕೆ ಪ್ರಕ್ರಿಯೆ: ಉಪಮುಖ್ಯಮಂತ್ರಿ

ಜಲ ಸಂಪನ್ಮೂಲ ಸಚಿವರೂ ಆಗಿರುವ ಅವರು ಮಂಗಳವಾರ ಹೊಸದಿಲ್ಲಿಯ ಕರ್ನಾಟಕ ಭವನದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು.

ಸುಪ್ರೀಂ ಕೋರ್ಟ್ ಈ ಹಿಂದಿನ ಆದೇಶದಲ್ಲೇ ನಮಗೆ ಸ್ಪಷ್ಟ ಸೂಚನೆ ನೀಡಿದ್ದು, ತಮಿಳುನಾಡಿನ ಪಾಲಿನ 177 ಟಿಎಂಸಿ ನೀರನ್ನು ಹರಿಸಬೇಕು ಎಂದು ಷರತ್ತು ವಿಧಿಸಿದೆ. ಈಗ ಈ ಯೋಜನೆ ಕುರಿತು ತೀರ್ಮಾನ ಮಾಡಬೇಕಿರುವುದು ಕೇಂದ್ರ ಸರ್ಕಾರ. ನಾವು ಪರಿಷ್ಕೃತ ಡಿಪಿಆರ್ ಸಲ್ಲಿಕೆ ಪ್ರಕ್ರಿಯೆಯಲ್ಲಿದ್ದೇವೆ ಎಂದು ಡಿ.ಕೆ. ಶಿವಕುಮಾರ್ ವಿವರಿಸಿದರು. ಪರಿಷ್ಕೃತ ಡಿಪಿಆರ್ ಸಲ್ಲಿಕೆ ಕುರಿತಾಗಿ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ತಮಿಳುನಾಡಿನಲ್ಲಿ ವಿರೋಧ ವ್ಯಕ್ತವಾಗಿದೆ.

ಮೇಕೆದಾಟು ಯೋಜನೆ: ಅನುಮತಿ ನೀಡದಂತೆ ಪ್ರಧಾನಿ ಮೋದಿಗೆ ವಿಜಯ್ ಪತ್ರ

ಹೊಸದಿಲ್ಲಿ: ಮೇಕೆದಾಟು ಅಣೆಕಟ್ಟು ನಿರ್ಮಿಸಲು ಕರ್ನಾಟಕ ಸರ್ಕಾರಕ್ಕೆ ಅನುಮತಿ ನೀಡಬಾರದೆಂದು ಕೋರಿ ತಮಿಳುನಾಡು ಮುಖ್ಯಮಂತ್ರಿ ವಿಜಯ್ ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ಕಾವೇರಿ ನದಿಗೆ ಮೇಕೆದಾಟು ಅಣೆಕಟ್ಟು ಕಟ್ಟುವುದಾಗಿ ಕಾಂಗ್ರೆಸ್ ಸರ್ಕಾರ ಪ್ರಸ್ತಾವಿಸಿದ ದಿನಗಳ ಬಳಿಕ ವಿಜಯ್ ಪ್ರಧಾನಿಗೆ ಪತ್ರ ಬರೆದಿದ್ದಾರೆ. ಕರ್ನಾಟಕ ಸರ್ಕಾರದ ಮೇಕೆದಾಟು ಯೋಜನೆಯು ಸುಪ್ರೀಂ ಕೋರ್ಟ್ ತೀರ್ಪಿನ ಸ್ಪಷ್ಟ ಉಲ್ಲಂಘನೆ. ಕರ್ನಾಟಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೇಳಿಕೆ ಅತೀವ ಆತಂಕವನ್ನು ಸೃಷ್ಟಿಸಿದೆ ಎಂದು ತಮ್ಮ ಪತ್ರದಲ್ಲಿ ವಿಜಯ್ ಬರೆದಿದ್ದಾರೆ. ಕಾನೂನು ಸಲಹೆಗಳನ್ನು ಪಡೆದ ತಮಿಳುನಾಡು ಮುಖ್ಯಮಂತ್ರಿ ವಿಜಯ್ ಸಭೆಯೊಂದರ ಬಳಿಕ ಮುಂದಿನ ಕಾನೂನು ಹೋರಾಟಕ್ಕೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಕೆವಿಕೆಯಲ್ಲಿ ಅಗ್ರಿ ಸ್ಟಾರ್ಟ್‌ಅಪ್ ಕ್ಲಾನ್ ಕೇವ್ 2.0 ಉದ್ಘಾಟನೆ

ಹೊಸ ಆಲೋಚನೆಗಳಿಗೆ ದಾರಿ ತೋರಲಿ

ಬೆಂಗಳೂರು: ಇಂದು ಕೃಷಿ ಕ್ಷೇತ್ರ ಎದುರಿಸುತ್ತಿರುವ ಅನೇಕ ಸವಾಲುಗಳಿಗೆ ಉತ್ತರಿಸುವ ಶಕ್ತಿ ಇಂದಿನ ತಂತ್ರಜ್ಞಾನ ಮತ್ತು ಕೃಷಿ ಸ್ಟಾರ್ಟ್‌ಅಪ್‌ಗಳಲ್ಲಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ಜಿಕೆವಿಕೆಯಲ್ಲಿ ನಡೆದ ಅಗ್ರಿ ಸ್ಟಾರ್ಟ್‌ಅಪ್ ಕ್ಲಾನ್ ಕೇವ್ 2.0 ಕಾರ್ಯಕ್ರಮ ಉದ್ಘಾಟಿಸಿದ ಅವರು, ನಮ್ಮ ಸರ್ಕಾರ ಕೃಷಿಯನ್ನು ಕೇವಲ ಬದುಕಿನ ಮಾರ್ಗವಾಗಿ ನೋಡುವುದಿಲ್ಲ, ಅದನ್ನು ಲಾಭದಾಯಕ ಉದ್ಯಮವನ್ನಾಗಿ ರೂಪಿಸುವ ಗುರಿಯೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಡಿಜಿಟಲ್ ಕೃಷಿ, ಡ್ರೋನ್ ತಂತ್ರಜ್ಞಾನ, ಡೇಟಾ ಆಧಾರಿತ ಬೆಳೆ ನಿರ್ವಹಣೆ, ಮೌಲ್ಯವರ್ಧನೆ, ನೇರ ಮಾರುಕಟ್ಟೆ ವ್ಯವಸ್ಥೆಗಳಿಗೆ ನಮ್ಮ ಸರ್ಕಾರ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ ಎಂದು ಹೇಳಿದರು. ಇಂದು ದೇಶದಲ್ಲಿ ಸಾವಿರಾರು ಅಗ್ರಿ ಸ್ಟಾರ್ಟ್ ಅಪ್ ಹುಟ್ಟಿಕೊಂಡಿವೆ. ಅದರಲ್ಲೂ ಬೆಂಗಳೂರು ಸ್ಟಾರ್ಟ್‌ಅಪ್‌ಗಳ ಹಬ್ ಆಗಿ ಮುಂಚೂಣಿಯಲ್ಲಿದೆ. ಯುವಕರು ಉದ್ಯೋಗ ಹುಡುಕುವವರಾಗದೆ, ಉದ್ಯೋಗ ಸೃಷ್ಟಿಸುವವರಾಗಬೇಕು. ಆ ನಿಟ್ಟಿನಲ್ಲಿ ಇಂದಿನ ಯುವಕರು ಕಾರ್ಯಪ್ರವೃತ್ತರಾಬೇಕು ಎಂದು ಕರೆ ನೀಡಿದರು.

ರೈತ ಉತ್ಪಾದಕರ ಸಂಘಗಳು, ಕೃಷಿ ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು ಮತ್ತು ಯುವ ಉದ್ಯಮಿಗಳು ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಗ್ರಾಮೀಣ ಆರ್ಥಿಕತೆಯಲ್ಲಿ ದೊಡ್ಡ ಬದಲಾವಣೆ ಸಾಧ್ಯ. ಈ ಅಗ್ರಿ ಸ್ಟಾರ್ಟ್ ಅಪ್ 2.0 ಹೊಸ ಆಲೋಚನೆಗಳಿಗೆ ದಾರಿ ತೋರಲಿ, ಯುವಕರಿಗೆ ಪ್ರೇರಣೆ ನೀಡಲಿ ಹಾಗೂ ರೈತರ ಬದುಕಿನಲ್ಲಿ ನಿಜವಾದ ಪರಿವರ್ತನೆ ತರಲಿ ಎಂದು ಆಶಿಸುತ್ತೇನೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ತಿಳಿಸಿದರು.



ಅಗ್ರಿ ಸ್ಟಾರ್ಟ್‌ಅಪ್‌ಗಳು ರೈತರಿಗೆ ಹೊಸ ತಂತ್ರಜ್ಞಾನ, ಹವಾಮಾನ ಆಧಾರಿತ ಕೃಷಿ ಸಲಹೆ, ಡಿಜಿಟಲ್ ಮಾರುಕಟ್ಟೆ, ನಿಖರ ಕೃಷಿ, ಡ್ರೋನ್ ತಂತ್ರಜ್ಞಾನ, ಸಾವಯವ ಕೃಷಿ ಹಾಗೂ ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಸುಲಭಗೊಳಿಸುತ್ತಿವೆ. ಇದರಿಂದ ಕೃಷಿ ವೆಚ್ಚ ಕಡಿಮೆಯಾಗುವುದರ ಜೊತೆಗೆ ಉತ್ಪಾದಕತೆ ಮತ್ತು ಲಾಭದಾಯಕತೆ ಹೆಚ್ಚಾಗುತ್ತಿದೆ.
■ ಡಾ. ಎಸ್.ವಿ. ಸುರೇಶ, ಜಿಕೆವಿಕೆ ಕುಲಪತಿ

50ಕ್ಕೂ ಹೆಚ್ಚು ಮಳಿಗೆಗಳ ಪ್ರದರ್ಶನ: ಈ ಕಾರ್ಯಕ್ರಮದಲ್ಲಿ ಸುಮಾರು 50ಕ್ಕೂ ಹೆಚ್ಚು ಮಳಿಗೆಗಳು ಪ್ರದರ್ಶಿಸಲಾಯಿತು. ಅಗ್ರಿ ಸ್ಟಾರ್ಟ್‌ಅಪ್‌ಗಳು, ಉದ್ಯಮಿಗಳು, ಸಂಶೋಧಕರು, ಹೂಡಿಕೆದಾರರು, ವಿದ್ಯಾರ್ಥಿಗಳು, ಕೈಗಾರಿಕೆಗಳು ಹಾಗೂ ರೈತ ಉತ್ಪಾದಕರ ಸಂಘಟನೆಗಳನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಲಾಯಿತು.

ಕಲಾವಿದರಿಗೆ ಸಿಗಲಿದೆ ಜಾಗತಿಕ ಮನ್ನಣೆ

ಬೆಂಗಳೂರು: ಕೇಂದ್ರ ವಿದೇಶಾಂಗ ಮಂತ್ರಾಲಯದ ಅಧೀನದಲ್ಲಿರುವ ಸಾಂಸ್ಕೃತಿಕ ರಾಜತಾಂತ್ರಿಕ ಸಂಸ್ಥೆಯಾದ ಐಸಿಸಿಆರ್ ಹಾಗೂ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡುವೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಒಪ್ಪಂದಕ್ಕೆ ಐಸಿಸಿಆರ್ ಪರವಾಗಿ ಜಂಟಿ ಕಾರ್ಯದರ್ಶಿ ಮನಿಷಾ ಸ್ವಾಮಿ ಮತ್ತು ಕರ್ನಾಟಕ ಸರ್ಕಾರದ ಪರವಾಗಿ ಇಲಾಖೆಯ ಕಾರ್ಯದರ್ಶಿ ಜೆ.ಮಂಜುನಾಥ್ ಸಹಿ ಹಾಕಿದರು. ಈ ಒಡಂಬಡಿಕೆಯ ಮೂಲಕ ಕರ್ನಾಟಕದ ಕಲಾವಿದರು, ಸಾಂಸ್ಕೃತಿಕ ತಂಡಗಳು ಹಾಗೂ ಯುವ ಪ್ರತಿಭೆಗಳಿಗೆ ದೇಶ–ವಿದೇಶಗಳಲ್ಲಿ ಹೆಚ್ಚಿನ ಅವಕಾಶಗಳು ಲಭ್ಯವಾಗಲಿವೆ. ಸಂಗೀತ, ನೃತ್ಯ, ಸಾಹಿತ್ಯ, ಕರಕುಶಲ, ಪಾಕಪದ್ಧತಿ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಲ್ಲಿ ಪ್ರತಿಭೆಗಳನ್ನು ಗುರುತಿಸಿ ಉತ್ತೇಜಿಸಲು ಯೋಜನೆ ರೂಪಿಸಲಾಗಿದೆ.

ವಿದೇಶಗಳಲ್ಲಿ ನಡೆಯುವ ಅಂತಾರಾಷ್ಟ್ರೀಯ ಉತ್ಸವಗಳಲ್ಲಿ ಕರ್ನಾಟಕದ ಕಲಾವಿದರು ಭಾಗವಹಿಸಲು ಐಸಿಸಿಆರ್ ನೆರವು ನೀಡಲಿದೆ. ವಿಮಾನ ಪ್ರಯಾಣ, ವೀಸಾ ಹಾಗೂ ಪ್ರದರ್ಶನ ವೆಚ್ಚಗಳನ್ನು ಭರಿಸಲು ಸಿದ್ಧತೆ ವ್ಯಕ್ತಪಡಿಸಿದೆ. ಈ ಮೂಲಕ ಕರ್ನಾಟಕದ ಸಾಂಸ್ಕೃತಿಕ ಪರಂಪರೆಗೆ ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಗುರುತಿನ ಅವಕಾಶ ಲಭಿಸಲಿದೆ.



ಕೇಂದ್ರ ಸರ್ಕಾರದ ಐಸಿಸಿಆರ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡುವೆ ಐತಿಹಾಸಿಕ ಒಡಂಬಡಿಕೆಗೆ ಸಹಿ ಮಾಡಲಾಗಿದೆ. ರಾಜ್ಯದ ಸಂಸ್ಕೃತಿ ಪ್ರವಾಸೋದ್ಯಮ, ಆರ್ಥಿಕತೆ ಹೆಚ್ಚಿಸಲು ಸಾಧ್ಯವಾಗುತ್ತದೆ. ದೇಶ, ವಿದೇಶಗಳಲ್ಲಿ ಸಾಂಸ್ಕೃತಿಕ ರಾಜತಾಂತ್ರಿಕತೆ ಬಲಪಡಿಸುವ ನಿಟ್ಟಿನಲ್ಲಿ ಈ ಒಡಂಬಡಿಕೆಯು ಮಹತ್ವಪೂರ್ಣವಾಗಿದೆ.
■ ಶಿವರಾಜ ಎಸ್.ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ

ಎಸ್‌ಐಆರ್: ವಿವಿಧ ಜಿಲ್ಲೆಗಳಿಗೆ ಕೈನಿಂದ ವೀಕ್ಷಕರ ನೇಮಕ

ಬೆಂಗಳೂರು: ರಾಜ್ಯದಲ್ಲಿ ಮುಂದಿನ ತಿಂಗಳು ಮತದಾರರ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ನಡೆಯಲಿದೆ. ಈ ಹಿನ್ನೆಲೆಯಲ್ಲಿ ವಿವಿಧ ಜಿಲ್ಲೆಗಳಿಗೆ ಕಾಂಗ್ರೆಸ್‌ನಿಂದ ವೀಕ್ಷಕರನ್ನು ನೇಮಕ ಮಾಡಲಾಗಿದೆ. ಪ್ರತಿ ಜಿಲ್ಲೆಗೆ ಇಬ್ಬರಂತೆ ಪಕ್ಷದ ಪ್ರಮುಖರನ್ನು ಕೆಪಿಸಿಸಿ ಉಪಾಧ್ಯಕ್ಷ ವಿ.ಆರ್ ಸುದರ್ಶನ್ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಆದೇಶದ ಮೇರೆಗೆ ನೇಮಕ ಮಾಡಲಾಗಿದೆ. ಸೋಮವಾರ ಬೆಂಗಳೂರಿನ ಹೊರವಲಯ ದೇವನಹಳ್ಳಿ ಬಳಿ ಕೆಪಿಸಿಸಿ ವತಿಯಿಂದ ಆಯೋಜಿಸಲಾಗಿದ್ದ ಸಭೆಯಲ್ಲಿ ಎಸ್‌ಐಆರ್ ಸಾಧಕ–ಬಾಧಕಗಳ ಬಗ್ಗೆ ಕಾಂಗ್ರೆಸ್ ಚರ್ಚೆ ನಡೆಸಿದೆ.

ಬಹುಕೋಟಿ ವಂಚನೆ ಪ್ರಕರಣ | ಬೆಂಗಳೂರಿನಿಂದ ಬೆಳಗಾವಿಗೆ ಆರೋಪಿ ಶಿಫ್ಟ್

ಸಿಐಡಿಯಿಂದ ಶಿವಾನಂದ ನೀಲಣ್ಣವರ ವಿಚಾರಣೆ

ಬೆಳಗಾವಿ: ಬಹುಕೋಟಿ ವಂಚನೆ ಆರೋಪಿ ಶಿವಂ ಅಸೋಸಿಯೇಟ್ಸ್ ಸಂಸ್ಥೆಯ ಮುಖ್ಯಸ್ಥ ಶಿವಾನಂದ ನೀಲಣ್ಣವರ ಅವರನ್ನು ಸಿಐಡಿ ಅಧಿಕಾರಿಗಳು ಸೋಮವಾರ ತಡರಾತ್ರಿ ಬೆಂಗಳೂರಿನಿಂದ ಬೆಳಗಾವಿಗೆ ಕರೆ ತಂದಿದ್ದಾರೆ.

ನೀಲಣ್ಣವರ ಮಾಳಮಾರುತಿ ಪೊಲೀಸ್ ಠಾಣೆಗೆ ಕರೆ ತಂದು ವಿಚಾರಣೆ ನಡೆಸಲಾಗುತ್ತಿದ್ದು, ನ್ಯಾಯಾಲಯವು ನೀಡಿದ್ದ 10 ದಿನಗಳ ಸಿಐಡಿ ಕಸ್ಟಡಿ ಅವಧಿ ಮೇ 27ರಂದು ಅಂತ್ಯಗೊಳ್ಳಲಿರುವ ಹಿನ್ನೆಲೆಯಲ್ಲಿ ಒಂದು ದಿನ ಮುಂಚಿತವಾಗಿಯೇ ಅಂದರೆ ಬುಧವಾರ ನ್ಯಾಯಾಲಯಕ್ಕೆ ರಜೆ ಇರುವ ಕಾರಣ ಮಂಗಳವಾರವೇ ನ್ಯಾಯಾಧೀಶರ ಮುಂದೆ ಸಿಐಡಿ ಅಧಿಕಾರಿಗಳು ಆರೋಪಿಯನ್ನು ಹಾಜರುಪಡಿಸಿದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಲಣ್ಣವರ ಪತ್ನಿ, ಕನ್ನಡ ಸಂಘಟನೆಯ ಜಿಲ್ಲಾ ಅಧ್ಯಕ್ಷ ಆರ್. ಅಭಿಲಾಷ್ ಹಾಗೂ ವ್ಯವಹಾರ ಪಾಲುದಾರ ಸುಭಾಷ್ ಅವರಿಗೆ ಸಿಐಡಿ ನೋಟಿಸ್ ಜಾರಿಗೊಳಿಸಿ ತನಿಖೆಗೆ ಹಾಜರಾಗುವಂತೆ ಸೂಚನೆ ನೀಡಲಾಗಿದೆ ಎಂದು ಮಾಹಿತಿ ಲಭ್ಯವಾಗಿದೆ.

ಇದರಿಂದಾಗಿ ಮೂವರೂ ಮಂಗಳವಾರ ಮಾಳಮಾರುತಿ ಠಾಣೆಯಲ್ಲಿ ಸಿಐಡಿ ಅಧಿಕಾರಿಗಳ ಮುಂದೆ ಹಾಜರಾಗಿ ಅವರಿಂದಲೂ ಮಹತ್ವದ ಮಾಹಿತಿ ಸಂಗ್ರಹಿಸಲಾಗಿದೆ ಎಂದು



ಪೊಲೀಸ್ ಮಾಹಿತಿಯಿಂದ ತಿಳಿದು ಬಂದಿದೆ.

ಪ್ರಕರಣದ ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಹೂಡಿಕೆದಾರರ ಹಣ ಬಳಸಿ ಖರೀದಿಸಲಾಗಿದೆ ಎನ್ನಲಾದ ಐಷಾರಾಮಿ ವಾಹನಗಳನ್ನು ಜಪ್ತಿ ಮಾಡಲಾಗಿದ್ದು, ಕೋಟ್ಯಂತರ ರೂಪಾಯಿ ಮೌಲ್ಯದ ಡಿಫೆಂಡರ್, ಮರ್ಸಿಡಿಸ್ ಬೆಂಝ್ ಹಾಗೂ ವೆಲ್ಫೇರ್ ಕಾರುಗಳನ್ನು ಸಿಬಿಐ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಬಹುಕೋಟಿ ವಂಚನೆ ಪ್ರಕರಣದಲ್ಲಿ ಸಿಐಡಿ ತನಿಖೆ ನಿರ್ಣಾಯಕ ಹಂತ ತಲುಪಿದ್ದು, ಮುಂದಿನ ಬೆಳವಣಿಗೆಗಳತ್ತ ಹೂಡಿಕೆದಾರರು ಹಾಗೂ ಸಾರ್ವಜನಿಕರು ಲಕ್ಷಾಂತರ ರೂ. ಹುಡಿಕೆ ಮಾಡಿರುವುದಕ್ಕೆ ಮರಳಿ ಪಡೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆ ಮಾಹಿತಿಗಳು ಲಭ್ಯವಾಗಿವೆ.

ಆರೋಪಿ ನೀಲಣ್ಣವರಗೆ ವೈದ್ಯಕೀಯ ಪರೀಕ್ಷೆ

ಬೆಳಗಾವಿ: ಬಹುಕೋಟಿ ವಂಚನೆ ಆರೋಪದ ಮೇಲೆ ಸಿಐಡಿ ವಶದಲ್ಲಿರುವ ಶಿವಾನಂದ ನೀಲಣ್ಣನವರ ಅವರನ್ನು ಮಂಗಳವಾರ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ಬಿಐಎಂಎಸ್ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ನಡೆಸಿದ ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ ವೈದ್ಯರ ತಂಡವು ಸಂಪೂರ್ಣ ಆರೋಗ್ಯ ತಪಾಸಣೆ ನಡೆಸಿತು. ಸಿಐಡಿ ಅಧಿಕಾರಿಗಳು ಒದಗಿಸಿದ ಬಿಗಿ ಭದ್ರತೆಯಲ್ಲಿ ನೀಲಣ್ಣನವರ ಅವರನ್ನು ಆಸ್ಪತ್ರೆಗೆ ಕರೆ ತರಲಾಯಿತು. ಅಗತ್ಯವಿರುವ ವೈದ್ಯಕೀಯ ಪರೀಕ್ಷೆಗಳನ್ನು ಪೂರ್ಣಗೊಳಿಸಿದ ನಂತರ, ಅವರನ್ನು ಮತ್ತೆ ಮಾಳಮಾರುತಿ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಸಿಐಡಿ ಅಧಿಕಾರಿಗಳು ನೀಲಣ್ಣನವರ ಅವರನ್ನು ವಿಚಾರಣೆ ನಡೆಸಲಾಗುತ್ತಿದ್ದು, ಹಗರಣ ಮತ್ತು ಅದರ ವ್ಯಾಪಕ ಪರಿಣಾಮಗಳ ಬಗ್ಗೆ ಆಳವಾಗಿ ತನಿಖೆ ನಡೆಸುವ ನಿರೀಕ್ಷೆಯಿದೆ.

ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ಪ್ರಾರ್ಥಿಸಿದ ಬಾಲಿವುಡ್ ನಟ ರಣವೀರ್ ಸಿಂಗ್

ಚಾಮುಂಡೇಶ್ವರಿ ತಾಯೇ ನನ್ನನ್ನು ಕ್ಷಮಿಸು

ಮೈಸೂರು: ಬಾಲಿವುಡ್‌ನ ಖ್ಯಾತನಟ ರಣವೀರ್‌ಸಿಂಗ್ ಕಾಂತಾರ ಚಿತ್ರದ ದೈವಕ್ಕೆ ಅಪಹಾಸ್ಯ ಮಾಡಿದ ತಪ್ಪಿಗೆ ಕ್ಷಮೆಯಾಚಿಸಲು ಮಂಗಳವಾರ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿದರು.



ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು. ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪ ವ್ಯಕ್ತಪಡಿಸಿ, ತನ್ನನ್ನು ಕ್ಷಮಿಸಿ ತಾಯಿ ಎಂದು ಅಂಗಲಾಚಿದರು.

2025ರ ನ.28ರಂದು ಗೋವಾದಲ್ಲಿ ನಡೆದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ್ದ ನಟ ರಣವೀರ್ ಸಿಂಗ್, ಕಾಂತಾರ ಚಲನಚಿತ್ರದಲ್ಲಿ ಚಿತ್ರಿಸಲಾದ ಪವಿತ್ರ ದೈವ (ದೈವಕೋಲ) ಸಂಪ್ರದಾಯವನ್ನು ಬಹಿರಂಗವಾಗಿ ಅಪಹಾಸ್ಯ ಮಾಡಿದ್ದರು. ಲಕ್ಷಾಂತರ ಅನುಯಾಯಿಗಳನ್ನು ಹೊಂದಿರುವ ನಟರೊಬ್ಬರು ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಇಂಥ ವ್ಯಂಗ್ಯ ಪ್ರದರ್ಶಿಸುವ ಮೂಲಕ ಕಾಂತಾರ ಚಲನಚಿತ್ರ ಮಾತ್ರವಲ್ಲದೇ, ತುಳು ಸಂಪ್ರದಾಯದಲ್ಲಿ ಆಳವಾಗಿ ಬೇರೂರಿರುವ ಆಧ್ಯಾತ್ಮಿಕ ನಂಬಿಕೆಗಳನ್ನು ಅಪಹಾಸ್ಯ ಮಾಡಿದ್ದಾರೆ. ಇದು ಸಾರ್ವಜನಿಕ ಶಾಂತಿ ಭಂಗಗೊಳಿಸುವ ಮತ್ತು ಸಮುದಾಯಗಳ ನಡುವೆ ದ್ವೇಷ ಉತ್ತೇಜಿಸಬಹುದು ಎಂದು ಆರೋಪಿಸಿ ದೂರು ನೀಡಲಾಗಿತ್ತು.

ದೂರಿನ ಸಂಬಂಧ ರಣವೀರ್ ಸಿಂಗ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಕಲಂಗಳ ಅಡಿಯಲ್ಲಿ ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಈ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ರಣವೀರ್ ಸಿಂಗ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಬಳಿಕ ಬೇಷರತ್ ಕ್ಷಮೆಯಾಚಿಸಿರುವ ಪ್ರಮಾಣ ಪತ್ರವನ್ನು ಕೋರ್ಟ್‌ಗೆ ಸಲ್ಲಿಸಿದ್ದರು. ಚಾಮುಂಡಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಲಿದ್ದಾರೆ ಎಂದು ರಣವೀರ್ ಪರ ವಕೀಲರು ಹೈಕೋರ್ಟ್‌ಗೆ ತಿಳಿಸಿದ್ದರು. ಒಂದು ತಿಂಗಳಲ್ಲಿ ದೇವಸ್ಥಾನಕ್ಕೆ ಭೇಟಿ ನೀಡಬೇಕೆಂದು ಹೈಕೋರ್ಟ್ ನಿರ್ದೇಶನ ನೀಡಿ, ಅವರ ವಿರುದ್ಧದ ಪ್ರಕರಣ ಇತ್ಯರ್ಥಪಡಿಸಿತ್ತು.

ಈ ಹಿನ್ನೆಲೆಯಲ್ಲಿ ಬೆಳಗ್ಗೆ 7.30 ವೇಳೆಯಲ್ಲಿ ಚಾಮುಂಡಿ ಬೆಟ್ಟಕ್ಕೆ ಆಗಮಿಸಿದ ರಣವೀರ್ ಸಿಂಗ್, ಯಾವುದೇ ಸೆಲೆಬ್ರಿಟಿ ಹಮ್ಮಿಲ್ಲದೆ ತೀರಾ ಸಾಮಾನ್ಯರಂತೆ ದೇವಸ್ಥಾನದಲ್ಲಿ ದೇವಿ ಉತ್ಸವ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿದರು. ತಮ್ಮ ಹಳೆ ಹೇಳಿಕೆಗೆ ದೇವಿಯ ಸನ್ನಿಧಿಯಲ್ಲಿ ಪಶ್ಚಾತ್ತಾಪ ವ್ಯಕ್ತಪಡಿಸಿ, ಕ್ಷಮೆಯಾಚಿಸಿದರು.

ಸಂಪಾದಕೀಯ

ಜನಸಂಖ್ಯಾ ಸಮತೋಲನದತ್ತ ಕೇಂದ್ರ ಸರ್ಕಾರದ ಗಂಭೀರ ಹೆಜ್ಜೆ

ದೇಶದ ಭದ್ರತೆ, ಸಾಮಾಜಿಕ ಸಮತೋಲನ ಮತ್ತು ಭವಿಷ್ಯದ ಆಡಳಿತ ವ್ಯವಸ್ಥೆಯ ದೃಷ್ಟಿಯಿಂದ ಕೇಂದ್ರ ಸರ್ಕಾರ ಕೈಗೊಂಡಿರುವ ಜನಸಂಖ್ಯಾ ಬದಲಾವಣೆ ಕುರಿತ ಉನ್ನತ ಮಟ್ಟದ ಸಮಿತಿ ರಚನೆಯ ನಿರ್ಧಾರವು ಮಹತ್ವದ ಮತ್ತು ದೂರದೃಷ್ಟಿಯ ಹೆಜ್ಜೆಯಾಗಿದೆ. ಅಕ್ರಮ ವಲಸೆ, ಅಸ್ವಾಭಾವಿಕ ಜನಸಂಖ್ಯಾ ಏರಿಳಿತ ಹಾಗೂ ಅದರ ಪರಿಣಾಮಗಳ ಕುರಿತು ಸಮಗ್ರವಾಗಿ ಅಧ್ಯಯನ ನಡೆಸಲು ಸರ್ಕಾರ ಮುಂದಾಗಿರುವುದು ಸಮಸ್ಯೆಯನ್ನು ಕೇವಲ ರಾಜಕೀಯ ದೃಷ್ಟಿಯಿಂದ ಅಲ್ಲ, ರಾಷ್ಟ್ರಹಿತದ ದೃಷ್ಟಿಯಿಂದ ನೋಡುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ಭಾರತದಂತಹ ವಿಶಾಲ ಮತ್ತು ವೈವಿಧ್ಯಮಯ ದೇಶದಲ್ಲಿ ಜನಸಂಖ್ಯೆಯ ರಚನೆಗೆ ಸಂಬಂಧಿಸಿದ ಬದಲಾವಣೆಗಳು ಕೇವಲ ಅಂಕಿಅಂಶಗಳ ವಿಚಾರವಲ್ಲ. ಅವು ಆರ್ಥಿಕ ವ್ಯವಸ್ಥೆ, ಉದ್ಯೋಗ, ಶಿಕ್ಷಣ, ಆರೋಗ್ಯ, ಗಡಿ ಭದ್ರತೆ, ಸ್ಥಳೀಯ ಸಂಸ್ಕೃತಿ ಮತ್ತು ಸಾಮಾಜಿಕ ಸಾಮರಸ್ಯದ ಮೇಲೂ ಪರಿಣಾಮ ಬೀರುತ್ತವೆ. ವಿಶೇಷವಾಗಿ ಗಡಿ ರಾಜ್ಯಗಳಲ್ಲಿ ಅಕ್ರಮ ವಲಸೆ ಹಾಗೂ ಅಸಹಜ ನೆಲೆಸುವಿಕೆಯ ಪ್ರಶ್ನೆಗಳು ದೀರ್ಘಕಾಲದಿಂದಲೇ ಚರ್ಚೆಯ ವಿಷಯವಾಗಿವೆ.



ಈ ಹಿನ್ನೆಲೆಯಲ್ಲಿ ನಿವೃತ್ತ ನ್ಯಾಯಮೂರ್ತಿ ಪ್ರಕಾಶ್ ಪ್ರಭಾಕರ್ ನಾವ್ಲೇಕರ್ ನೇತೃತ್ವದ ಸಮಿತಿಗೆ ತಜ್ಞರು, ಜನಗಣತಿ ಆಯುಕ್ತರು ಹಾಗೂ ಆಡಳಿತ ಮತ್ತು ಭದ್ರತಾ ಕ್ಷೇತ್ರದ ಅನುಭವಿಗಳನ್ನೂ ಸೇರಿಸಿರುವುದು ಸಮಿತಿಯ ಗಂಭೀರತೆಯನ್ನು ತೋರಿಸುತ್ತದೆ.

ಈ ಸಮಿತಿಯ ಪ್ರಮುಖ ಅಂಶವೆಂದರೆ, ಇದು ಕೇವಲ ಸಮಸ್ಯೆ ಗುರುತಿಸುವುದರಲ್ಲಿ ಅಲ್ಲದೇ, ವೈಜ್ಞಾನಿಕ ಮೌಲ್ಯಮಾಪನದ ಆಧಾರದ ಮೇಲೆ ನೀತಿ, ಕಾನೂನು ಹಾಗೂ ಆಡಳಿತಾತ್ಮಕ ಪರಿಹಾರಗಳನ್ನು ಸೂಚಿಸಲಿದೆ. ಗಡಿ ನಿರ್ವಹಣೆ ಬಲಪಡಿಸುವುದು, ಅಕ್ರಮ ವಲಸಿಗರನ್ನು ಗುರುತಿಸುವುದು, ಕೇಂದ್ರ–ರಾಜ್ಯಗಳ ಸಮನ್ವಯ ವೃದ್ಧಿಸುವುದು ಹಾಗೂ ನಿರಂತರ ಮೇಲ್ವಿಚಾರಣಾ ವ್ಯವಸ್ಥೆ ರೂಪಿಸುವಂತಹ ಅಂಶಗಳನ್ನು ಒಳಗೊಂಡಿರುವುದು ಶ್ಲಾಘನೀಯ. ದೇಶದ ಸಾರ್ವಭೌಮತ್ವ ಮತ್ತು ಸಾಮಾಜಿಕ ಸ್ಥಿರತೆ ಎರಡನ್ನೂ ಕಾಯುವ ದೃಷ್ಟಿಯಿಂದ ಇಂತಹ ಚೌಕಟ್ಟು ಅನಿವಾರ್ಯವಾಗಿದೆ.

ಈ ವಿಷಯವನ್ನು ಸಂವೇದನಾಶೀಲವಾಗಿ ಮತ್ತು ಸಮತೋಲನದಿಂದ ನಿರ್ವಹಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ. ಯಾವುದೇ ಸಮುದಾಯದ ವಿರುದ್ಧದ ಪೂರ್ವಾಗ್ರಹ ಅಥವಾ ರಾಜಕೀಯ ಆರೋಪ–ಪ್ರತ್ಯಾರೋಪಗಳ ರೂಪಕ್ಕೆ ಇದು ತಿರುಗಬಾರದು. ಬದಲಿಗೆ, ರಾಷ್ಟ್ರದ ದೀರ್ಘಕಾಲೀನ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಅಂಕಿಅಂಶ, ಕಾನೂನು ಮತ್ತು ವಾಸ್ತವಾಧಾರಿತ ಕ್ರಮಗಳಿಗೆ ಆದ್ಯತೆ ನೀಡಬೇಕು. ಇದೇ ವೇಳೆ, ಕಾನೂನುಬದ್ಧ ವಲಸೆ ಮತ್ತು ಅಕ್ರಮ ನುಸುಳುವಿಕೆಯ ನಡುವಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ನಿರ್ವಹಿಸುವ ಅಗತ್ಯವೂ ಇದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಘೋಷಿಸಿದ್ದ 'ಉನ್ನತಾಧಿಕಾರದ ಜನಸಂಖ್ಯಾ ಮಿಷನ್' ಈಗ ಕಾರ್ಯರೂಪಕ್ಕೆ ಬರುತ್ತಿರುವುದು ಗಮನಾರ್ಹ ಬೆಳವಣಿಗೆ. ದೇಶ ಎದುರಿಸುತ್ತಿರುವ ಭವಿಷ್ಯದ ಸವಾಲುಗಳನ್ನು ಮುಂಚಿತವಾಗಿ ಅಂದಾಜಿಸಿ, ಅವುಗಳಿಗೆ ಸೂಕ್ತ ನೀತಿ ರೂಪಿಸಲು ಕೇಂದ್ರ ಸರ್ಕಾರ ಮುಂದಾಗಿರುವುದು ಆಡಳಿತದ ಜವಾಬ್ದಾರಿತನವನ್ನು ಪ್ರತಿಬಿಂಬಿಸುತ್ತದೆ. ಸಮಿತಿಯ ಶಿಫಾರಸುಗಳು ಸಮತೋಲಿತ, ಪಾರದರ್ಶಕ ಹಾಗೂ ರಾಷ್ಟ್ರ ಹಿತದ ಪರವಾಗಿದ್ದರೆ, ಭಾರತದಲ್ಲಿ ದೀರ್ಘಕಾಲಿಕ ಜನಸಂಖ್ಯಾ ನಿರ್ವಹಣೆಗೆ ಇದು ಹೊಸ ದಿಕ್ಕು ತೋರಬಲ್ಲದು.

ದುಃಖಮಯ ಆನಂದಮಯ

ಅಜ್ಞಸ್ಯ ದುಃಖೌಘಮಯಂ ಜ್ಞಸ್ಯಾನಂದಮಯಂ ಜಗತ್ ।
ಅಂಧಂ ಭುವನಮಂಧಸ್ಯ ಪ್ರಕಾಶಂ ತು ಸುಚಕ್ಷುಷಃ ॥

ಅಜ್ಞಾನಿಗೆ ಜಗತ್ತು ದುಃಖಮಯ. ಜ್ಞಾನಿಗೆ ಅದು ಆನಂದಮಯ. ಕುರುಡನಿಗೆ ಜಗತ್ತು ಕುರುಡು. ಕಣ್ಣುಳ್ಳವನಿಗೆ ಅದು ಪ್ರಕಾಶಮಯ – ಎಂಬುದು ಶ್ಲೋಕಾರ್ಥ.

'ಯಥಾದೃಷ್ಟಿಃತಥಾಸೃಷ್ಟಿ'ಎಂಬಸೂಕ್ತಿಯಿದೆ.ನಮ್ಮನೋಟಕ್ಕನುಗುಣವಾಗಿಲೋಕವು ಒದಗಿ ಬರುತ್ತದೆ ಎಂದರ್ಥ. ದೃಷ್ಟಿ ಬದಲಾದರೆ ಸೃಷ್ಟಿಯೂ ಬದಲಾಗುತ್ತದೆ.

ನಮ್ಮೆದುರು ಭಗವಂತನು ಸೃಷ್ಟಿಸಿದ ಸುಂದರವಾದ ಜಗತ್ತಿದೆ. ಇಲ್ಲಿ ಚಿತ್ರ-ವಿಚಿತ್ರಗಳಿವೆ. ಕಣ್ಣಿಗೆ ಹಬ್ಬವನ್ನುಂಟು ಮಾಡುವ ಸನ್ನಿವೇಶಗಳಿವೆ. ಬೇಸರ ತರಿಸುವ ಸಂಗತಿಯೂ ಇದೆ. ಬದುಕಿಗೆ ಬೇಕಾದ ಪ್ರೇರಣೆ ಪ್ರಕೃತಿಯಲ್ಲಿದೆ. ಬದುಕನ್ನು ಸಮೃದ್ಧಗೊಳಿಸುವ ಸಂದೇಶಗಳು ಇವೆ. ಇನ್ನು ಕೆಲವರಿಗೆ ಇವೆಲ್ಲವೂ ನೀರಸವೆನಿಸಬಹುದು. ದುಃಖಮಯ ಅನ್ನಿಸಬಹುದು. ಒಟ್ಟಿನಲ್ಲಿ ನಮ್ಮ ದೃಷ್ಟಿ, ನಾವು ಪಡೆದ ಸಂಸ್ಕಾರ ಇವುಗಳ ಆಧಾರದ ಮೇಲೆ ನಮಗೆ ಪೂರಕವಾಗಿಯೂ, ವಿರುದ್ಧವಾಗಿಯೂ ಒದಗಿ ಬರುತ್ತದೆ.



ಸಂಪನ್ನವಾದ ಜಗತ್ತು ಅಜ್ಞಾನಿಗೆ ದುಃಖಮಯವೆಂದು ತೋರಬಹುದು. ನೀರಸವೆಂದು ಕಾಣಬಹುದು. ಇದಕ್ಕೆಲ್ಲ ಕಾರಣ ಅವನಿಗಿರುವ ಅಜ್ಞಾನ. ಅಜ್ಞಾನಿಗೆ ಒಳಿತು– ಕೆಡುಕುಗಳನ್ನು ಗುರುತಿಸುವ ಸಾಮರ್ಥ್ಯ ಕಡಿಮೆ. ಆದ್ದರಿಂದ ಜಗತ್ತೇ ಅವನಿಗೆ ದುಃಖಮಯವಾಗಿ ತೋರುತ್ತದೆ. ಇದಕ್ಕೆ ಕಾರಣ ಒಳ್ಳೆಯದನ್ನು ಕಂಡುಕೊಳ್ಳುವ ಜ್ಞಾನವಿಲ್ಲದಿರುವುದು. ಆದ್ದರಿಂದ ಎಲ್ಲವೂ ದುಃಖಮಯ ಎಂದೆನಿಸಿದರೆ ಆಕ್ಷೇಪಿಸುವಂತಿಲ್ಲ. ಅವನ ಅಲ್ಪ ತಿಳುವಳಿಕೆಯ ಹಿನ್ನೆಲೆಯಲ್ಲಿ ಹಾಗೆ ತೋರುತ್ತದೆ.

ಎಲ್ಲರಿಗೂ ಇದು ಅನ್ವಯವಾಗುವುದಿಲ್ಲ. ಜ್ಞಾನಿಯಾದವನಿಗೆ ಈ ಜಗತ್ತು ಆನಂದಮಯವಾಗಿ ತೋರುತ್ತದೆ. ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತುವನ್ನು ನೋಡಿ ಧನಾತ್ಮಕವಾಗಿ ಚಿಂತಿಸಿ ಅವುಗಳಲ್ಲಿರುವ ವಿಶೇಷತೆಯನ್ನು ಗುರುತಿಸಿ ಆನಂದವನ್ನು ಕಂಡುಕೊಳ್ಳುತ್ತಾನೆ. ಪಂಚಮದ ಇಂಚರದಲ್ಲಿ ಹಾಡುವ ಕೋಗಿಲೆ, ಮೋಡವನ್ನು ನೋಡಿ ನಲಿಯುವ ನವಿಲು ಇವೆಲ್ಲವೂ ಈ ಬಗೆಯ ವಿಶೇಷತೆಯನ್ನು ಯಾವ ಶಾಲೆಗೆ ಹೋಗಿಯೂ, ಗ್ರಂಥಗಳನ್ನು ಓದಿಯೋ ಇನ್ನೊಬ್ಬರ ಉಪದೇಶವನ್ನು ಕೇಳಿಯೋ ಕಲಿತುಕೊಂಡಿಲ್ಲ. ಪ್ರಕೃತಿಯ ಒಡಲೊಳಗಿದ್ದು ಕಲಿತುಕೊಂಡಿವೆ. ಇವುಗಳನ್ನು ನೋಡಿದ ಜ್ಞಾನಿಗೆ ಆನಂದವಾಗುವುದು ಸಹಜ. ವೈವಿಧ್ಯವನ್ನು ನೋಡಿ ಅದನ್ನು ಮಾಡಿದ ಭಗವಂತನ ವಿಶೇಷ ಸಾಮರ್ಥ್ಯವನ್ನು ನೆನೆದು ಆನಂದವನ್ನು ಅನುಭವಿಸುತ್ತಾನೆ. ಅಂಧ ಎಂದರೆ ಕುರುಡ. ಕಣ್ಣಿಲ್ಲದ ಅವನಿಗೆ ಎಲ್ಲವೂ ಕತ್ತಲೆಯಾಗಿ, ಕಪ್ಪಾಗಿ ತೋರುತ್ತದೆ. ಅವನ ಪಾಲಿಗೆ ಜಗತ್ತೇ ಕತ್ತಲೆ. ಜೀವನದಲ್ಲಿ ಬೆಳಕನ್ನೇ ಕಾಣದ ಅವನಿಗೆ ಎಲ್ಲವೂ ಕತ್ತಲೆಯೆನಿಸಿದರೆ ಆಶ್ಚರ್ಯವಿಲ್ಲ. ಜಗತ್ತೇ ಕತ್ತಲೆಯ ಕೂಪ ಎಂದೆನಿಸುವುದರಲ್ಲಿ ವಿಶೇಷತೆಯಿಲ್ಲ. ಇದಕ್ಕೆ ಬದಲಾಗಿ ಕಣ್ಣಿದ್ದವನಿಗೆ ಜಗತ್ತು ಪ್ರಕಾಶಮಯವಾಗಿ ತೋರುತ್ತದೆ. ಎಲ್ಲದರಲ್ಲಿಯೂ ಒಂದೊಂದು ಬಗೆಯ ಆಶ್ಚರ್ಯದ ಅಂಶವನ್ನು ಗುರುತಿಸಿ, ಸುಖಿಸುತ್ತಾನೆ. ಜನರು ಅವರು ಪಡೆದ ಸಂಸ್ಕಾರ, ಅವರಿಗಿರುವ ಅನುಕೂಲ ವ್ಯವಸ್ಥೆ ಜ್ಞಾನದ ಹಿನ್ನೆಲೆಯಲ್ಲಿ ಜಗತ್ತನ್ನು ನೋಡುತ್ತಾರೆ. ಜಗತ್ತಿನ ಕುರಿತು ವ್ಯಾಖ್ಯಾನಿಸುತ್ತಾರೆ ಇದು ಲೋಕ ಸ್ವಭಾವ.

ಭಾರತದ ಅಭಿವೃದ್ಧಿಯ ಪಯಣ

ಸಿ. ಪಿ. ರಾಧಾಕೃಷ್ಣನ್



ನಾನು ಬಾಲ್ಯದಲ್ಲಿ ತಿರುಪ್ಪೂರಿನ ಶಾಲೆಯೊಂದರಲ್ಲಿ ಕಲಿಯುತ್ತಿದ್ದಾಗ, ನಮ್ಮ ದೇಶದ ಬಗ್ಗೆ ಅನೇಕ ಕನಸುಗಳನ್ನು ಹೊಂದಿದ್ದೆ. ನನ್ನೊಳಗೆ ನಿರಂತರವಾಗಿ ಪ್ರಶ್ನೆಗಳು ಮೂಡುತ್ತಿದ್ದವು: ಭಾರತವು ತನ್ನ ಹಿರಿಮೆಯನ್ನು ಯಾವಾಗ ಮರಳಿ ಪಡೆಯುತ್ತದೆ? ಜಾಗತಿಕ ಮಟ್ಟದಲ್ಲಿ ಅದು ಯಾವಾಗ ಒಂದು ಶಕ್ತಿಯುತ ರಾಷ್ಟ್ರವಾಗಿ ಉದಯಿಸುತ್ತದೆ? ನಮ್ಮ ಬಡ ಮತ್ತು ವಂಚಿತ ಸಹೋದರ, ಸಹೋದರಿಯರಿಗೆ ಗೌರವಾನ್ವಿತ ಜೀವನ ಯಾವಾಗ ಸಿಗುತ್ತದೆ? ನನ್ನ ಹದಿಹರೆಯದ ದಿನಗಳಲ್ಲಿ ನನಗಿದ್ದ ಆಲೋಚನೆಗಳು ಇಂದು ನನಸಾಗುತ್ತಿರುವುದನ್ನು ಕಂಡು ನನಗೆ ಸಂತೋಷವಾಗುತ್ತಿದೆ.

ನಾನು ಆಗಾಗ್ಗೆ ಸ್ವಾಮಿ ವಿವೇಕಾನಂದರ "ಏಳಿ, ಎದ್ದೇಳಿ ಮತ್ತು ಗುರಿ ಮುಟ್ಟುವ ತನಕ ನಿಲ್ಲದಿರಿ" ಮಾತುಗಳನ್ನು ನೆನಪಿಸಿಕೊಳ್ಳುತ್ತೇನೆ. ತಮಿಳುನಾಡಿನ ಮಣ್ಣಿನಿಂದ ಸ್ವಾಮೀಜಿಯವರು ಘೋಷಿಸಿದ ಈ ಮಾತುಗಳು, ಪ್ರತಿಯೊಬ್ಬ ವ್ಯಕ್ತಿಯಲ್ಲೂ ದೇಶಭಕ್ತಿ ಮತ್ತು ಬದ್ಧತೆಯನ್ನು ಜಾಗೃತಗೊಳಿಸುವ ಅಪಾರ ಶಕ್ತಿಯನ್ನು ಹೊಂದಿವೆ.

ಭಾರತದ ಸಂಪೂರ್ಣ ಸಾಮರ್ಥ್ಯ ಅನಾವರಣಗೊಂಡಾಗ, ಅದು ಇಡೀ ಜಗತ್ತಿಗೆ ಮಾರ್ಗದರ್ಶನ ನೀಡುವ ಸಾಮರ್ಥ್ಯವಿರುವ ರಾಷ್ಟ್ರವಾಗಿ ಹೊರಹೊಮ್ಮುತ್ತದೆ ಎಂದು ನಾನು ಯಾವಾಗಲೂ ನಂಬಿದ್ದೆ. ಕಳೆದ ಒಂದು ದಶಕದಲ್ಲಿ, ನಮ್ಮ ದೇಶವು ಅತ್ಯಂತ ಉತ್ಸಾಹ ಮತ್ತು ದೃಢಸಂಕಲ್ಪದೊಂದಿಗೆ ಕಾರ್ಯನಿರ್ವಹಿಸುತ್ತಿರುವುದನ್ನು ಕಂಡು ನನಗೆ ಸಂತೋಷವಾಗಿದೆ.



ಜಾಗತಿಕವಾಗಿ ಆರ್ಥಿಕ ಮಂದಗತಿ ಮತ್ತು ಅನಿಶ್ಚಿತತೆಗಳ ಈ ಸಮಯದಲ್ಲಿ, ಭಾರತದ ಆರ್ಥಿಕತೆಯು ಬಲವಾಗಿ ಮತ್ತು ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಪ್ರಗತಿಗೆ ಸರ್ಕಾರ ಮತ್ತು ಸಾರ್ವಜನಿಕರು ಈ ಅವಧಿಯನ್ನು ನಿರಂತರ ಅಭಿವೃದ್ಧಿಯ ಯುಗವನ್ನಾಗಿ ಮಾಡಲು ತೋರುತ್ತಿರುವ ಉತ್ಸಾಹವೇ ಕಾರಣವಾಗಿದೆ. ದುರ್ಬಲ ಆರ್ಥಿಕತೆಯ ಸ್ಥಿತಿಯಿಂದ ಇಂದು ನಮ್ಮ ದೇಶವು ವಿಶ್ವದ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ ಮತ್ತು ಶೀಘ್ರದಲ್ಲೇ ವಿಶ್ವದ 3ನೇ ಅತಿ ದೊಡ್ಡ ಆರ್ಥಿಕತೆಯಾಗುವ ಹಾದಿಯಲ್ಲಿದೆ. ಇದಕ್ಕಿಂತಲೂ ಅತ್ಯಂತ ಮಹತ್ವದ ವಿಷಯವೆಂದರೆ, ನಮ್ಮ ಆರ್ಥಿಕ ಅಭಿವೃದ್ಧಿಯು ಒಳಗೊಳ್ಳುವಿಕೆಯಿಂದ ಕೂಡಿದೆ.

ಹಳ್ಳಿಗಾಡಿನ ಜನರ ಅನುಕೂಲಕ್ಕಾಗಿ ಇಂದು ದೇಶವು ಪ್ರತಿಯೊಬ್ಬರಿಗೂ ಆರೋಗ್ಯ ಸೌಲಭ್ಯಗಳು ಲಭ್ಯವಾಗುವಂತೆ ಮಾಡುವ ಬದ್ಧತೆಯೊಂದಿಗೆ ಆಯುಷ್ಮಾನ್ ಭಾರತ್ ಯೋಜನೆಯನ್ನು ಜಾರಿಗೊಳಿಸುತ್ತಿದೆ. ಇದರ ಪರಿಣಾಮವಾಗಿ, 44 ಕೋಟಿಗೂ ಹೆಚ್ಚು ಜನರು ಈಗ ಪ್ರಧಾನಮಂತ್ರಿ–ಆಯುಷ್ಮಾನ್ ಭಾರತ್ ಯೋಜನೆ ಅಡಿಯಲ್ಲಿ 5 ಲಕ್ಷ ರೂಪಾಯಿಗಳ ವಿಮಾ ರಕ್ಷಣೆಯನ್ನು ಹೊಂದಿದ್ದಾರೆ. ಕಳೆದ ವರ್ಷವೊಂದರಲ್ಲೇ ಈ ಯೋಜನೆಯಡಿ 2.5 ಕೋಟಿ ಜನರು ಉಚಿತ ವೈದ್ಯಕೀಯ ಚಿಕಿತ್ಸೆ ಪಡೆದಿದ್ದಾರೆ.

ನಮ್ಮ ರೈತರು ತಮ್ಮ ಕಠಿಣ ಪರಿಶ್ರಮದ ಮೂಲಕ 350 ಮಿಲಿಯನ್ ಟನ್ ಆಹಾರ ಧಾನ್ಯಗಳನ್ನು ಉತ್ಪಾದಿಸಿದ್ದು, ಭಾರತವನ್ನು ವಿಶ್ವದ ಎರಡನೇ ಅತಿ ದೊಡ್ಡ ಆಹಾರ ಉತ್ಪಾದಕ ರಾಷ್ಟ್ರದ ಸ್ಥಾನಕ್ಕೆ ಏರಿಸಿದ್ದಾರೆ. ಪಿಎಂ ಕಿಸಾನ್ ಸಮ್ಮಾನ್ ನಿಧಿ ಅಡಿಯಲ್ಲಿ, ಇದುವರೆಗೆ 4 ಲಕ್ಷ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ.

ನಮ್ಮ ನಾರಿ ಶಕ್ತಿಯು ದೇಶದ ಅಭಿವೃದ್ಧಿಗೆ ಸಂಪೂರ್ಣ ಕೊಡುಗೆ ನೀಡಲು ಈಗ ಅವಕಾಶಗಳು ಮುಕ್ತವಾಗಿವೆ. 3 ಕೋಟಿಗೂ ಹೆಚ್ಚು ಮಹಿಳೆಯರು ಲಕ್ಷಾಧಿಪತಿ ದೀದಿಯರು ಮತ್ತು ನಮೋ ಡ್ರೋನ್ ದೀದಿಯರು ಆಗಿದ್ದಾರೆ. ಮಹಿಳೆಯರು ಈಗ ಸಶಸ್ತ್ರ ಪಡೆಗಳಲ್ಲಿ ಕಾಯಂ ಹುದ್ದೆ ಪಡೆಯುತ್ತಿದ್ದಾರೆ ಮತ್ತು ಯುದ್ಧದ ಪಾತ್ರಗಳಲ್ಲೂ ಭಾಗವಹಿಸುತ್ತಿದ್ದಾರೆ. ನಾರಿ ಶಕ್ತಿ ವಂದನ ಅಧಿನಿಯಮವು ಸಂಸತ್ತು ಮತ್ತು ರಾಜ್ಯ ಶಾಸನಸಭೆಗಳಲ್ಲಿ ಅವರ ಭಾಗವಹಿಸುವಿಕೆಯನ್ನು ಮತ್ತಷ್ಟು ಹೆಚ್ಚಿಸಲಿದೆ.

ಮಹಿಳೆಯರ ದೈನಂದಿನ ಜೀವನವನ್ನು ಸುಲಭಗೊಳಿಸಲು ಮತ್ತು ಅವರ ಆರೋಗ್ಯದ ಮೇಲಿನ ಕಾಳಜಿಯಿಂದಾಗಿ, ದೇಶಾದ್ಯಂತ ಸುಮಾರು 2 ಕೋಟಿ ಹೊಸ ಎಲ್‌ಪಿಜಿ ಅನಿಲ ಸಂಪರ್ಕಗಳನ್ನು ಒದಗಿಸಲಾಗಿದೆ.

ಯುವಜನರಿಗಾಗಿ, ಕಳೆದ ಹತ್ತು ವರ್ಷಗಳಲ್ಲಿಯೇ 13 ಹೊಸ ಐಐಟಿಗಳನ್ನು ಸ್ಥಾಪಿಸಲಾಗಿದ್ದು, ಒಟ್ಟು ಐಐಟಿಗಳ ಸಂಖ್ಯೆ 23ಕ್ಕೆ ಏರಿದೆ. ಐಐಎಂಗಳ ಸಂಖ್ಯೆಯೂ 13 ರಿಂದ 21 ಕ್ಕೆ ಹೆಚ್ಚಾಗಿದೆ. ಏಮ್ಸ್ ಸಂಖ್ಯೆಯು 7 ರಿಂದ 23 ಕ್ಕೆ ಅಂದರೆ ಮೂರು ಪಟ್ಟು ಹೆಚ್ಚಾಗಿದೆ ಮತ್ತು ವೈದ್ಯಕೀಯ ಕಾಲೇಜುಗಳ ಸಂಖ್ಯೆ 387 ರಿಂದ 823 ಕ್ಕೆ ದುಪ್ಪಟ್ಟಾಗಿವೆ. ವೈದ್ಯಕೀಯ ಸೀಟುಗಳ ಸಂಖ್ಯೆ 51,348 ರಿಂದ 1,29,603 ಕ್ಕೆ ಹೆಚ್ಚಿರುವುದು ಹೆಮ್ಮೆಯ ವಿಷಯವಾಗಿದೆ.

ನಾವು ಮೂಲಸೌಕರ್ಯ ಸೌಲಭ್ಯಗಳಲ್ಲಿ ವಿಶ್ವದರ್ಜೆಯ ಮಾನದಂಡಗಳತ್ತ ಮುನ್ನಡೆಯುತ್ತಿದ್ದೇವೆ. ರೈಲ್ವೆಯನ್ನು ಸುಮಾರು ಶೇ. 99 ರಷ್ಟು ವಿದ್ಯುದ್ದೀಕರಿಸಲಾಗಿದೆ. ದೇಶಾದ್ಯಂತ, 164 ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ಹೊಸ ಯುಗಕ್ಕೆ ನಾಂದಿ ಹಾಡಿವೆ. ವಿಮಾನ ನಿಲ್ದಾಣಗಳ ಸಂಖ್ಯೆಯೂ 74 ರಿಂದ 163 ಕ್ಕೆ ದ್ವಿಗುಣಗೊಂಡಿದೆ ಮತ್ತು ಉಡಾನ್ ಅಡಿಯಲ್ಲಿ ಸಾಮಾನ್ಯ ಜನರಿಗೂ ವಿಮಾನ ಪ್ರಯಾಣವು ಕೈಗೆಟುಕುವಂತಾಗಿದೆ.

ಒಂದು ದಶಕದ ಹಿಂದೆ ತಮಿಳುನಾಡಿಗೆ ಸುಮಾರು 880 ಕೋಟಿ ರೂ.ನಷ್ಟಿದ್ದ ರೈಲ್ವೆ ಬಜೆಟ್ ಹಂಚಿಕೆಯು 2026–27ರಲ್ಲಿ 7,600 ಕೋಟಿ ರೂ.ಗೆ ಹೆಚ್ಚಾಗಿದೆ. ತಮಿಳುನಾಡಿನಲ್ಲಿ, ರಾಮೇಶ್ವರಂ ಮತ್ತು ಪಂಬನ್ ನಡುವೆ ಹೊಸ ಪಂಬನ್ ಸೇತುವೆಯನ್ನು ನಿರ್ಮಿಸಿರುವುದು ಸಂತೋಷದ ವಿಷಯವಾಗಿದ್ದು, ಇದು ಭಾರತದ ಮೊದಲ ವರ್ಟಿಕಲ್ ಲಿಫ್ಟ್ (ಲಂಬವಾಗಿ ಮೇಲಕ್ಕೇರುವ) ಸೇತುವೆಯಾಗಿದೆ, ಇದು ಆಧ್ಯಾತ್ಮಿಕ ಪ್ರವಾಸೋದ್ಯಮ ಮತ್ತು ಆರ್ಥಿಕ ಅಭಿವೃದ್ಧಿಗೆ ಉತ್ತಮ ಅವಕಾಶವಾಗಿ ಕಾರ್ಯನಿರ್ವಹಿಸುತ್ತದೆ. ಜಮ್ಮು–ಕಾಶ್ಮೀರದ ಚೆನಾಬ್ ಸೇತುವೆ ಇರಲಿ ಅಥವಾ ಅಸ್ಸಾಂನ ಬೋಗಿಬೀಲ್ ಸೇತುವೆ ಇರಲಿ, ಭಾರತವು ಇಂದು ಹೊಸ ಯುಗದ ಮೂಲಸೌಕರ್ಯಗಳಲ್ಲಿ ಅದ್ಭುತಗಳನ್ನು ಸೃಷ್ಟಿಸುತ್ತಿದೆ.

ಅಭಿವೃದ್ಧಿಯು ಕೇವಲ ಸಾಮಾಜಿಕ ಗುಂಪುಗಳನ್ನು ಮಾತ್ರವಲ್ಲದೆ, ಎಲ್ಲಾ ಪ್ರದೇಶಗಳನ್ನೂ ಒಳಗೊಳ್ಳಬೇಕು ಎಂದು ನಾನು ಯಾವಾಗಲೂ ನಂಬಿದ್ದೇನೆ. ಒಂದು ಕಾಲದಲ್ಲಿ ಭಾರತದ ಕೊನೆಯ ಹಳ್ಳಿಗಳೆಂದು ಪರಿಗಣಿಸಲ್ಪಟ್ಟಿದ್ದ ಗಡಿ ಗ್ರಾಮಗಳು, ಈಗ ಮೊದಲ ಗ್ರಾಮಗಳಾಗಿವೆ ಮತ್ತು ವೈಬ್ರಂಟ್ ವಿಲೇಜಸ್ ಯೋಜನೆಯ ಮೂಲಕ ಅವುಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಚಂದ್ರಯಾನ 3 ರ ಯಶಸ್ವಿ ಉಡಾವಣೆಯು ಭಾರತವನ್ನು ಸುಧಾರಿತ ಬಾಹ್ಯಾಕಾಶಪರಿಶೋಧನೆಯ ಯುಗಕ್ಕೆ ಕೊಂಡೊಯ್ದಿದೆ. ಕೃತಕಬುದ್ಧಿಮತ್ತೆ ಕ್ಷೇತ್ರದಲ್ಲಿ, ಜಾಗತಿಕ ಕಂಪನಿಗಳು ಭಾರತವನ್ನು ತಮ್ಮ ಕೇಂದ್ರವನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಿವೆ, ಇದರ ಪರಿಣಾಮವಾಗಿ ಹೂಡಿಕೆಗಳು ಹಲವು ಪಟ್ಟು ಹೆಚ್ಚಾಗುತ್ತಿವೆ. ಸೆಮಿಕಂಡಕ್ಟರ್ ತಯಾರಿಕೆಯಲ್ಲಿ ಭಾರತವು ಈಗ ಜಗತ್ತಿಗೆ ಮಾದರಿಯಾಗಿ ಹೊರಹೊಮ್ಮುತ್ತಿದೆ.

ಮೊಬೈಲ್ ಫೋನ್ ತಯಾರಿಕೆಯಲ್ಲಿ ನಾವು ಜಾಗತಿಕವಾಗಿ ಎರಡನೇ ಸ್ಥಾನವನ್ನು ಪಡೆದುಕೊಂಡಿದ್ದೇವೆ. ಒಂದು ಕಾಲದಲ್ಲಿ ಮೊಬೈಲ್ ಫೋನ್‌ಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ನಾವು, ಇಂದು 300 ಕೋಟಿ ಯುಎಸ್ ಡಾಲರ್ ಮೌಲ್ಯದ ಮೊಬೈಲ್ ಫೋನ್‌ಗಳನ್ನು ರಫ್ತು ಮಾಡುವ ದೇಶವಾಗಿ ಬೆಳೆದಿದ್ದೇವೆ.

2047ರ ವೇಳೆಗೆ, ಅಂದರೆ ಸ್ವಾತಂತ್ರ್ಯದ ಶತಮಾನೋತ್ಸವದೊಳಗೆ, ಭಾರತವು ಜಾಗತಿಕವಾಗಿ ಮುಂಚೂಣಿಯಲ್ಲಿರುವ ಮಹಾಶಕ್ತಿಯಾಗಬೇಕು ಮತ್ತು ಜಗತ್ತಿಗೆ ಮಾರ್ಗದರ್ಶನ ನೀಡುವ ಸ್ಥಾನವನ್ನು ತಲುಪಬೇಕು ಎಂಬ ಗುರಿಯನ್ನು ನಾವು ಹೊಂದಿದ್ದೇವೆ. ಈ ಕಠಿಣ ಪರಿಶ್ರಮದ ಅವಧಿಯೇ 'ಅಮೃತ ಕಾಲ'. ಸ್ವಾತಂತ್ರ್ಯದ ಹಂಬಲವು ಪ್ರತಿಯೊಬ್ಬ ಸ್ವಾತಂತ್ರ್ಯ ಹೋರಾಟಗಾರನ ಹೃದಯದಲ್ಲಿ ಹೇಗೆ ಇತ್ತೋ, ಹಾಗೆ ದೇಶದ ಅಭಿವೃದ್ಧಿಯ ಆಲೋಚನೆಯು ಇಂದಿನ ಯುವಜನರ ಮನಸ್ಸಿನಲ್ಲಿ ಬೆಳೆಯಬೇಕು. ಈ ಅಮೃತ ಕಾಲದಲ್ಲಿ, ಇಂದಿನ ಯುವ ಪೀಳಿಗೆಯ ಆಲೋಚನೆಗಳು ಮತ್ತು ಪ್ರಯತ್ನಗಳು ದೇಶಭಕ್ತಿಯಿಂದ ಮೇಳೈಸಬೇಕು; ಅವರು ಶ್ರೇಷ್ಠ ಆದರ್ಶ ಹಾಗೂ ಸಚ್ಚಾರಿತ್ರ್ಯವುಳ್ಳವರಾಗಿ ಹೊರಹೊಮ್ಮಬೇಕು. ಆಗ ಮಾತ್ರ ನಾವು 2047 ರಲ್ಲಿ 'ವಿಕಸಿತ ಭಾರತ'ವನ್ನು ಕಾಣಲು ಸಾಧ್ಯವಾಗುತ್ತದೆ.

"ನನ್ನ ಸಹೋದರರೇ, ನಾವೆಲ್ಲರೂ ಕಷ್ಟಪಟ್ಟು ಕೆಲಸ ಮಾಡೋಣ. ಇದು ಮಲಗುವ ಸಮಯವಲ್ಲ. ಭಾರತದ ಭವಿಷ್ಯವು ನಮ್ಮ ಪ್ರಯತ್ನಗಳ ಮೇಲೆ ಅವಲಂಬಿತವಾಗಿದೆ" ಎಂಬ ಸ್ವಾಮಿ ವಿವೇಕಾನಂದರ ಮಾತುಗಳು ನಮಗೆ ಪ್ರೇರಣೆ ಮತ್ತು ನಿರ್ದೇಶನ ಎರಡನ್ನೂ ನೀಡುತ್ತವೆ. ನಮ್ಮ ಕಠಿಣ ಪರಿಶ್ರಮದ ಮೂಲಕ ವಿಕಸಿತ ಭಾರತವನ್ನು ನಿರ್ಮಿಸಲು ನಾವೆಲ್ಲರೂ ಜೊತೆಯಾಗಿ ಶ್ರಮಿಸೋಣ.

(ಲೇಖಕರು, ಭಾರತದ ಉಪರಾಷ್ಟ್ರಪತಿ)

ಅಂತ್ಯೇಷ್ಟಿಯ ಕ್ರಿಯಾಕಲಾಪಗಳು ಮತ್ತು ಅವುಗಳ ಉದ್ದೇಶ

ಮರಣೋನ್ಮುಖನಾದ ಜೀವನ ಕಿವಿಯಲ್ಲಿ ಕರ್ಣಸೂಕ್ತವನ್ನು ಜಪಿಸುವುದರ ಹಿಂದೆ ಆತನ ಮನಸ್ಸಿನಲ್ಲಿ ಒಳ್ಳೆಯ ವೃತ್ತಿಗಳು ಉಂಟಾಗಬೇಕೆಂಬ ಉದ್ದೇಶವಿದೆ.



ಜೀವನು ಪ್ರಕೃತಶರೀರವನ್ನು ಬಿಟ್ಟು ಹೊರಟ ಮೇಲೆ ದೇಹವನ್ನು ಶವವೆಂದು ಕರೆಯಲಾಗುತ್ತದೆ. ದೀರ್ಘಕಾಲದವರೆಗೆ ಭೋಗ, ಧರ್ಮಾಚರಣೆ ಮತ್ತು ಅಧ್ಯಾತ್ಮಸಾಧನೆಗೆ ಆಶ್ರಯವಾದ ಸ್ಥೂಲದೇಹಕ್ಕೆ ಮತ್ತು ಮರಣ ಹೊಂದಿದ ಜೀವನ ಮುಂದಿನ ಪ್ರಯಾಣಕ್ಕೆ ಸಹಕಾರಿಯಾಗಿ ಮಾಡಲಾಗುವ ಸಂಸ್ಕಾರಕ್ಕೆ ಅಂತ್ಯಸಂಸ್ಕಾರವೆಂದು ಕರೆಯಲಾಗುತ್ತದೆ. ಈ ಸಂದರ್ಭದಲ್ಲಿ ಮಾಡಲಾಗುವ ಶವದಹನವನ್ನು ಒಂದು ಯಜ್ಞವನ್ನಾಗಿಯೇ ಪರಿಗಣಿಸಲಾಗಿದೆ. ಹಾಗಾಗಿಯೇ ಇದನ್ನು ಅಂತ್ಯೇಷ್ಟಿ ಎಂದು ಕರೆಯಲಾಗುತ್ತದೆ. ಇದರಲ್ಲಿ ಯಮನೆಂಬ ದೇವತೆಯನ್ನುದ್ದೇಶಿಸಿ, ಮೃತನ ಶರೀರವನ್ನೇ ಆಹುತಿಯನ್ನಾಗಿ ಸಮರ್ಪಿಸಲಾಗುತ್ತದೆ. ಹಾಗಾಗಿಯೇ ಸಂಕಲ್ಪದಲ್ಲಿ 'ಯಮೋ ದೇವತಾ, ಶವಃ ಹವಿಃ' ಎಂಬುದಾಗಿ ಉಚ್ಚರಿಸಲಾಗುತ್ತದೆ.

ವ್ಯಕ್ತಿಯೊಬ್ಬ ಮರಣವನ್ನು ಹೊಂದುವ ಸಮಯದಲ್ಲಿ ಆತನ ದೊಡ್ಡ ಉಸಿರು ಹೊರಡುವ ಸಂದರ್ಭದಲ್ಲಿ ಕರ್ಣಸೂಕ್ತವನ್ನು ಪಠಿಸಬೇಕು. ಊರ್ಧ್ವಶ್ವಾಸೀ ಎಂಬುದಾಗಿ ಉಪನಿಷತ್ತು ಆತನನ್ನು ಕರೆಯುತ್ತದೆ. ಮರಣಹೊಂದುವ ಸಮಯದಲ್ಲಿ ವಾಕ್ಕು ಮನಸ್ಸಿನಲ್ಲಿ ತನ್ನ ವ್ಯಾಪಾರಗಳನ್ನು ಲಯಗೊಳಿಸುತ್ತದೆ. ಮನಸ್ಸು ಪ್ರಾಣದಲ್ಲಿಯೂ, ಪ್ರಾಣವು ತೇಜಸ್ಸಿನಲ್ಲಿಯೂ, ತೇಜಸ್ಸು ಪರದೇವತೆಯಲ್ಲಿಯೂ ಲೀನವಾಗಿ ಜೀವನು ಮುಂದಿನ ಶರೀರಾರಂಭಕ್ಕೆ ಬೇಕಾದ ಎಲ್ಲ ಸಾಮಗ್ರಿಗಳೊಂದಿಗೆ ಈ ಶರೀರವನ್ನು ತ್ಯಜಿಸುತ್ತಾನೆ ಎಂಬುದನ್ನು ನಾವು ಈ ಹಿಂದೆ ತಿಳಿದುಕೊಂಡಿದ್ದೇವೆ. ಅದಕ್ಕೆ ಉಪನಿಷತ್ತು ಎತ್ತಿನಬಂಡಿಯ ಉದಾಹರಣೆಯನ್ನೂ ಕೊಟ್ಟಿದೆ. ಹೇಗೆ ಬಂಡಿಯಲ್ಲಿ ಸಕಲ ಸಾಮಗ್ರಿಗಳನ್ನು ತುಂಬಿಕೊಂಡು ಹೋಗುವಾಗ ಆ ಬಂಡಿಯು ಶಬ್ದವನ್ನು ಮಾಡುತ್ತದೆಯೋ, ಜೀವನ ಉತ್ಕ್ರಮಣದ ಸಮಯದಲ್ಲಿ ಮರ್ಮಸ್ಥಾನಗಳನ್ನು ಕತ್ತರಿಸಿಕೊಂಡು ಹೋಗುವಾಗ ಜೀವನೂ ಸಶಬ್ದವಾಗಿ ಈ ದೇಹವನ್ನು ತ್ಯಜಿಸುತ್ತಾನೆ ಎಂಬುದಾಗಿ ಶಾಸ್ತ್ರಗಳು ತಿಳಿಸುತ್ತವೆ.

ಮರಣೋನ್ಮುಖನಾದ ಜೀವನ ಕಿವಿಯಲ್ಲಿ ಕರ್ಣಸೂಕ್ತವನ್ನು ಜಪಿಸುವುದರ ಹಿಂದೆ ಆತನ ಮನಸ್ಸಿನಲ್ಲಿ ಒಳ್ಳೆಯ ವೃತ್ತಿಗಳು ಉಂಟಾಗಬೇಕೆಂಬ ಉದ್ದೇಶವಿದೆ. ಮರಣದ ಸಮಯದಲ್ಲಿ ಯಾವ ರೀತಿಯ ಮನೋವೃತ್ತಿಗಳು ಆತನ ಮನಸ್ಸಿನಲ್ಲಿ ಉಂಟಾಗುತ್ತವೆಯೋ ಅವನು ಮುಂದಿನ ಜನ್ಮವನ್ನು ನಿರ್ಧರಿಸುತ್ತವೆ. ಹಾಗಾಗಿ ಹೆಚ್ಚೆಚ್ಚು ದೇವತಾ ನಾಮಸಂಕೀರ್ತನೆ, ವಿಷ್ಣುಸಹಸ್ರನಾಮ, ಭಗವದ್ಗೀತೆ ಮೊದಲಾದವುಗಳ ಪಠಣ ಇವುಗಳು ಅತ್ಯಂತ ಮುಖ್ಯವಾದುವು. ದೇವತಾ ನಾಮಸಂಕೀರ್ತನೆಯಿಂದ ಭಗವದ್ವಿಷಯಕವಾದ ಚಿಂತನೆಗಳು ಮೂಡಲಿ ಎಂಬುದು ಆಶಯ. ಜೀವನು ಇಡೀ ಜೀವನದಲ್ಲಿ ಯಾವ ರೀತಿಯ ಚಿಂತನೆಯನ್ನು ಹೆಚ್ಚು ಮಾಡಿದ್ದಾನೋ ಅದೇ ಚಿಂತನೆಯೇ ಆತನ ಮನಸ್ಸಿನಲ್ಲಿ ಮೂಡುತ್ತದೆ. ಹಾಗಾಗಿ '**ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಮ್। ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ॥**' ಎಂಬ ಮೂಲಕ ಭಗವಂತನು ಗೀತೆಯಲ್ಲಿ ಇದನ್ನೇ ತಿಳಿಸಿದ್ದಾನೆ. ಇಲ್ಲಿ 'ಸದಾ ತದ್ಭಾವಭಾವಿತಃ' ಎಂಬುದು ಬಹಳ ಮುಖ್ಯವಾದುದು. ಸಾವಿನ ಸಂದರ್ಭದಲ್ಲಿ ಭಗವಚ್ಚಿಂತನೆ ಮಾಡಿದರೆ ಸಾಕಲ್ಲ, ಇಡೀ ಜೀವನದಲ್ಲಿ ಯಾಕೆ ಅಂಥ ಸಚ್ಚಿಂತನೆಯನ್ನು ಮಾಡಬೇಕು ಎಂದು ಕೆಲವರಿಗೆ ಅನಿಸಬಹುದು. ಆದರೆ ಹಾಗಲ್ಲ, ಮರಣದಂಥ ತೀವ್ರ ಸಂಕಟದ ಸಮಯದಲ್ಲಿ ಆತ ಜೀವನವಿಡೀ ಯಾವ ರೀತಿಯ ಆಲೋಚನೆಗಳನ್ನು ಮಾಡಿಕೊಂಡು ಬಂದಿದ್ದಾನೋ ಅಂಥ ಆಲೋಚನೆಗಳೇ ಬರುತ್ತವೆಯೇ ಹೊರತೂ, ಸ್ವತಂತ್ರವಾಗಿ ತನಗೆ ಬೇಕಾದ ವಿಷಯವನ್ನು ಚಿಂತಿಸುವ ಸಾಮರ್ಥ್ಯ ಆತನಿಗಿರುವುದಿಲ್ಲ. ಹಾಗಾಗಿಯೇ ಸದಾ ತದ್ಭಾವಭಾವಿತಃ ಎಂದು ಗೀತೆಯಲ್ಲಿ ಹೇಳಲಾಗಿದೆ.

ಅದೇ ಸಂದರ್ಭದಲ್ಲಿ ಮರಣತ್ರಾಸದ ನಿವಾರಣೆಗಾಗಿ ಗೋದಾನವನ್ನು ಮಾಡಲಾಗುತ್ತದೆ. ಇದು ಯಾಕೆ ಅಂದರೆ, ಜೀವನು ತನ್ನ ಮರಣದವರೆಗೂ ಈ ದೇಹವನ್ನೇ ತಾನೆಂಬ ಅಭಿಮಾನದಿಂದ ಜೀವಿಸಿದ್ದ. ಅದನ್ನು ಈಗ ಬಿಟ್ಟು ಹೋಗುವಾಗ, ಅದರ ಜೊತೆಗೆ, ತನ್ನದು ಎಂದು ಅಭಿಮಾನಿಸಿದ್ದ ಎಲ್ಲವನ್ನೂ ಬಿಟ್ಟು ಹೊರಡಬೇಕಾಗುತ್ತದೆ. ಅಷ್ಟೇ ಅಲ್ಲ, ಜೀವೋತ್ಕ್ರಮಣದ ಸಂದರ್ಭದಲ್ಲಿ ಆಗುವ ಅನೂಹ್ಯ ನೋವು ಸಹಿಸಲಸಾಧ್ಯವಾಗಿರುತ್ತದೆ. ಹಾಗಾಗಿ ತೀವ್ರವಾದ ಆ ಸಂಕಟವು ಕಡಿಮೆಯಾಗಿ, ಆತನ ಉತ್ಕ್ರಮಣವು ಸುಖಕರವಾಗಿರಲೆಂಬ ಸಂಕಲ್ಪದಿಂದ ಇದನ್ನು ನಡೆಸಲಾಗುತ್ತದೆ. ಹಾಗೆಯೇ ಪಾಪನಿವಾರಣೆಯನ್ನು ಪ್ರಾರ್ಥಿಸಿ ತಿಲಪಾತ್ರ ದಾನವನ್ನು ನಡೆಸಲಾಗುತ್ತದೆ. ಇದಲ್ಲದೇ ದಶದಾನವೆಂದು ಪ್ರಸಿದ್ಧವಾದ ದಾನಕರ್ಮವನ್ನೂ ಪಾಪದ ನಾಶದ ಉದ್ದೇಶದಿಂದಲೇ ನಡೆಸಲಾಗುತ್ತದೆ.

ದಶದಾನಗಳೆಂದರೆ ಹತ್ತುವಿಧದ ದಾನಗಳು. ದಾನಕ್ಕೆ ನಮ್ಮ ಪಾಪವನ್ನು ಕಳೆದುಹಾಕುವ ಸಾಮರ್ಥ್ಯವಿರುತ್ತದೆ. ಸಾತ್ತ್ವಿಕವಾದ ದಾನವು ಎಲ್ಲಕ್ಕಿಂತ ಪ್ರಶಸ್ತವಾದುದು. ಆದರೆ ಇಲ್ಲಿ ಈ ದಾನಗಳನ್ನು ಮರಣೋನ್ಮುಖನು ಸ್ವತಃ ಕೊಡುತ್ತಿಲ್ಲ. ಬದಲಿಗೆ ಅವನ ಪ್ರತಿನಿಧಿಯಾಗಿ ಪುತ್ರನು ಕೊಡುತ್ತಾನೆ. ದಶವಿಧದಾನಗಳೆಂದರೆ, ಗೋದಾನ, ಭೂದಾನ, ತಿಲದಾನ, ಹಿರಣ್ಯದಾನ, ಆಜ್ಯದಾನ, ಬಟ್ಟೆ, ಧಾನ್ಯ, ಗುಡ, ಬೆಳ್ಳಿ, ಉಪ್ಪು ಹೀಗೆ ಹತ್ತುವಿಧದ ದ್ರವ್ಯಗಳನ್ನು ಕೊಡುವ ದಾನವೇ ದಶದಾನವಾಗಿದೆ. ಇದರಿಂದ ಕಲಿಯುಗದಲ್ಲಿರುವ ದಾನದ ಮಹತ್ತ್ವ ತಿಳಿಯುತ್ತದೆ. ಜ್ಞಾನ, ತಪಸ್ಸು ಮತ್ತು ಯಜ್ಞಗಳು ಉಳಿದ ಯುಗಗಳಲ್ಲಿ ಮುಖ್ಯವಾದವುಗಳಾದರೆ, ಕಲಿಯುಗದಲ್ಲಿ ದಾನಕ್ಕೆ ಹೆಚ್ಚಿನ ಪ್ರಾಶಸ್ತ್ಯ. ಇದರಿಂದ ಪುಣ್ಯವೂ ದೊರೆಯುತ್ತದೆ ಮತ್ತು ಪಾಪವೂ ಕ್ಷೀಣಿಸುತ್ತದೆ. ದಾನದ ಪರಿಮಾಣ, ದಾನದ ರೀತಿ ಮೊದಲಾದವುಗಳಿಗೆ ಅನುಗುಣವಾಗಿ ಆಯಾ ಪಾಪಗಳ ಕ್ಷಯವುಂಟಾಗುತ್ತದೆ ಎಂದರ್ಥ. ಯಾಕೆಂದರೆ ಕರ್ಮದಲ್ಲಿಯೂ ದೃಢ, ಮಧ್ಯಮ, ಅದೃಢ ಎಂಬ ವಿಭಾಗಗಳಿವೆ.

ತಂದೆಯ ಅಂತಿಮಕ್ರಿಯೆಯನ್ನು ಆರಂಭಿಸುವಾಗ ಮಗನು ಕೃಚ್ಛ್ರಾಚರಣೆಯನ್ನು ಮಾಡಿಕೊಳ್ಳುತ್ತಾನೆ. ತಾನು ಮಾಡಿದ ಪಾಪದ ನಾಶವಾಗಿ, ತನ್ನ ಶುದ್ಧಿಯೊದಗಿ, ಕರ್ಮಾನುಷ್ಠಾನಕ್ಕೆ ಯೋಗ್ಯತೆ ದೊರಕಲಿ ಎಂಬುದು ಇದರ ಆಶಯ. ಇಲ್ಲಿಯೂ ದಾನವನ್ನು ಮಾಡಲಾಗುತ್ತದೆ. ಅನಂತರ ಮುಂಡನವನ್ನು ಮಾಡಲಾಗುತ್ತದೆ.

ಮೇರುಮಂದರತುಲ್ಯಾನಿ ಪಾಪಾನಿ ವಿವಿಧಾನಿ ಚ ।
ಕೇಶಾನಾಶ್ರಿತ್ಯ ತಿಷ್ಠಂತಿ ತಸ್ಮಾತ್ ಕೇಶಾನ್ ವಪಾಮ್ಯಹಮ್ ॥ ಎಂಬುದು ಈ ಸಂದರ್ಭದಲ್ಲಿ ಹೇಳಲಾಗುವ ಮಂತ್ರ. ಅರ್ಥಾತ್ ದೇಹದಲ್ಲಿರುವ ಕೂದಲುಗಳಲ್ಲಿ ಪಾಪವು ಆಶ್ರಿತವಾಗಿರುತ್ತದೆ. ಜೊತೆಗೆ ಇವು ಮಲವೂ ಕೂಡ ಹೌದು. ಕೂದಲು, ಉಗುರುಗಳು ಮೊದಲಾದ ರೂಪದಲ್ಲಿ ದೇಹದಲ್ಲಿರುವ ಮಲವು ಹೊರತೋರಿಕೊಳ್ಳುತ್ತದೆ. ಕೆಲವಷ್ಟು ನಿತ್ಯವೂ ಹೊರಹೋಗುವುದಾದರೂ, ಇನ್ನು ಕೆಲವಷ್ಟು ಕೇಶಾದಿಗಳ ಮೂಲಕ ಹೊರಬರುತ್ತವೆ. ಇಂಥ ಕೇಶಗಳನ್ನು ಕತ್ತರಿಸುವುದೆಂದರೆ, ಅದರಲ್ಲಿ ಆಶ್ರಿತವಾಗಿರುವ ಪಾಪಗಳನ್ನು ಕತ್ತರಿಸಿಕೊಂಡಂತೆ. ಹಾಗೆಂಬುದಾಗಿ ಈ ಮಂತ್ರವೇ ಹೇಳುತ್ತಿದೆ. ಒಟ್ಟಿನಲ್ಲಿ ಪ್ರತಿಯೊಂದು ಕರ್ಮಕ್ಕೂ ಅದರದ್ದೇ ಆದ ಉದ್ದೇಶ ಹಾಗೂ ಪ್ರಯೋಜನಗಳಿವೆ. ಇಷ್ಟಾದ ಮೇಲೆ ತಂದೆಯ ವಿಚ್ಛಿನ್ನವಾದ ಔಪಾಸನಾಗ್ನಿಯ ಪುನಃಸಂಧಾನವನ್ನು ಮಾಡಲಾಗುತ್ತದೆ. ಅರ್ಥಾತ್ ಅಗ್ನಿಯ ಉಪಾಸನೆಯನ್ನು ನಿತ್ಯವೂ ಮಾಡಬೇಕಾದದ್ದು. ಅದು ವಿಚ್ಛಿನ್ನವಾದಲ್ಲಿ ಅದರ ಪ್ರಾಯಶ್ಚಿತ್ತದೊಂದಿಗೆ ಮತ್ತೆ ಸಂಧಾನವನ್ನು ಮಾಡಿಕೊಳ್ಳಬೇಕಾಗುತ್ತದೆ. ಜೀವಿತದ ಅವಧಿಯಲ್ಲಾದರೆ ಅದೇ ವ್ಯಕ್ತಿಯೇ ಅದನ್ನು ಮಾಡಿಕೊಳ್ಳಬೇಕು. ತೀರಿಕೊಂಡಾಗ ಮಾತ್ರ ಆ ವ್ಯಕ್ತಿಯು ಉಪಾಸಿಸುತ್ತಿದ್ದ ಅಗ್ನಿಯ ಸಂಧಾನವನ್ನು ಆತನ ಮಗನು ಮಾಡಬಹುದಾಗಿದೆ. ಆ ಅಗ್ನಿಯಲ್ಲಿಯೇ ಆತನ ದೇಹವನ್ನು ಸುಡಲಾಗುತ್ತದೆ. ಒಟ್ಟಿನಲ್ಲಿ ಇಡೀ ಜೀವನದಲ್ಲಿ ಜೊತೆಗಿದ್ದ ಅಗ್ನಿಗೆ ತನ್ನ ದೇಹವನ್ನೇ ಆಹುತಿಯಾಗಿಸಿಕೊಳ್ಳುವ ಮೂಲಕ ವ್ಯಕ್ತಿಯ ಈ ಶರೀರದಲ್ಲಿನ ಜೀವನವು ಪೂರ್ಣಗೊಳ್ಳುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಇಂಥ ಎಲ್ಲ ಆಚರಣೆಗಳು ಎಷ್ಟು ಅರ್ಥಪೂರ್ಣ ಎಂಬುದು ಇದರಿಂದ ತಿಳಿಯುತ್ತದೆ.

ಇಷ್ಟೆಲ್ಲ ಆದ ಮೇಲೆ ಶವದ ಸ್ನಾನವನ್ನು ಮಾಡಲಾಗುತ್ತದೆ. ಶವವು ಈಗ ಅಂತ್ಯೇಷ್ಟಿಯ ದ್ರವ್ಯವಾಗಿರುವುದರಿಂದ, ದ್ರವ್ಯದ ಶುದ್ಧಿಗಾಗಿ ಮಾಡಲಾಗುವ ಪ್ರೋಕ್ಷಣಾದಿಗಳಂತೆ ಇದೂ ಒಂದು ಸಂಸ್ಕಾರವಾಗಿದೆ. ಈ ಸ್ನಾನವನ್ನು ಓಷಧಿದ್ರವ್ಯಗಳಿಂದ ಕೂಡಿದ ನೀರಿನಿಂದ ಮಾಡಲಾಗುತ್ತದೆ. ಏತನ್ಮಧ್ಯೆ ಶವಕ್ಕೆ ಹಳೆಯ ಬಟ್ಟೆಯನ್ನು ತೆಗೆದು, ಹೊಸಬಟ್ಟೆಯನ್ನು ಆಚ್ಛಾದಿಸುವುದೇ ಮೊದಲಾದ ಕ್ರಿಯೆಗಳಿದ್ದೇ ಇವೆ. ಒಟ್ಟಿನಲ್ಲಿ ಮರಣವು ಬದುಕಿರುವ ಪ್ರತಿಯೊಬ್ಬನಿಗೂ ವೈರಾಗ್ಯವನ್ನುಂಟುಮಾಡುವ ಸಂದರ್ಭ. ಹುಟ್ಟಿದ ಪ್ರತಿಯೊಬ್ಬನಿಗೂ ಮರಣವಿದೆ ಎಂಬುದು ನೆನಪಾದಾಗ ಆದಷ್ಟು ಶೀಘ್ರವಾಗಿ ಧರ್ಮವನ್ನು ಸಂಪಾದಿಸಿಕೊಳ್ಳಬೇಕೆಂಬ ಬುದ್ಧಿ ಉಂಟಾಗುತ್ತದೆ. ಐಹಿಕ ಸುಖಭೋಗಗಳೆಲ್ಲವೂ ಅನಿತ್ಯ. ಕೇವಲ ಧರ್ಮ ಮಾತ್ರವೇ ನಮ್ಮ ಜೊತೆ ಬರುವಂಥದ್ದೆಂಬ ಜ್ಞಾನೋದಯವುಂಟಾಗಬೇಕೆಂಬುದೇ ಈ ಎಲ್ಲ ಕ್ರಿಯಾಕಲಾಪಗಳ ಮುಖ್ಯ ಉದ್ದೇಶ. ಹಾಗಾಗಿಯೇ ಗರುಡ ಪುರಾಣಾದಿಗಳಲ್ಲಿಯೂ ಕೂಡ ನರಕಾದಿಗಳ ವರ್ಣನೆಯನ್ನು ಮಾಡಲಾಗಿದೆ.

ವ್ಯಕ್ತಿಯ ಪ್ರಾಣೋತ್ಕ್ರಮಣದ ಅನಂತರ ಮಾಡಲಾಗುವ ವಿಧಿ–ವಿಧಾನಗಳ ಮುಂದುವರಿದ ಚರ್ಚೆಯನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

ತೀಸ್ತಾ ನದಿ ನೀರು ಹಂಚಿಕೆ: ಚೀನಾದ ಮಧ್ಯಸ್ಥಿಕೆ ಕೋರುತ್ತಿರುವ ಬಾಂಗ್ಲಾ

ಕೆ.ಆರ್. ಕಾಮತ್

ಬಾಂಗ್ಲಾ ದೇಶದಲ್ಲಿ ಚುನಾವಣೆ ನಡೆದು ತಾರಿಕ್ ರೆಹಮಾನ್ ಪ್ರಧಾನಿಯಾದ ಬಳಿಕ ಭಾರತದೊಂದಿಗಿನ ಸಂಬಂಧ ಸುಧಾರಿಸಬಹುದೆಂದು ಭಾವಿಸಲಾಗಿತ್ತು. ಆದರೆ ತಾರಿಕ್ ರೆಹಮಾನ್ ಅವರು ಚೀನಾದೆಡೆಗೆ ಹೆಚ್ಚು ವಾಲುತ್ತಿದ್ದು, ಭಾರತದ ಜತೆಗಿನ ಸಂಬಂಧಕ್ಕೆ ಹೆಚ್ಚು ಮಹತ್ವ ನೀಡದಿರುವಂತೆ ತೋರಿಬರುತ್ತಿದೆ. ಅದೂ ಸಾಲದೆಂಬಂತೆ ಅವರು ಭಾರತ ಮತ್ತು ಬಾಂಗ್ಲಾದೇಶದ ನಡುವಿನ ತೀಸ್ತಾ ನದಿ ಜಲ ಹಂಚಿಕೆ ಮಾತುಕತೆಯಲ್ಲಿ ಚೀನಾ ಕೂಡಾ ಪಾಲ್ಗೊಳ್ಳಬೇಕು ಎಂದು ಹೇಳುವ ಮೂಲಕ ಚೀನಾದ ಬೆಂಬಲವನ್ನು ವಿಧ್ಯುಕ್ತವಾಗಿ ಕೋರಿದ್ದಾರೆ. ತಾರಿಕ್ ರೆಹಮಾನ್ ಅವರ ಈ ನಡೆಯು ಭಾರತ ಮತ್ತು ಬಾಂಗ್ಲಾದೇಶ ನಡುವಿನ ಸಂಬಂಧಗಳ ಮೇಲೆ ಮತ್ತೆ ಕರಿಛಾಯೆ ಹರಡುವುದು ನಿಶ್ಚಿತವಾಗಿದೆ.

ತೀಸ್ತಾ ನದಿ ಜಲ ಸಮಗ್ರ ನಿರ್ವಹಣೆ ಯೋಜನೆ (TRCM-RP) ಕುರಿತು ಬಾಂಗ್ಲಾದೇಶದ ವಿದೇಶಾಂಗ ಸಚಿವ ಕವಿ ಉರ್ ರೆಹಮಾನ್ ಮತ್ತು ಚೀನಾ ವಿದೇಶಾಂಗ ಸಚಿವ ವಾಂಗ್ ಯೀ ಸೇರಿಕೊಂಡು ಬೀಜಿಂಗ್‌ನಲ್ಲಿ ಮಾತುಕತೆ ನಡೆಸಿದ್ದಾರೆಂದೂ ಬಾಂಗ್ಲಾದೇಶದ ಸುದ್ದಿ ಸಂಸ್ಥೆ ವರದಿ ಮಾಡಿದೆ. ಇದು ಭಾರತದ ಆಂತರಿಕ ವ್ಯವಹಾರದಲ್ಲಿ ಚೀನಾದ ಹಸ್ತಕ್ಷೇಪವೇ ಸರಿ.

ಇದಕ್ಕೆ ಪ್ರತಿಕ್ರಿಯಿಸಿರುವ ಭಾರತದ ವಿದೇಶಾಂಗ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್‌ರವರು "ಭಾರತ ಮತ್ತು ಬಾಂಗ್ಲಾ ದೇಶಗಳ ನಡುವೆ 54 ನದಿಗಳು ಹರಿಯುತ್ತಿವೆ. ಜಲ ಸಂಬಂಧಿತ ಎಲ್ಲಾ ವಿಷಯಗಳನ್ನು ಚರ್ಚಿಸಲು ನಾವು ಈಗಾಗಲೇ ದ್ವಿಪಕ್ಷೀಯ ಸಮಿತಿಯನ್ನು ನಿರ್ಮಿಸಿದ್ದೇವೆ. ಈ ದ್ವಿಪಕ್ಷೀಯ ಸಮಿತಿಯು ಆಗಾಗ ಸೇರಿ ಮಾತುಕತೆ ನಡೆಸುವುದನ್ನು ಮುಂದುವರಿಸುತ್ತದೆ" ಎಂದು ಹೇಳಿ ಚೀನಾದ ಮಧ್ಯಸ್ಥಿಕೆಯ ಪಾತ್ರವನ್ನು ತಳ್ಳಿಹಾಕಿದ್ದಾರೆ.

ಭಾರತ ಮತ್ತು ಬಾಂಗ್ಲಾದೇಶದ ನಡುವೆ 1996ರಲ್ಲಿ ಗಂಗಾ ನದಿ ಜಲ ಒಪ್ಪಂದ ಏರ್ಪಟ್ಟಿತ್ತು. 30 ವರ್ಷಗಳ ಈ ಒಪ್ಪಂದವು ಡಿಸೆಂಬರ್ 2026ಕ್ಕೆ ಅಂತ್ಯಗೊಳ್ಳುತ್ತದೆ. ಈ ಒಪ್ಪಂದ ನವೀಕರಣ ಆಗಬೇಕಾಗಿದೆ. ಇದರ ಜತೆಗೇ 2024ರಲ್ಲಿ ಉಭಯ ದೇಶಗಳ ಮಧ್ಯೆ ತೀಸ್ತಾ ನದಿ ಜಲ ಒಪ್ಪಂದ ರೂಪುಗೊಂಡಿತ್ತು. ಈ ಒಪ್ಪಂದದ ಪ್ರಕಾರ ಭಾರತಕ್ಕೆ ಶೇಕಡ 42.5 ರಷ್ಟು ನೀರು ಹಂಚಿಕೆಯಾದರೆ ಬಾಂಗ್ಲಾದೇಶಕ್ಕೆ ಶೇಕಡ 37.5 ರಷ್ಟು ನೀರು ಹಂಚಿಕೆಯಾಗಬೇಕು. ಆದರೆ ಪಶ್ಚಿಮ ಬಂಗಾಳ ಸರ್ಕಾರವು ಈ ಒಪ್ಪಂದವನ್ನು ವಿರೋಧಿಸಿದ್ದರಿಂದ ಒಪ್ಪಂದವು ಜಾರಿಗೆ ಬರಲೇ ಇಲ್ಲ. ಹೀಗಾಗಿ ಒಪ್ಪಂದ ಪತ್ರಗಳ ಮೇಲೆ ಎರಡು ದೇಶಗಳ ಸಹಿ ಬೀಳಲೇ ಇಲ್ಲ. ಹೀಗಾಗಿ ತೀಸ್ತಾ ನದಿ ನೀರಿನ ಹಂಚಿಕೆ ಬಗೆಹರಿಯದೆ ಹಾಗೇ ಉಳಿದಿದೆ.

ಪಶ್ಚಿಮ ಬಂಗಾಳದ ಮಮತಾ ಸರ್ಕಾರ ಒಪ್ಪಂದವನ್ನು ವಿರೋಧಿಸಿದ್ದು ತನ್ನ ಪಾಲಿನ ಹೆಚ್ಚಿನ ನೀರಿಗಾಗಿ ಅಲ್ಲ. ಇಲ್ಲಿಯೂ ಓಲೈಕೆಯ ರಾಜಕಾರಣ ಕೆಲಸ ಮಾಡಿತ್ತು. ಭಾರತ ಸರ್ಕಾರವು ಇತ್ತೀಚೆಗೆ ಸಿಂಧೂ ನದಿ ಜಲ ಒಪ್ಪಂದವನ್ನು ರದ್ದುಗೊಳಿಸುವ ತನಕ ಸಿಂಧೂ ನದಿ ಮತ್ತು ಅದರ ಉಪನದಿಗಳಲ್ಲಿನ ಹೆಚ್ಚಿನ ನೀರು ಪಾಕಿಸ್ತಾನಕ್ಕೆ ಹರಿದು ಹೋದ ರೀತಿಯಲ್ಲೇ, ತೀಸ್ತಾ ನದಿಯಲ್ಲಿನ ಹೆಚ್ಚಿನ ಪ್ರಮಾಣದ ನೀರು ಬಾಂಗ್ಲಾದೇಶಕ್ಕೆ ಹರಿದು ಹೋಗುತ್ತಲೇ ಇದೆ. ಬಹುಶಃ ಪಶ್ಚಿಮ ಬಂಗಾಳ ಸರ್ಕಾರ ಇದನ್ನೇ ಬಯಸಿದ್ದಿರಬಹುದು! ಒಪ್ಪಂದ ಏರ್ಪಟ್ಟರೆ ಭಾರತವು ಹೆಚ್ಚು ನೀರನ್ನು ತನಗೆ ಬಳಸಿಕೊಳ್ಳಬಹುದಾಗಿದೆ.

ಬಾಂಗ್ಲಾದೇಶವು 85 ಲಕ್ಷ ಹೆಕ್ಟೇರ್ ಕೃಷಿಭೂಮಿ ಹೊಂದಿದೆ. ಇದು ಅದರ ಒಟ್ಟು ಭೂವೈಶಾಲ್ಯದಲ್ಲಿ ಶೇ. 50ರಷ್ಟು ಆಗಿದೆ. ಭತ್ತ ಮತ್ತು ಆಲೂಗಡ್ಡೆ ಮುಖ್ಯ ಬೆಳೆಗಳಾಗಿವೆ. ಹೇರಳ ನೀರು ಸಿಗುತ್ತಿರುವುದರಿಂದ ವರ್ಷಕ್ಕೆ ಮೂರು ಬಾರಿ ಭತ್ತ ಬೆಳೆಯಲಾಗುತ್ತದೆ. ಇದಕ್ಕೆ ಹೋಲಿಸಿದರೆ ಪಶ್ಚಿಮ ಬಂಗಾಳವು 52 ಲಕ್ಷ ಹೆಕ್ಟೇರ್ ಕೃಷಿ ಭೂಮಿ ಹೊಂದಿದೆ.

ತೀಸ್ತಾ ನದಿಯು ಸಿಕ್ಕಿಂನ ಪೂರ್ವ ಹಿಮಾಲಯ ಪರ್ವತ ಶ್ರೇಣಿಯಲ್ಲಿ ತೀಸ್ತಾ ಗಾಗ್ಸೆ ಎಂಬಲ್ಲಿ 17,770 ಅಡಿ ಎತ್ತರದಲ್ಲಿ ಹುಟ್ಟಿ ಸಿಕ್ಕಿಂ ಆದ ಮೇಲೆ ಪಶ್ಚಿಮ ಬಂಗಾಳದ ಮೂಲಕ ಹರಿದು ನಂತರ ಬಾಂಗ್ಲಾ ದೇಶ ಪ್ರವೇಶಿಸುತ್ತದೆ. ತೀಸ್ತಾ ನದಿಯ ಒಟ್ಟು ಉದ್ದ 414 ಕಿ.ಮೀ. ಈ ಪೈಕಿ 315 ಕಿ.ಮೀ. ಭಾರತದಲ್ಲಿ ಹರಿದರೆ 109 ಕಿ.ಮೀ. ಬಾಂಗ್ಲಾ ದೇಶದಲ್ಲಿ ಹರಿಯುತ್ತದೆ. ಇದರ ಜಲಾನಯನ ಪ್ರದೇಶ 12,540 ಕಿಮೀ. ಗಂಗೆಯ ನಂತರ ತೀಸ್ತಾ ನದಿಯು ಪಶ್ಚಿಮ ಬಂಗಾಳದ ಎರಡನೇ ಅತಿ ದೊಡ್ಡ ನದಿಯಾಗಿದೆ. ಪಶ್ಚಿಮ ಬಂಗಾಳ ಮತ್ತು ಬಾಂಗಾದೇಶ ಎರಡಕ್ಕೂ ತೀಸ್ತಾ ನದಿಯು ಅತ್ಯಂತ ಪ್ರಮುಖ ನದಿಯಾಗಿದೆ.

ತೀಸ್ತಾ ನದಿಯು ಭಾರತದಲ್ಲಿ ಮಂಗಾನ್, ಸಾಂಗ್ಟಕ್, ಪಾಕ್ ಫೊಂಗ್, ಕಾಲಿಮ್ ಫೊಂಗ್, ಡಾರ್ಜಿಲಿಂಗ್, ಜಪಾಯಿಗುರಿ, ಕೂಚ್ ಬಿಹಾರ್, ರಗ್ಪೊ ಮತ್ತು ಮೆಕ್ಲಿಗಂಜ್ ಮುಂತಾದ ಜಿಲ್ಲೆಗಳ ಮೂಲಕ ಹರಿದು ಭಾರತದಲ್ಲಿ ತನ್ನ ಪ್ರಯಾಣವನ್ನು ಮುಗಿಸಿ ಬಾಂಗ್ಲಾದೇಶವನ್ನು ಪ್ರವೇಶಿಸುತ್ತದೆ.

ಭಾರತದಲ್ಲಿ ತೀಸ್ತಾ ನದಿಯ ಮೇಲೆ ಹಲವಾರು ಸೇತುವೆಗಳನ್ನು ನಿರ್ಮಿಸಲಾಗಿದೆ. ಸಿಲಿಗುರಿ ಬಳಿ ನಿರ್ಮಿಸಲಾದ ಸೆವೊಕ್ ರೈಲ್ವೇ ಸೇತುವೆಯು ಪಶ್ಚಿಮ ಬಂಗಾಳ ರಾಜ್ಯಕ್ಕೆ ಈಶಾನ್ಯ ರಾಜ್ಯಗಳೊಂದಿಗೆ ಸಂಪರ್ಕ ಕಲ್ಪಿಸುತ್ತದೆ. ಅದೇ ವಿಧವಾಗಿ ಜಲಪಾಯಿಗುರಿ ಬಳಿ ನಿರ್ಮಿಸಲಾದ ಜಲಪಾಯ್ ಗುರಿ ಸೇತುವೆ ಕೂಡಾ ಈಶಾನ್ಯ ರಾಜ್ಯಗಳೊಂದಿಗೆ ಸಂಪರ್ಕ ಕಲ್ಪಿಸುತ್ತದೆ. ಕೂಚ್‌ಬಿಹಾರ್ ಜಿಲ್ಲೆಯ ಹಲ್ದಿಬಾರಿಯಲ್ಲಿ ನಿರ್ಮಿಸಲಾದ 3.8 ಕಿ.ಮೀ. ಉದ್ದದ ಸೇತುವೆಯು ಪಶ್ಚಿಮ ಬಂಗಾಳದ ಅತ್ಯಂತ ಉದ್ದದ ಸೇತುವೆಯಾಗಿದೆ.

ಪಶ್ಚಿಮ ಬಂಗಾಳ ಮತ್ತು ಬಾಂಗ್ಲಾದೇಶಗಳ ನಡುವೆ ಸುಮಾರು 54 ನದಿಗಳು ಹರಿಯುತ್ತಿವೆ. ಅವುಗಳಲ್ಲಿ ತೀಸ್ತಾ ನದಿಯನ್ನು ಬಿಟ್ಟು ಉಳಿದೆಲ್ಲ ನದಿಗಳು ಬಹಳ ಸಣ್ಣವು. ರಾಣಿಕೋಲಾ ನದಿಯು ತೀಸ್ತಾದ ದೊಡ್ಡ ಉಪನದಿಯಾದರೆ ರಂಗ್ಪೊ ತೀಸ್ತಾದ ಎರಡನೆ ದೊಡ್ಡ ಉಪನದಿ. ಇವಲ್ಲದೆ ಒಂದು ಡಜನ್‌ಗಳಷ್ಟು ನದಿಗಳು ತೀಸ್ತಾದಲ್ಲಿ ವಿಲೀನಗೊಂಡು ಅದರ ರಭಸ ಹೆಚ್ಚಿಸುತ್ತವೆ.

ಬಾಂಗ್ಲಾದೇಶವು ತೀಸ್ತಾ ನದಿಯಿಂದ ಹೆಚ್ಚಿನ ಪಾಲು ಅಪೇಕ್ಷಿಸುತ್ತಿದೆ. ಭಾರತದ ಜತೆ ಸರಿಸಮಾನವಾಗಿ ಅಂದರೆ ಶೇ. 50–50 ನೀರು ಹಂಚಿಕೆಯಾಗಬೇಕೆಂದು ಹಠ ಮಾಡುತ್ತಿದೆ. ಆದರೆ ತೀಸ್ತಾ ನದಿಯ ಶೇ. 65 ಭಾಗ ಭಾರತದಲ್ಲಿ ಹರಿದರೆ ಶೇ. 35ರಷ್ಟು ಮಾತ್ರ ಬಾಂಗ್ಲಾದೇಶದಲ್ಲಿ ಹರಿಯುತ್ತದೆ. ಹಾಗಿದ್ದರೂ ಬಾಂಗ್ಲಾ ದೇಶವು ಅರ್ಧದಷ್ಟು ನೀರಿನ ಪಾಲು ಕೇಳುವುದು ವಿಪರ್ಯಾಸ.

ಅದೂ ಸಾಲದೆಂಬಂತೆ ಈಗ ಈ ವಿಚಾರದಲ್ಲಿ ಚೀನಾದ ನೆರವು ಕೋರಲು ಹೊರಟಿದೆ. ಚೀನಾವು ಮಧ್ಯಸ್ಥಿಕೆ ವಹಿಸಬೇಕೆಂದು ಬಯಸುತ್ತಿದೆ. ದ್ವಿಪಕ್ಷೀಯ ವಿಚಾರದಲ್ಲಿ ಮೂರನೇ ಪಕ್ಷದ ನುಸುಳುವಿಕೆಯನ್ನು ಭಾರತವಂತೂ ಸಹಿಸಲಾರದು. ಇದು ಉಭಯದೇಶಗಳ ಮಧ್ಯೆ ಉದ್ವಿಗ್ನತೆ ಹೆಚ್ಚಿಸಬಹುದು.

ಇಂಡೋ–ಪೆಸಿಫಿಕ್ ಮುಕ್ತ ಬದ್ಧತೆ ಪುನರುಚ್ಚಾರ

ಪಹಲ್ಗಾಮ್, ಬೋಂಡಿ ದಾಳಿ ಖಂಡಿಸಿ ಕ್ವಾಡ್ ಜಂಟಿ ಹೇಳಿಕೆ



◆ಹೊಸದಿಲ್ಲಿ: ಕಳೆದ ವರ್ಷ ನಡೆದ ಪಹಲ್ಗಾಮ್ ಮತ್ತು ಬೋಂಡಿ ಬೀಚ್ ಭಯೋತ್ಪಾದಕ ದಾಳಿಗಳನ್ನು ಕ್ವಾಡ್ ರಾಷ್ಟ್ರಗಳ ವಿದೇಶಾಂಗ ಸಚಿವರು ಮಂಗಳವಾರ ಜಂಟಿಯಾಗಿ ಖಂಡಿಸಿದ್ದಾರೆ. ರಾಷ್ಟ್ರ ರಾಜಧಾನಿಯಲ್ಲಿ ನಡೆದ ಕ್ವಾಡ್ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ ಜಂಟಿ ಹೇಳಿಕೆಯೊಂದನ್ನು ಬಿಡುಗಡೆ ಮಾಡಲಾಯಿತು.

ಉಗ್ರವಾದ ವಿರುದ್ಧದ ಹೋರಾಟ ಮತ್ತು ಇಂಡೋ–ಪೆಸಿಫಿಕ್ ಪ್ರದೇಶವನ್ನು ಉಗ್ರವಾದದಿಂದ ಸಂಪೂರ್ಣ ಮುಕ್ತಗೊಳಿಸುವ ತಮ್ಮ ಬದ್ಧತೆಯನ್ನು ಕ್ವಾಡ್ ವಿದೇಶಾಂಗ ಸಚಿವರು ಪುನರುಚ್ಚರಿಸಿದ್ದಾರೆ. ಜಾಗತಿಕ ಮಟ್ಟದಲ್ಲಿ ನಿಷೇಧಿತ ಉಗ್ರರು, ಉಗ್ರ ಸಂಘಟನೆಗಳು, ಭಯೋತ್ಪಾದನೆಗೆ ಹಣಕಾಸಿನ ನೆರವನ್ನು ನೀಡುವವರ ಮೇಲೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ ಎಂದು ಕ್ವಾಡ್ ವಿದೇಶಾಂಗ ಸಚಿವರು ಹೇಳಿದ್ದಾರೆ.

ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ಒಳಗೊಂಡ ಕ್ವಾಡ್ ಮಂಗಳವಾರ ತನ್ನ ಜಂಟಿ ಹೇಳಿಕೆ ಪ್ರಕಟಿಸಿದೆ. ಗಡಿಯಾಚೆಗಿನ ಉಗ್ರವಾದ ಸೇರಿ ಎಲ್ಲಾ ಮಾದರಿಯ ಭಯೋತ್ಪಾದನೆಗಳನ್ನು ಕ್ವಾಡ್ ಸ್ಪಷ್ಟವಾಗಿ ಖಂಡಿಸಿದೆ.

ಕಳೆದ ವರ್ಷ ಏ.22ರಂದು ಪಹಲ್ಗಾಮ್‌ನಲ್ಲಿ ಮೂವರು ಪಾಕಿಸ್ತಾನಿ ಉಗ್ರರು ನಡೆಸಿದ್ದ ಗುಂಡಿನ ದಾಳಿಗೆ 26 ಮಂದಿ ಬಲಿಯಾಗಿದ್ದರು. 2025ರ ಡಿ.14ರಂದು ಬೋಂಡಿ ಬೀಚ್‌ನಲ್ಲಿ ನಡೆದಿದ್ದ ಉಗ್ರರ ದಾಳಿಗೆ 15 ಮಂದಿ ಮೃತಪಟ್ಟಿದ್ದರು.

ಚೀನಾ ಏಕಪಕ್ಷೀಯ ನೀತಿಗೆ ಕ್ವಾಡ್ ಪರೋಕ್ಷ ವಿರೋಧ: ಭಯೋತ್ಪಾದನೆ ವಿಷಯದ ಹೊರತಾಗಿ ಕ್ವಾಡ್ ಇಂಡೋ–ಪೆಸಿಫಿಕ್ ಸಮುದ್ರ ಮಾರ್ಗದಲ್ಲಿ ಚೀನಾದ ಏಕಪಕ್ಷೀಯ ಅಥವಾ ಬಲವಂತದ ಕ್ರಮಗಳಿಗೆ ಪರೋಕ್ಷ ವಿರೋಧ ವ್ಯಕ್ತಪಡಿಸಿದೆ. ದಕ್ಷಿಣ ಚೀನಾ ಮತ್ತು ಪೂರ್ವ ಚೀನಾ ಸಮುದ್ರದಲ್ಲಿನ ಉದ್ವಿಗ್ನತೆಗಳ ಕುರಿತು ಕ್ವಾಡ್ ಕಳವಳ ವ್ಯಕ್ತಪಡಿಸಿದೆ. ಹಡಗುಗಳ ದಾರಿಯನ್ನು ತಡೆಯುವುದು, ಡಿಕ್ಕಿ ಹೊಡೆಯುವುದು ಮತ್ತು ಅಪಾಯಕಾರಿಯಾಗಿ ವಾಟರ್ ಕ್ಯಾನನ್‌ಗಳನ್ನು ಬಳಸುವಂತಹ ಸಾಗರೋತ್ತರ ಸಂಬಂಧಿತ ಕ್ರಮಗಳನ್ನು ಆತಂಕಕಾರಿ ಎಂದು ಕ್ವಾಡ್ ಉಲ್ಲೇಖಿಸಿದೆ.

ಪಶ್ಚಿಮ ಏಷ್ಯಾ ಕುರಿತು, ಜಾಗತಿಕ ವ್ಯಾಪಾರದ ನಿರಂತರ ಹರಿವನ್ನು ಖಚಿತಪಡಿಸಲು ಹೋರ್ಮುಜ್ ಜಲಸಂಧಿ ಮತ್ತು ಕೆಂಪು ಸಮುದ್ರ ಮಾರ್ಗಗಳ ಸುರಕ್ಷತೆ ಹಾಗೂ ಅಡೆತಡೆರಹಿತ ಮುಕ್ತ ಸಂಚಾರದ ಮಹತ್ವವನ್ನು ಕ್ವಾಡ್ ವಿದೇಶಾಂಗ ಸಚಿವರು ತಿಳಿಸಿದ್ದಾರೆ.

ಶಾಂತಿ, ಸಮೃದ್ಧಿಗೆ ವಿಶ್ವಾಸಾರ್ಹ ಪಾಲುದಾರಿಕೆ ಅತ್ಯಗತ್ಯ

ಇಂಡೋ–ಪೆಸಿಫಿಕ್ ಪ್ರದೇಶದಲ್ಲಿ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಯನ್ನು ತರಬೇಕಾದರೆ ಕ್ವಾಡ್ ಸದಸ್ಯ ರಾಷ್ಟ್ರಗಳ ನಡುವೆ ವಿಶ್ವಾಸಾರ್ಹ ಪಾಲುದಾರಿಕೆ ಬಹಳ ಅತ್ಯಗತ್ಯ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕ್ವಾಡ್ ಸಭೆಯಲ್ಲಿ ಮಾತನಾಡಿದ ಅವರು, ಇಂಡೋ–ಪೆಸಿಫಿಕ್ ಪ್ರದೇಶದಲ್ಲಿ ಸಾಗರ ಭದ್ರತೆ ಮತ್ತು ಆರ್ಥಿಕ ಆಯ್ಕೆಗಳನ್ನು ಉತ್ತೇಜಿಸುವುದು ಮತ್ತು ಕ್ವಾಡ್ ರಾಷ್ಟ್ರಗಳ ನಡುವೆ ಪಾರದರ್ಶಕ ಪಾಲುದಾರಿಕೆ ಅಗತ್ಯ. ಈ ಪ್ರದೇಶವು ಜಾಗತಿಕ ಪ್ರಗತಿ ಮತ್ತು ಸ್ಥಿರತೆಯ ಮೂಲವಾಗಿ ಉಳಿಯಬೇಕು ಎಂದು ಜೈಶಂಕರ್ ಹೇಳಿದ್ದಾರೆ.

ಶೂನ್ಯ ಸಹಿಷ್ಣುತೆ: ಜೈಶಂಕರ್

ಕ್ವಾಡ್ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವಿದೇಶಾಂಗ ಸಚಿವ ಎಸ್. ಜೈಶಂಕರ್, ಭಯೋತ್ಪಾದನೆ ವಿಚಾರದಲ್ಲಿ ಶೂನ್ಯ ಸಹಿಷ್ಣುತೆ ಇರಲಿದೆ. ಉಗ್ರ ದಾಳಿಗೆ ಒಳಗಾದ ರಾಷ್ಟ್ರಗಳು ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿವೆ ಎಂದು ಪ್ರತಿಪಾದಿಸಿದ್ದಾರೆ.

ಖನಿಜ ಒಪ್ಪಂದಕ್ಕೆ ಭಾರತ-ಅಮೆರಿಕ ಸಹಿ: ಚೀನಾ ಅಪರೂಪದ ಖನಿಜಗಳ ರಫ್ತಿನ ಏಕಸ್ವಾಮ್ಯ ತಡೆಯುವ ಉದ್ದೇಶದಿಂದ ಭಾರತ ಮತ್ತು ಅಮೆರಿಕ ಖನಿಜಗಳ ಒಪ್ಪಂದವನ್ನು ಘೋಷಿಸಿದ್ದು, ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ಅಮೆರಿಕ ಗೃಹ ಇಲಾಖೆ ಕಾರ್ಯದರ್ಶಿ ಮಾರ್ಕೊ ರೂಬಿಯೊ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಸರಿಯಾದ ಸಮಯದಲ್ಲಿ ನಿರ್ಣಾಯಕ ಒಪ್ಪಂದಕ್ಕೆ ಸಹಿ ಹಾಕಿದ್ದೇವೆ ಎಂದು ಜೈಶಂಕರ್ ಹೇಳಿದ್ದಾರೆ.

ಇಂಧನ, ರಸಗೊಬ್ಬರ, ವಿದೇಶಿ ವಿನಿಮಯಕ್ಕೆ ಒತ್ತು

ಕೇಂದ್ರ ಸರ್ಕಾರ ಸಂಪನ್ಮೂಲ ನಿರ್ವಹಣೆಯ ಮೇಲ್ವಿಚಾರಣೆಯ ಕಡೆ ಹೆಚ್ಚಿನ ಗಮನಕ್ಕೆ ಕರೆ



ಜಾಗತಿಕ ಅಡಚಣೆಗಳಿಂದಾಗಿ ದೇಶೀಯ ಆರ್ಥಿಕತೆ ತೀವ್ರ ಬಾಹ್ಯ ಒತ್ತಡ ಎದುರಿಸುತ್ತಿದ್ದು, ದೀರ್ಘಾವಧಿಯ ಸ್ಥಿರತೆ ಕಾಯ್ದುಕೊಳ್ಳಲು ನಿರ್ದಿಷ್ಟ ಆಮದು ಮತ್ತು ಮೀಸಲು ವಲಯಗಳ ಮೇಲೆ ಕಾರ್ಯತಂತ್ರದ ಗಮನ ಹರಿಸುವುದು ಅತ್ಯಗತ್ಯವಾಗಿದೆ. ಹೆಚ್ಚುತ್ತಿರುವ ಜಾಗತಿಕ ಆರ್ಥಿಕ ಅನಿಶ್ಚಿತತೆಗಳನ್ನು ಎದುರಿಸಲು ಕೇಂದ್ರ ಸರ್ಕಾರ ಸಂಪನ್ಮೂಲ ನಿರ್ವಹಣೆಯ ಮೇಲ್ವಿಚಾರಣೆಯ ಕಡೆ ಹೆಚ್ಚಿನ ಗಮನ ಕೊಡುತ್ತಿದೆ.

ಅಗತ್ಯ ಸಂಪನ್ಮೂಲ ನಿರ್ವಹಣೆ

ಹೆಚ್ಚುತ್ತಿರುವ ಜಾಗತಿಕ ಸರಕುಗಳ ಮೌಲ್ಯ ಬಾಹ್ಯ ಆರ್ಥಿಕ ಒತ್ತಡದ ಹೆಚ್ಚಳಕ್ಕೆ ಕಾರಣವಾಗುತ್ತಿದ್ದು, ಮೂರು ಪ್ರಾಥಮಿಕ ಸಂಪನ್ಮೂಲಗಳ ವ್ಯವಸ್ಥಿತ ನಿರ್ವಹಣೆಯ ಅಗತ್ಯ ಸೃಷ್ಟಿಯಾಗಿದೆ. ಇದನ್ನು '3ಎಫ್', ಅಂದರೆ, ಇಂಧನ, ರಸಗೊಬ್ಬರ ಮತ್ತು ವಿದೇಶಿ ವಿನಿಮಯ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಇದರಲ್ಲಿ ವಿದೇಶಿ ವಿನಿಮಯ ನೇರವಾಗಿ ಚಿನ್ನದ ಖರೀದಿಗೆ ಸಂಬಂಧಿಸಿದೆ. ಈ ಮೂರು ಅತ್ಯಗತ್ಯ ಘಟಕಗಳಿಗೆ ಅಂತಾರಾಷ್ಟ್ರೀಯ ಪಾವತಿಗಳನ್ನು ಸಂಪೂರ್ಣವಾಗಿ ವಿದೇಶಿ ವಿನಿಮಯದ ಮೂಲಕವೇ ನಿರ್ವಹಿಸಬೇಕಾಗುತ್ತದೆ, ಏಕೆಂದರೆ ಅಂತಾರಾಷ್ಟ್ರೀಯ ವ್ಯಾಪಾರ ವಹಿವಾಟುಗಳು ದೇಶೀಯ ಕರೆನ್ಸಿಯಲ್ಲಿನ ವಹಿವಾಟುಗಳನ್ನು ಬೆಂಬಲಿಸುವುದಿಲ್ಲ.

ದೇಶೀಯ ಹಣದುಬ್ಬರದ

ಇಂಧನ ವೆಚ್ಚಗಳ ಏರಿಕೆ, ಹೆಚ್ಚಿನ ವಲಯಗಳಲ್ಲಿ ದೇಶೀಯ ಹಣದುಬ್ಬರದ ಪ್ರವೃತ್ತಿಯನ್ನು ತೀವ್ರಗೊಳಿಸಿದೆ. ಚಿಲ್ಲರೆ ಹಣದುಬ್ಬರ, ಮಾರ್ಚ್‌ನಲ್ಲಿ ಶೇ. 3.40 ರಿಂದ ಏಪ್ರಿಲ್‌ನಲ್ಲಿ ಶೇ. 3.48 ಕ್ಕೆ ಏರಿತು, ಆದರೆ ಸಗಟು ಹಣದುಬ್ಬರ ನಲವತ್ತೆರಡು ತಿಂಗಳ ಗರಿಷ್ಠ ಮಟ್ಟವಾದ ಶೇ.8.3 ಕ್ಕೆ ತಲುಪಿದೆ. ಪ್ರಾದೇಶಿಕ ಸಂಘರ್ಷ ಪ್ರಾರಂಭವಾದಾಗಿನಿಂದ, ಮೇ ಮಧ್ಯಭಾಗದಿಂದ ಸಂಕುಚಿತ ನೈಸರ್ಗಿಕ ಅನಿಲ (ಸಿಎನ್‌ಜಿ) ಬೆಲೆಗಳು ಪ್ರತಿ ಕೆಜಿಗೆ 4 ರೂ.ಗಳಷ್ಟು ಹೆಚ್ಚಾಗಿದೆ ಮತ್ತು ದೇಶೀಯ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಬೆಲೆಗಳು ಪ್ರತಿ 14.2 ಕೆಜಿ ಸಿಲಿಂಡರ್‌ಗೆ 60 ರೂ. ಗಳಷ್ಟು ಏರಿವೆ. ಈ ಅಂತಾರಾಷ್ಟ್ರೀಯ ಬೆಲೆ ಏರಿಕೆಯ ನೇರ ಪರಿಣಾಮ ಗ್ರಾಹಕರು ಮತ್ತು ಉದ್ಯಮಗಳ ಮೇಲೆ ಆಗುವುದನ್ನು ತಗ್ಗಿಸಲು, ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಲೀಟರ್‌ಗೆ 10 ರೂ. ಕಡಿತಗೊಳಿಸಿತು, ಇದರಿಂದಾಗಿ ಆದಾಯಕ್ಕೆ 1 ಲಕ್ಷ ಕೋಟಿ ರೂ. ಗಳಿಗಿಂತ ಹೆಚ್ಚಿನ ನಷ್ಟ ಉಂಟಾಗಿದೆ.

ಕೃಷಿ ವೆಚ್ಚಗಳ ಏರಿಕೆ

ಇಂಧನ ಮಾತ್ರವಲ್ಲದೆ, ನಿರ್ಣಾಯಕ ಹಡಗು ಸಾರಿಗೆ ಮಾರ್ಗಗಳ ಅಡಚಣೆಯಿಂದಾಗಿ ಕೃಷಿ ಆಮದು ವೆಚ್ಚಗಳು ಅಭೂತಪೂರ್ವ ಏರಿಕೆ ಕಾಣುತ್ತಿವೆ. ಯೂರಿಯಾ ಮತ್ತು ಡೈ–ಅಮೋನಿಯಂ ಫಾಸ್ಫೇಟ್ ಸೇರಿದಂತೆ ಅಗತ್ಯ ಮಣ್ಣಿನ ಪೋಷಕಾಂಶಗಳಿಗೆ ಬೇಕಾದ ಅಮೋನಿಯಾ, ಸಲ್ಫರ್ ಫಾಸ್ಪಾರಿಕ್ ಆಮ್ಲ ಮತ್ತು ನೈಸರ್ಗಿಕ ಅನಿಲದಂತಹ ಕಚ್ಚಾ ವಸ್ತುಗಳು ಹೆಚ್ಚಾಗಿ ಆಮದಾಗುತ್ತವೆ. ದೇಶೀಯ ಮಾರುಕಟ್ಟೆ, ತನ್ನ ಡೈ–ಅಮೋನಿಯಂ ಫಾಸ್ಫೇಟ್ ಅಗತ್ಯದ ಶೇಕಡಾ ಎಂಬತ್ತಕ್ಕಿಂತ ಹೆಚ್ಚು ಮತ್ತು ಒಟ್ಟಾರೆ ರಸಗೊಬ್ಬರ ಅಗತ್ಯಗಳ ಶೇಕಡಾ ಅರವತ್ತೈದರಿಂದ ಎಪ್ಪತ್ತರಷ್ಟು ಆಮದಿನ ಮೇಲೆ ಅವಲಂಬಿತವಾಗಿರುವುದರಿಂದ, ರಾಷ್ಟ್ರೀಯ ಸಬ್ಸಿಡಿ ಹೊರೆ ಹೆಚ್ಚಾಗುವ ನಿರೀಕ್ಷೆಯಿದೆ. ಒಟ್ಟು ರಸಗೊಬ್ಬರ ಸಬ್ಸಿಡಿ ಬಜೆಟ್‌ನಲ್ಲಿ ನಿಗದಿಪಡಿಸಲಾದ 1.71 ಲಕ್ಷ ಕೋಟಿ ರೂ.ಗಳಿಗಿಂತ ಶೇಕಡಾ ಎಪ್ಪತ್ತೈದರಷ್ಟು ಹೆಚ್ಚಾಗುವ ನಿರೀಕ್ಷೆಯಿದ್ದು, ಜಾಗತಿಕ ಅಡಚಣೆಗಳು ಮುಂದುವರಿದರೆ ಈ ಹಣಕಾಸು ವರ್ಷದಲ್ಲಿ ದಾಖಲೆಯ 3 ಲಕ್ಷ ಕೋಟಿ ರೂಪಾಯಿಗಳನ್ನು ದಾಟುವ ಸಾಧ್ಯತೆಯಿದೆ.

ಲಾಜಿಸ್ಟಿಕ್ಸ್ ಅಪಾಯಗಳು ಮತ್ತು ದೃಢತೆ


ಮುಂದುವರಿದ ಪ್ರಾದೇಶಿಕ ಸಂಘರ್ಷ, ವಾಣಿಜ್ಯ ಕಾರ್ಯಾಚರಣೆಗಳಿಗೆ ವ್ಯಾಪಕ ಅಪಾಯ ಉಂಟುಮಾಡುತ್ತದೆ, ಇದರಲ್ಲಿ ಹೆಚ್ಚಿನ ಲಾಜಿಸ್ಟಿಕ್ಸ್ ವೆಚ್ಚಗಳು, ಸರಕುಗಳ ಆಗಮನದಲ್ಲಿ ವಿಳಂಬ, ದೀರ್ಘಾವಧಿಯ ಹಡಗು ಸಾರಿಗೆ ಸಮಯ, ಇನ್‌ಪುಟ್ ಕೊರತೆ ಮತ್ತು ರಫ್ತು ಆದೇಶಗಳ ಮೇಲಿನ ಹೆಚ್ಚಿನ ಅನಿಶ್ಚಿತತೆ ಸೇರಿವೆ.



- ಮೇ ಮಧ್ಯದಿಂದ ಇಂಧನ ವೆಚ್ಚ 7.5 ರೂಪಾಯಿ ಏರಿಕೆ.
- ಅಬಕಾರಿ ಕಡಿತದಿಂದ 1 ಲಕ್ಷ ಕೋಟಿ ರೂಪಾಯಿ ನಷ್ಟ.
- ರಸಗೊಬ್ಬರ ಸಬ್ಸಿಡಿ 3 ಲಕ್ಷ ಕೋಟಿಗೆ ತಲುಪುವ ಸಾಧ್ಯತೆ.
- ಸಣ್ಣ ಸಂಸ್ಥೆಗಳಿಗೆ 8.1 ಲಕ್ಷ ಕೋಟಿ ಪಾವತಿ ಬಾಕಿ.
- ಜಿಎಸ್‌ಟಿ ಆದಾಯ ಶೇಕಡಾ 8.3 ರಷ್ಟು ವಿಸ್ತರಣೆ.

ಉದ್ಯಮಗಳ ಮೇಲೆ ಒತ್ತಡ ಹೆಚ್ಚಳ

ದೇಶೀಯ ಉದ್ಯಮಗಳ ಕಾರ್ಯನಿರತ ಬಂಡವಾಳದ ಮೇಲೆಯೂ ಒತ್ತಡ ಹೆಚ್ಚುತ್ತಿದ್ದು, ವಿಶೇಷವಾಗಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ (ಎಂಎಸ್‌ಎಂಇ) ಮೇಲೆ ಪರಿಣಾಮ ಬೀರುತ್ತಿದೆ. ಸಾರ್ವಜನಿಕ ವಲಯದ ಉದ್ಯಮಗಳು ಪ್ರಸ್ತುತ ಸಣ್ಣ ಉದ್ಯಮಗಳಿಗೆ ಪಾವತಿಸಬೇಕಾದ ಬಾಕಿ ಹಣದಲ್ಲಿ 8.1 ಲಕ್ಷ ಕೋಟಿ ರೂ.ಗಳನ್ನು ತಡೆಹಿಡಿದಿದ್ದು, ಕಡ್ಡಾಯವಾಗಿ ನಲವತ್ತೈದು ದಿನಗಳ ಇತ್ಯರ್ಥದ ಸಮಯ ಜಾರಿಗೆ ಆಡಳಿತಾತ್ಮಕ ನಿರ್ದೇಶನಗಳನ್ನು ನೀಡಲಾಗಿದೆ. ಈ ತೀವ್ರ ಬಾಹ್ಯ ಸವಾಲುಗಳ ಹೊರತಾಗಿಯೂ, ದೇಶೀಯ ಸ್ಥೂಲ ಆರ್ಥಿಕ ಸೂಚಕಗಳು ರಚನಾತ್ಮಕ ಸ್ಥಿರತೆಯನ್ನು ತೋರಿಸುತ್ತಿದ್ದು, ಒಟ್ಟು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹಣೆಯಲ್ಲಿ ಶೇ. 8.3 ರಷ್ಟು ವಾರ್ಷಿಕ ಬೆಳವಣಿಗೆ, ದೇಶೀಯ ಸಗಟು ಟ್ರ್ಯಾಕ್ಟರ್ ಮಾರಾಟದಲ್ಲಿ ಶೇ.26 ಹೆಚ್ಚಳ, ಪ್ರಯಾಣಿಕ ವಾಹನಗಳ ಮಾರಾಟ ಮತ್ತು ಹೆಚ್ಚಿನ ಜೀವ ವಿಮಾ ಪ್ರೀಮಿಯಂಗಳಿಂದ ಇದು ಬೆಂಬಲಿತವಾಗಿದೆ.



ಜಾಗತಿಕ ಬಿಕ್ಕಟ್ಟಿನ ಪರಿಣಾಮಗಳು

ಪಶ್ಚಿಮ ಏಷ್ಯಾ ವಲಯದಲ್ಲಿನ ಭೌಗೋಳಿಕ ರಾಜಕೀಯ ಅಸ್ಥಿರತೆ ವ್ಯಾಪಕ ವಾಣಿಜ್ಯ ಪರಿಣಾಮಗಳನ್ನು ಉಂಟುಮಾಡಿದ್ದು, ಸ್ಥಳೀಯ ಚಿಲ್ಲರೆ ಬೆಲೆಗಳು ಮತ್ತು ಪೂರೈಕೆ ಸರಪಳಿ ಮಾರ್ಗಗಳ ಮೇಲೆ ನೇರ ಪರಿಣಾಮ ಬೀರಿದೆ. ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣವಾಗಿ ಮುಚ್ಚಿದ್ದರಿಂದ ಫೆಬ್ರವರಿ ಅಂತ್ಯದಿಂದ ಜಾಗತಿಕ ಕಚ್ಚಾ ತೈಲ ಬೆಲೆಗಳಲ್ಲಿ ಶೇ. 50ರಷ್ಟು ಏರಿಕೆಯಾಗಿದೆ. ಈ ಹೆಚ್ಚುತ್ತಿರುವ ವೆಚ್ಚಗಳಿಂದಾಗಿ, ದೇಶೀಯ ಇಂಧನ ಚಿಲ್ಲರೆ ವ್ಯಾಪಾರಿಗಳು ಬೆಲೆ ಏರಿಕೆಯನ್ನು ಜಾರಿಗೊಳಿಸಿದ್ದು, ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 2.61 ರೂ. ಮತ್ತು ಡೀಸೆಲ್ ಬೆಲೆಯನ್ನು ಲೀಟರ್‌ಗೆ 2.71 ರೂ. ಹೆಚ್ಚಿಸಿದ್ದಾರೆ. ಹನ್ನೊಂದು ದಿನಗಳ ಅವಧಿಯಲ್ಲಿ ನಾಲ್ಕನೇ ಬಾರಿಗೆ ಬೆಲೆ ಏರಿಕೆಯಾಗಿದ್ದು, ಮೇ 15 ರಿಂದ ಇಂಧನ ಬೆಲೆ ಏರಿಕೆ ಸುಮಾರು 7.5 ರೂ. ಗಳಷ್ಟು ಏರಿಕೆಯಾದಂತಾಗಿದೆ.

ಕಿರುಸುದ್ದಿ

ಟ್ರಂಪ್ ಅಬ್ರಹಾಂ ಒಪ್ಪಂದ ತಿರಸ್ಕರಿಸಿದ ಪಾಕಿಸ್ತಾನ

◆ಇಸ್ಲಾಮಾಬಾದ್: ಪಾಕಿಸ್ತಾನ, ಅಬ್ರಹಾಂ ಒಪ್ಪಂದಕ್ಕೆ (ಅಬ್ರಾಹಂ ಎಕಾರ್ಡ್ಸ್) ಸೇರಬೇಕೆಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕರೆಯನ್ನು ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಮಂಗಳವಾರ ತಿರಸ್ಕರಿಸಿದ್ದಾರೆ. ಮಾಧ್ಯಮ ಸಂದರ್ಶನವೊಂದರಲ್ಲಿ ಆಸಿಫ್, ಈ ಸಾಮಾನ್ಯೀಕರಣ ಒಪ್ಪಂದಕ್ಕೆ ಸೇರುವುದು ಪಾಕಿಸ್ತಾನದ ಮೂಲಭೂತ ತತ್ವಗಳು ಮತ್ತು ಸಿದ್ಧಾಂತಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ ಎಂದು ತಿಳಿಸಿದರು. ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆಗಳಿಗೆ ಮಧ್ಯಸ್ಥಿಕೆ ವಹಿಸುತ್ತಿರುವ ಸೌದಿ ಅರೇಬಿಯಾ, ಕತಾರ್ ಈಜಿಪ್ಟ್, ಜೋರ್ಡಾನ್, ಟರ್ಕಿ ಮತ್ತು ಪಾಕಿಸ್ತಾನ ಸೇರಿದಂತೆ ಇತರ ದೇಶಗಳು ತಕ್ಷಣವೇ ಈ ಒಪ್ಪಂದಕ್ಕೆ ಸಹಿ ಹಾಕಬೇಕು ಎಂದು ಟ್ರಂಪ್ ಅವರು ಟ್ರುತ್ ಸೋಶಿಯಲ್‌ನಲ್ಲಿ ಪೋಸ್ಟ್ ಮಾಡಿದ ಬೆನ್ನಲ್ಲೇ ಈ ಪ್ರತಿಕ್ರಿಯೆ ಬಂದಿದೆ. 2020ರಲ್ಲಿ ಅಮೆರಿಕಾದ ಮಧ್ಯಸ್ಥಿಕೆಯಲ್ಲಿ ನಡೆದ ಅಬ್ರಹಾಂ ಒಪ್ಪಂದ, ಇಸ್ರೇಲ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ಹಾಗೂ ಬಹ್ರೇನ್ ಸೇರಿದಂತೆ ಹಲವಾರು ಅರಬ್ ದೇಶಗಳ ನಡುವೆ ರಾಜತಾಂತ್ರಿಕ, ಆರ್ಥಿಕ ಮತ್ತು ಭದ್ರತಾ ಸಂಬಂಧಗಳನ್ನು ಸ್ಥಾಪಿಸಿತ್ತು.

ದೀದಿಗೆ ಶಾಕ್: 12 ಟಿಎಂಸಿ ಸಂಸದರು ಶೀಘ್ರ ಬಿಜೆಪಿಗೆ?

◆ಕೋಲ್ಕತ್ತಾ: ಬಂಗಾಳ ವಿಧಾನಸಭಾ ಚುನಾವಣೆಯಲ್ಲಿನ ಹೀನಾಯ ಸೋಲಿನ ನಂತರ, ತೃಣಮೂಲ ಕಾಂಗ್ರೆಸ್ ನೊಳಗಿನ ಆಂತರಿಕ ಬಿಕ್ಕಟ್ಟು ಉಲ್ಬಣಗೊಂಡಿದೆ. ಹಲವು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದರು ಬಿಜೆಪಿಯೊಂದಿಗೆ ಸಂಪರ್ಕದಲ್ಲಿದ್ದಾರೆ ಮತ್ತು ಅವರಲ್ಲಿ 12 ಸಂಸದರ ಗುಂಪೊಂದು ಅತಿಶೀಘ್ರದಲ್ಲಿ ಟಿಎಂಸಿ ತೊರೆದು ಬಿಜೆಪಿ ಸೇರಲಿದ್ದಾರೆ ಎಂದು ವರದಿಯಾಗಿದೆ. ಮೂಲಗಳ ಪ್ರಕಾರ, ಲೋಕಸಭೆಯಲ್ಲಿರುವ ಟಿಎಂಸಿ ಪಕ್ಷದ 29 ಸಂಸದರಲ್ಲಿ 12 ಮಂದಿ ಈಗಾಗಲೇ ಬಿಜೆಪಿ ಸೇರುವುದು ಬಹುತೇಕ ಖಚಿತವಾಗಿದೆ. ಇನ್ನೂ 6 ಸಂಸದರು ಬಿಜೆಪಿ ಸೇರುವ ಸಾಧ್ಯತೆಯಿದೆ.

ಪಕ್ಷಾಂತರ ನಿಷೇಧದಿಂದ ತಪ್ಪಿಸಲು 20 ಸಂಸದರ ಬೆಂಬಲ ಅಗತ್ಯ: ಪಕ್ಷಾಂತರ ನಿಷೇಧ ಕಾನೂನಿನಿಂದ ತಪ್ಪಿಸಲು ಕನಿಷ್ಠ 19–20 ಸಂಸದರನ್ನು ಒಟ್ಟುಗೂಡಿಸಲು ಸಾಧ್ಯತೆ ಇದೆ. ಈ ಸಂಭಾವ್ಯ ವಿಭಜನೆಯ ಬಗ್ಗೆ ಟಿಎಂಸಿ ನಾಯಕತ್ವಕ್ಕೂ ಮಾಹಿತಿ ಸಿಕ್ಕಿದ್ದು, ಪಕ್ಷ ಒಗ್ಗೂಡಿಸುವ ಪ್ರಯತ್ನಗಳು ಆರಂಭವಾಗಿವೆ ಎಂದು ಮೂಲಗಳು ಹೇಳಿವೆ. ಟಿಎಂಸಿ ಮುಖ್ಯಸ್ಥೆ ಮಮತಾ ಸೋದರಳಿಯ ಮತ್ತು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಆಪ್ತರೆಂದು ಗುರುತಿಸಲ್ಪಟ್ಟ ಸಂಸದರು ಬಿಜೆಪಿ ಸೇರುವ ಸಾಧ್ಯತೆಯಿದೆ.

100 ಟಿಎಂಸಿ ನಗರಸಭಾ ಸದಸ್ಯರ ರಾಜೀನಾಮೆ: ಭ್ರಷ್ಟಾಚಾರ ವಿರೋಧಿ ತನಿಖೆ ಹಾಗೂ ರಾಜಕೀಯ ಒತ್ತಡ ಎದುರಿಸುತ್ತಿರುವ 100ಕ್ಕೂ ಹೆಚ್ಚು ಟಿಎಂಸಿ ನಗರಸಭಾ ಸದಸ್ಯರು ವೈಯಕ್ತಿಕ ಕಾರಣಗಳನ್ನು ನೀಡಿ ರಾಜೀನಾಮೆ ಸಲ್ಲಿಸಿದ್ದಾರೆ.

ಅಮೆರಿಕದಿಂದ ಕದನ ವಿರಾಮ ಗಂಭೀರ ಉಲ್ಲಂಘನೆ: ಇರಾನ್

◆ಟೆಹ್ರಾನ್: ದಕ್ಷಿಣ ಇರಾನ್‌ನಲ್ಲಿರುವ ಇರಾನ್ ಕ್ಷಿಪಣಿ ಉಡಾವಣಾ ಕೇಂದ್ರಗಳ ಮೇಲೆ ಅಮೆರಿಕ ಸ್ವಯಂ ರಕ್ಷಣೆ ಕಾರಣಗಳನ್ನು ನೀಡಿ ವೈಮಾನಿಕ ದಾಳಿ ನಡೆಸಿದ್ದು, ತೀವ್ರ ಪ್ರತಿದಾಳಿ ನಡೆಸುವುದಾಗಿ ಇರಾನ್ ಎಚ್ಚರಿಕೆ ನೀಡಿದೆ. ಅಮೆರಿಕ ಮಂಗಳವಾರ ಕದನ ವಿರಾಮ ಒಪ್ಪಂದದ ಗಂಭೀರ ಉಲ್ಲಂಘನೆ ಮಾಡಿರುವುದಾಗಿ ಇರಾನ್ ಆರೋಪಿಸಿದೆ. ಅಮೆರಿಕ ವೈಮಾನಿಕ ದಾಳಿಯಿಂದ ಇರಾನ್–ಅಮೆರಿಕ ನಡುವಿನ ಉದ್ವಿಗ್ನತೆ ಹೆಚ್ಚಾಗಿದ್ದು, ಮಧ್ಯಪ್ರಾಚ್ಯ ಪ್ರದೇಶದಲ್ಲಿ ಆತಂಕ ಹೆಚ್ಚಿಸಿದೆ. ದಾಳಿಯಿಂದ ಹಾರ್ಮುಜ್ ಜಲಸಂಧಿ ಪ್ರವೇಶದ್ವಾರದಲ್ಲಿ ಒಂದು ಹಡಗಿಗೆ ಹಾನಿಯಾಗಿದೆ. ಅಮೆರಿಕದ ಯುದ್ಧ ವಿಮಾನಗಳ ಮೇಲೆ ಇರಾನ್ ಸೇನೆ ಖಂಡಾಂತರ ಕ್ಷಿಪಣಿಗಳಿಂದ ಪ್ರತಿದಾಳಿ ನಡೆಸಿದೆ. ದಾಳಿ–ಪ್ರತಿದಾಳಿ ಮಧ್ಯೆಯೇ ಉಭಯ ರಾಷ್ಟ್ರಗಳ ನಿಯೋಗಗಳು ಒಪ್ಪಂದ ಮಾತುಕತೆ ಅಂತಿಮಗೊಳಿಸುವ ಪ್ರಯತ್ನದಲ್ಲಿವೆ. ಒಪ್ಪಂದ ಅಂತಿಮಗೊಳ್ಳದಿದ್ದರೆ ದೊಡ್ಡ ದಾಳಿ ನಡೆಸುವುದಾಗಿ ಅಧ್ಯಕ್ಷ ಟ್ರಂಪ್ ಇತ್ತೀಚೆಗೆ ಇರಾನ್‌ಗೆ ಬೆದರಿಕೆ ಹಾಕಿದ್ದರು. ಅಮೆರಿಕ ಕದನ ವಿರಾಮವನ್ನು ಪಾಲಿಸುತ್ತಿದೆ ಎಂದು ಅಮೆರಿಕ ಅಧಿಕಾರಿಗಳು ಹೇಳಿದ್ದಾರೆ.

ಉತ್ತಮ ಒಪ್ಪಂದ ಇನ್ನೂ ಸಾಧ್ಯ: ಅಧ್ಯಕ್ಷ ಟ್ರಂಪ್ ಪರಸ್ಪರ ಲಾಭದಾಯಕ ಒಪ್ಪಂದ ಅಥವಾ ಯಾವುದೇ ಒಪ್ಪಂದ ಮಾಡಿಕೊಳ್ಳದಿರಲು ಬಯಸಿದ್ದರು. ಇನ್ನೂ ಇರಾನ್ ಜತೆ ಒಂದು ಉತ್ತಮ ಒಪ್ಪಂದ ಮಾಡಿಕೊಳ್ಳಲು ಅವಕಾಶ ಇದೆ ಎಂದು ಅಮೆರಿಕ ಗೃಹ ಇಲಾಖೆ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.

ಗಡಿ ಕಳ್ಳಸಾಗಣೆ ತಡೆಗೆ ಆ್ಯಂಟಿ ಡ್ರೋನ್ ವ್ಯವಸ್ಥೆ ಅಳವಡಿಕೆ

◆ಬಿಕಾನೇರ್: ಅಂತಾರಾಷ್ಟ್ರೀಯ ಗಡಿಗಳಲ್ಲಿ ಶಸ್ತ್ರಾಸ್ತ್ರ ಮತ್ತು ಮಾದಕ ದ್ರವ್ಯಗಳ ಕಳ್ಳಸಾಗಣೆಯನ್ನು ತಡೆಗಟ್ಟಲು ಕೇಂದ್ರ ಸರ್ಕಾರ ಮುಂದಿನ ಆರು ತಿಂಗಳೊಳಗೆ ಆ್ಯಂಟಿ–ಡ್ರೋನ್ ವ್ಯವಸ್ಥೆಗಳನ್ನು ಅಳವಡಿಸುವ ಪ್ರಕ್ರಿಯೆ ಪೂರ್ಣಗೊಳಿಸಲಿದೆ.

ರಾಜಸ್ಥಾನದ ಬಿಕಾನೇರ್ ಜಿಲ್ಲೆಯ ಸಾಂಚು ಗಡಿ ಚೌಕಿಯಲ್ಲಿ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಸಿಬ್ಬಂದಿಯನ್ನುದ್ದೇಶಿಸಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಈ ಯೋಜನೆ ಪ್ರಕಟಿಸಿದರು. ಸಮಗ್ರ ಗಡಿ ಭದ್ರತೆಗಾಗಿ ಬಹುಮುಖಿ ನಾಲ್ಕು ಅಂಶಗಳ ಭದ್ರತಾ ಗ್ರಿಡ್ ಅಗತ್ಯವಿದೆ ಎಂದು ಅವರು ತಿಳಿಸಿದರು. ಈ ವ್ಯವಸ್ಥೆ ಬಿಎಸ್‌ಎಫ್, ಸಶಸ್ತ್ರ ಪಡೆಗಳು, ಸ್ಥಳೀಯ ನಾಗರಿಕ ಆಡಳಿತ ಮತ್ತು ನಾಗರಿಕರನ್ನು ಒಳಗೊಂಡಿರುತ್ತದೆ.

ಡ್ರೋನ್‌ಗಳು ಭಾರತೀಯ ಭೂಪ್ರದೇಶದೊಳಗೆ ಇಳಿಯುವುದರಿಂದ, ಕಳ್ಳಸಾಗಣೆ ಸರಕುಗಳನ್ನು ಸ್ವೀಕರಿಸುವವರನ್ನು ಗುರುತಿಸಲು ಸ್ಥಳೀಯ ಪೊಲೀಸರೊಂದಿಗೆ ನಿಕಟ ಸಮನ್ವಯ ಅಗತ್ಯ. ಬಿಹಾರ, ಗುಜರಾತ್, ತ್ರಿಪುರಾ ಮತ್ತು ಪಶ್ಚಿಮ ಬಂಗಾಳ ಸೇರಿದಂತೆ ಗಡಿ ಪ್ರದೇಶಗಳಲ್ಲಿ ಈ ನಿಟ್ಟಿನಲ್ಲಿ ಸಮನ್ವಯ ಸಭೆಗಳು ನಡೆಯುತ್ತಿವೆ. ಜತೆಗೆ, ತಾಂತ್ರಿಕ ದುರುಪಯೋಗವನ್ನು ಎದುರಿಸಲು ಬಿಎಸ್‌ಎಫ್ ಕಾರ್ಯಾಚರಣೆಯ ವ್ಯಾಪ್ತಿಯನ್ನು ಈ ಹಿಂದೆ 15 ಕಿಲೋಮೀಟರ್‌ನಿಂದ 50 ಕಿಲೋಮೀಟರ್‌ಗೆ ವಿಸ್ತರಿಸಲಾಗಿದೆ. ವ್ಯಾಪ್ತಿಯಲ್ಲಿ ಅಕ್ರಮ ನಿರ್ಮಾಣಗಳು ಅಥವಾ ಅಸಹಜ ಜನಸಂಖ್ಯಾ ಬದಲಾವಣೆಗಳ ಬಗ್ಗೆ ಗಮನಹರಿಸಲಾಗುತ್ತದೆ. 2030ರ ವೇಳೆಗೆ ಎಲ್ಲಾ ಗಡಿ ಚೌಕಿಗಳಲ್ಲಿ ಮೂಲಸೌಕರ್ಯ ಬಲಪಡಿಸುವ ಗುರಿಯನ್ನು ಸರ್ಕಾರ ಹೊಂದಿದೆ.

ನಿಷೇಧಿತ ಪ್ರಾಣಿ ಹತ್ಯೆ ಬೇಡ, ಚಿತ್ರ ತೆಗೆಯಬೇಡಿ: ಮದನಿ

◆ಲಖನೌ: ಬಕ್ರೀದ್ ಹಬ್ಬದ ಸಂದರ್ಭ ದೇಶದ ಕಾನೂನು ಉಲ್ಲಂಘಿಸಿ ನಿಷೇಧಿತ ಪ್ರಾಣಿಗಳ ಹತ್ಯೆ ಮಾಡದಂತೆ ಮತ್ತು ಅವುಗಳ ಚಿತ್ರಗಳನ್ನು ಜಾಲತಾಣಗಳಲ್ಲಿ ಪೋಸ್ಟ್ ಮಾಡದಂತೆ ಉತ್ತರಪ್ರದೇಶದ ಜಾಮಿಯತ್ ಉಲೆಮಾ ಮುಖ್ಯಸ್ಥ ಮೌಲಾನಾ ಅರ್ಷದ್ ಮದನಿ ಮುಸ್ಲಿಮರಿಗೆ ಕರೆ ನೀಡಿದ್ದಾರೆ. ಈದ್ ಉಲ್ ಅದಾ ಸಂದರ್ಭ ಮುಸ್ಲಿಮ್ ನಾಯಕರೊಬ್ಬರು ತಮ್ಮ ಸಮುದಾಯಕ್ಕೆ ಕಾನೂನು ಉಲ್ಲಂಘಿಸದಂತೆ ಕರೆ ನೀಡಿರುವುದು ಪ್ರಶಾಂಸಾರ್ಹ ನಡೆಯಾಗಿದೆ. ಪ್ರಾಣಿ ಹತ್ಯೆ ಮಾಡುವುದರ ಬಗ್ಗೆ ಜಾಹೀರಾತು ಅಥವಾ ಸಾಮಾಜಿಕ ಜಾಲತಾಣಗಳಲ್ಲಿ ಹತ್ಯೆ ಮಾಡಿದ ಪ್ರಾಣಿಗಳ ಚಿತ್ರಗಳನ್ನು ಪೋಸ್ಟ್ ಮಾಡದಿರಲು ಮದನಿ ಕರೆ ನೀಡಿದ್ದಾರೆ. ಸರ್ಕಾರಿ ಕಾನೂನು ಪಾಲಿಸಿ ಬಕ್ರೀದ್ ಆಚರಿಸಬೇಕು, ಪ್ರಾಣಿ ಹತ್ಯೆ ತಪ್ಪಿಸಬಹುದು. ನಮ್ಮ ಆಚರಣೆಯು ಇನ್ನೊಬ್ಬರಿಗೆ ತೊಂದರೆ ನೀಡಬಾರದು ಎಂದು ಮದನಿ ಹೇಳಿದ್ದಾರೆ. ಇತ್ತೀಚೆಗೆ ಗೋವನ್ನು ರಾಷ್ಟ್ರೀಯ ಪ್ರಾಣಿಯನ್ನಾಗಿ ಘೋಷಿಸಬೇಕೆಂದು ಮದನಿ ಉತ್ತರಪ್ರದೇಶ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದರು. ಗುರುವಾರ (ಮೇ 28) ಮುಸ್ಲಿಮ್ ಸಮುದಾಯ ಬಕ್ರೀದ್ ಆಚರಿಸಲಿದೆ.

ಕೇರಳದ ಕನಸಿನ ಯೋಜನೆಗಳ ಬೆಂಬಲಕ್ಕೆ ನೂತನ ಮುಖ್ಯಮಂತ್ರಿ ಮನವಿ

ಕೇರಳ ಸಿಎಂ ಸತೀಶನ್ ಪ್ರಧಾನಿ ಮೋದಿ ಭೇಟಿ

◆ಹೊಸದಿಲ್ಲಿ : ಕೇರಳದ ನೂತನ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಹಾಗೂ ವಿತ್ತಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ದಿಲ್ಲಿಯಲ್ಲಿ ಭೇಟಿ ಮಾಡಿದರು.ಸತೀಶನ್ ಅಧಿಕಾರ ಸ್ವೀಕರಿಸಿದ ಬಳಿಕ ಇದು ಪ್ರಧಾನಿಯವರೊಂದಿಗಿನ ಅವರ ಪ್ರಥಮ ಭೇಟಿಯಾಗಿದ್ದು, ಕೇರಳದ 'ಕನಸಿನ ಯೋಜನೆ'ಗಳಿಗೆ ಕೇಂದ್ರದ ಬೆಂಬಲ ಕೋರಿದ್ದಾಗಿ ಮಾಧ್ಯಮದವರಿಗೆ ತಿಳಿಸಿದ್ದಾರೆ.



ಕೇರಳದ ಸಮಸ್ಯೆಗಳು ಮತ್ತು ಆದ್ಯತೆಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ವಿತ್ತ ಸಚಿವರ ಜತೆ ಚರ್ಚಿಸಿದ್ದೇನೆ. ಕೇರಳವೀಗ ಹಣಕಾಸು ಬಿಕ್ಕಟ್ಟಿಗೆ ಸಿಲುಕಿದ್ದು, ಜೂನ್ ಮೊದಲ ವಾರ ರಾಜ್ಯದ ಹಣಕಾಸು ಸ್ಥಿತಿಯ ಬಗ್ಗೆ ಶ್ವೇತಪತ್ರ ಹೊರಡಿಸಲಾಗುವುದು. ಆದಕ್ಕೂ ಮುನ್ನ ತಾವು ಈ ಬಗ್ಗೆ ವಿವರಗಳಿಗೆ ಹೋಗುವುದಿಲ್ಲ ಎಂದೂ ಅವರು ತಿಳಿಸಿದರು.

ಕೇಂದ್ರ ಮತ್ತು ರಾಜ್ಯದ ಸಂಬಂಧಗಳಲ್ಲಿನ ಕೆಲವು 'ಸಮಸ್ಯೆ'ಗಳ ಬಗ್ಗೆ ಪ್ರಧಾನಿ ಮತ್ತು ವಿತ್ತಸಚಿವರಿಗೆ ನಾನು ಮಾಹಿತಿ ನೀಡಿದ್ದೇನೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಅವರು ತಿಳಿಸಿದ್ದು, ಕೇಂದ್ರ ಸರಕಾರವೂ ಕೆಲವು ವಿಷಯಗಳನ್ನು ಪ್ರಸ್ತಾವಿಸಿದ್ದು, ರಾಜ್ಯ ಸರಕಾರ ಈ ಬಗ್ಗೆ ಪರಿಶೀಲಿಸಲಿದೆ ಎಂದರು. ದಕ್ಷಿಣದ ಕೆಲವು ವಿಪಕ್ಷ ಆಡಳಿತದ ರಾಜ್ಯ ಸರಕಾರಗಳು ತಮ್ಮ ಹಣಕಾಸು ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಕೇಂದ್ರದ ನರೇಂದ್ರ ಮೋದಿ ಸರಕಾರದ ಜೊತೆ ಸಂಘರ್ಷಕ್ಕಿಳಿದಿರುವಂತೆಯೇ, ಕೇರಳದ ಹಿಂದಿನ ಎಡರಂಗ ಸರಕಾರವೂ ಇದೇ ರೀತಿ ಕೇಂದ್ರದೊಂದಿಗೆ ಸಂಘರ್ಷಕ್ಕಿಳಿದಿತ್ತು. ಇದೀಗ ಸತೀಶನ್ ಸರಕಾರವು, ಹಿಂದಿನ ಪಿಣರಾಯಿ ವಿಜಯನ್ ಸರಕಾರದ ಹಣಕಾಸು ನಿರ್ವಹಣೆಯಲ್ಲಿನ ವೈಫಲ್ಯಗಳನ್ನು ಶ್ವೇತಪತ್ರದ ಮೂಲಕ ತೆರೆದಿಡಲು ಮುಂದಾಗಿರುವುದು ಕುತೂಹಲ ಮೂಡಿಸಿದೆ.

ರಾಷ್ಟ್ರೀಯ ಹೆದ್ದಾರಿ ಯೋಜನೆಯ ಬಗ್ಗೆ ಪ್ರಸ್ತಾವಿಸಿದ ಸತೀಶನ್ ಅವರು, ಯೋಜನೆಗೆ ಅಗತ್ಯವಿರುವ ಭೂಸ್ವಾಧೀನಕ್ಕಾಗಿ 5,580ಕೋ.ರೂ.ಗಳನ್ನು ಸರಕಾರ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿದೆ.ಈ ಮೊತ್ತವನ್ನು ಕೇರಳದ ಸಾಲ ಮಿತಿಯಿಂದ ಹೊರಕ್ಕಿಡಬೇಕೆಂದು ಕೋರಿರುವುದಾಗಿ ತಿಳಿಸಿದರು. ರಾಜ್ಯದ ಸಾಲ ಮಿತಿಯುವ ಜಿಎಸ್‌ಡಿಪಿ ನಿಯಮಗಳಡಿ ಅಧಿಕೃತವಾಗಿ ಶೇ.3ರಷ್ಟಿತ್ತು. ಆದರೆ ಈ ಮಿತಿಗೆ ಜೋಡಿಸಲ್ಪಟ್ಟ ಷರತ್ತುಗಳ ಕಾರಣದಿಂದ ಪರಿಣಾಮಕಾರಿ ಸಾಲ ಸಾಮರ್ಥ್ಯ ಶೇ.3.5ರಷ್ಟಿದೆ ಎಂದ ಅವರು, ಕೆ ಐಐಎಫ್‌ಬಿ ಮತ್ತು ಪಿಂಚಣಿ ನಿಧಿಗಳಿಗೆ ಸಂಬಂಧಿಸಿದ ಬಾಕಿ ಬಗ್ಗೆ ಪ್ರಸ್ತಾವಿಸಲಾಗಿದೆ. ಪ್ರಧಾನಿಯವರ ಜತೆ ಚರ್ಚಿಸಿದ ವಿಷಯಗಳ ಬಗ್ಗೆ ಇನ್ನಷ್ಟು ಚರ್ಚೆಗಳನ್ನು ಶ್ವೇತಪತ್ರ ಬಿಡುಗಡೆಯ ಬಳಿಕ ಕೇಂದ್ರದ ಜತೆ ನಡೆಸಲಾಗುವುದು ಎಂದರು.

ಚೀನಾ–ಪಾಕಿಸ್ತಾನ ಜಂಟಿ ಹೇಳಿಕೆಗೆ ಭಾರತದ ತೀಕ್ಷ್ಣ ತಿರುಗೇಟು

ಜಮ್ಮು–ಕಾಶ್ಮೀರ ಭಾರತದ ಅವಿಭಾಜ್ಯ ಅಂಗ

◆ಹೊಸದಿಲ್ಲಿ: ಜಮ್ಮು–ಕಾಶ್ಮೀರ ಕುರಿತು ಚೀನಾ ಹಾಗೂ ಪಾಕಿಸ್ತಾನ ಹೊರಡಿಸಿರುವ ಜಂಟಿ ಹೇಳಿಕೆಗೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಯಾವುದೇ ಉಲ್ಲೇಖಗಳನ್ನು ಸಂಪೂರ್ಣವಾಗಿ ತಿರಸ್ಕರಿಸುವುದಾಗಿ ಸ್ಪಷ್ಟಪಡಿಸಿದೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಸೋಮವಾರ ಹೇಳಿಕೆ ಪ್ರಕಟಿಸಿದ್ದು, ಜಮ್ಮು–ಕಾಶ್ಮೀರ ಹಾಗೂ ಲಡಾಖ್ ಕೇಂದ್ರಾಡಳಿತ ಪ್ರದೇಶಗಳು ಭಾರತದ ಅವಿಭಾಜ್ಯ ಭಾಗಗಳಾಗಿದ್ದು, ಈ ವಿಚಾರದಲ್ಲಿ ಬೇರೆ ಯಾವುದೇ ರಾಷ್ಟ್ರಕ್ಕೆ ಪ್ರತಿಕ್ರಿಯೆ ನೀಡುವ ಅಥವಾ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕಿಲ್ಲ ಎಂದು ಖಡಕ್ ಸಂದೇಶ ರವಾನಿಸಿದ್ದಾರೆ.

ಚೀನಾ–ಪಾಕಿಸ್ತಾನ ಜಂಟಿ ಹೇಳಿಕೆಯಲ್ಲಿ ಜಮ್ಮು–ಕಾಶ್ಮೀರ ಕುರಿತ ಉಲ್ಲೇಖಗಳನ್ನು ಭಾರತ 'ಅನಗತ್ಯ ಹಾಗೂ ಅಸಂಗತ' ಎಂದು ಬಣ್ಣಿಸಿದ್ದು, ಭಾರತದ ನಿಲುವು ಎಲ್ಲರಿಗೂ ಚೆನ್ನಾಗಿ ತಿಳಿದಿರುವ ವಿಚಾರ ಎಂದು ಹೇಳಿದೆ.



ಇದೇ ವೇಳೆ, ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿಪಿಇಸಿ) ಯೋಜನೆಗಳ ವಿರುದ್ಧವೂ ಭಾರತ ಮತ್ತೊಮ್ಮೆ ಕಿಡಿಕಾರಿದೆ. ಈ ಯೋಜನೆಗಳ ಕೆಲವು ಭಾಗಗಳು ಭಾರತದ ಸಾರ್ವಭೌಮ ಪ್ರದೇಶದೊಳಗೆ ಬರುತ್ತವೆ ಎಂದು ಹೇಳಿರುವ ಭಾರತ, ಪಾಕಿಸ್ತಾನದ ಅಕ್ರಮ ಆಕ್ರಮಣವನ್ನು ಮಾನ್ಯಗೊಳಿಸುವ ಅಥವಾ ಬಲಪಡಿಸುವ ಯಾವುದೇ ಕ್ರಮಗಳನ್ನು ಸಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಈ ವಿಷಯವನ್ನು ಚೀನಾ ಮತ್ತು ಪಾಕಿಸ್ತಾನ ಸರ್ಕಾರಗಳಿಗೆ ಹಲವು ಬಾರಿ ತಿಳಿಸಲಾಗಿದೆ ಎಂದೂ ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

ಇನ್ನೊಂದೆಡೆ, ಅಂತರಸೀಮಾ ಜಲ ಸಂಪನ್ಮೂಲ ಸಹಕಾರ ಕುರಿತು ಚೀನಾ ಮತ್ತು ಪಾಕಿಸ್ತಾನ ಉಲ್ಲೇಖಿಸಿರುವ ವಿಚಾರವನ್ನೂ ಭಾರತ ತಳ್ಳಿಹಾಕಿದೆ. ಎರಡು ರಾಷ್ಟ್ರಗಳಿಗೂ ಪರಸ್ಪರ ಗಡಿ ಇಲ್ಲದ ಕಾರಣ ಇಂತಹ ಸಹಕಾರದ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಭಾರತ ಹೇಳಿದೆ.

1963ರಲ್ಲಿ ಪಾಕಿಸ್ತಾನ ಮತ್ತು ಚೀನಾ ನಡುವೆ ನಡೆದ ಗಡಿ ಒಪ್ಪಂದವನ್ನು ಭಾರತ ಎಂದಿಗೂ ಮಾನ್ಯಗೊಳಿಸಿಲ್ಲ ಎಂದು ವಿದೇಶಾಂಗ ಸಚಿವಾಲಯ ಪುನರುಚ್ಚರಿಸಿದ್ದು, ಭಾರತದ ಭೌಗೋಳಿಕ ಅಖಂಡತೆ ಹಾಗೂ ಸಾರ್ವಭೌಮತ್ವದ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ ಎಂಬ ಸಂದೇಶವನ್ನು ಮತ್ತೊಮ್ಮೆ ವಿಶ್ವ ಸಮುದಾಯಕ್ಕೆ ರವಾನಿಸಿದೆ.

7 ತಾಲೂಕುಗಳ 1,932 ಬ್ಲಾಕ್ ವ್ಯಾಪ್ತಿಯಲ್ಲಿದ್ದಾರೆ 11.29 ಲಕ್ಷ ಜನ

3.50 ಲಕ್ಷ ಮನೆಗಳಲ್ಲಿ ಜನಗಣತಿ ಕಾರ್ಯ

▸ ರುದ್ರಗೌಡ ಪಾಟೀಲ

ದಿಗಂತ ವಿಶೇಷ

ಗದಗ: ಇದೇ ಮೊದಲ ಬಾರಿಗೆ ದೇಶದಲ್ಲಿ ಡಿಜಿಟಲ್ ಜನಗಣತಿ ಮಾಡಲಾಗಿದೆ. ಏ.1ರಿಂದ ಆರಂಭವಾದ ಮೊದಲ ಹಂತದ ಜನಗಣತಿ ಮೇ 15ರವರೆಗೆ ಮಾಡಲಾಗಿದೆ. ಜಿಲ್ಲಾಡಳಿತ ಶೇ.100 ಗುರಿ ಸಾಧಿಸಿದೆ. ಈವರೆಗೆ ಜಿಲ್ಲೆಯಲ್ಲಿ 7 ತಾಲೂಕುಗಳ 1,932 ಬ್ಲಾಕ್‌ಗಳ ವ್ಯಾಪ್ತಿಯಲ್ಲಿ 3,50,919 ಮನೆಗಳಲ್ಲಿ ನಡೆದ ಜನಗಣತಿ ಪ್ರಕ್ರಿಯೆಯಲ್ಲಿ 11,29,221 ಜನಸಂಖ್ಯೆ ಅಂದಾಜಿಸಲಾಗಿದೆ.

ಡಿಜಿಟಲ್ ಜಿಲ್ಲೆಯಲ್ಲಿ 2,43,483 ಮನೆಗಳು ಸಂಪೂರ್ಣ ಜನಗಣತಿಯಲ್ಲಿ ಪಾಲ್ಗೊಂಡಿದ್ದರೆ, 3,160 ಮನೆಗಳು ಭಾಗಶಃ ಜನಗಣತಿಯಲ್ಲಿ ಪಾಲ್ಗೊಂಡಿವೆ. 43,433 ಮನೆಗಳು ಖಾಲಿಯಿದ್ದು, 1,304 ಮನೆಗಳು ಬೀಗ ಹಾಕಲಾಗಿದೆ.

7ತಾಲೂಕು, 1932 ಬ್ಲಾಕ್‌ಗಳು: ನರಗುಂದ ತಾಲೂಕಿನ 195 ಬ್ಲಾಕ್‌ಗಳ ಪೈಕಿ 33,343 ಮನೆಗಳ ಜನಗಣತಿಯಲ್ಲಿ 1,03,752 ಜನಸಂಖ್ಯೆ ಹೊಂದಿದೆ. ರೋಣ ತಾಲೂಕಿನ 248 ಬ್ಲಾಕ್‌ಗಳ ಪೈಕಿ 47,881 ಮನೆಗಳ ಜನಗಣತಿಯಲ್ಲಿ 1,42,599 ಜನಸಂಖ್ಯೆ. ಗಜೇಂದ್ರಗಡ ತಾಲೂಕಿನ 233 ಬ್ಲಾಕ್‌ಗಳ ಪೈಕಿ 39,140 ಮನೆಗಳ ಜನಗಣತಿಯಲ್ಲಿ 1,32,055 ಜನಸಂಖ್ಯೆ. ಗದಗ ತಾಲೂಕಿನ 675 ಬ್ಲಾಕ್‌ಗಳ 1,25,244 ಮನೆಗಳ ಜನಗಣತಿಯಲ್ಲಿ 3,88,947 ಜನಸಂಖ್ಯೆ, ಲಕ್ಷ್ಮೇಶ್ವರ ತಾಲೂಕಿನ 196 ಬ್ಲಾಕ್‌ಗಳ ಪೈಕಿ 34,823 ಮನೆಗಳ ಜನಗಣತಿಯಲ್ಲಿ 1,16,510 ಜನಸಂಖ್ಯೆ, ಶಿರಹಟ್ಟಿ ತಾಲೂಕಿನ 163 ಬ್ಲಾಕ್‌ಗಳ ಪೈಕಿ 29,008 ಮನೆಗಳ ಜನಗಣತಿಯಲ್ಲಿ 97,603 ಜನಸಂಖ್ಯೆ ಹಾಗೂ ಮುಂಡರಗಿ ತಾಲೂಕಿನ 242 ಬ್ಲಾಕ್‌ಗಳ ಪೈಕಿ 41,480 ಮನೆಗಳ ಜನಗಣತಿಯಲ್ಲಿ 1,47,761 ಜನಸಂಖ್ಯೆ ಹೊಂದಿದ್ದು, ಒಟ್ಟಾರೆ ಮೊದಲ ಹಂತದ ಜನಗಣತಿಯಲ್ಲಿ 11,29,221 ಜನಸಂಖ್ಯೆ ಇದೆ.

ತಾಲೂಕು	ಬ್ಲಾಕ್‌ಗಳು	ಮನೆಗಳು	ಜನಸಂಖ್ಯೆ
ನರಗುಂದ	175	33.343	1,03,752
ರೋಣ	248	47,881	1.42,599
ಗಜೇಂದ್ರಗಡ	233	39,140	1.32,055
ಗದಗ	675	1,25,244	3,88,941
ಲಕ್ಷ್ಮೇಶ್ವರ	196	34,823	1,16,510
ಶಿರಹಟ್ಟಿ	163	29,008	97,603
ಮುಂಡರಗಿ	242	41,480	1,47,761
ಒಟ್ಟು	1,932	3,50,919	11,29,221

2,837 ಅಧಿಕಾರಿಗಳು-ಸಿಬ್ಬಂದಿ: ಜಿಲ್ಲೆಯಲ್ಲಿ ಏಪ್ರಿಲ್ ತಿಂಗಳಿನಿಂದ ಆರಂಭವಾದ ಮೊದಲ ಹಂತದ ಡಿಜಿಟಲ್ ಜನಗಣತಿಯಲ್ಲಿ 16 ಜನ ಮೇಲಾಧಿಕಾರಿಗಳು, 448 ಜನ ಮೇಲ್ವಿಚಾರಕರು ಹಾಗೂ 2,373 ಜನ ಗಣತಿದಾರರು ಸೇರಿ ಒಟ್ಟು 2,837 ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗಿಯಾಗಿದ್ದಾರೆ.

> ಡಿಜಿಟಲ್ ಜನಗಣತಿ ಮಾಡಲಾಗಿದೆ. ಏ.1ರಿಂದ ಆರಂಭವಾದ ಮೊದಲ ಹಂತದ ಜನಗಣತಿ ಮೇ 15ರವರೆಗೆ ನಡೆದಿದೆ. ಜಿಲ್ಲಾಡಳಿತ ಶೇ.100 ಗುರಿ ಸಾಧಿಸಿದೆ. ಜನಗಣತಿಯಲ್ಲಿ 16 ಮೇಲಾಧಿಕಾರಿಗಳು, 448 ಮೇಲ್ವಿಚಾರಕರು ಹಾಗೂ 2,373 ಗಣತಿದಾರರು ಸೇರಿ ಒಟ್ಟು 2,837 ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗಿಯಾಗಿದೆ. ಮೊದಲ ಹಂತದ ಜನಗಣತಿ ಯಶಸ್ವಿಯಾಗಿಸಿದ್ದಾರೆ.
> ■ ಡಾ.ದುರುಗೇಶ ಕೆ.ಆರ್., ಅಪರ ಜಿಲ್ಲಾಧಿಕಾರಿ, ಗದಗ

ಬೀಗ ಹಾಕಿದ್ದವು 1,304 ಮನೆಗಳು ಜಿಲ್ಲೆಯ ವಿವಿಧ ಭಾಗಗಳಲ್ಲಿ ಏ.1ರಿಂದ ಮೇ 15ರವರೆಗೆ ನಡೆದ ಮೊದಲ ಹಂತದ ಜನಗಣತಿಯಲ್ಲಿ ನರಗುಂದ ತಾಲೂಕಿನಲ್ಲಿ 179, ರೋಣ 116, ಗಜೇಂದ್ರಗಡ 121, ಗದಗ 683, ಲಕ್ಷ್ಮೇಶ್ವರ 59, ಶಿರಹಟ್ಟಿ 22 ಹಾಗೂ ಮುಂಡರಗಿ ತಾಲೂಕಿನಲ್ಲಿ 124 ಮನೆಗಳು ಸೇರಿ ಒಟ್ಟಾರೆ 1,304 ಮನೆಗಳಿಗೆ ಬೀಗ ಹಾಕಿರುವುದು ಕಂಡು ಬಂದಿದೆ.

ಡಾ.ಮೂಜಗಂ ಸಾಹಿತ್ಯ ಪ್ರಶಸ್ತಿ ಪ್ರದಾನ



ಹುಬ್ಬಳ್ಳಿ: ಮೂಜಗಂ ಅವರ ಸಾಹಿತ್ಯ ಅದ್ಭುತವಾಗಿತ್ತು. ಅವರು ಸಮಾಜದ ದೊಡ್ಡ ವ್ಯಕ್ತಿಯಾಗಿದ್ದರು. ಅವರಿಂದ ಸಹಾಯ, ಸಹಾಕರ ಪಡೆದವರು ಅವರನ್ನು ಮರೆತಿರುವುದು ದುಃಖದ ಸಂಗತಿ. ನೂರಾರು ಸ್ವಾಮಿಗಳಿಗೆ ದೀಕ್ಷೆ ನೀಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಆ ದೀಕ್ಷೆ ಪಡೆದ ಸ್ವಾಮಿಗಳು ರಾಜ್ಯ ಪ್ರತಿಷ್ಠಿತ ಮಠಗಳ ಮಠಾಧೀಶರಾಗಿದ್ದಾರೆ ಎಂದು ಮಣಕವಾಡದ ಅಭಿನವ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ನಗರದ ಮೂರು ಸಾವಿರ ಮಠದ ಆವಣದಲ್ಲಿ ಲಿಂ.ಗಂಗಾಧರ ರಾಜಯೋಗೀಂದ್ರ ಸ್ವಾಮೀಜಿಗಳ 23ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ ಕೊಡಮಾಡುವ ಡಾ.ಮೂಜಗಂ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಹಾವೇರಿ ಹುಕ್ಕೇರಿ ಮಠದ ಸದಾಶಿವ ಸ್ವಾಮೀಜಿ ಮಾತನಾಡಿ, ಮೂಜಗಂ ಸಾಹಿತ್ಯ, ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದರು. ಜನಸಾಮಾನ್ಯರ ಹಂತಕ್ಕೆ ಇಳಿದು ಜೀವನ ಸಾಗಿಸಿದರು. ಸ್ವಾಮಿ ಎಂದರೆ ಜನರ ಸೇವಕ ಎಂದು ಹಾನಗಲ್ ಕುಮಾರಸ್ವಾಮಿ ಹೇಳುತ್ತಿದ್ದರು. ಅದನ್ನು ಮೂಜಗಂ ಪಾಲಿಸಿಕೊಂಡು ಬಂದಿದ್ದರು. ಬೆಳ್ಳಿಯ ತಾರೆಯಾಗಿ ಬದುಕಿದರು. ಅವರ ವ್ಯಕ್ತಿತ್ವ ಬೇರೆಯವರಲ್ಲಿ ಕಾಣಲು ಸಾಧ್ಯವಿಲ್ಲ ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅಭಿನವ ಸಿದ್ಧಾರೂಢ ಸ್ವಾಮೀಜಿ, ಕೆಲವರು ಮಣ್ಣಾದರೂ ನಮ್ಮ ಮಧ್ಯೆಯೇ ಇರುತ್ತಾರೆ. ಇನ್ನೂ ಕೆಲವರು ಬದುಕಿದ್ದರೂ ಸತ್ತ ಹಾಗೆ ಇರುತ್ತಾರೆ. ಮೂಜಗಂ ಅವರು ನಮ್ಮ ನಡುವೆ ಇಲ್ಲದಿದ್ದರೂ, ಅವರು ಸಮಾಜದ ಅಭ್ಯುದಯಕ್ಕೆ ಶ್ರಮಿಸಿದ ರೀತಿ ಇನ್ನೂ ಕಣ್ಮುಂದೆಯೇ ಇದೆ ಎಂದರು.

ವಿ.ಪ.ಮಾಜಿ ಸದಸ್ಯ ಮೋಹನ ಲಿಂಬಿಕಾಯಿ, ವಿಧಾನ ಪರಿಷತ್ ಮಾಜಿ ಸಭಾಪತಿ ವೀರಣ್ಣ ಮತ್ತಿಕಟ್ಟಿ ಮಾತನಾಡಿದರು.ಲಿಂ.ಗಂಗಾಧರ ರಾಜಯೋಗೀಂದ್ರ ಸ್ವಾಮೀಜಿಗಳ 23ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ ಕೊಡಮಾಡುವ ಡಾ. ಮೂಜಗಂ ಸಾಹಿತ್ಯ ಪ್ರಶಸ್ತಿಯನ್ನು ಅಭಿನವ ಸಿದ್ಧಾರೂಢ ಸ್ವಾಮೀಜಿ ನೀಡಿ ಗೌರವಿಸಲಾಯಿತು.

ಮೂರು ಸಾವಿರ ಮಠದ ಜಗದ್ಗುರು ಶ್ರೀ ಗುರುಸಿದ್ಧ ರಾಜಯೋಗೀಂದ್ರ ಸವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಎರಡೆತ್ತಿನಮಠದ ಸಿದ್ಧಲಿಂಗ ಮಹಾಸ್ವಾಮೀಜಿ, ರುದ್ರಾಕ್ಷಿ ಮಠದ ಬಸವಲಿಂಗ ಸ್ವಾಮೀಜಿ, ವಿರಕ್ತಮಠದ ಶಿವಬಸವ ಸ್ವಾಮೀಜಿ, ಅಭಿನವ ರೇವಣಸಿದ್ಧೇಶ್ವರ ಸ್ವಾಮೀಜಿ, ಚರಲಿಂಗ ಸ್ವಾಮೀಜಿ, ಎಸ್.ಆರ್.ಕೆಂಚಣ್ಣನವರ, ಅಮರೇಶ ಹಿಪ್ಪರಗಿ, ಎನ್.ವೈ.ಮಟ್ಟಿಹಾಳ, ಚನ್ನಬಸಪ್ಪ ಧಾರವಾಡಶೆಟ್ಟರ ಹಾಗೂ ಪಾಲಿಕೆ ಸದಸ್ಯೆ ಸುನೀತಾ ಬುರಬುರೆ ಇದ್ದರು.

ಬೆಳಗಾವಿ ಪಾಲಿಕೆಗೆ ಮುತ್ತಿಗೆ

ವಾಟಾಳ್ ನಾಗರಾಜ್ ಬಂಧನ, ಬಿಡುಗಡೆ



ಬೆಳಗಾವಿ: ಇಲ್ಲಿನ ಮಹಾನಗರ ಪಾಲಿಕೆಗೆ ವಿವಿಧ ಕನ್ನಡಪರ ಸಂಘಟನೆಗಳು ಹಾಗೂ ಹಿರಿಯ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಮುತ್ತಿಗೆ ಹಾಕುವುದಕ್ಕೆ ಮುಂದಾದ ವೇಳೆ ಪೊಲೀಸರು ವಶಕ್ಕೆ ಪಡೆದು ನಗರದ ಸರ್ಕಿಟ್ ಹೌಸ್ ಬಳಿ ಬಿಡುಗಡೆಗೊಳಿಸಿದರು.

ಮಂಗಳವಾರ ಮಹಾನಗರ ಪಾಲಿಗೆಗೆ ಮುತ್ತಿಗೆ ಹಾಕಿರುವ ವೇಳೆ ಹಿರಿಯ ಹೋರಾಟಗಾರ ವಾಟಾಳ್ ನಾಗರಾಜ್ ಅವರು ಮಾತನಾಡಿ, ಬೆಳಗಾವಿ ಮಹಾನಗರ ಪಾಲಿಕೆ ಗಂಡು ಮೆಟ್ಟಿದ ನಾಡು ಕರ್ನಾಟಕದಲ್ಲಿದ್ದು, ಜೂನ್ 2ರೊಳಗೆ ಯಾವುದೇ ಪಕ್ಷದವರಾಗಿರಲಿ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಗಡಿ ವಿವಾದದಲ್ಲಿ ಮಹಾಜನ ವರದಿ ಅಂತಿಮ ಎಂಬ ನಿರ್ಣಯ ಪಾಸ್ ಮಾಡಬೇಕು. ಇಲ್ಲದಿದ್ದರೇ, ಬೆಳಗಾವಿಯಲ್ಲಿ ಕಂಡರಿಯದಂತಹ ಕ್ರಾಂತಿಯಾಗುತ್ತದೆ ಎಂದು ಎಚ್ಚರಿಕೆ ನೀಡುವುದರ ಮೂಲಕ ಅಸಮಾಧಾನ ಹೊರಹಾಕಿದರು.ಹಲವು ದಶಕಗಳಿಂದ ಬೆಳಗಾವಿ-ಮಹಾರಾಷ್ಟ್ರ ಗಡಿ ವಿಚಾರದ ಬಗ್ಗೆ ಕನ್ನಡಿಗರು ಮೇಲಿಂದ ಮೇಲೆ ಹೋರಾಟವನ್ನು ಮಾಡಬೇಕಾಗಿರುವ ಪರಿಸ್ಥಿತಿ ಎದುರಾದೆ. ನಮ್ಮ ಕನ್ನಡ ನೇಲಕ್ಕೆ ಕನ್ನಡಿಗರೇ ಹೋರಾಟ ಮಾಡಬೇಕಾಗುತ್ತದೆ.

ಈ ಹಿಂದೆ ಪಾಲೊಕೆಯ ಆಡಳಿತವು ಮರಾಠಿ ಭಾಷಿಕರ ಕೈ ವಶದಲ್ಲಿ ಇತ್ತು ಇದೀಗ ಅಪಟ್ಟ ಕನ್ನಡಿಗರೇ ಪಾಲಿಕೆಯ ಮೇಯರ್ ಉಪಮೇಯರ್ ಆಯ್ಕೆ ಆಗಿದ್ದಾರೆ. ಆದರೂ ಬೆಳಗಾವಿ ಕನ್ನಡದ ಆಸ್ತಿ ಎಂದು ಪಾಲಿಕೆಯಲ್ಲಿ ಮಹಾಜನ ವರದಿ ಅಂತಿಮ ಎಂಬ ನಿರ್ಣಯ ಪಾಸ್ ಮಾಡುವುದಕ್ಕೆ ಮೀನಾಮೇಷ ಮಾಡುತ್ತಿರುವುದು ಎಷ್ಟರಮಟ್ಟಿಗೆ ಸರಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜೂನ್ 2ರ ಒಳಗಾಗಿಯೇ ಮಹಾನಗರ ಪಾಲಿಕೆಯಲ್ಲಿ ಮಹಾಜನ ವರದಿಯನ್ನು ಸರ್ಕಾರಕ್ಕೆ ಕೂಡಲೇ ಒಪ್ಪಿಸಬೇಕೆಂದು ಪ್ರತಿಭಟನೆಯ ವೇಳೆ ಆಗ್ರಹಿಸಿದರು. ಇದಕ್ಕೂ ಮೊದಲು ಪಾಲಿಕೆಯ ಎದುರು ಕನ್ನಡಪರ ಸಂಘಟನೆಗಳ ಕಾರ್ಯಕರ್ತರಿಗೆ ಹಾಗೂ ಪೊಲೀಸರ ನಡುವೆ ಕೆಲಕಾಲ ವಾಗ್ವಾದಗಳು ನಡೆದವು. ಬಳಿಕ ಪಾಲಿಕೆಯ ಎದುರು ಹೋರಾಟಗಾರರ ಪ್ರತಿಭಟನೆಯ ಕಾವು ಹೆಚ್ಚಾಗುತ್ತಿದ್ದಂತೆಯೇ ನೂರಾರು ಹೋರಾಟಗಾರರನ್ನು ಪೊಲೀಸರು ಬಂಧಿಸಿ ನಗರದ ಸರ್ಕಿಟ್ ಹೌಸ್ ಬಳಿ ಬಿಡುಗಡೆಗೊಳಿಸಿದರು.

ದೂರು, ಪ್ರತಿದೂರು ದಾಖಲು

ಹುಬ್ಬಳ್ಳಿ: ಇಲ್ಲಿಯ ಲಿಂಗರಾಜ ನಗರದಲ್ಲಿ ಕ್ಷುಲ್ಲಕ ಕಾರಣಕ್ಕೆ ಎರಡು ಗುಂಪುಗಳ ಮಧ್ಯೆ ಜಗಳ ನಡೆದಿದ್ದು, ಕಲ್ಲು, ಕಟ್ಟಿಗೆಯಿಂದ ಪರಸ್ಪರ ಹೊಡೆದಾಡಿಕೊಂಡು ಜೀವ ಬೆದರಿಕೆ ಹಾಕಿರುವ ಕುರಿತು ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದೂರು, ಪ್ರತಿದೂರು ದಾಖಲಾಗಿವೆ.

ಸ್ಕೂಟಿ ನಿಧಾನವಾಗಿ ಚಲಿಸಿದ ಕಾರಣಕ್ಕೆ ಮಂಜು, ರಾಜು ಹಾಗೂ ರಿಯಾಜ್ ಎಂಬುವರು ಸಾಹೀಲ್ ಬಳ್ಳಾರಿ ಹಾಗೂ ಸೈಯದ್ ಬಿಜಾಪೂರ ಎಂಬುವರೊಂದಿಗೆ ಜಗಳ ತೆಗೆದು ಹಲ್ಲೆ ನಡೆಸಿದಲ್ಲದೇ ಜೀವ ಬೆದರಿಕೆ ಹಾಕಿದ್ದಾರೆ ಎಂದು ಸಾಹೀಲ್ ಬಳ್ಳಾರಿ ದೂರು ನೀಡಿದ್ದಾರೆ.ಇನ್ನೂ ರಸ್ತೆಯಲ್ಲಿ ಹೋಗುತ್ತಿದ್ದ ಅಪರಿಚಿತ ಹೆಣ್ಣು ಮಕ್ಕಳಿಗೆ ಚುಡಾಯಿಸುತ್ತಿದ್ದನ್ನು ಪ್ರಶ್ನಿಸಿದ್ದಕ್ಕೆ ಸಿಟ್ಟಾಗಿ ಸಾಹೀಲ್ ಬಳ್ಳಾರಿ ಹಾಗೂ ಸೈಯದ್ ಬಿಜಾಪುರ ನಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಮಲ್ಲಿಕಾರ್ಜುನ(ರಾಜು) ಎಂಬಾತ ಪ್ರತಿದೂರು ದಾಖಲಿಸಿದ್ದಾರೆ.

ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ

ಧಾರವಾಡ: ಅಪ್ರಾಪ್ತ ವಿದ್ಯಾರ್ಥಿನಿ ಮೇಲೆ ವ್ಯಕ್ತಿಯೋರ್ವ ಲೈಂಗಿಕ ದೌರ್ಜನ್ಯ ಎಸಗಿದ ಘಟನೆ ನಡೆದಿದೆ. ಖಾಜಾಸಾಬ್ ಪಟಾಣ (23) ಎಂಬಾತ ಅಪ್ರಾಪ್ತ ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಸದ್ಯ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ. ಈ ಕುರಿತು ವಿದ್ಯಾಗಿರಿ ಠಾಣೆಯಲ್ಲಿ ಪ್ರಕರಣ ದಾಕಲಾಗಿದೆ.

ಅವಕಾಶದ ಸದ್ಬಳಕೆಯಾಗಲಿ: ಡಾ.ಪ್ರಸಾದ



ಧಾರವಾಡ: ಉದ್ಯೋಗ ಕ್ಷೇತ್ರದಲ್ಲಿ ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಸಾಕಷ್ಟು ಅವಕಾಶಗಳಿದ್ದು, ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಲು ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಹೇಳಿದರು.

ನಗರದ ಜನತಾ ಶಿಕ್ಷಣ ಸಮಿತಿ ಸಂಸ್ಥೆಯ ಕಲಾ ವಿಭಾಗದ ವಿದ್ಯಾರ್ಥಿಗಳ ಬೀಳಕೊಡುಗೆ ಸಮಾರಂಭ ಉದ್ಘಾಟಿಸಿ, ಜೀವನದಲ್ಲಿ ಯಶಸ್ಸು ಗಳಿಸಿ, ಕಠಿಣ ಪರಿಶ್ರಮ, ನಿರಂತರ ಅಧ್ಯಯನ ಅಗತ್ಯ ಎಂದರು. ಕಲಾ ವಿಭಾಗದ ಅಭ್ಯರ್ಥಿಗಳಿಗೆ ಐಎಎಸ್, ಕೆಎಎಸ್, ಐಎಫ್‌ಎಸ್, ಪಿಎಸ್‌ಐ, ಎಸ್.ಎಸ್.ಸಿ, ಎಫ್‌ಡಿಎ, ಎಸ್‌ಡಿಎ ಹೀಗೆ ಅನೇಕ ಉದ್ಯೋಗಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹುದ್ದೆಗಳಿವೆ. ಡಿಇಡಿ, ಬಿಇಡಿ, ಉನ್ನತ ಶಿಕ್ಷಣ ಪೂರೈಸಿದರೆ ಬೋಧನಾ ಕ್ಷೇತ್ರದಲ್ಲೂ ವಿಪುಲ ಅವಕಾಶಗಳಿವೆ ಎಂದರು.

ಪ್ರಸ್ತುತ ವರ್ಷದಿಂದ ಬಿಎ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಮೂರು ವರ್ಷದ ಪಠ್ಯಕ್ರಮದ ಜೊತೆ ಸಂಪನ್ಮೂಲ ವ್ಯಕ್ತಿಗಳಿಗೆ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೂಡ ನೀಡುತ್ತಿರುವುದಾಗಿಯೂ ತಿಳಿಸಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ಮತ್ತು ಪ್ರಮಾಣಪತ್ರ ವಿತರಿಸಲಾಯಿತು. ಡಾ.ಸೂರಜ್ ಜೈನ್, ಡಾ. ಆರ್.ವಿ.ಚಿಟಗುಪ್ಪಿ, ವಾಣಿಶ್ರೀ ಕುಲಕರ್ಣಿ, ಅಶೋಕ ಎಂ., ರೇಣುಕಾ ಜಿ. ಇದ್ದರು.

ರೇಬಿಸ್‌ನಿಂದ ಯುವಕ ಸಾವು

ಬಾಗಲಕೋಟೆ: ಹುಚ್ಚು ನಾಯಿ ಕಡಿತದ ಬಳಿಕ ನಿರ್ಲಕ್ಷ್ಯ ತೋರಿದ್ದ ಯುವಕನೊಬ್ಬ, ರೇಬಿಸ್ ವೈರಸ್‌ನಿಂದ ಸೋಮವಾರ ರಾತ್ರಿ ಮೃತಪಟ್ಟ ಘಟನೆ ಇಲ್ಲಿನ ಜಿಲ್ಲಾ ಆಸ್ಪತ್ರೆಯಲ್ಲಿ ನಡೆದಿದೆ. ವಿಜಯಪುರ ಜಿಲ್ಲೆಯ ನಿಡಗುಂದಿ ತಾಲೂಕಿನ ಗೊಳಸಂಗಿ ಗ್ರಾಮದ ಪ್ರದೀಪ ಚಂದ್ರಶೇಖರ ಹಳೇರೊಳ್ಳಿ (22) ಮೃತಪಟ್ಟ ಯುವಕ. ಈತ ಕಳೆದ ಮಾರ್ಚ್‌ನಲ್ಲಿ ತಾಯಿ ತವರೂರಾದ ಬೀಳಗಿ ತಾಲೂಕಿನ ಮನ್ನಿಕೇರಿ ಗ್ರಾಮದಲ್ಲಿ ನಡೆದ ಚಂದ್ರಾದೇವಿ ಜಾತ್ರೆಗೆ ಬಂದಿದ್ದ. ಈ ವೇಳೆ ಆತನಿಗೆ ನಾಯಿ ಕಡಿದಿತ್ತು. ಆದಕ್ಕೆ ಸೂಕ್ತ ಚಿಕಿತ್ಸೆ ಪಡೆಯದೆ ನಿರ್ಲಕ್ಷ್ಯ ಮಾಡಿದ್ದ. ಮೂರು ತಿಂಗಳ ವರೆಗೂ ಆತನಿಗೆ ಯಾವುದೇ ಮುನ್ಸೂಚನೆ ಅಥವಾ ತೊಂದರೆ ಆಗಿರಲಿಲ್ಲ. ಸೋಮವಾರ ಬೆಳಗ್ಗೆ ಬೆವರು ಬರುವುದು, ಒಂದು ರೀತಿ ನೋವು ಆಗುವುದು ಆರಂಭಿಸಿದಾಗ ಗೊಳಸಂಗಿಯಿಂದ ಬಾಗಲಕೋಟೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಪರೀಕ್ಷಿಸಿದ ವೈದ್ಯರು, ಇದು ರೇಬಿಸ್ ರೋಗವಿದ್ದು, ಜಿಲ್ಲಾಸ್ಪತ್ರೆಗೆ ಕರೆದೊಯ್ಯಲು ಸಲಹೆ ಮಾಡಿದ್ದರು. ಜಿಲ್ಲಾ ಆಸ್ಪತ್ರೆಗೆ ದಾಖಲಿಸುವ ವೇಳೆ ರೇಬಿಸ್ ಸೋಂಕು ಇಡೀ ದೇಹ ಹರಡಿ, ಯುವಕ ಒಂದು ರೀತಿ ವಿಚಿತ್ರವಾಗಿ ವರ್ತಿಸುತ್ತಿದ್ದ. ಚಿಕಿತ್ಸೆ ಫಲಿಸದೆ ಸೋಮವಾರ ಮಧ್ಯರಾತ್ರಿ ಮೃತಪಟ್ಟಿದ್ದಾನೆ.

ಅಂತರ್ ರಾಜ್ಯ ಕಳ್ಳರಿಬ್ಬರ ಬಂಧನ

ಹುಬ್ಬಳ್ಳಿ: ವಿದ್ಯಾರ್ಥಿ ನಿಲಯ ಹಾಗೂ ಮಹಾವಿದ್ಯಾಲಯಗಳ ಗುರಿಯಾಗಿಸಿಕೊಂಡು ಲ್ಯಾಪ್‌ಟಾಪ್ ಕಳುವು ಮಾಡುತ್ತಿದ್ದ ಇಬ್ಬರು ಅಂತರ್ ರಾಜ್ಯ ಕಳ್ಳರನ್ನು ವಿದ್ಯಾನಗರ ಪೊಲೀಸರು ಆಂಧ್ರಪ್ರದೇಶದಲ್ಲಿ ಬಂಧಿಸಿ ಅವರಿಂದ 5.40 ಲಕ್ಷ ರೂ. ಮೌಲ್ಯ 6 ಲ್ಯಾಪ್‌ಟಾಪ್ ಹಾಗೂ 12 ಮೊಬೈಲ್ ಫೋನ್‌ಗಳ ವಶಕ್ಕೆ ಪಡೆದಿದ್ದಾರೆ.ಆಂಧ್ರಪ್ರದೇಶದ ವೆಂಕಟಗಿರಿ ಕೋಟಾ ಜಿಲ್ಲೆಯ ಚೌಡೇಪಲ್ಲಿಯ ನಿವಾಸಿಗಳಾದ ಸತ್ಯಮೇಲು ಹಾಗೂ ಸರವಣ ಎಂಬುವರು ಬಂಧಿ ಆರೋಪಿಗಳು. ಇತ್ತೀಚೆಗೆ ವಿದ್ಯಾನಗರದಲ್ಲಿ ಕಾಲೇಜ್ ವಿದ್ಯಾರ್ಥಿಗಳ ವೇಷದಲ್ಲಿ ಕಾಲೇಜ್ ಹಾಗೂ ಪಿಜಿಗಳಿಗೆ ಹೋಗಿ 9ಕ್ಕೂ ಹೆಚ್ಚು ಲ್ಯಾಪ್‌ಟಾಪ್ ಹಾಗೂ 12 ಮೊಬೈಲ್ ಫೋನ್‌ಗಳ ಕಳುವು ಮಾಡಿ ಪರಾರಿಯಾಗಿದ್ದರು. ಈ ಕುರಿತು ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿಗಳಿಗೆ ಬಲೆ ಬೀಸಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.ಪೊಲೀಸ್ ಅಧಿಕಾರಿ ಜಾಕ್ಸನ್ ಡಿಸೋಜಾ ಮಾರ್ಗದರ್ಶನದಲ್ಲಿ ಪಿಎಸ್‌ಐ ಪುನೀತ್ ಕುಮಾರ್, ಸುನೀಲ್ ಎಂ., ಹಾಗೂಕ್ಕೈಂಸಿಬ್ಬಂದಿ ಪರಶುರಾಮ ಹಿರಗನ್ನವರ, ಶಿವಾನಂದ ತಿರುಕಣ್ಣವರ, ಅನಿಲ ಹುಗ್ಗಿ, ಅರುಣ ಹೊಸಗೌಡರ, ಸಂತೋಷ್ ಆಡ್ನೂರ್, ಬಸವರಾಜ್ ಭಾವಿಹಾಳ, ರಾಕೇಶ್ ಬಟಕುರ್ಕಿ, ಸಂಜು ರೆಡ್ಡಿ ಕಣಬೂರ, ಮಂಜುನಾಥ್ ಕಮತಾರ್ ತಂಡ ಕಾರ್ಯಾಚರಣೆಯಲ್ಲಿದ್ದರು.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ(ಕ್ವಿಂ)
ಕಡಲೆಕಾಳು	2250	6189
ಉದ್ದಿನಕಾಳು	1510	6071
ಹೆಸರುಕಾಳು	1550	8985
ನೆಲಗಡಲೆ (ಶೇಂಗಾ)	1669	9090
ಜೋಳ	809	4806
ಮೆಕ್ಕೆಜೋಳ	1931	1931
ಮಡಿಕೆ (ಮಟಕಿ)	7740	14902
ಈರುಳ್ಳಿ	500	1900
ಆಲೂಗಡ್ಡೆ	1200	1800
ಕುಸುಬೆ	5089	5089
ಸೋಯಾಬಿನ್	6889	7410
ತೊಗರಿ	4459	5159
ಗೋಧಿ	2207	4300

ಕೊಲೆ ಆರೋಪಿಗಳ ಸುಳಿವು ನೀಡಿ




ಕಾರವಾರ: ಇತ್ತೀಚೆಗೆ ಅಂಕೋಲಾ ನಗರದಲ್ಲಿ ಉದ್ಯಮಿ ಗೋಪಾಲಕೃಷ್ಣ ರಾಮಚಂದ್ರ ನಾಯಕ ಇವರ ಮೇಲೆ ನಡೆದ ಕೊಲೆ ಯತ್ನದ ಪ್ರಮುಖ ಆರೋಪಿಗಳಾದ ಮೊಹಮ್ಮದ್ ಇಮ್ರಾನ ಸಲ್ಮಾನಿ (46 ವರ್ಷ) ಸಾ.ಮಕ್‌ದುಮ್ ಅಸ್ರಫ್ ನಗರ ,ಕೋನ್ಸುವಾಮ ಕೊರ್ಟಾಲಿಮ್, ಮರ್ಮಗೋವಾ, ಸೌತ್ ಗೋವಾ ಮತ್ತು ಅಬ್ದುಲ್ ಗನಿ (31) ಸಾ. ಕೋಟೆ ಓಣಿ, ಮಾಸೂರು ಪೋಸ್ಟ್ ಹಿರೇಕೆರೂರು ಹಾವೇರಿ ಜಿಲ್ಲೆ ಇವರು ಈವರೆಗೆ ದಸ್ತಗಿರಿಗೆ ಸಿಗದೇ ತಲೆಮರೆಸಿಕೊಂಡಿರುತ್ತಾರೆ. ಆರೋಪಿಗಳಿಗೆ ದಸ್ತಗಿರಿ ಮಾಡಿ ವಿಚಾರಣೆ ಕೈಗೊಳ್ಳುವುದು ಅವಶ್ಯವಿದ್ದು, ಆರೋಪಿಗಳ ಬಗ್ಗೆ ಸುಳಿವು ಮಾಹಿತಿ ಇದ್ದಲ್ಲಿ ಪೊಲೀಸ್ ನಿರೀಕ್ಷಕರ ದೂ.ಸಂಖ್ಯೆ: 9480805258ಗೆ ಮಾಹಿತಿ ಒದಗಿಸುವ ಮಾಹಿತಿದಾರರಿಗೆ ತಲಾ 25,000 ರೂ. ಬಹುಮಾನ ನೀಡಲಾಗುವುದು ಹಾಗೂ ಮಾಹಿತಿದಾರರ ಮಾಹಿತಿಯನ್ನು ಗೌಪ್ಯವಾಗಿಡಲಾಗುವುದು ಎಂದು ಪ್ರಕರಣದ ತನಿಖಾಧಿಕಾರಿ ಹಾಗೂ ಯಲ್ಲಾಪುರ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು ತಿಳಿಸಿದ್ದಾರೆ.

ಪರಿಶ್ರಮ, ಶಿಸ್ತು ಭವಿಷ್ಯದ ಹೂಡಿಕೆ



ಧಾರವಾಡ: ವಿದ್ಯಾರ್ಥಿಗಳ ಪರಿಶ್ರಮ ಮತ್ತು ಶಿಸ್ತು ಪರಿಪಾಲನೆ ಭವಿಷ್ಯದ ಜೀವನಕ್ಕೆ ಹೂಡಿಕೆಯಾಗಲಿದೆ. ಬದುಕಿನಲ್ಲಿ ಬರುವ ಅವಕಾಶಗಳ ಸದ್ಬಳಕೆಯಿಂದ ಉನ್ನತ ಸ್ಥಾನ ಅಲಂಕರಿಸಲು ಮಕ್ಕಳ ತಜ್ಞೆ ಡಾ. ಶುಭಲಕ್ಷ್ಮಿ ನಾಯಕ್ ಹೇಳಿದರು.

ಎಸ್‌ಡಿಎಂ ವೈದ್ಯಕೀಯ ಮಹಾವಿದ್ಯಾಲಯ ಸತ್ತೂರಿನ ಡಾ. ವೀರೇಂದ್ರ ಹೆಗ್ಗಡೆ ಕಲಾಕ್ಷೇತ್ರದಲ್ಲಿ ಸಿನೆಮಾಥೆಕ್, ದೀಪಗಳು, ಕ್ಯಾಮೆರಾ ಆಕ್ಷನ್ ಘೋಷದೊಂದಿಗೆ ಮಂಗಳವಾರ ಹಮ್ಮಿಕೊಂಡ ವಾರ್ಷಿಕ ಸಾಂಸ್ಕೃತಿಕ 2026ರ ಉತ್ಸವದಲ್ಲಿ ಮಾತನಾಡಿದರು. ಯಾವುದೇ ಸಂಸ್ಥೆಗಳಲ್ಲಿ ಉತ್ತಮ ಅಡಿಪಾಯವಿದ್ದರೆ ಮಾತ್ರ ಶ್ರೇಷ್ಠ ವೃತ್ತಿಪರರಾಗಿ ಬೆಳೆಯಲು ಅನುಕೂಲ ಎಂದರು.

ಎಸ್‌ಡಿಎಂ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯ ಡಾ.ವಿಜಯ ಕುಲಕರ್ಣಿ ಮಾತನಾಡಿ, ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿದಾಗ ಮಾತ್ರವೇ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ ಎಂದರು. ಎಸ್‌ಡಿಎಂ ವಿವಿಯ ಉಪಕುಲಪತಿ ಡಾ.ನಿರಂಜನಕುಮಾರ್, ಕಾರ್ಯನಿರ್ವಹಾಕ ನಿರ್ದೇಶಕಿ ಪದ್ಮಲತಾ ನಿರಂಜನ್ ಉದ್ಘಾಟಿಸಿದರು. ಸಹ ಉಪಕುಲಪತಿ ವಿ. ಜೀವಂದರಕುಮಾರ್, ವೈದ್ಯಕೀಯ ಅಧೀಕ್ಷಕ ಡಾ.ಕಿರಣ ಹೆಗ್ಡೆ, ಡಾ.ಚಿದೇಂದ್ರ ಶೆಟ್ಟರ್ ಇದ್ದರು. ವಿದ್ಯಾರ್ಥಿಗಳು ಹೊರತಂದ 18ನೇ ಆವೃತ್ತಿಯ ಸ್ಟಿಲ್ ವಾಟರ್ ಪುರವಣಿ ಡಾ.ಮಧುಸೂದನ್ ಕಟ್ಟಿ ಬನಿಡುಗಡೆ ಮಾಡಿದರು. ಡಾ.ಶುಭಲಕ್ಷ್ಮಿ ಹಾಗೂ ಡಾ.ಮಧುಸೂದನ್ ಕಟ್ಟಿ ಅವರನ್ನು ಸನ್ಮಾನಿಸಲಾಯಿತು. ಸೌಮ್ಯ ಸ್ವಾಗತಿಸಿದರು. ಅನೀಶ್ ನಿರೂಪಿಸಿದರು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.

CHANGE OF NAME

I, **IMRAN ALI NIYAZ ALI KHAN (Old Name)** R/o #SF-02, The Grove Residency, Shabari Nagar, Kusugal Road, Keshwapur, Hubli-580023 have changed my name to **IMRAN KHAN (New Name)**. Vide Affidavit Sworn Before Notary S.F. Huligol on 22-05-2026

ಹೆಸರಿನಲ್ಲಿ ಬದಲಾವಣೆ

ನಾನು, **ಶ್ರೀಮತಿ ಶಿವಬಸಮ್ಮ ಪಾಟೀಲ ತಂ: ಶಾಂತಗೌಡ** ಸಾ: ಜಾಲಿಹಾಳ ತಾ: ಬದಾಮಿ, ಜಿ: ಬಾಗಲಕೋಟೆ 587114, ಇಂದು ನಾನು ಪ್ರಮಾಣೀಕರಿಸುವದೇನೆಂದರೆ ನನ್ನ ಆಧಾರ ಕಾರ್ಡನಲ್ಲಿ ನನ್ನ ಹೆಸರು **ಶಿವಬಸಮ್ಮ ಪಾಟೀಲ,** ಅಂತಾ ಇರುತ್ತದೆ. ಆದರೆ ನನ್ನ ಮದುವೆಯಾದ ನಂತರ ನನ್ನ ಹೆಸರು **ಎಸ್. ಎಸ್. ಶಿವಾನಿ** ಅಂತಾ ಬದಲಾವಣೆ ಆಗಿರುತ್ತದೆ ಕಾರಣ ಆಧಾರ ಕಾರ್ಡಿನಲ್ಲಿರುವ **ಶಿವಬಸಮ್ಮ ಪಾಟೀಲ** ಅಂತಾ ಇರುವ ನನ್ನ ಹೆಸರನ್ನು ತಗೆದು ಹಾಕಿ ಆ ಸ್ಥಳದಲ್ಲಿ ನನ್ನ ನಿಜವಾದ/ ಸರಿಯಾದ ಹೆಸರು **ಎಸ್. ಎಸ್. ಶಿವಾನಿ** ಅಂತಾ ದೃಡೀಕರಿಸುವ ಸಲುವಾಗಿ ನಾನು **ಶ್ರೀ. ಎಸ್. ಜಿ. ಮುತ್ತಗಿ,** ನೋಟರಿಯವರ ಸಮಕ್ಷಮದಲ್ಲಿ ದಿನಾಂಕ: 26-05-2026 ರಂದು ಪ್ರಮಾಣ ಪತ್ರ ಮಾಡಿರುತ್ತೇನೆ.

CHANGE OF NAME

I, **NIKITHA BHARAT KUMAR** (Old Name) Resident of Flat No 202, 2nd Floor, Guruprasad Apartment, 3rd Main Road Kempageri, Ramnagar, Dharwad, Hubballi – Dharwad City - 580001, Karnataka, India, have changed my name as **NIKITHA ANIT SEMLANI** (New Name) for all purposes affidavit Dtd.: 26-05-2026 sworn before notary **Bidaralli N. B.**

CHANGE OF NAME

I, **FAIZA JAFFAR SHAIKH** (Old Name) R/o 1540 Near High church Road Muslim Galli Karwar 581301, have changed my name as **FAIZA SAYED AFZAL SAYED** (New Name) henceforth I will be called and recognized by new name for all future purposes, dated: 26/05/2026.

CHANGE OF NAME

I, **RIYAZ AHMED BIJAPURI (Old Name)** R/o #26, Noorani Plot, New Ayodhyanagar, Old Hubli-580024 have changed my name to **RIYAZ AHMED BIJAPUR (New Name)**. Vide Affidavit Sworn Before Notary S.F. Huligol on 22-05-2026

CHANGE OF NAME

I, **RAISA FATIMA MOHAMMED AARIS SHAIKH (Old Name)** R/o #252, National Town, Mantur Road, Hubli-580020 have changed my name to **RAISA FATIMA SHAIKH (New Name)**. Vide Affidavit Sworn Before Notary T.G. Balannavar on 25-05-2026

CHANGE OF NAME

I, **SAJAY GOUTAMCHAND KATARIA** (Old Name) Resident of 97, Adarsh Layout, Kusugal Road, Hubli - 580023 have changed my name as **SANJAYKUMAR GOUTAMCHAND KATARIA** (New Name) henceforth I will be called and recognized by new name for all future purposes, dated: 26/05/2026.

CHANGE OF NAME

I, **BIRAPPA MUDHALE** (Old Name) Resident of At Walki, Chikodi, Belagavi - 591238 have changed my name as **BIRAPPA MADHALE** (New Name) henceforth I will be called and recognized by new name for all future purposes, dated: 26/05/2026.

CHANGE OF NAME

I, **NETRAVATI HALAGI** (Old Name) Resident of Madar Oni, Madaramaddi, Hubli, Dharwad, Karnataka, Pin Code: 580001 have changed my name as **NETRAVATI PRADEEP KATTIMANI** (New Name) henceforth I will be called and recognized by new name for all future purposes, dated: 26/05/2026.

CHANGE OF NAME

I **NASREEN BEGUM** (Old Name) Age: 29 Occ: Household, R/o Ward no 02 Darga Ring Road Afzalpur Takke, Vijayapura Karnataka, Pin Code: 586102,I have changed my Name as **NASREEN BEGUM INAMDAR** (New Name) for all purposes affidavit dtd. 29-05-2026 Sworn before notory **M.M.Mulla** at Vijayapura Reg no 20410.

CHANGE OF NAME

I **AFSARBANU** (Old Name) Age: 44 Occ: Household, R/o. House No 94 Babaleshwar Naka Jorapur Peth,Vijayapura Karnataka,Pin Code: 586101,I have changed my Name as **AFSARBANU GULBARGA** (New Name) for all purposes affidavit dtd. 25-05-2026 Sworn before notory **M.M.Mulla** at Vijayapura, Reg no 20410.

CHANGE OF NAME

I, **SHAHINA BI ADAM SAB** (Old Name) Resident of Dasgod, Post : Samsi, Taluk: Honnavar, Dist.: Uttara Kannada, Karnataka State, Pin code : 581341, India, have changed my name as **SHAHINABI NOUSHAD SAB** (New Name) for all purposes affidavit Dtd.: 26-05-2026 sworn before notary **S. G. Hegde**.

CHANGE OF NAME

I, **NASREEN BANU NAKEWALE** (Old Name) Resident of H No: Jamadar Galli Bankapur, Haveri - 581202 have changed my name as **NASRINBANU ILIYASKHAN MOKASHI** (New Name) henceforth I will be called and recognized by new name for all future purposes, dated: 26/05/2026.

CHANGE OF NAME

I, **SAIRA BANU ABDUL JAFFER KALAS** (Old Name) Resident of 342, Karyamma Gudi, Chutguppi Chwal Ganesh Peth, Hubli, District: Dharwad, Karnataka, Pin Code: 580020 have changed my name as **SAHIRA BANU KALAS** (New Name) henceforth I will be called and recognized by new name for all future purposes, dated: 26/05/2026.

CHANGE OF NAME

I, **SHEEBAKOUSAR PEERZADE** (Old Name) Resident of 64 Muneer Maskan, 1st Cross Adhyapak Nagar, Gedhal Road, Old Hubli, Hubli, Dharwad, Karnataka, Pin Code: 580024 have changed my name as **SHEEBAKOUSAR SHUTTAR** (New Name) henceforth I will be called and recognized by new name for all future purposes, dated: 26/05/2026.

CHANGE OF NAME

I, **XAVIER FERNANDES** have changed my minor son name from **ZION** (Old Name) To **ZION XAVIER FERNANDES** (New Name) Resident of Flat No. 203 Pioneer Land Mark, R K Marg, Above Lokamanya Bank, Hindawadi, Hukkeri, Belagavi, Karnataka, Pin Code: 590011 henceforth I will be called and recognized by new name for all future purposes, dated: 26/05/2026.

CHANGE OF NAME

I, **BANDENAMAJ INAMADAR** (Old Name) Resident of Ward No 25 J M Road Badi Kaman Near Yusufiya Masjid Bijapur 586101 (address), have changed my name as **BANDANAWAZ INAMDAR** (New Name) henceforth I will be called and recognized by new name for all future purposes, dated: 26/05/2026.

CHANGE OF NAME

I, **AMINABI KADEMANI** (Old Name) Resident of At Post Hosaneeralgi, Taluk Savanur, Dist: Haveri - 581205, Karnataka, India, have changed my name as **AMINABI HUSENAMIYA KADEMANI** (New Name) for all purposes affidavit Dtd.: 26-05-2026 sworn before notary **Bidaralli N. B.**

CHANGE OF NAME

I, **SHEETAL VIJAY UTTARKAR** (Old Name) Resident of H No: 53, Srishyal Nagar, Hosamani Kalyan Mantap, Bidnal, Hubballi – Dharwad City - 580028, Karnataka, India, have changed my name as **SHEETAL MANJUNATH PATANGE** (New Name) henceforth I will be called and recognized by new name for all future purposes, dated: 26/05/2026.

CHANGE OF NAME

I, **VINAYAK IRAKAL (Old Name)** as per My Educational Documents and I, R/O. Hubballi-580024, Have Changed My Name to **VINAYAK PRAKASH IRAKAL (New Name)** as per My KYC Documents, and I Shall Hereafter Be Known by New Name as **VINAYAK PRAKASH IRAKAL**, For All Purposes, Vide Affidavit Sworn Before Notary V.H.Patil at Hubballi on 25/05/2026

ಕರ್ನಾಟಕ ಸರ್ಕಾರ

ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ-582101

ಜಿಲ್ಲಾ: ಗದಗ, ರಾಜ್ಯ: ಕರ್ನಾಟಕ

ದೂ: 08372-259932 ಇ-ಮೇಲ್: ka.gadag.betageri.cmc@gmail.com

ನಂ.ಗಬೆನಸ/ತಾಂ.ವಿ/ಸಹಿ/ ಟೆಂಡರ್/2026-27 ದಿನಾಂಕ: 26-05-2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ **1999-2000ರ** ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ಸ್ ನಿಯಮದನ್ವಯ ಗದಗ-ಬೆಟಗೇರಿ ನಗರಸಭೆಯ ಸನ್ **2026-27** ನೇ ಸಾಲಿನ ನಗರಸಭೆ ಅನುದಾನದಲ್ಲಿ **ಒಟ್ಟು 03** ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ **ರೂ.30.00ಲಕ್ಷ**ಗಳಿಗೆ ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ-ಸಂಗ್ರಹಣಾ ವೇದಿಕೆಯಡಿ, **ಇಂಡೆಂಟ್ ನಂ:- 1)DMA/2026-27/OW/WORK_INDENT-58727, 2)DMA/2026-27/OW/WORK_INDENT-58726, 3)DMA/2026-27/OW/WORK_INDENT-58728. http://kppp.karnataka.gov.in** ರಲ್ಲಿ, ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ.

ಅದರಂತೆ ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀಗಳನ್ನು **Electronic** ಪದ್ಧತಿಯಲ್ಲಿ ತುಂಬಿ ನಿಗದಿ ಪಡಿಸಿದ ದಿನಾಂಕದೊಳಗಾಗಿ ಟೆಂಡರ್ ಸಲ್ಲಿಸಬಹುದಾಗಿದೆ.

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	08-06-2026 Up to 16.00 Hours
ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids)	09-06-2026 Up to 16.30 Hours

ಸದರಿ ಟೆಂಡರ್‌ಗೆ ಸಂಭಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ kppp portal ನಲ್ಲಿ ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/-
ಪೌರಾಯುಕ್ತರು
ಗದಗ-ಬೆಟಗೇರಿ ನಗರಸಭೆ

ವಾ.ಸಾ.ಸಂ.ಇ/ಗದಗ/89/ ದೇಶಪಾಂಡೆಪಬ್ಲಿಸಿಟಿ/2026-27

ನಗರಸಭಾ ಕಾರ್ಯಾಲಯ, ಸಾಗರ - 577401

Web: www.sagaracity.mrc.gov.in Phone: 08183-226021
Email: ka.sagar.cmc@gmail.com

ನಂ.ನಸಸಾ:ಎಇಇ:ಕಾಮಗಾರಿ:04/2026-27 ದಿನಾಂಕ: 21.05.2026

-ಟೆಂಡರ್ ಪ್ರಕಟಣೆ:- (ಇ-ಪ್ರಕ್ಯೂರ್‌ಮೆಂಟ್ ಮುಖಾಂತರ)

ಎಸ್.ಎಫ್.ಸಿ ವಿಶೇಷ ಅನುದಾನದಡಿಯಲ್ಲಿ ಸಾಗರ ನಗರದಲ್ಲಿ ತಾಲ್ಲೂಕು ರಂಗ ಮಂದಿರ ನಿರ್ಮಾಣ ಕಾಮಗಾರಿಯನ್ನು ನಿರ್ವಹಿಸಲು KW4 ನಿಯಮಗಳನ್ವಯ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ದರ್ಜೆಯಲ್ಲಿ ಗುತ್ತಿಗೆ ಪರವಾನಿಗೆ ಪಡೆದುಕೊಂಡಿರುವ ಗುತ್ತಿಗೆದಾರರು, ತಮ್ಮ ಕನಿಷ್ಠ ದರವನ್ನು ನಮೂದಿಸಿ ನಿಗದಿಪಡಿಸಿದ ಇಎಂಡಿಯೊಂದಿಗೆ ತಮ್ಮ ಕನಿಷ್ಠ ದರವನ್ನು http://www.kppp.karnataka.gov.in portal ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳನ್ನು ವೆಬ್ ಸೈಟ್ http://www.kppp.karnataka.gov.in ಪಡೆಯಬಹುದಾಗಿದೆ. (1) ಪೂರ್ವ ಬಾವಿ ಬಿಡ್ ಸಭೆ ದಿನಾಂಕ: 25.05.2026ರಂದು ಬೆಳಗ್ಗೆ 10.30 ಘಂಟೆಗೆ ಆಸಕ್ತ ಗುತ್ತಿಗೆದಾರರು ಭಾಗವಹಿಸತಕ್ಕದ್ದು, (2) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ 29.06.2026 ಸಂಜೆ 5.30 ಘಂಟೆಯವರೆಗೆ (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:01.07.2026 ಸಂಜೆ 5.30 ಘಂಟೆಯವರೆಗೆ, (4) ಆರ್ಥಿಕ ಬಿಡ್ ಟೆಂಡರ್ ತೆರೆಯುವ ದಿನಾಂಕ 02.07.2026 ಸಂಜೆ 5.30 ಘಂಟೆಗೆ ಅನಿವಾರ್ಯ ಕಾರಣದಿಂದ ಸಾಧ್ಯವಾಗದೇ ಇದ್ದಲ್ಲಿ ಮುಂದಿನ ಕಛೇರಿ ವೇಳೆಯಲ್ಲಿ ತೆರೆಯಲಾಗುವುದು.

ಕ್ರಸಂ. 1. ಇಂಡೆಂಟ್ ನಂ: DMA/2025-26/BD/WORK_INDENT 56660 **ಇ.ಎಂ.ಡಿ ಮೊತ್ತ ರೂ.ಲಕ್ಷಗಳಲ್ಲಿ:** 6.10 **ಅಂದಾಜು ಮೊತ್ತ (ಲಕ್ಷಗಳಲ್ಲಿ):** 480.00

ಷರತ್ತುಗಳು: 1. ಟೆಂಡರ್‌ಗೆ ಸಂಬಂಧಪಟ್ಟಂತೆ ಯಾವುದೇ ತಿದ್ದುಪಡಿ ಹಾಗೂ ಬದಲಾವಣೆಗಳು ಇದ್ದಲ್ಲಿ ಕೆ.ಪಿ.ಪಿ.ಪಿ ಪ್ಪೋಟೆಲ್‌ನಲ್ಲಿ ಪ್ರಚುರ ಪಡಿಸಲಾಗುವುದು. 2. ಸರ್ಕಾರದ ನಿಯಮಾವಳಿಯಂತೆ ಜಿ.ಎಸ್.ಟಿಯನ್ನು ಪಾವತಿಸಲಾಗುವುದು. 3. ಹೆಚ್ಚಿನ ವಿವರಗಳನ್ನು ನಗರಸಭೆಯ ವೆಬ್ ಸೈಟ್ http://www.sagaracity.gov.in ನಲ್ಲಿ ಹಾಗೂ ಕಛೇರಿಯು ವೇಳೆಯಲ್ಲಿ ತಾಂತ್ರಿಕ ವಿಭಾಗದಲ್ಲಿ ತಿಳಿದುಕೊಳ್ಳಬಹುದು.

ಸಹಿ/- ಪೌರಾಯುಕ್ತರು ನಗರಸಭೆ ಸಾಗರ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/110/05/280

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ:(09ಇ):2026-27:ಜೆಇ-1 ದಿನಾಂಕ: 25.05.2026

ಟೆಂಡರ್ ಪ್ರಕಟಣೆ / ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಲೆಕ್ಕಶೀರ್ಷಿಕೆ 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ - ಬಂಡವಾಳ ವೆಚ್ಚದಡಿ ಇಂಡೆಂಟ್ ನಂ: 36106 ಕಾಮಗಾರಿಗೆ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 02.06.2026, ಮತ್ತು ಲೆಕ್ಕಶೀರ್ಷಿಕೆ: 5054-04-337-0-01-154 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆಯಡಿ** ಇಂಡೆಂಟ್ ನಂ: 36124 ಕಾಮಗಾರಿಗೆ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 09.06.2026 ಹಾಗೂ ಲೆಕ್ಕಶೀರ್ಷಿಕೆ: 5054-04-337-0-01-154 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆಯಡಿ** ಇಂಡೆಂಟ್ ನಂ: 35435 ಕಾಮಗಾರಿಗೆ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 24.06.2026** ಆಗಿದ್ದು, ಈ ಕಾಮಗಾರಿಗಳಿಗೆ ಈ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.

ಈ ಕಾಮಗಾರಿಗಳ ಕನಿಷ್ಠ ಮೊತ್ತ ರೂ.100.00 ಮತ್ತು ಅಂದಾಜು ಮೊತ್ತ ಗರಿಷ್ಠ ಮೊತ್ತ ರೂ.300.00 ಲಕ್ಷ ಆಗಿರುತ್ತದೆ. ಮೇಲಿನ ಕಾಮಗಾರಿಗಳಿಗೆ KW-3 & KW-4 ಪ್ರಮಾಣಿತ ಟೆಂಡರ್ ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮೇಲಿನ ಕಾಮಗಾರಿಗಳ ಕೆಲಸದ ಮೌಲ್ಯ, ಟೆಂಡರ್‌ಗೆ ಹಾಕಲಾದ ಮೊತ್ತ, ಇ.ಎಮ್.ಡಿ. ಮೊತ್ತ ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ **(www.kppp.karnataka.gov.in)** ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ವಿಷಯ ನಿರ್ವಾಹಕರು, ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0824-2423169.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

DIPR/DK/KSMCA/277/26-27 dt.26.05.2026

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರವರ ಕಾರ್ಯಾಲಯ,
ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ-580001
ಕಛೇರಿ : 0836-2447090, ಇ-ಮೇಲ್ : kwbcen@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ KPP ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗಳಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ KPP ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ-ಟೆಂಡರ್ ದಾಖಲೆ ಪದ್ಧತಿಯಲ್ಲಿ) ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:194 ದಿನಾಂಕ : 26-05-2026. 1) DBOT ಮಾದರಿ ಅಡಿಯಲ್ಲಿ ಶಿಗ್ಗಾಂವ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ ನಾಗನೂರ ಕೆರೆ ಸುಧಾರಣೆ ಹಾಗೂ ಇತರೆ ಕಾಮಗಾರಿಗಳು. (ಇಡುಗಂಟು ಟೆಂಡರ್-ವೇರಿಯೇಷನ್ ಇರುವುದಿಲ್ಲಾ). INDENT No.KUWSDB/2026-27/WS/WORK_INDENT511.

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:195 ದಿನಾಂಕ : 26-05-2026. 2) DBOT ಮಾದರಿ ಅಡಿಯಲ್ಲಿ ಸವಣೂರು ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ ಮೋತಿ ತಲಾಬ ಕೆರೆ ಸುಧಾರಣೆ ಹಾಗೂ ಇತರೆ ಕಾಮಗಾರಿಗಳು. (ಇಡುಗಂಟು ಟೆಂಡರ್-ವೇರಿಯೇಷನ್ ಇರುವುದಿಲ್ಲಾ). INDENT No.KUWSDB/2026-27/WS/WORK_INDENT512.

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:196 ದಿನಾಂಕ : 26-05-2026. 3) DBOT ಮಾದರಿ ಅಡಿಯಲ್ಲಿ ಬಂಕಾಪುರ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ ತೆವರಮಳ್ಳಿಹಳ್ಳಿ ಕೆರೆ ಸುಧಾರಣೆ ಹಾಗೂ ಇತರೆ ಕಾಮಗಾರಿಗಳು. (ಇಡುಗಂಟು ಟೆಂಡರ್-ವೇರಿಯೇಷನ್ ಇರುವುದಿಲ್ಲಾ). INDENT No.KUWSDB/2026-27/WS/WORK_INDENT513. ಹೆಚ್ಚಿನ ವಿವರಗಳಿಗಾಗಿ KPP ಪೋರ್ಟಲ್‌ನಲ್ಲಿ ನೋಡುವುದು ಅಥವಾ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/- ಮುಖ್ಯ ಅಭಿಯಂತರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ

ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/230/2026-27

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ.: 952/ಗದಗ/ಕಾನಿಇಂ(ವಿ)/2026-27/937 ದಿನಾಂಕ: 25.05.2026

ಟೆಂಡರ್ ಪ್ರಕಟಣೆ

ಕವಿಪ್ರನಿನಿಯು ಗದಗ ಕಾರ್ಯಾಚರಣೆಗಳ ವಿಭಾಗದಲ್ಲಿ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದೆ. 1) 110ಕೆವಿ ಕೊಣ್ಣೂರು ಉಪಕೇಂದ್ರದಲ್ಲಿ 33ಕೆವಿ ಮಿಂಚು ನಿರೋಧಕಗಳನ್ನು ಸರಬರಾಜು ಮಾಡುವುದು. 2) 110ಕೆವಿ ಡಂಬಳ ಉಪಕೇಂದ್ರಕ್ಕೆ 03 ಸಂಖ್ಯೆಯ 11ಕೆವಿ ಕರೆಂಟ್ ಟ್ರಾನ್ಸ್‌ಫಾರ್ಮರ್‌ಗಳನ್ನು ಸರಬರಾಜು ಮಾಡುವುದು 3) ಗದಗ ಕಾರ್ಯಾಚರಣೆಗಳ ವಿಭಾಗಕ್ಕೆ ಸ್ಟೇಷನರಿ ಸಾಮಗ್ರಿಗಳನ್ನು ಸರಬರಾಜು ಮಾಡುವುದು. 4) 110ಕೆವಿ ಬೆಳ್ಳಟ್ಟಿ ಉಪಕೇಂದ್ರದ ಪರಿವರ್ತಕ್ಕೆ ಆಕ್ಸಿಲರಿ ರಿಲೇಗಳನ್ನು ಸರಬರಾಜು ಮಾಡುವುದು ಮತ್ತು ಸ್ಥಾಪಿಸುವ ಕಾಮಗಾರಿ. 5) 110ಕೆವಿ ಗದಗ ಉಪಕೇಂದ್ರದಲ್ಲಿ ಮಲ್ಟಿ ಫಂಕ್ಷನ್ ಮೀಟರ್‌ಗಳನ್ನು ಸರಬರಾಜು ಮಾಡುವುದು ಮತ್ತು ಸ್ಥಾಪಿಸುವ ಕಾಮಗಾರಿ. 6) 110ಕೆವಿ ಶಿಂಗಟಾಲೂರು ಉಪಕೇಂದ್ರದಲ್ಲಿ ದೋಷಪೂರಿತ ರಿಲೇಗಳನ್ನು ಬದಲಾಯಿಸುವುದು. 7) ಗದಗ ಕಾರ್ಯಾಚರಣೆಗಳ ವಿಭಾಗಕ್ಕೆ ಸಿಂಗಲ್ ಲೈನ್ ಡಯಾಗ್ರಾಮ್ ಮತ್ತು ಟ್ರಾನ್ಸ್‌ಫಾರ್ಮರ್ ವಿವರಗಳ ಮುದ್ರಣ ಮಾಡುವ ಕಾಮಗಾರಿ.

ವಿಚಾರಣೆಯ ವಿವರಗಳನ್ನು **ದಿನಾಂಕ: 27.05.2026** ರಂದು **10:00 ಗಂಟೆಯ** ತದನಂತರ ಈ ಕಚೇರಿಯಿಂದ ಪಡೆಯಬಹುದು. ಕೊನೆಯ **ದಿನಾಂಕ: 10.06.2026 ರಂದು ಸಂಜೆ: 04:00 ಗಂಟೆಯವರೆಗೆ.**

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯಾಚರಣೆಗಳು ವಿಭಾಗ, ಕವಿಪ್ರನಿನಿ, ಬಾಪೂಜಿ ನಗರ, ಗದಗ

CHANGE OF NAME

I, **GULNAZ BANU KANAMUCHAGI** (Old Name) Resident of Good shed Road, Near Dr Abdul Kareem Bhasi House, Kulkarni Hakkal, Hubli, Dharwad, State: Karnataka, Pin Code: 580020, have changed my name as **GULNAZ BANU ABDUL MAJEED JAMAKANDI** (New Name) henceforth I will be called and recognized by new name for all future purposes, dated: 26/05/2026.

CHANGE OF NAME

I, **RUKHSANA BEGUM SAVANUR** (Old Name) Resident of H No: 896 Ajjikatta Ankola (address), have changed my name as **RUKSANA SHIRAJ SHEKH** (New Name) henceforth I will be called and recognized by new name for all future purposes, dated: 26/05/2026.

ಕರ್ನಾಟಕ ಸರ್ಕಾರ

ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ: ಸಅಸಂ/ಟೆಂಡರ್-/ಸಿಆರ್-01/2026-27 ದಿ: 25.05.2026

ಅಲ್ಪಾವದಿ ಮರು ಇ-ಟೆಂಡರ್ ಪ್ರಕಟಣೆ (ಕಾಲ್-2) (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2026-27 ನೇ ಸಾಲಿಗೆ ಅನುದಾನ ನಿರೀಕ್ಷೆ ಮೇರೆಗೆ ವಿವಿಧ ಲೆಕ್ಕಶೀರ್ಷಿಕೆಯಡಿ ಮತ್ತು ಇ-ಪ್ರಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಕಾಮಗಾರಿ ನಿರ್ವಹಿಸುವ ಸ್ಥಳಗಳ ಬದಲಾವಣೆ ಒಳಗೊಂಡಂತೆ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ "ನೆಡುತೋಪು ರಚನೆ, ನೆಡುತೋಪ ನಿರ್ವಹಣೆ ಮತ್ತು ವಿವಿಧ ಅಳತೆಯ ಸಸಿಗಳ ನಿರ್ವಹಣೆ" ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2026-27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹಾಗೂ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 01.06.2026 ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka. gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಆಯನೂರು ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/109/05/277

ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ಕಲಬುರಗಿ

ಮಿಂಚಂಚೆ ವಿಳಾಸ: sfgulbarga@gmail.com

ಸಂಖ್ಯೆ: ಬಿ2/ಬಜೆಟ್/ಹೊರಗುತ್ತಿಗೆ/ಇ-ಟೆಂಡರ್/ಸಿಆರ್- /2026-27 ದಿನಾಂಕ : 25-05-2026

ಅಲ್ಪಾವಧಿ ಸಂಕ್ಷಿಪ್ತ ದ್ವಿಲಕೋಟೆ ಟೆಂಡರ್ ಪ್ರಕಟಣೆ (ಇ-ಟೆಂಡರ್ ಮೂಲಕ) - 2ನೇ ಕರೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ ಈ ಮೂಲಕ ಸಾರ್ವಜನಿಕರ ಅವಗಾಹನೆಗೆ ತಿಳಿಯಪಡಿಸುವುದೇನೆಂದರೆ ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿರುವಂತೆ 2026-27ನೇ ಸಾಲಿಗೆ ಕಲಬುರಗಿ ಸಾಮಾಜಿಕ ಅರಣ್ಯ ವಿಭಾಗ, ಉಪ ವಿಭಾಗ ಹಾಘೂ ವಿಭಾಗ ವ್ಯಾಪ್ತಿಯ ವಲಯ ಕಛೇರಿಗಳಿಗೆ ಅಗತ್ಯವಿರುವ ಗಣಕಯಂತ್ರ ನಿರ್ವಾಹಕರು, ಲಿಪಿಕ ಸಾಯಕರು, ವಾಹನ ಚಾಲಕರು ಹಾಗೂ ಕಾವಲುಗಾರರು/ಕಸಗೂಡಿಸುವವರು ಸೇವೆಯನ್ನು ಹೊರಗುತ್ತಿಗೆ (Outsource) ಮೂಲಕ ಪಡೆಯಲು ಇ-ಟೆಂಡರ್ **Call-2** ಆಹ್ವಾನಿಸಲಾಗಿದ್ದು, **ರೂ. 47.55 ಲಕ್ಷಗಳಲ್ಲಿ** ಇ-ಟೆಂಡರ್ ವೆಬ್‌ಸೈಟ್ ಸಂಖ್ಯೆ http://kppp.karnataka.gov.in ರ ಮೂಲಕ ಟೆಂಡರ್ ದಾಖಲಿಸಲು ದಿನಾಂಕ : **25-05-2026** ರಿಂದ ದಿನಾಂಕ : **01-06-2026** ಅಪರಹ್ನ 04.00 ಗಂಟೆಯ ವರೆಗೆ ಆಹ್ವಾನಿಸಲಾಗಿದೆ. ತಾಂತ್ರಿಕ ಬಿಡ್‌ಗಳನ್ನು ದಿ. **02-06-2026 ರಂದು ಅಪರಹ್ನ 04:00** ನಂತರ ತೆರೆಯಲಾಗುವುದು. ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರ್‌ಗಳ ಆರ್ಥಿಕ ಬಿಡ್‌ಗಳನ್ನು ದಿ. **03-06-2026 ಅಪರಹ್ನ** ಅಪರಹ್ನ 04:00 ನಂತರ ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗಾಗಿ ಕಛೇರಿ ಕೆಲಸದ ದಿನಗಳಂದು ಕಛೇರಿ ಸಮಯದಲ್ಲಿ ಸಂಪರ್ಕಿಸಿ ಪಡೆಯಬಹುದು ಅಥವಾ ದೂರವಾಣಿ ಸಂಖ್ಯೆ: 08472-278633ಕ್ಕೆ ಕರೆ ಮಾಡಿ ಪಡೆಯಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು
ಸಾಮಾಜಿಕ ಅರಣ್ಯ ಉಪ ವಿಭಾಗ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/168/ಕೆ.ಎಸ್.ಎಂ.ಸಿ.&ಎ/2026-27

ನಗರಸಭಾ ಕಾರ್ಯಾಲಯ ಹೊಸಪೇಟೆ.

ಕ್ರಸಂ/ನಸಹೊ/ತಾಂತ್ರಿಕ/ನಗರಸಭೆ ನಿಧಿ/ಟೆಂಡರ್/2026-27 ದಿನಾಂಕ:18-05-2026

ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ) ಟೆಂಡರ್ ಪ್ರಕಟಣೆ

ನಗರಸಭೆ ನಿಧಿ 2025-26ನೇ ಸಾಲಿನ ನಗರಸಭೆ ನಿಧಿ ಅನುದಾನದಡಿಯಲ್ಲಿ ಈ ಕೆಳಗಿನ ಕೆಲಸಗಳಿಗಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ (ಚಾಲ್ತಿ ಸಾಲಿನಲ್ಲಿ ನೊಂದಾಯಿತ) ಸೂಕ್ತ ದರ್ಜೆ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು.

1)ಖಾಲಿ ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸಲು ಹಾಗೂ ಖಾಲಿ ಟೆಂಡರ್ ಫಾರಂಗಳನ್ನು ನೀಡುವ **ದಿನಾಂಕ: 02-06-2026 ಸಂಜೆ ;05.00 ಗಂಟೆ ಒಳಗಾಗಿ** 2)ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸುವ ಹಾಗೂ ತೆರೆಯುವ **ದಿನಾಂಕ:03-06-2026 ಸಂಜೆ; 05.30 ಗಂಟೆ ಒಳಗಾಗಿ**(3) ಟೆಂಡರಗಳನ್ನು ತೆರೆಯುವ ಸ್ಥಳ: **ನಗರಸಭಾ ಕಾರ್ಯಲಯ ಹೊಸಪೇಟೆ.**

ಕಾಮಗಾರಿ ಹೆಸರು: 01.Construction of Chambers Near OHT at Rajaji Nagar in ward no .9 Hosapete city. **ಅಂದಾಜು ಮೊತ್ತ (ಲಕ್ಷಗಳಲ್ಲಿ):** 4.00. **ಮುಂಗಡ ಠೇವಣಿ ಮೊತ್ತ:** 10000/-

02.Repair of Drinking water Pipe line and Restoration of CC Road in Dresses camp 14 th ward in Hosapete city. **ಅಂದಾಜು ಮೊತ್ತ (ಲಕ್ಷಗಳಲ್ಲಿ): 2.45. ಮುಂಗಡ ಠೇವಣಿ ಮೊತ್ತ: 6125/-**

03.Continution work of Constriction of cc Road in ward no 13 Ashraya colony 1st, 2nd,3rd side road and near LLC canal Bridge Hosapete. **ಅಂದಾಜು ಮೊತ್ತ(ಲಕ್ಷಗಳಲ್ಲಿ):4.64.ಮುಂಗಡ ಠೇವಣಿ ಮೊತ್ತ: 11600/-**

04.Laying of UPVC Line and Construction of UGD chamber and Rising of old UGD chamder Near Smart Bazar, pandurang Colony, M.P prakash Nagar Area, Bypass Road Near, Binchimatti Tank,College Road and Near, A.S Gudi Wetwell in Hosapet city. **ಅಂದಾಜು ಮೊತ್ತ (ಲಕ್ಷಗಳಲ್ಲಿ): 3.70. ಮುಂಗಡ ಠೇವಣಿ ಮೊತ್ತ: 9250/-**

05.Laying of UPVC pipeline and Constrution of Receiving chamber from Ippatti House to Honnuramma house near Sriramulu school in 3rd cross in ward no 03 of Hosapete city. **ಅಂದಾಜು ಮೊತ್ತ (ಲಕ್ಷಗಳಲ್ಲಿ): 1.35. ಮುಂಗಡ ಠೇವಣಿ ಮೊತ್ತ: 3375/-**

06.Laying of UPVC Line and Construction of UGD chamber from Newly Constructed public Toilet in Taluk office and Newly Constructed Aspriational Toilet Near Bustand in Hosapete city. **ಅಂದಾಜು ಮೊತ್ತ (ಲಕ್ಷಗಳಲ್ಲಿ): 4.99. ಮುಂಗಡ ಠೇವಣಿ ಮೊತ್ತ: 12475/-**

07.Repair of Delivery pipe at 2nd Stage WTP and Repair of Rising main pipeline at sandur Road in Hosapete city. **ಅಂದಾಜು ಮೊತ್ತ (ಲಕ್ಷಗಳಲ್ಲಿ): 3.50. ಮುಂಗಡ ಠೇವಣಿ ಮೊತ್ತ: 8750/-**

08.Repair of existing wet well chamber behind freedom park in Hosapete city. **ಅಂದಾಜು ಮೊತ್ತ (ಲಕ್ಷಗಳಲ್ಲಿ): 3.00. ಮುಂಗಡ ಠೇವಣಿ ಮೊತ್ತ: 7500/-**

ಟೆಂಡರ್ ಶುಲ್ಕ: 500+50 (ಹೆಚ್ಚಿನ ಮಾಹಿತಿಗಾಗಿ ನಗರಸಭೆ ಕಾರ್ಯಾಲಯ ಹೊಸಪೇಟೆ ಕಛೇರಿ ಕೆಲಸದ ದಿನದಂದು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು. ಸಾಧ್ಯವಾದಲ್ಲಿ ಟೆಂಡರ್ ಸ್ವೀಕರಿಸುವ ದಿನಾಂಕದಂದೇ ಹಾಜರಿರುವ ಟೆಂಡರುದಾರರ ಸಮ್ಮುಖದಲ್ಲಿ ಟೆಂಡರಗಳನ್ನು ತೆರೆಯಲಾಗುವುದು. ಅಥವಾ ಬೇರೆ ದಿನಾಂಕವನ್ನು ನಿಗಧಿಪಡಿಸಲಾಗುವುದು.

ಸಹಿ/-ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರಸಭೆ ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2026-27/ ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/95
ಸಹಿ/-ಪೌರಾಯುಕ್ತರು, ನಗರಸಭೆ ಹೊಸಪೇಟೆ.

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.

ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2026-27/1198 ದಿನಾಂಕ:26.05.2026

-:ಟೆಂಡರ ಅಧಿಸೂಚನೆ (ಕೆ.ಪಿ.ಪಿ.ಪಿ.ನಲ್ಲಿ):-

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ- 1,2,3 & 4 ರಲ್ಲಿ ಲೆಕ್ಕ ಶೀರ್ಷಿಕೆ: 2025-26 ನೇ ಸಾಲಿನ 5054-ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ, 2059-ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ, 5054-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ, 3054 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ, 3054 ರಾಜ್ಯ ಹೆದ್ದಾರಿ ಸೇತುವೆ ನಿರ್ವಹಣೆ, 5054- ರಾಜ್ಯ ಹೆದ್ದಾರಿ ರಸ್ತೆಗಳು ಸುಧಾರಣೆ, 4059-ಮುಖ್ಯ ಮಂತ್ರಿ ಮೂಲಸೌಕರ್ಯ ಬಂಡವಾಳ ವೆಚ್ಚ, 4059-ಎಸ್.ಸಿ/ಟಿ.ಎಸ್.ಪಿ, 4059 ಇಲಾಖಾ ಕಟ್ಟಡಗಳು, 8443-ಠೇವಣಿ ವಂತಿಕೆ ಅಡಿಯಲ್ಲಿ ಸೇರಿ ಒಟ್ಟು 28 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಕನಿಷ್ಠ ಹಾಗೂ ಗರಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ ರೂ. 11.66 ಲಕ್ಷಗಳು ಹಾಗೂ ರೂ. 395.48 ಲಕ್ಷಗಳು ಇದ್ದು, ಮುಂಗಡ ಠೇವಣಿ ಮೊತ್ತವು ಕನಿಷ್ಠ ಹಾಗೂ ಗರಿಷ್ಠ ಅನುಕ್ರಮವಾಗಿ ರೂ. 11,700/- ಹಾಗೂ ರೂ. 5,93,300 ಇರುತ್ತದೆ. ಭಾಗ-1:ಟೆಂಡರ ಸ್ವೀಕರಿಸುವ ದಿನಾಂಕ 05.06.2026 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 06.06.2026 ರ ಸಂಜೆ 4.45 ಘಂಟೆ ನಂತರ ಟೆಂಡರ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ 08.06.2026 ಬೆಳಿಗ್ಗೆ 11.00 ಘಂಟೆಗೆ ಭಾಗ-2:ಟೆಂಡರ ಸ್ವೀಕರಿಸುವ ದಿನಾಂಕ 12.06.2026 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 15.06.2026 ರ ಸಂಜೆ 4.45 ಘಂಟೆ ನಂತರ, ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ 16.06.2026 ಬೆಳಿಗ್ಗೆ 11.00 ಘಂಟೆಗೆ ಭಾಗ-3: ಟೆಂಡರ ಸ್ವೀಕರಿಸುವ ದಿನಾಂಕ 16.06.2026 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 17.06.2026 ರ ಸಂಜೆ 4.45 ಘಂಟೆ ನಂತರ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ 18.06.2026 ಬೆಳಿಗ್ಗೆ 11.00 ಘಂಟೆಗೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ: 26.05.2026 ರ ನಂತರ ಪಡೆಯಬಹುದು.

ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ.

DIPR/BGM/RO-NO-313/KSMCA/2026-27

ಕರ್ನಾಟಕ ಸರ್ಕಾರ

ನಗರಸಭೆ ಕಾರ್ಯಾಲಯ, ಕೊಪ್ಪಳ.

City Municipal Council, Koppal

E-mail: itstaff_ulb_koppal@yahoo.com www.com.koppalcity.gov.in


ಸಂಖ್ಯೆ/ನಸಕೊ/ಆರೋಗ್ಯ ಶಾಖೆ/2026-27 ದಿ: 26/05/2026.

ದರಪಟ್ಟಿ ಪ್ರಕಟಣೆ

ಕ್ರ.ಸಂ	ಸಾಮಗ್ರಿಗಳ ವಿವರ	ದರದ ವಿವರ
1	ಬಟ್ಟೆ ಗ್ಲೌಸ್, ರಬರ್ ಗ್ಲೌಸ್, ಮಾಸ್ಕ್, ಮಾಸ್ಕ್ N95, ಹೆಲ್ಮೆಟ್, ಗಮ್ ಬೂಟ್ಸ್, ರೇನ್ ಕೋರ್ಟ್, ಏಪ್ರಾನ್,ಯೂನಿಫಾರ್ಮ್, ಕಾಟನ್ ಬುಟ್ಸ್, ಕಡ್ಡಿ ಬಾರಿಗೆ, ಬುಟ್ಟಿ, ದೊಡ್ಡ ಬುಟ್ಟಿ, ಸಲಿಕೆ ವಿಥ್ ಹ್ಯಾಂಡ್, ಗುದ್ದಲಿ ವಿಥ್ ಹ್ಯಾಂಡ್, ಹಾರಿಕೊಲು, ಕೊಡಲಿ ವಿಥ್ ಹ್ಯಾಂಡ್, ಉದ್ದ ಸಲಿಕೆ ವಿಥ್ ಹ್ಯಾಂಡ್, ಕೂಡಗೋಲು, ಮಚ್ಚು, ಗಾರ್ಡನ್ ಕತ್ತರಿ, ವಾಟರ್ ಸ್ಪೆಯರ್ ಮಷೀನ್, (ಹ್ಯಾಂಡ್ ಸ್ಪೆಯರ್), ಮೇಲಾಥಿನ್ ಪೌಡರ್ (25 ಕೆ.ಜಿ ಬ್ಯಾಗ್), ಬ್ಲೀಚಿಂಗ್ ಪೌಡರ್ (25 ಕೆ.ಜಿ ಬ್ಯಾಗ್), ಬೈಲಾರ್ವ್ (01 ಲೀಟರ್ ಗೆ), ಫೀನಾಯಿಲ್ (01 ಲೀಟರ್ ಗೆ), ಆಸಿಡ್ (01 ಲೀಟರ್ ಗೆ), ಟಾಲೈಟ್ ಕ್ಲಿನರ್ ಬ್ರಸ್ (01 ಕ್ಕೆ), ಫ್ಲೋರ್ ಕ್ಲಿನರ್ ಬ್ರಸ್ (01 ಕ್ಕೆ), ಬಕೆಟುಗಳು ದೊಡ್ಡದು, ಬಾಂಬೆ ಬಾರಿಗೆಗಳು, ಕೈ ಟವಲ್, ಈಚಲ ಬಾರಿಗೆಗಳು, ಹ್ಯಾಮರ್ ವಿಥ್ ಹ್ಯಾಂಡಲ್, ಕಳೆನಾಶಕ (ಲೀಟರ್ಸ್) ಹಾಗೂ ಗೊಬ್ಬರ ಸಾಣಿಗೆ, 01 & ½ ಇಂಚಿನ ಗಾರ್ಡನ್ ಪೈಪ್, ವುಡ್ ಕಟರ್ ಮಷೀನ್, ಗ್ರಾಸ್ ಕಟರ್ ಮಷೀನ್, ಫಾಗಿಂಗ್ ಮಷೀನ್	-:: ವಾರ್ಷಿಕವಾರು ::- ಕೊಷ್ಟಕದಲ್ಲಿ ನಮೂದಿಸಿದ ಸಾಮಗ್ರಿಗಳು/ ವಸ್ತುಗಳ ದರವನ್ನು ಪ್ರತಿ ಒಂದರ (01ಕ್ಕೆ) ಅಳತೆ/ಸಂಖ್ಯೆ/ಲೀಟರ್/ಫಿಟ್/ಲೇಂತ್/ಇದರ ಅನುಸಾರ ಸ್ಥಾನೀಕ ಮಾರಾಟದ ದರವನ್ನು ನಮೂದಿಸಿ ನಗರಸಭೆಗೆ ಸಲ್ಲಿಸಲು ಕೋರಿದೆ.

ಸಹಿ/- ಪೌರಾಯುಕ್ತರು,
ನಗರಸಭೆ ಕಾರ್ಯಾಲಯ ಕೊಪ್ಪಳ.

ಡಿಐಪಿಆರ್/ಕೊಪ್ಪಳ/112/ಕೆಎಸ್‌ಎಂಸಿಎ/2026-27



ಪಾಟಿದಾರ್ ಅಬ್ಬರಕ್ಕೆ ಗುಜರಾತ್ ತತ್ತರ | ಫೈನಲ್‌ಗೇರಲು ಗುಜರಾತ್‌ಗಿದೆ ಇನ್ನೊಂದು ಅವಕಾಶ

ಸತತ 2ನೇ ಬಾರಿ ಫೈನಲ್‌ಗೆ ಆರ್‌ಸಿಬಿ

ಹೊಸ ಆರ್‌ಸಿಬಿ ತಂಡಕ್ಕೆ ತಡೆಯೊಡ್ಡುವವರೇ ಯಾರಿಲ್ಲ ಎಂಬ ಮಾತು ಮತ್ತೊಮ್ಮೆ ಸಾಬೀತಾಗಿದೆ. ಕಪ್ ಬರ ಕಳೆದ ಬಾರಿಯೇ ನೀಗಿಸಿಕೊಂಡಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಲೀಗ್ ಮೇಲೆ ಪ್ರಾಬಲ್ಯ ಸಾಧಿಸುತ್ತಾ ಎರಡನೇ ಕಪ್ ಗೆಲ್ಲುವುದಕ್ಕೆ ಅಣಿಯಾಗಿದೆ.

ಇಲ್ಲಿನ ಎಚ್‌ಸಿಎ ಕ್ರೀಡಾಂಗಣದಲ್ಲಿ ಮಂಗಳವಾರದಂದು ಕ್ವಾಲಿಫೈಯರ್ ಪಂದ್ಯ ನಡೆಯಿತು. ಪಾಟಿದಾರ್ ಬ್ಯಾಟಿಂಗ್ ಅಬ್ಬರಕ್ಕೆ ತತ್ತರಿಸಿದ ನಂತರ ಗುಜರಾತ್ ಟೈಟಾನ್ಸ್ ಆರ್‌ಸಿಬಿ ವೇಗಿಗಳ ದಾಳಿಗೆ ಕುಸಿಯಿತು. ಎಲ್ಲೆಲ್ಲೂ ಆರ್‌ಸಿಬಿ ಅಭಿಮಾನಿಗಳ ಹರ್ಷ, ಆಟಗಾರರ ಸಂಭ್ರಮ ಕಂಡುಬಂದಿತು. ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದ ಆರ್‌ಸಿಬಿ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 254 ರನ್‌ಗಳಿಸಿತು. ಪಾಟಿದಾರ್ 93★, ಕೊಹ್ಲಿ 43 ಮತ್ತು ಕೃಣಾಲ್ 43 ರನ್ ಗಳಿಸಿದರು. ಗುಜರಾತ್ ಪರ ಹೋಲ್ಡರ್, ರಬಾಡ ತಲಾ 2 ವಿಕೆಟ್ ಪಡೆದುಕೊಂಡರು. ಗುರಿ ಬೆನ್ನತ್ತುವಾಗ ಗುಜರಾತ್ ಪರ ಯಾರೊಬ್ಬರೂ ಕ್ರೀಜ್‌ನಲ್ಲಿ ನಿಲ್ಲಲಿಲ್ಲ. ಪರಿಣಾಮ ಸರ್ವಪತನಗೊಂಡ ಜಿಟಿ ಸೋಲೊಪ್ಪಿಕೊಂಡಿದೆ. ಆರ್‌ಸಿಬಿ ಪರ ವೇಗಿಗಳು ಮಿಂಚಿದರು.

ಕೊಹ್ಲಿ-ಪಡಿಕ್ಕಲ್ ಕಮಾಲ್: ವೆಂಕಟೇಶ್ ಅಯ್ಯರ್ ಬಾರಿಸಿದ ಬೌಂಡರಿಯೊಂದಿಗೆ ಇನ್ನಿಂಗ್ಸ್ ಆರಂಭವಾಯಿತು. ಮೊದಲ ಓವರ್‌ನಲ್ಲಿ 3 ಭರ್ಜರಿ ಬೌಂಡರಿ ಬಾರಿಸಿದ ಅವರು, 19 ರನ್‌ಗೆ ಆಟ ನಿಲ್ಲಿಸಿಬಿಟ್ಟರು. ಮೂರನೇ ವಿಕೆಟ್‌ಗೆ ಒಂದಾದ ವಿರಾಟ್ ಕೊಹ್ಲಿ ಮತ್ತು ಪಡಿಕ್ಕಲ್ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಪಡಿಕ್ಕಲ್ ಕೂಡ ಬರುತ್ತಲೇ ಬಿರುಸಿನ ಬ್ಯಾಟಿಂಗ್ ಮಾಡಿದರು. ಪವರ್‌ಪ್ಲೇನಲ್ಲಿ ಆರ್‌ಸಿಬಿ 76 ರನ್ ಬಾರಿಸಿತು. ಪಡಿಕ್ಕಲ್ ಮತ್ತು ಕೊಹ್ಲಿ 72 ರನ್‌ಗಳ ಜೊತೆಯಾಟ ನಿರ್ಮಿಸಿದರು. ವಿರಾಟ್ ಕೊಹ್ಲಿ 25 ಬಾಲ್‌ಗಳಲ್ಲಿ 43 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಅವರ ಹಿಂದೆಯೇ ಪಡಿಕ್ಕಲ್ ಕೂಡ ಪೆವಿಲಿಯನ್ ಹೊರಟರು.



ಪಾಟಿದಾರ್ ಅಬ್ಬರ

ಮಧ್ಯಮ ಓವರ್‌ಗಳ ಅಂತ್ಯದ ವರೆಗೆ ಆರ್‌ಸಿಬಿ ಕೊಂಚ ಹೊತ್ತು ವಿಕೆಟ್ ಉಳಿಸಿಕೊಂಡು ಆಡಿತು. ಪಾಟಿದಾರ್ ಮೊದಲಿನ 9 ಬಾಲ್‌ಗಳಲ್ಲಿ 9 ರನ್ ಗಳಿಸಿದರ. ಕೃಣಾಲ್ ಮತ್ತೊಂದು ಬದಿಯಲ್ಲಿ ನಿಂತುಕೊಂಡಂತೆ ಪಾಟಿದಾರ್ ಸಿಕ್ಸರ್‌ಗಳ ಅಬ್ಬರ ಶುರುವಾಯಿತು. ಬಾಲಿಗೆ ಪ್ರತಿಯೊಂದು ದಿಕ್ಕು ತೋರಿಸಿದ ಅವರು, 21 ಬಾಲ್ ಅನ್ನುವಷ್ಟರಲ್ಲಿ ಸ್ಫೋಟಕ ಅರ್ಧಶತಕ ಬಾರಿಸಿದರು. ತಮ್ಮ ಅಬ್ಬರ ಹಾಗೇ ಮುಂದುವರಿಸಿ ಡೆತ್ ಓವರ್‌ಗೆ ವಿಸ್ತರಿಸಿತು. ಪಾಟಿದಾರ್ ಸಿಕ್ಸರ್‌ಗಳ ಅಬ್ಬರ ನಿಲ್ಲಲೇ ಇಲ್ಲ. ಡೆತ್ ಓವರ್‌ನಲ್ಲಿ ಪಾಟಿದಾರ್ ಇನ್ನಷ್ಟು ಬಿರುಸಿನ ಬ್ಯಾಟಿಂಗ್ ಮಾಡಿದರು. ಬಂದ ಬಾಲ್‌ಗಳನ್ನೆಲ್ಲಾ ಸಿಕ್ಸರ್‌ಗಟ್ಟಿದರು. ಆಡಿದ 33 ಬಾಲ್‌ಗಳಲ್ಲಿ ಪಾಟಿದಾರ್ 9 ಸಿಕ್ಸರ್ ಚಚ್ಚಿದರು. 5 ಬೌಂಡರಿ ಬಾರಿಸಿದರು. ಔಟಾಗದೇ 93 ರನ್ ಬಾರಿಸಿದರು. ಕೃಣಾಲ್ 43ಕ್ಕೆ ಔಟಾದರೆ, ಜಿತೇಶ್ 15 ರನ್ ಗಳಿಸಿದರು.

ಗುಜರಾತ್ ತತ್ತರ

ಗುರಿ ಬೆನ್ನತ್ತುವಾಗ ಯಥಾಪ್ರಕಾರ ವೇಗಿ ಭುವನೇಶ್ವರ್ ಕುಮಾರ್ ಮಿಂಚಿದರು. ಮೂರನೇ ಓವರ್‌ನಲ್ಲಿ ಡಫಿ ಬೌಲಿಂಗ್‌ನಲ್ಲಿ ಸಾಯಿ ಸುದರ್ಶನ್ ಹಿಟ್ ವಿಕೆಟ್‌ಗೆ ಔಟಾದರು. ಬಳಿಕ ಮತ್ತೊಮ್ಮೆ ಭುವನೇಶ್ವರ್ ಕುಮಾರ್ ಮಿಂಚಿದರು. ಗಿಲ್ 2 ರನ್‌ಗೆ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಜಾಸ್ ಬಟ್ಲರ್ ಕೊಂಚ ಹೊತ್ತು ಪ್ರಯತ್ನ ಪಟ್ಟರೂ ಆರ್‌ಸಿಬಿ ಯಾವುದೇ ಅವಕಾಶ ಕೊಡಲಿಲ್ಲ. ನಿಶಾಂತ್ ಸಿಂಧು 5, ಜೇಸನ್ ಹೋಲ್ಡರ್ ಶೂನ್ಯಕ್ಕೆ ಔಟಾದರು. ಬಟ್ಲರ್ ಕೂಡ 29 ರನ್‌ಗೆ ವಿಕೆಟ್ ಒಪ್ಪಿಸಿದರು. ಇನ್ನುಳಿದ ಬ್ಯಾಟಿಗರು ಹೇಳಿಕೊಳ್ಳುವ ಪ್ರದರ್ಶನ ನೀಡಲೇ ಇಲ್ಲ.

ಐದನೇ ಬಾರಿ ಫೈನಲ್‌ಗೆ ಆರ್‌ಸಿಬಿ

ಈ ಗೆಲುವಿನೊಂದಿಗೆ ಆರ್‌ಸಿಬಿ ನಾಲ್ಕನೇ ಬಾರಿ ಫೈನಲ್‌ಗೇರಿತು. ಈ ಹಿಂದೆ 2009, 2011, 2016 ಮತ್ತು 2025ರಲ್ಲಿ ಫೈನಲ್‌ಗೇರಿದ ಆರ್‌ಸಿಬಿ 2025ರಲ್ಲಿ ಚಾಂಪಿಯನ್ ಪಟ್ಟಕ್ಕೇರಿದೆ.

ಎರಡು ಸತತ ಫೈನಲ್; 4ನೇ ತಂಡ: ಆರ್‌ಸಿಬಿ ಐಪಿಎಲ್ ಪಂದ್ಯಾವಳಿಯ ಇತಿಹಾಸದಲ್ಲಿ ಸತತ ಎರಡು ಬಾರಿ ಫೈನಲ್‌ಗೇರಿದ ಮೂರನೇ ತಂಡ ಅನಿಸಿಕೊಂಡಿದೆ. ಈ ಹಿಂದೆ ಈ ದಾಖಲೆಗಳನ್ನು ಚೆನ್ನೈ ಸೂಪರ್ ಕಿಂಗ್ಸ್, ಮುಂಬೈ ಇಂಡಿಯನ್ಸ್ ಮತ್ತು ಗುಜರಾತ್ ಟೈಟಾನ್ಸ್ ತಂಡಗಳು ಮಾಡಿವೆ. 2025ರಲ್ಲಿ ಫೈನಲ್‌ಗೇರಿರುವ ಆರ್‌ಸಿಬಿಗೆ ಇದು ಎರಡನೇ ಫೈನಲ್.

ದಾಖಲೆಯ ಗುರಿ

255 ರನ್ ಗುರಿ ಐಪಿಎಲ್ ಇತಿಹಾಸದಲ್ಲಿ ಪ್ಲೇಆಫ್‌ನ ಅತಿ ಹೆಚ್ಚು ಸ್ಕೋರ್ ಆಗಿದೆ. 2023ರಲ್ಲಿ ಗುಜರಾತ್ 233 ರನ್ ಗಳಿಸಿತ್ತು. ಇದು ಈವರೆಗಿನ ಅತಿ ಹೆಚ್ಚು ಸ್ಕೋರ್ ಆಗಿತ್ತು. ಪಾಟಿದಾರ್, ಕೊಹ್ಲಿ ಮತ್ತು ಕೃಣಾಲ್ ಅಬ್ಬರದೊಂದಿಗೆ ಆರ್‌ಸಿಬಿ 254 ರನ್ ಬಾರಿಸಿದ್ದು, ಇದು ಪಂದ್ಯಾವಳಿಯ ಪ್ಲೇಆಫ್‌ನ ಅತಿ ಹೆಚ್ಚು ಸ್ಕೋರ್ ಆಗಿದೆ.

ಕಿರುಸುದ್ದಿ

ಪ್ರಜ್ಞಾನಂದ, ಗುಕೇಶ್, ದಿವ್ಯಾಗೆ ಶುಭಾರಂಭ

ಒಸ್ಲೋ (ನಾರ್ವೆ): ಸೋಮವಾರ ಶುರುವಾದ ನಾರ್ವೆ ಚೆಸ್ ಓಪನ್ ಪಂದ್ಯಾವಳಿಯಲ್ಲಿ ಭಾರತೀಯ ಗ್ರ್ಯಾಂಡ್‌ಮಾಸ್ಟರ್‌ಗಳು ಉತ್ತಮ ಪ್ರದರ್ಶನ ನೀಡಿದ್ದಾರೆ. ಮೊದಲ ದಿನದ ಪ್ರಮುಖ ಫಲಿತಾಂಶದಲ್ಲಿ ಫ್ರಾನ್ಸ್‌ನ ಅಲಿರೆಝಾ ಫಿರೋಜ್ಜಾ, ವಿಶ್ವ ನಂ.1 ಆಟಗಾರ ಮ್ಯಾಗ್ನಸ್ ಕಾರ್ಲ್ಸನ್ ಅವರನ್ನು ಕ್ಲಾಸಿಕ್ ಪಂದ್ಯದಲ್ಲಿ ಮಣಿಸಿದರು. ಬಹುತೇಕ ಸಮಯ ಪಂದ್ಯದಲ್ಲಿ ಹಿಡಿತ ಸಾಧಿಸಿದ್ದ ಕಾರ್ಲ್ಸನ್, ಸಮಯದ ಒತ್ತಡದಲ್ಲಿ ಮಾಡಿದ ಒಂದು ದೊಡ್ಡ ತಪ್ಪಿನಿಂದ ಸಂಕಷ್ಟಕ್ಕೆ ಸಿಲುಕಿದರು. ಭಾರತದ ಎರಡನೇ ಶ್ರೇಯಾಂಕದ ಆಟಗಾರ ಆರ್. ಪ್ರಜ್ಞಾನಂದ ಹಾಗೂ ವೆಸ್ಲೀ ಸೊ ನಡುವಿನ ಪಂದ್ಯ ಸಮಬಲದಲ್ಲಿ ಅಂತ್ಯವಾಯಿತು. ನಂತರ ನಡೆದ ಆರ್ಮಗೆಡನ್ ಹಣಾಹಣಿಯಲ್ಲಿ ಪ್ರಜ್ಞಾನಂದ ಜಯ ಸಾಧಿಸಿ ಹೆಚ್ಚುವರಿ ಅಂಕಗಳನ್ನು ತಮ್ಮದಾಗಿಸಿಕೊಂಡರು. ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್, ಜರ್ಮನಿಯ ಅಗ್ರ ಆಟಗಾರ ವಿನ್ಸೆಂಟ್ ಕೀಮರ್ ವಿರುದ್ಧ ಕಠಿಣ ಪೈಪೋಟಿ ನಡೆಸಿದರು. ಅಂತಿಮ ಹಂತದಲ್ಲಿ ಕೈಮರ್ ಮೇಲುಗೈ ಸಾಧಿಸಿ ಗೆಲುವಿನ ಅಂಚಿನಲ್ಲಿದ್ದರು. ಆದರೆ ಗುಕೇಶ್ ಅದ್ಭುತ ರಕ್ಷಣಾತ್ಮಕ ಆಟವಾಡಿ ಪಂದ್ಯವನ್ನು ಸಮಬಲಕ್ಕೆ ತಂದರು. ಬಳಿಕ ನಡೆದ ಆರ್ಮಗೆಡನ್ ಪಂದ್ಯದಲ್ಲಿ ಗೆದ್ದು ಅಮೂಲ್ಯ ಹೆಚ್ಚುವರಿ ಅಂಕಗಳನ್ನು ಕಲೆಹಾಕಿದರು. ಮೊದಲ ಸುತ್ತಿನ ನಂತರ ಕ್ಲಾಸಿಕ್ ವಿಭಾಗದಲ್ಲಿ ಏಕೈಕ ಗೆಲುವು ದಾಖಲಿಸಿದ ಫಿರೋಜ್ಜಾ ಅಂಕಪಟ್ಟಿಯಲ್ಲಿ ಮುನ್ನಡೆ ಸಾಧಿಸಿದ್ದಾರೆ.

ಮಹಿಳೆಯರ ವಿಭಾಗ: ಮಹಿಳಾ ವಿಭಾಗದಲ್ಲೂ ಆರಂಭದ ದಿನವೇ ಕುತೂಹಲಕರ ಪೈಪೋಟಿ ಕಂಡುಬಂದಿತು. ಕಝಕಿಸ್ತಾನದ ಬಿಬಿಸಾರಾಭಾರತದ ಅಗ್ರ ಆಟಗಾರ್ತಿ ಕೊನೆರು ಹಂಪಿ ವಿರುದ್ಧ ಕ್ಲಾಸಿಕಲ್ ವಿಭಾಗದಲ್ಲಿ ಜಯ ಸಾಧಿಸಿದರು. ಅನ್ನಾ ಹಾಗೂ ಝು ಜಿನರ್ ನಡುವಿನ ಪಂದ್ಯ ಸಮಬಲದಲ್ಲಿ ಅಂತ್ಯವಾಯಿತು. ನಂತರದ ಆರ್ಮಗೆಡನ್‌ನಲ್ಲಿ ಝು ಜಿನರ್ ಮೇಲುಗೈ ಸಾಧಿಸಿ ಹೆಚ್ಚುವರಿ ಅಂಕ ಪಡೆದರು. ಇನ್ನೊಂದು ಪಂದ್ಯದಲ್ಲಿ ಹಾಲಿ ಮಹಿಳಾ ವಿಶ್ವ ಚಾಂಪಿಯನ್ ಜು ವೆಂಜುನ್ ಹಾಗೂ ಭಾರತದ ದಿವ್ಯಾ ದೇಶಮುಖ್ ಹಣಾಹಣಿ ಡ್ರಾದಲ್ಲಿ ಅಂತ್ಯವಾಯಿತು.

ಓಟದಲ್ಲಿ ಕನ್ನಡಿಗರೇ ಟಾಪ್

ಬೆಂಗಳೂರು: ಮಹಿಳೆಯರ 100 ಮೀ. ಟಿ37 ಸ್ಪರ್ಧೆಯಲ್ಲಿ ಕನ್ನಡಿಗರಾದ ಭಾರತಿ ಭಾರತೇಶ್ ಮತ್ತು ಹರ್ಷಿತಾ ಟಾತೆರ್ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದರು. ಕೂಟದ ವಿವಿಧ ಸ್ಪರ್ಧೆಯಲ್ಲಿ ಕರ್ನಾಟಕ ಅಥ್ಲೀಟ್‌ಗಳು ಪಾರುಪತ್ಯ ಸಾಧಿಸಿದರು. ಅಂತಾರಾಷ್ಟ್ರೀಯ ಪ್ಯಾರಾ ಅಥ್ಲೀಟ್ ಸಂಸ್ಥೆಯಿಂದ ಮಾನ್ಯತೆ ಪಡೆದ ಇಂಡಿಯಾ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಕೂಟವು ನಗರದ ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರದಂದು ಶುರುವಾಯಿತು. 16.99 ಸೆಕೆಂಡುಗಳಲ್ಲಿ ಓಟ ಮುಗಿಸಿದ ಭಾರತಿ ಮೊದಲ ಸ್ಥಾನ ಪಡೆದುಕೊಂಡರೆ, 17.73 ಸೆಕೆಂಡುಗಳಲ್ಲಿ ಕ್ರಮಿಸಿದ ಹರ್ಷಿತಾ ಎರಡನೇ ಸ್ಥಾನ ಪಡೆದುಕೊಂಡರು. ಚಂಡೀಗಢದ ಬಲ್ವಿಂದರ್ ಕೌರ್ ಮೂರನೇ ಸ್ಥಾನ ಪಡೆದರು. ಓಟದ ಸ್ಪರ್ಧೆಯಲ್ಲಿ ಕರ್ನಾಟಕ ಕ್ರೀಡಾಪಟುಗಳು ಉತ್ತಮ ಪ್ರದರ್ಶನ ನೀಡಿದರು. ಪುರುಷರ 100 ಮೀ. ಟಿ47 ವಿಭಾಗದಲ್ಲಿ ಬಾಬು ಜಾನು ಮೂರನೇ ಸ್ಥಾನ ಪಡೆದುಕೊಂಡರು. ಪ್ರಿಲಿಮ್ಸ್‌ನಲ್ಲಿ 11.36 ಸೆಕೆಂಡುಗಳಲ್ಲಿ ಗುರಿ ಕ್ರಮಿಸಿ ಮೂರನೇ ಸ್ಥಾನ ಪಡೆದು ಫೈನಲ್ಸ್‌ಗೆ ಅರ್ಹತೆ ಪಡೆದ ಅವರು, ಅಲ್ಲಿ 11.19 ಸೆಕೆಂಡುಗಳಲ್ಲಿ ಗುರಿ ಕ್ರಮಿಸಿ ಮೂರನೇ ಸ್ಥಾನ ಗಳಿಸಿದರು. ಮೊಹಮ್ಮದ್ ಬಾಸಿಲ್ 10.63 ಸೆಕೆಂಡುಗಳಲ್ಲಿ ಓಡಿ ಚಿನ್ನ ಗೆದ್ದರೆ, ದಿಲೀಪ್ ಎರಡನೇ ಸ್ಥಾನ ಗಳಿಸಿದರು.

ರಕ್ಷಿತಾ, ಶರತ್‌ಗೆ ಮೊದಲ ಸ್ಥಾನ

ಮಹಿಳೆಯರ 1500 ಮೀ. ಟಿ11 ಸ್ಪರ್ಧೆಯಲ್ಲಿ ಕರ್ನಾಟಕದ ರಕ್ಷಿತಾ ರಾಜು ಮೊದಲ ಸ್ಥಾನ ಪಡೆದರು. 5:17.45 ನಿಮಿಷಗಳಲ್ಲಿ ಗುರಿ ಕ್ರಮಿಸಿದ ಕನ್ನಡತಿ, ರಾಜಸ್ಥಾನದ ಶಾಲಿನಿ ಅವರನ್ನು ಹಿಂದಿಕ್ಕಿದರು. 6:7.55 ನಿಮಿಷಗಳಲ್ಲಿ ಓಟ ಮುಗಿಸಿದ ಶಾಲಿನಿ ಬೆಳ್ಳಿ, ಕರ್ಗಿಸ್ತಾನದ ಗುಲ್ನಾಜ್ 6:19.58 ಮೂರನೇ ಸ್ಥಾನ ಪಡೆದರು. ಇನ್ನು ಪುರುಷರ 1500ಮೀ. ಟಿ13 ವಿಭಾಗದಲ್ಲಿ ಮೊದಲ ಸ್ಥಾನ ಗಳಿಸಿದರು. ಸಾಮಾನ್ಯವಾಗಿ ಟಿ12 ವಿಭಾಗದಲ್ಲಿ ಸ್ಪರ್ಧಿಸುವ ಅವರು, 4:11.25 ನಿಮಿಷಗಳಲ್ಲಿ ಓಟ ಮುಗಿಸಿದರು. ಚಿರಾಗ್, ಬಳವಂತ ನಂತರದ ಸ್ಥಾನ ಗಳಿಸಿದರು. ಪುರುಷರ 100 ಮೀ. ಟಿ38 ವಿಭಾಗದಲ್ಲಿ 13.44 ಸೆಕೆಂಡುಗಳಲ್ಲು ಗುರಿ ಕ್ರಮಿಸಿದ ದೇವ ಸಚ್ಚಿದಾನಂದ ಅವರು ಎರಡನೇ ಸ್ಥಾನ ಗಳಿಸಿದರು. ಇಷ್ಟೇ ಅಲ್ಲದೆ, ಕರ್ನಾಟಕಕ್ಕೆ ವಿವಿಧ ಪದಕಗಳು ದೊರಕಿದವು. ಮಹಿಳೆಯರ ಎಫ್-57 ಶಾಟ್‌ಪುಟ್ ಸ್ಪರ್ಧೆಯಲ್ಲಿ ಶಿಲ್ಪಾ ಅವರಿಗೆ ಎರಡನೇ ಸ್ಥಾನ ದೊರಕಿತು. 6.67ಮೀ. ದೂರ ಎಸೆದ ಅವರು, ಮೂರನೇ ಸ್ಥಾನದ ಪೂನಂ ಅವರನ್ನು ಹಿಂದಿಕ್ಕಿದರು. ಶರ್ಮಿಳಾ 9.86 ಮೀ. ದೂರ ಎಸೆದು ಮೊದಲ ಸ್ಥಾನ ಪಡೆದರು.

ಪ್ರಶಸ್ತಿ ವಿಜೇತರು

ಪ್ರಮೋದ್ ಭಗತ್: 2026ರ ವರ್ಷದ ಪ್ಯಾರಾ ಅಥ್ಲೀಟ್ ಪ್ರಶಸ್ತಿ ವಿಜೇತ
ದೀಪ್ತಿ ಜೀವನ್‌ಜಿ: 2026ರ ವರ್ಷದ ಪ್ಯಾರಾ ಅಥ್ಲೀಟ್ ಪ್ರಶಸ್ತಿ ವಿಜೇತೆ
ಅಭಿಲಾಷಾ ಚೌಧರಿ: 2026ರ ವರ್ಷದ ಪ್ಯಾರಾ ಕ್ರೀಡಾ ಕೋಚ್
ಇಂಡಿಯನ್ ಆಯಿಲ್: 2026ರ ವರ್ಷದ ಸಂಸ್ಥೆ ಪ್ರಶಸ್ತಿ
ದೀಪ್ತಿ ಬೋಪಯ್ಯ: ಪ್ಯಾರಾ ಕ್ರೀಡೆ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದ ವ್ಯಕ್ತಿ ಪ್ರಶಸ್ತಿ, **ಪಾಯಲ್ ನಾಗ್:** 2026ರ ವರ್ಷದ ಉದಯೋನ್ಮುಖ ಪ್ಯಾರಾ ಕ್ರೀಡಾಪಟು. **ಸತ್ಯಪ್ರಕಾಶ್ ಸಾಂಗ್ವಾನ್:** ಪ್ಯಾರಾ ಕ್ರೀಡೆಗೆ ಬೆಂಬಲ ನೀಡಿದ ಚಾಂಪಿಯನ್ ಪ್ರಶಸ್ತಿ, **ಮಹಾವಿ ೀರ್ ಸಿಂಗ್ ರಾವತ್:** ವರ್ಷದ ಮಾಧ್ಯಮ ವ್ಯಕ್ತಿ ಪ್ರಶಸ್ತಿ

ಪ್ಯಾರಾಲಿಂಪಿಕ್ಸ್ ಸೇರಿ ಪ್ಯಾರಾ ಕ್ರೀಡೆಗಳಲ್ಲಿ ಅಪ್ರತಿಮ ಸಾಧನೆ ತೋರಿದ, ಪ್ಯಾರಾ ಕ್ರೀಡೆಗೆ ಬೆನ್ನೆಲುಬಾಗಿ ನಿಂತ ಸಾಧಕರಿಗೆ ಭಾರತೀಯ ಪ್ಯಾರಾಲಿಂಪಿಕ್ ಸಮಿತಿ (ಪಿಸಿಐ) ಲಿಮಿಟ್‌ಲೆಸ್ ಇಂಪ್ಯಾಕ್ಟ್ ಅಂತಾರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಿತು.

ಇಂದು ಎಲಿಮಿನೇಟರ್ ಪಂದ್ಯ | ಸೋತವರು ಮನೆಗೆ | ಗೆದ್ದವರು ಸೆಮಿಫೈನಲ್‌ಗೆ

ಹೈದರಾಬಾದ್-ಆರ್‌ಆರ್ ನಡುವೆ ಕ್ವಾರ್ಟರ್

ಚಂಡೀಗಢ: ಐಪಿಎಲ್ ಪಂದ್ಯಾವಳಿಯ ಸೆಮಿಫೈನಲ್ ಪ್ರವೇಶಕ್ಕಾಗಿ ರಾಜಸ್ಥಾನ ಹಾಗೂ ಹೈದರಾಬಾದ್ ತಂಡಗಳು ಬುಧವಾರದ ಎಲಿನೇಟರ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಪಂದ್ಯಾವಳಿಯಲ್ಲಿ ವಿಭಿನ್ನ ಮಾದರಿಯ ಪ್ಲೇಆಫ್ ಇದ್ದು, ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿರುವ ತಂಡಗಳು ಎಲಿಮಿನೇಟರ್ ಪಂದ್ಯಗಳಲ್ಲಿ ಎದುರಾಗುತ್ತವೆ. ಅದು ಕ್ವಾರ್ಟರ್‌ಫೈನಲ್ ರೀತಿಯಲ್ಲೇ ನಡೆಯುತ್ತದೆ. ಸೋತವರು ಮನೆ ಹಾದಿ ಹಿಡಿದರೆ, ಗೆದ್ದವರು ಕ್ವಾಲಿಫೈಯರ್ 2 ಅಂದರೆ ಸೆಮಿಫೈನಲ್‌ಗೇರುತ್ತಾರೆ. 18 ಅಂಕ ಗಳಿಸಿದರೂ ರನ್‌ರೇಟ್ ವಿಚಾರದಲ್ಲಿ ಹಿನ್ನಡೆ ಅನುಭವಿಸಿರುವ ಹೈದರಾಬಾದ್ ಮೂರನೇ ಸ್ಥಾನದೊಂದಿಗೆ ಲೀಗ್ ಪಂದ್ಯಗಳನ್ನು ಮುಗಿಸಿತ್ತು. ಅತ್ತ ರಾಜಸ್ಥಾನ 16 ಅಂಕಗಳೊಂದಿಗೆ ನಾಲ್ಕನೇ ಸ್ಥಾನ ಪಡೆದುಕೊಂಡಿದೆ. ಹಾಲಿ ರನ್ನರ್-ಅಪ್ ಪಂಜಾಬ್ ಕಿಂಗ್ಸ್ ತವರಲ್ಲಿ ಈ ಪಂದ್ಯ ನಡೆಯಲಿದೆ.

ಅಭಿಷೇಕ್ ಶರ್ಮ, ಟ್ರಾವಿಸ್ ಹೆಡ್, ಹೆನ್ರಿಕ್ ಕ್ಲಾಸೆನ್ ಅವರ ಅದ್ಭುತ ಲಯದ ಬಲದೊಂದಿಗೆ ಹೈದರಾಬಾದ್ ಕೂಟದಲ್ಲಿ ಮಿಂಚಿದೆ. ಇತ್ತ ರಾಜಸ್ಥಾನ ತಂಡದ ಪರ ವೈಭವ್ ಸೂರ್ಯವಂಶಿ,



ಯಶಸ್ವಿ ಜೈಸ್ವಾಲ್ ಮತ್ತು ಜೋಫ್ರಾ ಆರ್ಚರ್ ಅವರ ಬಲದೊಂದಿಗೆ ರಾಜಸ್ಥಾನ ಮಿಂಚಿದೆ.

ಕೂಟದಲ್ಲಿ ಹೈದರಾಬಾದ್: ಐಪಿಎಲ್ ಆರಂಭಕ್ಕೂ ಮುನ್ನವೇ ದೊಡ್ಡ ಹೊಡೆತ. ತಂಡದ ಪ್ರಮುಖ ಬೌಲರ್, ನಾಯಕ ಪ್ಯಾಟ್ ಕಮ್ಮಿನ್ಸ್ ಗಾಯದಿಂದ ಹೊರಬಿದ್ದಿದ್ದರು. ಅಭಿಷೇಕ್ ಶರ್ಮ, ಇಶಾನ್ ಕಿಶನ್ ವಿಶ್ವಕಪ್ ಗೆದ್ದ ಭಾರತ ತಂಡದಿಂದ ನೇರವಾಗಿ ಮೈದಾನಕ್ಕಿಳಿದಿದ್ದರು. ಆದರೆ ಒಂದು ಹಂತದಲ್ಲಿ ಬೌಲಿಂಗ್‌ನಲ್ಲಿ ದೊಡ್ಡ ಹಿನ್ನಡೆಯನ್ನೇ ಎದುರಿಸಿದ್ದ ಹೈದರಾಬಾದ್ ಮೊದಲ ಪಂದ್ಯದಲ್ಲೇ ಸೋತಿತ್ತು. ಮೊಹಮ್ಮದ್ ಶಮಿ ಅವರನ್ನು ಬಿಟ್ಟುಕೊಟ್ಟ ಪರಿಣಾಮ ಆರಂಭದಲ್ಲಿ ಅಲ್ಪ ಹಿನ್ನಡೆ ಅನುಭವಿಸಿತು. ಆದರೆ ಇಶಾನ್ ಕಿಶನ್ ಅವರ ನಾಯಕತ್ವದಲ್ಲಿ ಹೊಸ ಆಟಗಾರರು ಕಣಕ್ಕಿಳಿದರು. ಸಾಕೀಬ್ ಹುಸೈನ್, ಪ್ರಫುಲ್ ಹಿಂಗೆ ಸೇರಿದಂತೆ ಇದೇ ಮೊದಲ ಬಾರಿಗೆ ಐಪಿಎಲ್ ಆಡಿದ ಆಟಗಾರರೊಂದಿಗೆ ಗೆಲ್ಲುವ ಸವಾಲನ್ನು ಹೈದರಾಬಾದ್ ಹೊಂದಿತ್ತು. ಆದರೆ ಕ್ಲಾಸೆನ್, ಕಿಶನ್ ಮತ್ತು ಅಭಿಷೇಕ್ ಬೇರೊಂದು ಪ್ಲಾನ್‌ನಲ್ಲಿದ್ದರು. ಪ್ರತಿ ಪಂದ್ಯದಲ್ಲಿ ಮಿಂಚಿ ಗೆಲುವಿನ ನಗಾಲೋಟ ಶುರು ಮಾಡಿತು. ಮಧ್ಯಮ ಐಪಿಎಲ್‌ನಲ್ಲಿ ಹೈದರಾಬಾದ್ ಒಂದೂ ಪಂದ್ಯದಲ್ಲಿ ಸೋಲಲೇ ಇಲ್ಲ. ಪ್ಲೇಆಫ್ ಫೈಟ್‌ನಲ್ಲಿ ಶಕ್ತಿಯುತ ತಂಡವಾಗಿ ಹೊರಹೊಮ್ಮಿತು. ಮೊದಲೆರಡು ಸ್ಥಾನಕ್ಕೂ ಬಲಿಷ್ಠ ಪೈಪೋಟಿ ನೀಡಿರುವ ಹೈದರಾಬಾದ್ ಮೂರನೇ ಸ್ಥಾನದೊಂದಿಗೆ ಮುಗಿಸಿದೆ.

ಕೀ ಪ್ಲೇಯರ್ಸ್

ಬ್ಯಾಟಿಂಗ್
- ಹೆನ್ರಿಕ್ ಕ್ಲಾಸೆನ್: 606 ರನ್
- ಇಶಾನ್ ಕಿಶನ್: 569 ರನ್
- ಅಭಿಷೇಕ್ ಶರ್ಮ: 563 ರನ್
- ಟ್ರಾವಿಸ್ ಹೆಡ್: 393 ರನ್

ಬೌಲಿಂಗ್
- ಇಶಾನ್ ಮಾಲಿಂಗಾ: 19 ವಿಕೆಟ್
- ಸಾಕೀಬ್ ಹುಸೈನ್: 15 ವಿಕೆಟ್
- ಪ್ರಫುಲ್ ಹಿಂಗೆ: 11 ವಿಕೆಟ್
- ಪ್ಯಾಟ್ ಕಮ್ಮಿನ್ಸ್, ಶಿವಾಂಗ್ ಕುಮಾರ್: 8 ವಿಕೆಟ್

ಕೂಟದಲ್ಲಿ ರಾಜಸ್ಥಾನ

ಹರಾಜಿಗು ಮುನ್ನವೇ ತಂಡದ ಪ್ರಮುಖ ಆಟಗಾರ ಸಂಜು ಸ್ಯಾಮ್ಸನ್ ಅವರನ್ನು ಬಿಟ್ಟುಕೊಟ್ಟಿದ್ದ ರಾಜಸ್ಥಾನ ರಾಯಲ್ಸ್ ಜಡೇಜಾ ಅವರನ್ನು ಖರೀದಿಸಿತ್ತು. ಪ್ರಮುಖ ಬದಲಾವಣೆಯಲ್ಲಿ ಹಸರಂಗಾ ಅವರನ್ನೂ ಬಿಟ್ಟಿತ್ತು. ಈ ನಡುವೆ ಪಂದ್ಯಾವಳಿಗೆ ಬರುವ ಮುನ್ನವೇ ಸ್ಯಾಮ್ ಕರ್ರನ್ ಅವರು ಗಾಯದಿಂದ ಹೊರಬಿದ್ದರು. ವೈಭವ್ ಸೂರ್ಯವಂಶಿ ಮತ್ತು ಜೈಸ್ವಾಲ್ ಆಟದೊಂದಿಗೆ ಮಿಂಚಿದ ತಂಡವು ಗೆಲುವಿನ ನಾಗಾಲೋಟದಲ್ಲಿ ಮೆರೆಯಿತು. ಮೊದಲಿನ ಪಂದ್ಯಗಳಲ್ಲಿ ಮಿಶ್ರ ಫಲ ಪಡೆದ ರಾಜಸ್ಥಾನ ಮಧ್ಯಮ ಕೂಟದಲ್ಲಿ ಮಿಂಚಿತು. ರಿಯಾನ್ ಪರಾಗ್ ನೇತೃತ್ವದಲ್ಲಿ ಆಡಿದ ಪಂದ್ಯಗಳಲ್ಲಿ ಆರ್‌ಆರ್ ಪ್ರಮುಖವಾಗಿ ಜೋಫ್ರಾ ಆರ್ಚರ್ ಬಲ ಪಡೆಯಿತು. ಪ್ರತಿ ಪಂದ್ಯದಲ್ಲೂ ಮಿಂಚಿದ ಆರ್ಚರ್ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ವಿಶೇಷ ಪ್ರದರ್ಶನ ನೀಡಿದ್ದಾರೆ.

ಕೀ ಪ್ಲೇಯರ್ಸ್-ಪ್ರದರ್ಶನ

ಬ್ಯಾಟಿಂಗ್
- ವೈಭವ್ ಸೂರ್ಯವಂಶಿ: 583 ರನ್
- ಧ್ರುವ್ ಜುರೇಲ್: 458 ರನ್
- ಯಶಸ್ವಿ ಜೈಸ್ವಾಲ್: 397 ರನ್
- ರಿಯಾನ್ ಪರಾಗ್: 272 ರನ್


ಬೌಲಿಂಗ್
- ರವೀಂದ್ರ ಜಡೇಜಾ: 209 ರನ್, 8 ವಿಕೆಟ್
- ಜೋಫ್ರಾ ಆರ್ಚರ್: 21 ವಿಕೆಟ್
- ಬ್ರಿಜೇಶ್ ಶರ್ಮ: 13 ವಿಕೆಟ್
- ರವಿ ಬಿಷ್ಣೋಯ್: 11 ವಿಕೆಟ್

ಹೈದರಾಬಾದ್ ಪ್ರದರ್ಶನ

- ಪಂದ್ಯ 14
- ಗೆಲುವು 9
- ಸೋಲು 5
- ಅಂಕ 18
- ರನ್‌ರೇಟ್ +0.524

ಪಿಚ್ ರಿಪೋರ್ಟ್

ಹೊಸ ಚಂಡೀಗಢದಲ್ಲಿ ಪಂದ್ಯ ನಡೆಯಲಿದೆ. ಹಾಲಿ ರನ್ನರ್-ಅಪ್ ಪಂಜಾಬ್ ಕಿಂಗ್ಸ್ ತಂಡದ ತವರಾಗಿದ್ದು ಬ್ಯಾಟಿಂಗ್ ಪಿಚ್ ಅನ್ನುವ ಹೆಸರೂ ಪಡೆದಿದೆ. ಹೆಚ್ಚಿನ ಬೌನ್ಸ್, ಫ್ಲಾಟ್ ಪಿಚ್ ಮತ್ತು ಹತ್ತಿರದ ಬೌಂಡರಿ ಬ್ಯಾಟರ್‌ಗಳಿಗೆ ಲಾಭ ತಂದಿವೆ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟ ಕೂಡ ಇರಬಹುದು. ಆದಾಗ್ಯೂ ಸ್ಪಿನ್ನರ್‌ಗಳಾದ ಜಡೇಜಾ, ಶಿವಾಂಗ್ ಕುಮಾರ್ ಅಂಥವರಿಗೆ ಅಲ್ಪ ಲಾಭ ಕೂಡ ನೀಡಲಿದೆ.





ಕೂಟದಲ್ಲಿ ಪ್ರದರ್ಶನ

- ಪಂದ್ಯ: 14
- ಗೆಲುವು: 8
- ಸೋಲು: 6
- ರನ್‌ರೇಟ್: +0.189

ಮುಖಾಮುಖಿ

- ಪಂದ್ಯ: 23, ಹೈದರಾಬಾದ್: 14
- ರಾಜಸ್ಥಾನ: 9, ಅಧಿಕ ಸ್ಕೋರ್: ಹೈದರಾಬಾದ್ 286, ಕನಿಷ್ಠ ಸ್ಕೋರ್: ರಾಜಸ್ಥಾನ 102/10

ಪಂದ್ಯದ ವಿವರ

ಯಾವಾಗ: ಬುಧವಾರ
ಎಲ್ಲಿ: ಚಂಡೀಗಢ
ಸಮಯ: ಸಂಜೆ 7:30
ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಸಬಲೆಂಕಾ ಗೆಲುವಿನಾರಂಭ

ಪ್ಯಾರಿಸ್: ಸ್ವಾಭಾವಿಕ ಪ್ರದರ್ಶನ ನೀಡಿರುವ ವಿಶ್ವದ ನಂಬರ್ 1 ಟೆನಿಸ್ ಆಟಗಾರ್ತಿ ಅರ್ನಾ ಸಬಲೆಂಕಾ ನಿರೀಕ್ಷೆಯಂತೆ ರೋಲ್ಯಾಂಡ್ ಗ್ಯಾರೋಸ್ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿದರು. ಮಂಗಳವಾರ ನಡೆದ ಪಂದ್ಯದಲ್ಲಿ ಬೌಝಾಚ್ ಮಾನೇರಿಯೋ ಅವರೊಂದಿಗೆ ಆಡಿದ ಅವರು, ನೇರ ಸೆಟ್‌ಗಳ ಸುಲಭ ಜಯ ಸಾಧಿಸಿದರು. ಮೊದಲನೇ ಸುತ್ತಿನ ಪಂದ್ಯದಲ್ಲಿ 4 ಅಂಕಗಳ ಮುನ್ನಡೆ ಸಾಧಿಸಿದ ಸಬಲೆಂಕಾ ಸರ್ವ್ ಹಾಗೂ ಏಸ್ ಪಾಯಿಂಟ್‌ಗಳೊಂದಿಗೆ ಮಿಂಚಿದರು. ಆರಂಭದಿಂದಲೂ ಒತ್ತಡ ಹೇರುತ್ತಾ, ಮುನ್ನಡೆ ಸಾಧಿಸಿದರು. ಎದುರಾಳಿ ಒಂದಿಷ್ಟು ಪ್ರಯತ್ನ ಪಟ್ಟ ನಂತರ ಒಂದು ಅಂಕ ಗಳಿಸಿದ್ದಲ್ಲದೆ, 5-1ರೊಂದಿಗೆ ಪಂದ್ಯದಲ್ಲಿ ಕಂಬ್ಯಾಕ್ ಮಾಡಿದರು. ಮುಂದಿನ ಆಟದಲ್ಲಿ ಉತ್ತಮ ಪ್ರದರ್ಶನ ನೀಡಿದ ಎದುರಾಳಿ ಬೌಝಾಚ್ ಸತತ ಮೂರು ಅಂಕ ಗಳಿಸಿದರು. ಸಬಲೆಂಕಾ ಪ್ರತಿರೋಧಕ್ಕೆ ಉತ್ತರ ಕೊಡುತ್ತಾ, ಸರ್ವ್ ಪಾಯಿಂಟ್‌ಗಳನ್ನು ಬ್ರೇಕ್ ಮಾಡುತ್ತಾ ಸಾಗಿದ ಎದುರಾಳಿ ಪಂದ್ಯವನ್ನು 5-4ಕ್ಕೆ ತಂದಿತ್ತರು. ಆದರೆ ಮುಂದಿನ ಸೆಟ್‌ನಲ್ಲಿ ಗೆಲುವು ಸಾಧಿಸಿದ ಸಬಲೆಂಕಾ ಸುತ್ತಿನ ಮುನ್ನಡೆ ಸಾಧಿಸಿದರು. ಎರಡನೇ ಸೆಟ್‌ನಲ್ಲಿ ಸಬಲೆಂಕಾ ಆಗ್ರೆಸ್ಸಿವ್ ಆಟವಾಡಿದರು. ಮೊದಲಿನಿಂದಲೂ ಆಕ್ರಮಣಕಾರಿ ಹೊಡೆತಗಳ ಮೂಲಕ ಮಿಂಚಿದ ಅವರು, 5-0ರಿಂದ ಮುನ್ನಡೆ ಸಾಧಿಸಿದರು. ಎದುರಾಳಿ ಮತ್ತೆ ಕಂಬ್ಯಾಕ್ ಮಾಡಿ 2 ಅಂಕ ಗಳಿಸಿದರು. ಆದರೆ ಸಬಲೆಂಕಾ 6-2ರಿಂದ ಪಂದ್ಯ ಗೆದ್ದರು. ಮತ್ತೊಂದು ಪಂದ್ಯದಲ್ಲಿ ಆನ್ ಲಿ, ಚೀನಾದ ಝೂಂಗ್ ಅವರೊಂದಿಗೆ 6-4, 6-2ರಿಂದ ಗೆದ್ದರು. ಜೋವಿಕ್ ಎಲಾಲಾ ಅವರೊಂದಿಗೆ 6-4, 6-2ರಿಂದ ಗೆಲುವು ಸಾಧಿಸಿದರು.

ಮುಲ್ಲರ್ ವಾಕೋವರ್: ಪ್ರಮುಖ ಆಟಗಾರ ಅಲೆಕ್ಸಾಂಡರ್ ಮುಲ್ಲರ್ ಅವರು ಸ್ಟೆಫಾನೋಸ್ ಸಿಟ್ಸಿಪಾಸ್ ವಿರುದ್ಧದ ಪಂದ್ಯದಲ್ಲಿ ಹೊರನಡೆದರು. ಮಂಗಳವಾರದ ಪಂದ್ಯದಲ್ಲಿ ಅವರು, ಹಿನ್ನಡೆ ಅನುಭವಿಸಿದ್ದರು. ಆರಂಭಿಕ ಸೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಎದುರಾಳಿ ಸ್ಟೆಫಾನೋಸ್ ಸಿಟ್ಸಿಪಾಸ್ 6-2ರಿಂದ ಗೆಲುವು ಸಾಧಿಸಿದರು. ಎರಡನೇ ಸೆಟ್‌ನಲ್ಲಿ ಕೂಡ ಮುನ್ನಡೆ ಕಾಯ್ದುಕೊಂಡರು. ಸ್ಟೆಫಾನೋಸ್ ಸಿಟ್ಸಿಪಾಸ್ 3 ಅಂಕ ಗಳಿಸಿದ್ದರು. ಮುಲ್ಲರ್ ಯಾವುದೇ ಅಂಕ ಗಳಿಸಿರಲಿಲ್ಲ. ಈ ನಡುವೆ ಗಾಯಗೊಂಡ ಮುಲ್ಲರ್ ವಾಕೋವರ್ ಕೊಟ್ಟರು.

ಕಾಮನ್‌ವೆಲ್ತ್ ಚಿನ್ನ ಗೆದ್ದ 8ರ ತಾಮಿಝ್

ಹೊಸದಿಲ್ಲಿ: ತಮಿಳುನಾಡಿನ 8 ವರ್ಷದ ಬಾಲಕ ತಾಮಿಝ್ ಅಮುಧನ್ ಎಸ್. ಕಾಮನ್‌ವೆಲ್ತ್ ಚೆಸ್ ಚಾಂಪಿಯನ್‌ಶಿಪ್‌ನ ಮೂರೂ ವಿಭಾಗದ ಪಂದ್ಯಾವಳಿಯಲ್ಲಿ ಚಿನ್ನದ ಪದಕ ಗೆದ್ದು ಇತಿಹಾಸ ನಿರ್ಮಿಸಿದ್ದಾನೆ. ಶ್ರೀಲಂಕಾದ ಕಾಲುತಾರಾದಲ್ಲಿ ನಡೆದ ಅಂಡರ್-10 ಓಪನ್ ಕಾಮನ್‌ವೆಲ್ತ್ ಚಾಂಪಿಯನ್‌ಶಿಪ್ ಆಫ್ ಚೆಸ್ ಪಂದ್ಯಾವಳಿಯಲ್ಲಿ ಈ ಸಾಧನೆ ಮಾಡಿದ್ದು, ಸ್ಟ್ಯಾಂಡರ್ಡ್, ರ್ಯಾಪಿಡ್ ಮತ್ತು ಬ್ಲಿಟ್ಜ್ ಮೂರೂ ವಿಭಾಗದಲ್ಲಿ ಪದಕ ಗೆದ್ದಿದ್ದಾನೆ. ಒನ್ ಪ್ಲೇಯರ್ ಕೆಟಗೇರಿಯಲ್ಲಿ ಮೂರು ವಿಭಾಗಗಳಲ್ಲಿ ಚಾಂಪಿಯನ್‌ಶಿಪ್ ಪಂದ್ಯಗಳು ನಡೆಯುತ್ತವೆ. ಇದರಲ್ಲಿ ಕ್ಲೀನ್ ಸ್ವೀಪ್ ಮಾಡಿರುವ ಬಾಲಕ, 9 ಸುತ್ತಿನ ರ್ಯಾಪಿಡ್ ಮತ್ತು ಬ್ಲಿಟ್ಜ್ ವಿಭಾಗದಲ್ಲಿ 8.5 ಅಂಕಗಳನ್ನು ಗಳಿಸಿ ವಿಶ್ವ ಚೆಸ್ ಕ್ಷೇತ್ರದಲ್ಲಿ ವಿಶೇಷ ಗಮನ ಸೆಳೆದಿದ್ದಾನೆ.



- ಸ್ಟ್ಯಾಂಡರ್ಡ್, ರ್ಯಾಪಿಡ್ ಮತ್ತು ಬ್ಲಿಟ್ಜ್ ವಿಭಾಗದಲ್ಲಿ ಚಿನ್ನ
- ಅಂಡರ್-10 ಚಾಂಪಿಯನ್‌ಶಿಪ್‌ನಲ್ಲಿ ದಾಖಲೆ

ಈಗಾಗಲೇ ಐದು ಏಷ್ಯನ್ ಪದಕ: ಚೆಸ್‌ನಲ್ಲಿ ಈಗಾಗಲೇ ಐದು ಏಷ್ಯನ್ ಪದಕ ಗೆದ್ದಿರುವ ತಾಮಿಝ್ ದಾಖಲೆಗಳನ್ನು ಮಾಡಿದ್ದಾನೆ. ಅಂಡರ್-19 ಕಟ್ ಆಫ್‌ನಲ್ಲಿ ಬರುವ ಚೆಸ್ ಪಟು, ಈಎಲ್‌ಒ ರೇಟಿಂಗ್‌ನಲ್ಲಿ 2000 ಅಂಕಗಳನ್ನೂ ದಾಟಿರುವುದು ವಿಶೇಷ. ಇದಲ್ಲದೆ, ಈ ಹಿಂದೆ ನಡೆದಿದ್ದ ಆನ್‌ಲೈನ್ ಬ್ಲಿಟ್ಜ್ ಪಂದ್ಯದಲ್ಲಿ ಜರ್ಮನಿಯ ಗ್ರ್ಯಾಂಡ್‌ಮಾಸ್ಟರ್ ವಿನ್ಸೆಂಟ್ ಕೀಮರ್ ಅವರನ್ನು ಸೋಲಿಸಿ ಗಮನ ಸೆಳೆದಿದ್ದ.

ಭಾರತ ವಿರುದ್ಧದ ಸರಣಿಗೆ ಅಫ್ಘಾನ್ ತಂಡ

ಹೊಸದಿಲ್ಲಿ: ಅಫ್ಘಾನಿಸ್ತಾನ ಕ್ರಿಕೆಟ್ ಮಂಡಳಿ ಮಂಗಳವಾರ ಭಾರತ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿ ಮತ್ತು ಜೂನ್‌ನಲ್ಲಿ ನಡೆಯಲಿರುವ ಏಕೈಕ ಟೆಸ್ಟ್‌ಗೆ ತನ್ನ ತಂಡಗಳನ್ನು ಪ್ರಕಟಿಸಿದೆ.


ಎಡಗೈ ಬ್ಯಾಟ್ಸ್‌ಮನ್ ಹಶ್ಮತುಲ್ಲಾ ಶಾಹಿದಿ ಎರಡೂ ತಂಡಗಳನ್ನು ಮುನ್ನಡೆಸಲಿದ್ದಾರೆ, ಇದರಲ್ಲಿ ರಹಮಾನಲ್ಲಾ ಗುರ್ಬಾಜ್ ಮತ್ತು ಅಜ್ಮತುಲ್ಲಾ ಒಮರ್‌ಜೈ ಕೂಡ ಇದ್ದಾರೆ. ಆದಾಗ್ಯೂ, ಲೆಗ್ ಸ್ಪಿನ್ನರ್ ರಶೀದ್ ಖಾನ್ ಅವರನ್ನು ಟೆಸ್ಟ್ ತಂಡದಲ್ಲಿ ಮಾತ್ರ ಸೇರಿಸಿಕೊಳ್ಳಲಾಗಿದೆ. ಟೆಸ್ಟ್ ಜೂನ್ 6 ರಿಂದ 10 ರವರೆಗೆ ನ್ಯೂ ಚಂಡೀಗಢದಲ್ಲಿ ನಡೆಯಲಿದ್ದು, ಏಕದಿನ ಸರಣಿ ಜೂನ್ 14 ರಿಂದ 20 ರವರೆಗೆ ಧರ್ಮಶಾಲಾ, ಲಖನೌ ಮತ್ತು ಚೆನ್ನೈನಲ್ಲಿ ನಡೆಯಲಿದ್ದು, ಪಂದ್ಯಗಳು ನಡೆಯಲಿವೆ.

ಅಫ್ಘಾನಿಸ್ತಾನ ತಂಡಗಳು: ಟೆಸ್ಟ್ ತಂಡ: ಹಶ್ಮತುಲ್ಲಾ ಶಾಹಿದಿ (ನಾಯಕ), ಅಬ್ದುಲ್ ಮಲಿಕ್, ಸೆಡಿಕುಲ್ಲಾ ಅಟಲ್, ರಹಮತ್ ಶಾ, ರಹಮಾನಲ್ಲಾ ಗುರ್ಬಾಜ್, ರಹಮಾನಲ್ಲಾ ಜದ್ರಾನ್, ಅಫ್ಸರ್ ಜಜೈ (ವಿಕೆ), ಇಕ್ರಮ್ ಅಲಿಖಿಲ್ (ವಿಕೆ), ಅಜ್ಮತುಲ್ಲಾ ಒಮರ್‌ಜೈ, ಶರಫುದ್ದೀನ್ ಅಶ್ರಫ್, ನಂಗ್ಯಾಲ್ ಖರೋಟೈ, ಖೈಸ್ ಅಹ್ಮದ್, ಬಿಲಾಲ್ ಸಮಿ, ಜಿಯಾ ಶರೀಫಿ, ಸಲೀಮ್ ಸಫಿ.

ಏಕದಿನ ತಂಡ: ಹಶ್ಮತುಲ್ಲಾ ಶಾಹಿದಿ (ನಾಯಕ), ರಹಮಾನುಲ್ಲಾ ಗುರ್ಬಾಜ್ (ವಿಕೆ), ಇಬ್ರಾಹಿಂ ಝದ್ರಾನ್, ಸೇದಿಕುಲ್ಲಾ ಅಟಲ್, ದರ್ವಿಶ್ ರಸೂಲಿ, ರಹಮತ್ ಷಾ, ಇಕ್ರಮ್ ಅಲಿಖಿಲ್, ಮೊಹಮ್ಮದ್ ನಬಿ, ಅಜ್ಮತುಲ್ಲಾ ಒಮರ್ಜಾಯ್, ರಶೀದ್ ಖಾನ್, ನಂಗ್ಯಾಲ್ ಎಮ್ ಗ್ರೋತಾರ್ಝಾಯ್, ಶರೀಫಿ, ಫರೀದ್ ಮಲಿಕ್, ಬಿಲಾಲ್ ಸಮಿ. ಮೀಸಲು ಪೂಲ್: ಖೈಸ್ ಅಹ್ಮದ್, ಸಲೀಮ್ ಸಫಿ, ಬಶೀರ್ ಅಹ್ಮದ್.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5996

ಎಡದಿಂದ ಬಲಕ್ಕೆ
2. ಕಸೂತಿ ಮಾಡಿದ ಮೇಲುಹಾಸಿದು (3)
5. ಮೃತದೇಹ ತಿನ್ನುವ ದೊಡ್ಡ ಪಕ್ಷಿ (4)
6. ನಡತೆಗೆಡು ಎಂಬರ್ಥದ ನುಡಿಗಟ್ಟು (4)
7. ಗ್ರಾಮಸ್ಥರ ಕೈಕೆಳಗಿನ ಸೇವಕ (4)
9. ತನ್ನ ನಾಡಿನ ಮೇಲಿರುವ ಅಭಿಮಾನ (4)
11. ಹೊಟ್ಟೆಬಾಕನನ್ನು ಹೀಗೂ ಹೇಳಬಹುದು (4)
13. ಬಡಗಿಯ ಕೆಲಸ (4)
14. ಈತ ಅರ್ಜುನನ ಮೊಮ್ಮಗ (4)
15. ಪುರಾವೆ ಇಲ್ಲದೆ ಹರಡುವ ವದಂತಿ (4)
17. ಪಕ್ಕ-ಬದಿ ಎಂಬರ್ಥದ ಶಬ್ದ (3)

ಮೇಲಿನಿಂದ ಕೆಳಕ್ಕೆ
1. ಕೊರಳಲ್ಲಿ ಧರಿಸುವ ಅಲಂಕಾರಿಕ ವಸ್ತು (2)
2. ತಪ್ಪು-ದೋಷವನ್ನು ಸರಿಮಾಡುವ ಕೆಲಸ (4)
3. ಜಯಂತಿ-ಉದಯಕುಮಾರ ಅಭಿನಯದ ಚಿತ್ರ ತಲೆಕೆಳಗಾಗಿದೆ (4)
4. ಜಾತ್ರೆಯಲ್ಲಿ ಸಿಗುವ ಪೊಳ್ಳು ಎಂಬರ್ಥದ ಸಿಹಿತಿಂಡಿ (2)
8. ಮಲ್ಲಯುದ್ಧದ ಪಟ್ಟಿನ ಕಡೆಯಲ್ಲಿ ಎಲ್ಲೆಯಿದೆ (3)
10. ಇದು ಪ್ರಚೋದನೆ ನೀಡುವಂಥಾದ್ದು (3)
12. ಮತ-ತರ ಒಳಗೊಂಡ ಮೇಲುಕೀಳು (4)
13. ದೂರ-ದೂರಕ್ಕೆ ಇಡುವ ಹೆಜ್ಜೆ (4)
14. ಗೊತ್ತು ಹಚ್ಚುವಿಕೆ-ಪರಿಶೋಧನೆಯಿದು (2)
16. ಒಂದು ವಸ್ತುವಿನ ಅಗ್ರಭಾಗ (2)

5995 ಉತ್ತರ

ಎಡದಿಂದ ಬಲಕ್ಕೆ:
1. ತ್ರಿಪುರ 2. ಕಾರ್ತಿಕ
4. ಆದೇಶ 6. ಜಲಾಶಯ
7. ಕುಲಗೋತ್ರ
8. ತೋಯಾಶಯ
10. ಚಲಾಚಲ
13. ಕದನರಾಗಿ
16. ರಸಾಂಜನ
17. ಕರಾಮತ್ತು

ಮೇಲಿನಿಂದ ಕೆಳಕ್ಕೆ:
1. ತ್ರಿಭುಜ 3. ಕಳತ್ರ
4. ಆಯವ್ಯಯ 5. ಲವಕುಶ
8. ತೋರಣದ್ವಾರ 9. ಶತಕ
11. ಚನ್ನಂಗಿ 12. ಚಕಾರವೆತ್ತು
14. ದಲನ 15. ರಾಜಕ

ಕಿರುಸುದ್ದಿ

ಸಮಾರೋಪ ಇಂದು

ಮುಂಡರಗಿ: ಇಲ್ಲಿಯ ಶ್ರೀ ಜ.ಅ.ವಿ.ಸಮಿತಿಯ ಕ.ರಾ.ಬೆಲ್ಲದ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಮತ್ತು ಅರ್ಥಶಾಸ್ತ್ರ ಸ್ನಾತಕೋತ್ತರ ಅಧ್ಯಯನ ವಿಭಾಗ ಇದರ 2025-26 ನೇ ಸಾಲಿನ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಸಮಾರೋಪ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವು ಮೇ 27ರ ಬೆಳಗ್ಗೆ 9.30ಕ್ಕೆ ಕಾಲೇಜಿನ ಸಭಾಭವನದಲ್ಲಿ ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳ ಸಾನ್ನಿಧ್ಯದಲ್ಲಿ ಜರುಗಲಿದೆ. ಅಧ್ಯಕ್ಷತೆಯನ್ನು ಕಾಲೇಜು ಮೇಲ್ವಿಚಾರಣಾ ಸಮಿತಿಯ ಕಾರ್ಯಾಧ್ಯಕ್ಷ ಪ್ರೊ. ಆರ್.ಎಲ್.ಪೋಲೀಸಪಾಟೀಲ ವಹಿಸುವರು. ಮುಖ್ಯ ಅತಿಥಿಗಳಾಗಿ ಜಾನಪದ ಸಾಹಿತಿ ಡಾ.ರಾಮೂ ಮೂಲಗಿ ಆಗಮಿಸುವರು. ಆಡಳಿತಾಧಿಕಾರಿ ಡಾ.ಬಿ.ಜಿ.ಜವಳಿ ಉಪಸ್ಥಿತರಿರುವರು. ಅತಿಥಿಗಳಾಗಿ ವಿ.ಎಫ್. ಗುಡದಪ್ಪನವರ, ಎಂ.ಜಿ.ಗಚ್ಚಣ್ಣವರ, ಈರಣ್ಣ ಕರ್ಜಗಿ, ಎಸ್.ಜಿ.ಕಡ್ಡಿ, ಟಿ.ಬಿ.ದಂಡಿನ,ಡಾ.ಅಮರೇಶ ಶಿವಶೆಟ್ಟಿ,ನಾಗೇಶ ಹುಬ್ಬಳ್ಳಿ ಉಪಸ್ಥಿತರಿರುವರು.

ತಂಪೆರೆದ ಮಳೆ



ನರಗುಂದ: ಸೋಮವಾರ ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಮಳೆ ಸುರಿಯುವ ಮೂಲಕ ತಂಪೆರೆದಿದೆ. ಸ್ವಲ್ಪವೇ ಮಳೆಯಾದರೂ ರೈತರ ಮುಖದಲ್ಲಿ ಹರ್ಷ ಮೂಡಿಸಿದೆ. ತಾಲೂಕಿನ ಖಾನಾಪುರ, ಗಂಗಾಪುರ ಗ್ರಾಮಗಳಲ್ಲಿ ಗುಡುಗು, ಸಿಡಿಲು ಸಹಿತ ಮಳೆ ಸುರಿದಿದೆ. ಖಾನಾಪುರ ಗ್ರಾಮದಲ್ಲಿ ವಿದ್ಯುತ್ ಕಂಬಗಳು ನೆಲಕ್ಕುರುಳಿದ ಪರಿಣಾಮ ವಿದ್ಯುತ್ ಸ್ಥಗಿತಗೊಂಡು ಜನರು ಪರದಾಡಬೇಕಾಯಿತು ಎಂದು ಗ್ರಾಮದ ಯುವಕ ರವಿ ತಳವಾರ ಹೇಳಿದರು. ಗಂಗಾಪುರ ಗ್ರಾಮದಲ್ಲಿ ಗಾಳಿಯ ಹೊಡೆತಕ್ಕೆ ಬೃಹತ್ ಬೇವಿನ ಮರವೊಂದು ಬಸವ್ವ ತಳವಾರ ಎಂಬುವವರ ಮನೆ ಮೇಲೆ ವಿದ್ಯುತ್ ಕಂಬ ಸಹಿತ ಉರುಳಿದೆ. ಮನೆಯಲ್ಲಿ ಜನರಿದ್ದರೂ ಕೂಡಾ ಯಾವುದೇ ಅನಾಹುತ ಸಂಭವಿಸಿಲ್ಲ. ಆದರೆ ಜೋರಾಗಿ ಇನ್ನೂ ಹೆಚ್ಚು ಮಳೆ ಬಂದರೆ ಮಾತ್ರ ಮುಂಗಾರು ಬಿತ್ತನೆ ಸಾಧ್ಯವೆಂದು ರೈತರು ಅಭಿಪ್ರಾಯಿಸಿದ್ದಾರೆ.

ತಾರತಮ್ಯ ಆರೋಪ

ಮುಂಡರಗಿ: ತಾಲೂಕಿನ ತುಂಗಭದ್ರಾ ನದಿಯ ಮರಳು ಪಾಯಿಂಟ್(ಬ್ಲಾಕ್) ಗುತ್ತಿಗೆ ನೀಡುವಲ್ಲಿ ಗಣಿಗಾರಿಕೆ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಮತ್ತು ಜಿಲ್ಲಾ ಮರಳು ಮೇಲ್ವಿಚಾರಣಾ ಸಮಿತಿಯವರು ತಾರತಮ್ಯ ಎಸಗಿದ್ದಾರೆ ಎಂದು ಕರ್ನಾಟಕ ಮರಳು ಟೆಂಡರ್‌ದಾರರ ಒಕ್ಕೂಟದ ಸದಸ್ಯ ಪ್ರಹ್ಲಾದ್ ಹೊಸಮನಿ ಆರೋಪಿಸಿದರು. ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನ 19 ಮರಳು ಬ್ಲಾಕ್‌ಗಳಿಗೆ ಟೆಂಡರ್ ಕರೆಯಲಾಗಿತ್ತು. ಟೆಂಡರ್‌ನ್ನು ಬಿಡ್ ಮೂಲಕ ನೀಡಲಾಗುತ್ತದೆ. ಟೆಂಡರ್ ಪಡೆಯುವುದಕ್ಕೆ ಸಂಬಂಧಿಸಿದಂತೆ ಅನೇಕರು ಅರ್ಹತಾ ಮಾನದಂಡಗಳನ್ನು ಪೂರೈಸಿ, ಪ್ರತಿಕ್ರಿಯಾತ್ಮಕ ಟೆಂಡರ್ ಸಲ್ಲಿಸಲಾಗಿತ್ತು. ಆದರೆ ಅದಕ್ಕೆ ಕಾರಣವಿಲ್ಲದೇ ನಮ್ಮಂತ ಹಲವರ ಟೆಂಡರ್‌ಗಳನ್ನು ತಿರಸ್ಕರಿಸಲಾಗಿದೆ. ಇದು ಕರ್ನಾಟಕ ಪಾರದರ್ಶಕ ಸಾರ್ವಜನಿಕ ಖರೀದಿ ಕಾಯ್ದೆ 1999ನ ಸೆಕ್ಷನ್ 13 ಮತ್ತು 14ರ ಉಲ್ಲಂಘನೆಯಾಗಿದೆ ಎಂದು ಆರೋಪಿಸಿದರು. ಪ್ರಮುಖ ಕರಬಸಪ್ಪ ಹಂಚಿನಾಳ ಮಾತನಾಡಿ, ಮರಳು ಟೆಂಡರ್ ಪಡೆಯುವುದಕ್ಕೆ ಎಲ್ಲ ರೀತಿಯಿಂದ ಅರ್ಹತೆ ಇದ್ದರೂ ಸಹ ಅಂತವರನ್ನು ಕುತಂತ್ರದಿಂದ ಕೈಬಿಟ್ಟು ತಮಗೆ ಬೇಕಾದವರನ್ನು ಸೇರಿಸಿಕೊಂಡು ಟೆಂಡರ್ ಪ್ರಕ್ರಿಯೆ ನಡೆಸುತ್ತಿದ್ದಾರೆ. ತಿರಸ್ಕಾರ ಮಾಡಿದ್ದಕ್ಕೆ ಸ್ಪಷ್ಟ ಲಿಖಿತ ಕಾರಣ ನೀಡಬೇಕು ಎಂದು ಮನವಿ ಮಾಡಿದರೂ ಅಧಿಕಾರಿಗಳು ಪ್ರತಿಕ್ರಿಯೆ ನೀಡುತ್ತಿಲ್ಲ ಎಂದು ದೂರಿದರು. ಎಸ್.ವಿ.ಪಾಟೀಲ, ದುದ್ದುಪೀರ ಹಣಗಿ, ಗೌಸುಸಾಬ ದೋಟ್ಯಾಳ, ಶಶಿಕುಮಾರ ದೊಡ್ಡಮನಿ ಇದ್ದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	2727-7897
ಅಜವಾನ	7251-10600
ಅಲಸಂದಿ	2897-6726
ಕಡಲೆ	3039-6269
ಹೆಸರು	1502-6779
ಹುರುಳಿ	4011-4158
ಜೋಳ	2677-4357
ಗೋವಿನಜೋಳ	1775-1775
ಸಾಸವಿ	4011-4589
ಕುಸುಬಿ	4059-5806
ಸೂರ್ಯಕಾಂತಿ	7189-7189
ತೊಗರಿ	3789-5624
ಗೋಧಿ	1309-4412
ಬೆಲ್ಲ	4071-4500



ಗದಗ: ನಗರದ ಜಿಲ್ಲಾಧಿಕಾರಿಗಳ ಕಾರ್ಯಾಲಯ ಆವರಣದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೂತನ ಪತ್ರಿಕಾ ವಾಹನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಚಾಲನೆ ನೀಡಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಬಿ.ಬಿ.ಅಸೂಟಿ, ತಾಲೂಕು ಅಧ್ಯಕ್ಷ ಅಶೋಕ ಮಂದಾಲಿ, ನೀಲವ್ವ ಬೋಳನವರ, ಮಾಜಿ ಶಾಸಕ ರಾಮಣ್ಣ ಲಮಾಣಿ, ಪಾರುಕ್ ಹುಬ್ಬಳ್ಳಿ, ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್., ಜಿಲ್ಲಾ ವಾರ್ತಾಧಿಕಾರಿ ವಸಂತ ಮಡ್ಲೂರ ಇದ್ದರು.

ಸೌಹಾರ್ದದಿಂದ ಬಕ್ರೀದ್ ಆಚರಿಸಿ: ಪಿಎಸ್ಐ

ಗಜೇಂದ್ರಗಡ: ಗಜೇಂದ್ರಗಡ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹಿಂದೂ, ಮುಸ್ಲಿಮರು ಎಲ್ಲಾ ಹಬ್ಬಗಳಂತೆ ಬಕ್ರೀದ್ ಕೂಡಾ ಶಾಂತಿ, ಸೌಹಾರ್ದದಿಂದ ಆಚರಣೆ ಮಾಡಬೇಕು ಎಂದು ಗಜೇಂದ್ರಗಡ ಪೊಲೀಸ್ ಠಾಣೆಯ ಪಿಎಸಐ ಪ್ರಕಾಶ ಡಿ. ಹೇಳಿದರು. ನಗರದಲ್ಲಿನ ರೋಣ ರಸ್ತೆಯಲ್ಲಿನ ಪೊಲೀಸ್ ಠಾಣೆಯಲ್ಲಿ ನಡೆದ ಬಕ್ರೀದ್ ಅಂಗವಾಗಿ ನಡೆದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರುವಂತಹ ಯಾವುದೇ ಚಟುವಟಿಕೆಗಳಲ್ಲಿ ತೊಡಗಬಾರದು. ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಯಿತು. ಸಾರ್ವಜನಿಕ ಸ್ಥಳಗಳಲ್ಲಿ ಪ್ರಾಣಿ ವಧೆ ಮಾಡಬಾರದು ಮತ್ತು ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಹಿಂದೂ ಮತ್ತು ಮುಸ್ಲಿಂ ಬಾಂಧವರು ಒಗ್ಗಟ್ಟಿನಿಂದ ಹಬ್ಬ ಆಚರಿಸುವ ಮೂಲಕ ಗಜೇಂದ್ರಗಡದ ಸೌಹಾರ್ದತೆಯನ್ನು ಎತ್ತಿ ಹಿಡಿಯಬೇಕು ಎಂದರು. ಅಂಜುಮನ ಇಸ್ಲಾಂ ಕಮಿಟಿ ನಿರ್ದೇಶಕ ದಾವಲಸಾಬ ತಾಳಿಕೋಟಿ ಮಾತನಾಡಿ, ಬಕ್ರೀದ್ ದಾನ ಧರ್ಮದ ಹಬ್ಬವಾಗಿದ್ದು, ಆ ಸಮಯದಲ್ಲಿ ಹಿಂದೂ ಮುಸ್ಲಿಂ ಸಮಾಜದವರು ಒಟ್ಟಾಗಿ ಸೇರಿ ಶಾಂತ ರೀತಿಯಿಂದ ಹಬ್ಬ ಆಚರಿಸಬೇಕು. ಯಾವುದೇ ರೀತಿಯ ಕಾನೂನು ಬಾಹಿರ ಚಟುವಟಿಕೆಗಳು ಕಂಡುಬಂದಲ್ಲಿ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದರು. ಹಸನ ತಟಗಾರ, ಫಯಾಜ್ ತೋಟದ, ರಜಾಕ ಡಾಲಾಯತ, ನಾಸೀರ ಸುರಪುರ, ಮಾಬುಸಾಬ ಸುರಪುರ, ಅಬ್ದುಲಸಾಬ ಕಾತರಕಿ, ಮಾಸುಮಅಲಿ ಮದಗಾರ, ಖಾಸೀಂಸಾಬ ಮುಚ್ಚಾಲಿ, ಆಸೀಫ್ ತಟಗಾರ, ಖಲಂದರ ಡಾಲಾಯತ ಸೇರಿದಂತೆ ಅನೇಕರು ಇದ್ದರು.



ರೋಣ: ಮಾರನಬಸರಿ ಗ್ರಾಮದಿಂದ ಕೊಪ್ಪದ ಕ್ರಾಸ್ ವರೆಗೆ 1 ಕಿಮಿ ವ್ಯಾಪ್ತಿಯಲ್ಲಿ ಗುಲ್ಮೋಹರ್ ಹೂವಿನ ಮರಗಳು ಬೆಳದು ನಿಲ್ಲುವ ಮೂಲಕ ಸಂಚಾರಿಗಳ ಮನಸ್ಸಿಗೆ ಮದ ನೀಡುತ್ತಿವೆ. ಮುಖ್ಯ ರಸ್ತೆಗೆ ಹೊಂದಿಕೊಂಡು ಬೆಳೆದು ನಿಂತಿರುವ ಈ ಮರಗಳು ದಾರಿ ಹೋಗುವವರಿಗೆ ನೆರಳನ್ನು ಸಹ ನೀಡುತ್ತವೆ. ಗುಲ್ಮೋಹರ್ ಹೂವಿನ ಗಿಡಗಳ ಮಧ್ಯದಲ್ಲಿ ನಿಂತು ಸೇಲ್ಫಿ ತೆಗೆದುಕೊಳ್ಳುವುದು ಕಂಡು ಬರುತ್ತಿದ್ದು. ಮುಖ್ಯ ರಸ್ತೆಯೂ ಹೂವುಗಳಿಂದ ತುಂಬಿಕೊಂಡು ಆಕರ್ಷಣೀಯವಾಗಿ ಕಾಣುತ್ತಿವೆ.

ಜಿಲ್ಲಾ ಯೋಜನಾ ಸಮಿತಿ ಸಭೆ | ಸಚಿವ ಎಚ್.ಕೆ.ಪಾಟೀಲ ಅಭಿಮತ

ಜನರಿಂದಲೇ ಯೋಜನೆ ರೂಪುಗೊಳ್ಳಲಿ



ಗದಗ: ಜನರಿಂದಲೇ ಅಭಿವೃದ್ಧಿ ಯೋಜನೆಗಳು ರೂಪುಗೊಳ್ಳಬೇಕು. ಕೆಳಮಟ್ಟದಿಂದ ಮೇಲ್ಮಟ್ಟದವರೆಗೆ ಆಡಳಿತ ರೂಪಿಸಲು ಜಿಲ್ಲಾ ಯೋಜನಾ ಸಮಿತಿ ರಚಿಸಲಾಗಿದೆ. ಈ ಸಭೆಯು ನಿಜವಾಗಿಯೂ ಐತಿಹಾಸಿಕವಾದದ್ದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಯೋಜನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಪಂಚಾಯತ್ ರಾಜ್ ಕಾನೂನು ಅನುಷ್ಠಾನ ಮಾಡುವಲ್ಲಿ ನಮ್ಮ ಜಿಲ್ಲೆಯು ದಿಟ್ಟತನದ ಹೆಜ್ಜೆ ಇಟ್ಟಿದೆ. ಯೋಜನೆ ಸಮಿತಿ ಮಾಡುವ ಕುರಿತು ಪ್ರತಿ ಗ್ರಾಮ ಗ್ರಾಮಗಳಿಗೆ ತೆರಳಿ ಸಭೆಗಳನ್ನು ಏರ್ಪಡಿಸಲಾಗಿದೆ. ಜನರ ಕಲ್ಯಾಣಕ್ಕಾಗಿ ಯೋಜನಾ ಸಮಿತಿ ಬಹು ದೊಡ್ಡ ಕೆಲಸ ಮಾಡಲಿದೆ. ಈ ಯೋಜನೆಯ ಅನುಷ್ಠಾನದಲ್ಲಿ ವಿಶೇಷ ಆಸಕ್ತಿ ತೋರಿಸಬೇಕು. ಇದು ಪ್ರಾರಂಭದ ಹಂತವಾಗಿದ್ದು ಮುಂದಿನ ದಿನಗಳಲ್ಲಿ ಜಿಲ್ಲೆಯ ಯೋಜನೆಗಳು ರಾಜ್ಯಕ್ಕೆ ಮಾದರಿಯಾಗಬೇಕು. ಜನರ ಆಲೋಚನೆಗಳಿಗೆ ಸ್ಫೂರ್ತಿ ತುಂಬುವುದು ಬಹು ಮುಖ್ಯವಾಗಿದೆ. ಮುಂದಿನ ಆಯವ್ಯಯ ತಯಾರಿಕೆಗೆ ಈ ಯೋಜನೆ ಸಹಕಾರಿಯಾಗಲಿದೆ ಎಂದರು.

ಈ ಸಂದರ್ಭದಲ್ಲಿ ಗದಗ ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ, ಮಾಜಿ ಶಾಸಕ ರಾಮಣ್ಣ ಲಮಾಣಿ, ಎಲ್.ಡಿ.ಚಂದಾವರಿ, ಕೃಷ್ಣ ಪರಾಪೂರ, ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್, ಜಿ.ಪಂ. ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಉಪವಿಭಾಗಾಧಿಕಾರಿ ಗಂಗಪ್ಪ ಎಂ, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಎ.ಎ.ಕಂಬಾಳಿಮಠ ಸೇರಿದಂತೆ ಇತರರಿದ್ದರು.

ಜಿಲ್ಲೆ ದೇಶಕ್ಕೆ ಮಾದರಿಯಾಗಲಿ

ಸಂವಿಧಾನದ ಸದಾಶಯಗಳೊಂದಿಗೆ ಜನರ ಭಾವನೆಗಳನ್ನು ಅರಿತುಕೊಂಡು ಜಿಲ್ಲಾ ಯೋಜನಾ ಸಮಿತಿ ಕಾರ್ಯನಿರ್ವಹಿಸಬೇಕು. 2027-28 ರ ಯೋಜನೆಗಳು ಜನರಿಂದ ರೂಪುಗೊಳ್ಳುವಂತಾಗಬೇಕು. ಈ ನಿಟ್ಟಿನಲ್ಲಿ ಯೋಜನೆಗಳ ಅನುಷ್ಠಾನದಲ್ಲಿ ಗದಗ ಜಿಲ್ಲೆಯು ದೇಶದಲ್ಲಿಯೇ ಮಾದರಿಯಾಗಬೇಕು. ಅಂದಾಗ ಮಾತ್ರ ಗ್ರಾಮ ರಾಜ್ಯ ರಾಮರಾಜ್ಯವಾಗಲಿದೆ ಎಂದು ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್ .ಪಾಟೀಲ ಹೇಳಿದರು.

- ಜಿಲ್ಲೆಯಲ್ಲಿ ಲಕ್ಕುಂಡಿ ಗ್ರಾಮದ ಪ್ರದೇಶಾಬಿವೃದ್ಧಿ, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಹಾಗೂ ವಿವಿಧ ನೂತನ ಸೌಲಭ್ಯಗಳಿಂದ ಕೂಡಿದ ಕೆ.ಎಚ್ .ಪಾಟೀಲ ಜಿಲ್ಲಾ ಆಸ್ಪತ್ರೆ ಹೀಗೆ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಜಿಲ್ಲಾ ಉಸ್ತುವಾರಿ ಸಚಿವರಿಂದ ಪ್ರಶಂಸೆ
- ಗ್ರಾಮ ಪಂಚಾಯತ್ ನಿಂದ ತಾಲೂಕು ಪಂಚಾಯತ್, ತಾಲೂಕು ಪಂಚಾಯತ್ ದಿಂದ ಜಿಲ್ಲಾ ಪಂಚಾಯತ್‌ದಿಂದ ಅಭಿವೃದ್ಧಿ ಯೋಜನೆಗಳ ಸಂಗ್ರಹಣೆ ಮಾಡಿ ಅವುಗಳ ಅನುಷ್ಠಾನವಾಗಬೇಕು. ಅಂದಾಗ ಮಹಾತ್ಮಾ ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕನಸು ನನಸಾಗಲು ಸಾಧ್ಯವಾಗುತ್ತದೆ ಎಂದ ಸಚಿವರು

ರಸಾಯನಿಕ ಗೊಬ್ಬರ ಬಳಕೆ ಮಿತವಾಗಿರಲಿ

ನರಗುಂದ: ಕೃಷಿಯನ್ನೇ ನಂಬಿಕೊಂಡು ಜೀವನ ಮಾಡುವ ರೈತರು ಈ ಬಾರಿ ರಸಾಯನಿಕ ಗೊಬ್ಬರವನ್ನು ಮಿತವಾಗಿ ಬಳಸಬೇಕು. ಸಾವಯವ ಗೊಬ್ಬರವನ್ನು ಮತ್ತು ಗುಣಮಟ್ಟದ ಬೀಜಗಳನ್ನು ಬಿತ್ತನೆ ಮಾಡಬೇಕೆಂದು ಶಾಸಕ ಸಿ.ಸಿ.ಪಾಟೀಲ ಹೇಳಿದರು.

ಮಂಗಳವಾರ ಪಟ್ಟಣದ ಸಹಾಯಕ ಕೃಷಿ ನಿರ್ದೇಶಕರ ಕಾರ್ಯಾಲಯದ ಆವರಣದಲ್ಲಿನ ರೈತ ಸಂಪರ್ಕ ಕೇಂದ್ರದಲ್ಲಿ 2026-27ನೇ ಸಾಲಿನ ಮುಂಗಾರು ಹಂಗಾಮಿನ ಬೀಜ ವಿತರಣಾ ಕಾರ್ಯಕ್ರಮದಲ್ಲಿ ರೈತರಿಗೆ ಹೆಸರು ಬೀಜ ವಿತರಿಸಿ ಮಾತನಾಡಿದರು. ಮಧ್ಯಪ್ರಾಚ್ಯ ದೇಶಗಳಾದ ಅಮೆರಿಕ, ಇಸ್ರೇಲ್ ಮತ್ತು ಇರಾನ್ ದೇಶಗಳ ನಡುವೆ ಯುದ್ಧ ನಡೆಯುತ್ತಿದ್ದ ಕಾರಣ ತೈಲ ಹಾಗೂ ಅನಿಲ ಕೊರತೆಯಿಂದ ಭಾರತ ದೇಶವಷ್ಟೇ ಅಲ್ಲ ಜಗತ್ತಿನಾದ್ಯಂತ ಹಲವಾರು ದೇಶಗಳು ಸಮಸ್ಯೆಗಳನ್ನು ಎದುರಿಸುತ್ತಿವೆ. ಭೂಮಿಗೆ ಹೆಚ್ಚು ಯೂರಿಯಾ ಗೊಬ್ಬರ ಹಾಕುವುದರಿಂದ ಭೂಮಿಯ ಫಲವತ್ತತೆ ಹಾಳಾಗಲಿದೆ. ಅದರ ಬಳಕೆ ಮಿತವಾಗಿರಲೆಂಬ ಕಾರಣದಿಂದ ಎಫ್ ಐಡಿ ಲಿಂಕ್ ಅಳವಡಿಸಲಾಗಿದೆ. ಆಧುನಿಕ ಕೃಷಿ ಪದ್ಧತಿಗೆ ಆದ್ಯತೆ ಕೊಡಬೇಕು ಎಂದರು.

ಕೃಷಿ ಸಹಾಯಕ ನಿರ್ದೇಶಕ ಎಂ.ಎಸ್.ಕುಲಕರ್ಣಿ ಮಾತನಾಡಿ, ಪ್ರಸಕ್ತ ವರ್ಷ ವಾಡಿಕೆಯಂತೆ ಮೇ ತಿಂಗಳಲ್ಲಿ ಆಗಬೇಕಾದ ಮಳೆ ಆಗಿಲ್ಲ, ಮುಂದಿನ ದಿನಗಳಲ್ಲಿ ಮಳೆಯಾದ ನಂತರ ರೈತರು ಜಮೀನಗಳು ತೇವಾಂಶ ಹೊಂದಿದ ಮೇಲೆ ಬಿತ್ತನೆ ಮಾಡಬೇಕು. ರೈತರಿಗೆ ಬೀಜದ ಕೊರತೆಯಾಗದಂತೆ ನೋಡಿಕೊಳ್ಳಲಾಗುವುದು. ಸದ್ಯ ನರಗುಂದ ರೈತ ಸಂಪರ್ಕ ಕೇಂದ್ರಕ್ಕೆ 40 ಕ್ವಿಂ., ಕೊಣ್ಣೂರ ರೈತ ಸಂಪರ್ಕ ಕೇಂದ್ರಕ್ಕೆ 20 ಕ್ವಿಂ. ಬಿ.ಜಿ.ಎಸ್-9 ಹೆಸರು ಬೀಜ ಬಂದಿವೆ. ಮುಂದಿನ ದಿನಗಳಲ್ಲಿ ರೈತರ ಬೇಡಿಕೆ ಅನುಸಾರ ಬಿತ್ತನೆ ಬೀಜಗಳನ್ನು ತರಿಸಿಕೊಳ್ಳಲಾಗುವುದು. ಒಂದು ವಾರದೊಳಗೆ ಗೋವಿನ ಜೋಳ ಬೀಜಗಳು ರೈತ ಸಂಪರ್ಕ ಕೇಂದ್ರಕ್ಕೆ ಬರುತ್ತವೆ ಎಂದರು.

ಅಜ್ಜಪ್ಪ ಹುಡೇದ, ಶಿವಾನಂದ ಮುತ್ತವಾಡ, ಚಂದ್ರಶೇಖರ ದಂಡಿನ, ವಾಲಿ, ನಾಗನಗೌಡ ತಿಮ್ಮನಗೌಡ್ರ, ಪ್ರಕಾಶಗೌಡ ತಿರಕನಗೌಡ್ರ, ಪವಾಡೆಪ್ಪ ವಡ್ಡಿಗೇರಿ, ಪ್ರವೀಣ ಅಳಗವಾಡಿ, ಬಸಪ್ಪ ಮಳಗಿ, ದೇವಣ್ಣ ಕಲಾಲ, ಸುರೇಶ ಸವದತ್ತಿ, ಚಂದ್ರಗೌಡ ಪಾಟೀಲ, ಫಕೀರಗೌಡ ಫಕೀರಗೌಡ್ರ ಇದ್ದರು.




ಬೃಹತ್ ಜಲಾಗಾರ ಕಾಮಗಾರಿ ಸ್ಥಳಾಂತರಕ್ಕೆ ಆಗ್ರಹ

ಲಕ್ಷ್ಮೇಶ್ವರ: ಪಟ್ಟಣದ ಪುರಸಭೆ ಕಲಾ ಮಹಾವಿದ್ಯಾಲಯ ಕ್ಯಾಂಪಸ್‌ನಲ್ಲಿ ನಿರ್ಮಾಣ ಮಾಡುತ್ತಿರುವ ಬೃಹತ್ ಜಲಾಗಾರ ಕಾಮಗಾರಿಯನ್ನು ಸ್ಥಗಿತಗೊಳಿಸಿ ಸ್ಥಳಾಂತರಿಸಬೇಕು ಎಂದು ಆಗ್ರಹಿಸಿ ಕಾಲೇಜಿನ ಹಳೇ ವಿದ್ಯಾರ್ಥಿಗಳು ಮತ್ತು ನಾಗರಿಕರು ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಪಟ್ಟಣದ ಶಿಗ್ಲಿ ನಾಕಾ ಹತ್ತಿರ ಪಾಳಾ-ಬಾದಾಮಿ ರಾಜ್ಯ ಹೆದ್ದಾರಿಯಲ್ಲಿ ಕಾಮಗಾರಿ ಸ್ಥಳಾಂತರಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಿ ಕಾಮಗಾರಿ ಸ್ಥಳಾಂತರಕ್ಕೆ ಜ.1 ರವರೆಗೆ ಗಡುವು ನೀಡಿದ ಅವರು, ಸಂಸದಿದ್ದರೆ ರಸ್ತೆಯಲ್ಲಿಯೇ ಅನಿರ್ಧಿಷ್ಠಾವಧಿ ಸತ್ಯಾಗ್ರಹ ನಡೆಸುತ್ತೇವೆ. ಈ ಬಗ್ಗೆ ಜಿಲ್ಲಾಕಾರಿಗಳು ಸೂಕ್ತ ತೀರ್ಮಾನ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಹಳೆಯ ವಿದ್ಯಾರ್ಥಿ ಮತ್ತು ಪುರಸಭೆ ಮಾಜಿ ಸದಸ್ಯ ಮಹೇಶ ಹೊಗೆಸೊಪ್ಪಿನ, ಶರಣು ಗೋಡಿ ಅವರು ಅಮೃತ 2.0 ಯೋಜನೆಯಡಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಕುಡಿಯುವ ನೀರಿನ ಯೋಜನೆ ಮತ್ತು ಜಲಾಗಾರ ನಿರ್ಮಾಣಕ್ಕೆ ನಮ್ಮ ವಿರೋಧವಿಲ್ಲ, ಆದರೆ ಬೇರೆ ಕಡೆ ನಿರ್ಮಾಣವಾಗಬೇಕು ಎಂಬುದು ನಮ್ಮ ಕಳಕಳಿ. ಈ ಪದವಿ ಕಾಲೇಜು ಭವಿಷ್ಯದಲ್ಲಿ ಸರ್ಕಾರಕ್ಕೆ ಹಸ್ತಾಂತರಗೊಳ್ಳಲಿದ್ದು ಭವಿಷ್ಯದಲ್ಲಿ ಶೈಕ್ಷಣಿಕ ಚಟುವಟಿಕೆಗಳು, ಕ್ರೀಡೆ ಇತರೆ ಪಠ್ಯೇತರ ಚಟುವಟಿಕೆಗಳಿಗೆ ಜಾಗವೇ ಇಲ್ಲದಂತಾಗುತ್ತದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಇದು ಅಪಾಯಕಾರಿಯೂ ಆಗಿದೆ. ಕಾಲೇಜು ನಿರ್ಮಾಣ, ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಈ ಭೂಮಿಯನ್ನು ದಾನ ಮಾಡಿದ್ದಾರೆ. ಇದನ್ನು ಅನ್ಯ ಉದ್ದೇಶಕ್ಕೆ ಬಳಸುವುದು ಸರಿಯಲ್ಲ, ಈಗಾಗಲೇ ಪಟ್ಟಣಲ್ಲಿ ಲಕ್ಷಾಂತರ ರೂ. ವೆಚ್ಚದಲ್ಲಿ ಹತ್ತಾರು ವರ್ಷಗಳ ಹಿಂದೆಯೇ ನಿರ್ಮಾಣಗೊಂಡ 4-5 ಜಲಾಗಾರಗಳು ನಿರುಪಯುಕ್ತವಾಗಿದ್ದು ಇವುಗಳನ್ನೂ ಸಹ ಬಳಸಬಹುದು ಎಂದರು.

ಪುರಸಭೆ ಮಾಜಿ ಸದಸ್ಯ ತಿಪ್ಪಣ್ಣ ಸಂಶಿ ಹಾಗೂ ದಲಿತ ಯುವ ಮುನ್ನಡೆ ರಾಜ್ಯಾಧ್ಯಕ್ಷ ಡಿಬಿ ಫಕೀರಪ್ಪ ಮಾತನಾಡಿದರು. ನಂತರ ಸ್ಥಳಕ್ಕೆ ಆಗಮಿಸಿದ ಗ್ರೇಡ್ 2 ತಹಸೀಲ್ದಾರ ಮಂಜುನಾಥ ಅಮಾಸಿ ಹಾಗೂ ಪುರಸಭೆ ವ್ಯವಸ್ಥಾಪಕಿ ಮಂಜುಳಾ ಹೂಗಾರ ಮನವಿ ಸ್ವೀಕರಿಸಿದರು. ಗ್ರಾಪಂ ಮಾಜಿ ಸದಸ್ಯ ಪದ್ಮರಾಜ ಪಾಟೀಲ, ಟಾಕಪ್ಪ ಸಾತಪುತೆ, ಸೋಮಣ್ಣ ಹತ್ತಿ, ಇಸ್ಮಾಯಿಲ್ ಆಡೂರ, ಸದಾನಂದ ನಂದೆಣ್ಣವರ, ಬಾಬಾಜಾನ್ ಅಕ್ಕಿ, ಮಹಾಂತೇಶ ಮುಳಪ್ಪನವರ ,ಆನಂದ ಅಮರಶೆಟ್ಟಿ, ಸಾದಿಕಶೇಖ ಮನಿಯಾರ, ಸಂಜೀವ ಅಮರಾಪುರ, ಬಿ.ಬಿ ಮಹಾಜನಶೆಟ್ಟರ, ಕೈಸರ್ ಮಮ್ಮದಲಿ, ಮಹೇಶ ಸೂರಣಗಿ, ಸೋಮಣ್ಣ ಯತ್ನಳ್ಳಿ, ರಾಜು ಅಮರಾಪುರ, ಜಹೀರ್ ಅಕ್ಕದ ಸಿದ್ದಾಪುರ, ಪ್ರವೀಣ ಆಚಾರಿ ಇತರರಿದ್ದರು.



ಬಗೆಹರಿಯದ ಸರ್ವರ್ ಸಮಸ್ಯೆ: ಆಕ್ರೋಶ



ನರೇಗಲ್ಲ: ಸಮೀಪದ ಜಕ್ಕಲಿ ಗ್ರಾಮದ ವ್ಯವಸಾಯ ಸೇವಾ ಸಹಕಾರಿ ಸಂಘದಲ್ಲಿ ಪಡಿತರ ಪಡೆಯಲು ಫಲಾನುಭವಿಗಳು ಕಳೆದ 4-5 ದಿನಗಳಿಂದ ತೀವ್ರ ಪರದಾಡುತ್ತಿದ್ದಾರೆ. ಬಯೋಮೆಟ್ರಿಕ್ (ಹೆಬ್ಬೆಟ್ಟು) ವ್ಯವಸ್ಥೆಯಲ್ಲಿ ನಿರಂತರ ಸರ್ವರ್ ಸಮಸ್ಯೆ ಉಂಟಾಗಿರುವುದರಿಂದ ನೂರಾರು ಮಂದಿ ದಿನಪೂರ್ತಿ ಕ್ಯೂನಲ್ಲಿ ನಿಂತರೂ ಪಡಿತರ ಪಡೆಯಲು ಸಾಧ್ಯವಾಗುತ್ತಿಲ್ಲ.

ಸಮಸ್ಯೆ ದಿನದಿಂದ ದಿನಕ್ಕೆ ಗಂಭೀರ ಆಗುತ್ತಿದ್ದರೂ ಸಂಬಂಧಪಟ್ಟ ಇಲಾಖೆ ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಮಂಗಳವಾರ ಗ್ರಾಮಸ್ಥರ ಆಕ್ರೋಶ ಸ್ಫೋಟಗೊಂಡಿತು. ರೈತರು, ಮಹಿಳೆಯರು, ಹಿರಿಯ ನಾಗರಿಕರು ಸೇರಿದಂತೆ ನೂರಾರು ಮಂದಿ ಸಂಘದ ಆವರಣದಲ್ಲಿ ಜಮಾಯಿಸಿ ಪ್ರತಿಭಟನೆ ನಡೆಸಿದರು.

ರೈತರು ಬೆಳಗ್ಗೆಯಿಂದಲೇ ಹೊಲದ ಕೆಲಸ ಬಿಟ್ಟು ನ್ಯಾಯಬೆಲೆ ಅಂಗಡಿ ಮುಂದೆ ಬಂದು ನಿಲ್ಲುತ್ತಿದ್ದೇವೆ. ಕೆಲವರು 2-3 ದಿನಗಳಿಂದ ಸತತವಾಗಿ ಬರುತ್ತಿದ್ದರೂ ಹೆಬ್ಬೆಟ್ಟು ಹಾಕಲು ಸಾಧ್ಯವಾಗುತ್ತಿಲ್ಲ, ದಿನವಿಡೀ ಕಾಯಿಸಿ ಸರ್ವರ್ ಇಲ್ಲ ಎಂದು ಹೇಳಿ ಮನೆಗೆ ಕಳುಹಿಸುತ್ತಿದ್ದಾರೆ. ಒಂದೆಡೆ ಮಳೆಗಾಲದ ಕೃಷಿ ಕೆಲಸ ಆರಂಭವಾಗುತ್ತಿದೆ. ಇನ್ನೊಂದು ಕಡೆ ಪಡಿತರಕ್ಕಾಗಿ ದಿನವಿಡೀ ಸಾಲಿನಲ್ಲಿ ನಿಲ್ಲಬೇಕಾಗಿದೆ. ಕೆಲಸವೂ ಆಗುತ್ತಿಲ್ಲ, ಪಡಿತರವೂ ಸಿಗುತ್ತಿಲ್ಲ ಎಂದು ರೈತರು ಅಸಮಾಧಾನ ವ್ಯಕ್ತಪಡಿಸಿದರು.

ಕೆಲವರು ಮಹಿಳೆಯರು ಮಾತನಾಡಿ, ಮನೆಯ ಕೆಲಸ, ಮಕ್ಕಳ ಜವಾಬ್ದಾರಿ ಎಲ್ಲವನ್ನೂ ಬಿಟ್ಟು ಬರುತ್ತಿದ್ದೇವೆ. ಬೆಳಗ್ಗೆಯಿಂದ ಸಂಜೆವರೆಗೂ ಕಾಯುತ್ತಿದ್ದರೂ ಪಡಿತರ ಸಿಗುವುದಿಲ್ಲ. ಬಡ ಜನರ ಸಂಕಷ್ಟವನ್ನು ಸರ್ಕಾರ ಅರ್ಥಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದರು. ತಕ್ಷಣ ಪರ್ಯಾಯ ವ್ಯವಸ್ಥೆ ಕಲ್ಪಿಸಿ, ಆಫ್ ಲೈನ್ ವ್ಯವಸ್ಥೆಯಲ್ಲಾದರೂ ಪಡಿತರ ವಿತರಣೆ ಮಾಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದರು. ಗ್ರಾಮಸ್ಥರು ಬಯೋಮೆಟ್ರಿಕ್ ವ್ಯವಸ್ಥೆಯಲ್ಲಿನ ತಾಂತ್ರಿಕ ದೋಷಗಳನ್ನು ಶೀಘ್ರ ಸರಿಪಡಿಸಿ, ಪಡಿತರ ವಿತರಣೆಯನ್ನು ಸುಗಮಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ. ಸಂಬಂಧಪಟ್ಟ ಆಹಾರ ಇಲಾಖೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ತಕ್ಷಣ ಗ್ರಾಮಕ್ಕೆ ಭೇಟಿ ನೀಡಿ ಸಮಸ್ಯೆ ಬಗೆಹರಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಬಿತ್ತನೆ ಬೀಜ ವಿತರಣೆಗೆ ಚಾಲನೆ

ಮುಂಡರಗಿ: ಮುಂಗಾರು ಹಂಗಾಮಿನ ರಿಯಾಯತಿ ದರದಲ್ಲಿ ಬಿತ್ತನೆ ಬೀಜ ವಿತರಣೆಗೆ ಮುಂಡರಗಿ ತಾಲೂಕಿನ ರೈತ ಸಂಪರ್ಕ ಕೇಂದ್ರ ಮತ್ತು ಡಂಬಳದಲ್ಲಿ ತಾಲೂಕು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಅಧ್ಯಕ್ಷ ಶಿವಪ್ಪ ಅಂಕದ ಹಾಗೂ ರೈತ ಸಂಪರ್ಕ ಕೇಂದ್ರ ಮುಂಡರಗಿಯಲ್ಲಿ ತಾಲೂಕು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಸದಸ್ಯರಾದ ಅಂಬವ್ವ ಕಟ್ಟಿಮನಿ, ಈಶ್ವರಪ್ಪ ಮಲಶೆಟ್ಟಿ ಅವರು ಚಾಲನೆ ನೀಡಿದರು.

ಮುಂಡರಗಿ ರೈತ ಸಂಪರ್ಕ ಕೇಂದ್ರದಲ್ಲಿ 10 ಕ್ವಿಂಟಲ್ ಹೆಸರು, 50 ಕ್ವಿಂಟಲ್ ತೊಗರಿ ಹಾಗೂ ಡಂಬಳ ರೈತ ಸಂಪರ್ಕ ಕೇಂದ್ರದಲ್ಲಿ , 15 ಕ್ವಿಂಟಲ್ ಹೆಸರು, 50 ಕ್ವಿಂಟಲ್ ತೊಗರಿ ದಾಸ್ತಾನು ಮಾಡಲಾಗಿರುತ್ತದೆ. ರೈತರ ವಾಸ್ತವಿಕ ಹಿಡುವಳಿ ಅಥವಾ ಗರಿಷ್ಟ ಎರಡು ಹೆಕ್ಟರ್ ಪ್ರದೇಶಕ್ಕೆ ಬಿತ್ತನೆ ಬೀಜವನ್ನು ರಿಯಾಯಿತಿ ದರದಲ್ಲಿ ನೀಡಲಾಗುವುದು. ಎಲ್ಲಾ ಬಿತ್ತನೆ ಬೀಜಗಳಿಗೆ ಕಡ್ಡಾಯವಾಗಿ ಬೀಜೋಪಚಾರ ಮಾಡಬೇಕು, ಬೀಜ ಒಬ್ಬ ರೈತರಿಗೆ ಒಂದು ಬೆಳೆಯು ಮೂರು ಎಕರೆ ವಿಸ್ತೀರ್ಣಕ್ಕೆ ಮಾತ್ರ ಬಿತ್ತನೆ ಬೀಜ ನೀಡಲಾಗುವುದು. ಎರಡು ಎಕರೆ ಜಮೀನಿಗೆ ಅನ್ಯ ಬೆಳೆಯ ಬೀಜವನ್ನು ಪಡೆಯಬಹುದಾಗಿದೆ. ಪ್ರಮಾಣಿತ ಬೀಜ ಒಂದು ಬಾರಿ ಪಡೆದ ರೈತನಿಗೆ ಮುಂದಿನ ಮೂರು ವರ್ಷ ಅದೇ ಬೆಳೆಯ ಬಿತ್ತನೆ ಬೀಜವನ್ನು ನೀಡಲು ನಿಯಮಾವಳಿಯಲ್ಲಿ ಅವಕಾಶವಿಲ್ಲ. ಬೀಜವನ್ನು ಪಡೆಯುವಾಗ ಇಲಾಖೆಯಿಂದ ನೀಡಿರುವ ಎಫ್ ಐಡಿ ಸಂಖ್ಯೆ ಅಥವಾ ಆಧಾರ ಕಾರ್ಡ ಪ್ರತಿ, ಪ.ಜಾತಿ ಹಾಗೂ ಪ.ಪಂಗಡದ ರೈತರು ಆರ್.ಡಿ ಸಂಖ್ಯೆ ಇರುವ ಜಾತಿ ಪ್ರಮಾಣ ಪತ್ರವನ್ನು ನೀಡಬೇಕು ಎಂದು ಸಹಾಯಕ ಕೃಷಿ ನಿರ್ದೇಶಕ ಡಾ. ಪ್ರಾಣೇಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ತುತ್ತು ಅನ್ನಕ್ಕಾಗಿ ಪ್ರತಿನಿತ್ಯ ಸೈಕಲ್ ಮೇಲೆ 60 ಕಿಮೀ ಸಂಚಾರ

ಮೆಹೆಬೂಬ ಎಚ್ ಮೋತೆಖಾನ್

ರೋಣ: ಉತ್ತರ ಪ್ರದೇಶದ ಲೋಕೇಶ ಎಂಬ 16 ವರ್ಷದ ಬಾಲಕನೋರ್ವ ಪ್ರತಿನಿತ್ಯ ಸೈಕಲ್ ಮೇಲೆ 60 ಕಿ.ಮೀ ಪ್ರಯಾಣಿಸುತ್ತಾ ನಡೆಸುತ್ತಿರುವ ಬದುಕಿನ ಹೋರಾಟಕ್ಕೆ ರೋಣದ ಮಂದಿ ಹ್ಯಾಟ್ಸ್‌ಆಫ್ ಎಂದಿದ್ದಾರೆ.

ಮೂಲತ: ಉತ್ತರ ಪ್ರದೇಶದಿಂದ ಚಹಾ ಕಪ್ ಸೇರಿದಂತೆ ಇತರೆ ಪ್ಲಾಸ್ಟಿಕ್ ಸರಂಜಾಮುಗಳನ್ನು ಮಾರಾಟ ಮಾಡಲು ಇತ್ತೀಚಿಗೆ ರೋಣ ಪಟ್ಟಣಕ್ಕೆ ಬಂದಿರುವ ನಾಲ್ಕು ಜನರಿರುವ ಈ ಬಾಲಕನ ತಂಡ ಬಿಡಾರ ಹೂಡಿದೆ. ಇಂದು ಆತನ ಕುಟುಂಬಕ್ಕೆ ಸೈಕಲ್ ಆಸರೆಯಾಗಿದ್ದು, ನಿತ್ಯ ಸೈಕಲ್ ಮೇಲೆ ಚಹಾಕಪ್ ಮತ್ತು ಪ್ಲಾಸ್ಟಿಕ್ ಸಾಮಾನುಗಳನ್ನು ತೆಗೆದುಕೊಂಡು ಹಳ್ಳಿಗಳಿಗೆ ಹೊರಡುವ ಲೋಕೇಶ ತನ್ನ ಸೇರಿ ಇತರೆ ಕುಟುಂಬದ ಸದಸ್ಯರುಗಳ ಹೊಟ್ಟೆ ತುಂಬಿಸಲು ದಿನಂಪ್ರತಿ 3 ರಿಂದ 4 ಗ್ರಾಮಗಳಿಗೆ ಸಂಚಾರ ನಡೆಸುತ್ತಾನೆ. ಅಂದರೆ ದಿನಕ್ಕೆ ಕಡಿಮೆ ಅಂದರೂ ಸಹ 60 ಕಿಮಿ ಸೈಕಲ್ ಪಯಣ ಇವನದ್ದಾಗಿದೆ.





ಒಳ್ಳೆಯ ಜನ

ಗ್ರಾಮದ ಎಲ್ಲ ವಠಾರಗಳಲ್ಲಿ ಸಂಚಾರ ನಡೆಸಿ ತನ್ನಲ್ಲಿರುವ ವಸ್ತುಗಳನ್ನು ಖರಿದಿಸುವಂತೆ ಮನವಿ ಕೂಡ ಮಾಡುವ ಈ ಬಾಲಕನಿಗೆ ಭಾಷಾ ಸಮಸ್ಯೆ ಸ್ವಲ್ಪ ಮಟ್ಟಿಗೆ ಇಕ್ಕಟ್ಟಿಗೆ ಸಿಲುಕಿಸಿದೆ. ಗ್ರಾಮೀಣ ಭಾಗದಲ್ಲಿ ಕೆಲವೊಮ್ಮೆ ವ್ಯಾಪಾರವಾಗುತ್ತದೆ, ಕೆಲವೊಮ್ಮೆ ಆಗುವುದಿಲ್ಲ, ಹೀಗಾದಾಗ ಉಪವಾಸ ಇರಬೇಕಾಗುತ್ತದೆ. ಅಲ್ಲದೇ 200 ರೂ. ಬೆಲೆ ಹೊಂದಿರುವ ವಸ್ತುಗಳನ್ನು ಕೇವಲ 50 ರೂ.ಗೆ ಕೇಳುತ್ತಾರೆ. ನನಗೆ ಭಾಷೆ ಸ್ವಲ್ಪ ಸಮಸ್ಯೆ ಎನಿಸಿದರೂ ಇಲ್ಲಿನ ಜನ ಕುಡಿಯಲು ನೀರು ಬೇಕಾ ಎಂದು ಕೇಳುವಷ್ಟು ಒಳ್ಳೆಯವರಿದ್ದಾರೆ ಎನ್ನುತ್ತಾನೆ ಲೋಕೇಶ.

> ಗ್ರಾಹಕರು ನಮ್ಮ ಬಳಿಯೂ ವ್ಯಾಪಾರ ಮಾಡಬೇಕು. ಆಗ ನಮಗೂ ಅನ್ನ ಸಿಗುತ್ತದೆ. ವಸ್ತುವಿನ ಮೇಲೆ 100 ರೂ. ಲಾಭ ಇರುವುದಿಲ್ಲ, 20 ರೂ. ಸಿಕ್ಕರೆ ಸಾಕು ಎನ್ನುತ್ತೇವೆ. ನಿತ್ಯ ಸೈಕಲ್ ಸಂಚಾರ ತ್ರಾಸ್ ಆಗುತ್ತದೆ. ಆದರೆ ಬದುಕು ನಡೆಸಬೇಕಲ್ಲ.
>
> ■ ಲೋಕೇಶ, ಸೈಕಲ್ ಸವಾರ

> ಬಡತನದ ವಿರುದ್ಧ ಲೋಕೇಶನ ಹೋರಾಟ ಮಾದರಿ. ನಿತ್ಯ ಸೈಕಲ್ ಮೆಲೆ 60 ಕಿ.ಮೀ. ಪಯಣ ಅಷ್ಟೊಂದು ಸರಳವಲ್ಲ, ಆತನಲ್ಲಿ ಛಲವಿದೆ. ಗ್ರಾಹಕರು ಸಹ ಇಂಥವರ ಬಳಿ ವಸ್ತುಗಳನ್ನು ಖರೀದಿ ಮಾಡಬೇಕು.
>
> ■ ಆನಂದ ಚಂಗಳಿ

ಅಕ್ಷರ ಜಾತ್ರೆಗೆ ಭರ್ಜರಿ ಸಿದ್ಧತೆ

ಸೀತಲ ಓಲೇಕಾರ

ದಿಗಂತ ವಿಶೇಷ

ಗಜೇಂದ್ರಗಡ: 2026-27ನೇ ಸಾಲಿನ ಶೈಕ್ಷಣಿಕ ವರ್ಷದ ಅಂಗವಾಗಿ ಮೇ 29ರಿಂದ ಶಾಲೆಗಳು ಪುನಾರಂಭಗೊಳ್ಳುತ್ತಿದ್ದು, ಜೂನ್ 1 ರಿಂದ ಶಾಲೆಗಳು ಗಜೇಂದ್ರಗಡ ತಾಲೂಕಿನಾದ್ಯಂತ ಮಕ್ಕಳನ್ನು ಆತ್ಮೀಯವಾಗಿ ಸ್ವಾಗತಿಸಲು ಶಿಕ್ಷಣ ಇಲಾಖೆ ಹಾಗೂ ಶಿಕ್ಷಕ ವೃಂದ ಹಸಿರು ತೋರಣ, ಸಿಹಿ ಊಟ ನೀಡಲು ಭರ್ಜರಿ ಸಿದ್ಧತೆ ಮಾಡಿಕೊಂಡಿದೆ.

ಬಿಸಿಲ ನಾಡಿನ ಶಾಲಾ ಅಂಗಳಗಳು ಈಗ ಅಕ್ಷರ ಹಬ್ಬಕ್ಕೆ ಸಜ್ಜಾಗಿವೆ. ದೀರ್ಘ ಕಾಲದ ಬೇಸಿಗೆ ರಜೆಯ ನಂತರ ಜ್ಞಾನ ದೇಗುಲಗಳು ಮತ್ತೆ ತೆರೆಯುತ್ತಿದ್ದು, ಮಕ್ಕಳನ್ನು ಸ್ವಾಗತಿಸಲು ಗಜೇಂದ್ರಗಡ ತಾಲೂಕಿನಾದ್ಯಂತ ಶಿಕ್ಷಣ ಇಲಾಖೆ ಹಾಗೂ ಶಾಲಾ ಆಡಳಿತ ಮಂಡಳಿಗಳು ಅದ್ದೂರಿ ಸಿದ್ಧತೆ ಮಾಡಿಕೊಂಡಿವೆ. ಪ್ರವೇಶ ದ್ವಾರದಲ್ಲಿ ರಂಗೋಲಿ ಹಾಕಿ ಮಕ್ಕಳನ್ನು ಬರಮಾಡಿಕೊಳ್ಳಲು



ಶಿಕ್ಷಕರು ಕಾತುರರಾಗಿದ್ದಾರೆ. ಮೊದಲ ದಿನ ಶಾಲೆಗೆ ಬರುವ ಪುಟಾಣಿಗಳಿಗೆ ಬಿಸಿಯೂಟದ ಜೊತೆಗೆ ಪಾಯಸ ಅಥವಾ ಸಿಹಿ ಉಂಡೆಗಳನ್ನು ನೀಡಲು ಸಿದ್ಧತೆ ನಡೆಸಲಾಗಿದೆ. ಮಳೆಗಾಲದ ಮುನ್ಸೂಚನೆ ಇರುವುದರಿಂದ ಶಾಲಾ ಆವರಣದ ಸ್ವಚ್ಛತೆ, ಕುಡಿಯುವ ನೀರಿನ ಟ್ಯಾಂಕ್‌ಗಳ ಶುದ್ಧೀಕರಣ ಹಾಗೂ ಶಾಲಾ ಮೇಲ್ಛಾವಣಿಗಳ ದುರಸ್ತಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಗಜೇಂದ್ರಗಡ ನಗರ ಸೇರಿದಂತೆ ಸುತ್ತಮುತ್ತಲಿನ ಹಿರೇಗೌಡರ, ಕಾಲಕಾಲೇಶ್ವರ ಭಾಗದ ಶಾಲೆಗಳಲ್ಲಿ ಸಿದ್ಧತೆಗಳು ಅಂತಿಮ ಹಂತಕ್ಕೆ ತಲುಪಿವೆ. ಒಟ್ಟಾರೆಯಾಗಿ, ಜ್ಞಾನದ ಹಾದಿಯಲ್ಲಿ ಹೆಜ್ಜೆ ಇಡಲಿರುವ ಮಕ್ಕಳಿಗೆ ಸ್ವಾಗತ ಕೋರಲು ಗಜೇಂದ್ರಗಡ ತಾಲೂಕು ಮದುವಣಗಿತ್ತಿಯಂತೆ ಸಜ್ಜಾಗಿದೆ.

ಶೇ.100 ರಷ್ಟು ಹಾಜರಾತಿಗೆ ಕ್ರಮ

ಶಿಕ್ಷಕರು ಮನೆ-ಮನೆಗೆ ಭೇಟಿ ನೀಡಿ ಪೋಷಕರಲ್ಲಿ ಜಾಗೃತಿ ಮೂಡಿಸುತ್ತಿದ್ದು, ಮೊದಲ ದಿನವೇ ಶೇ.100 ರಷ್ಟು ಹಾಜರಾತಿ ಇರುವಂತೆ ಕ್ರಮ ವಹಿಸಲಾಗಿದೆ. ಮಕ್ಕಳ ಕಲಿಕೆಗೆ ಪೂರಕ ವಾತಾವರಣ ನಿರ್ಮಿಸುವುದು ನಮ್ಮ ಮೊದಲ ಆದ್ಯತೆಯಾಗಿದೆ ಎಂದು ಗಜೇಂದ್ರಗಡ ಸಿ.ಆರ್.ಪಿ.ಗಳಾದ ರಾಘವೇಂದ್ರ ಮ್ಯಾಕಲ್ ಹಾಗೂ ಕಾಲೇಶ ವನ್ನಾಲ ಹೇಳುತ್ತಾರೆ.

> ಪಠ್ಯಪುಸ್ತಕಗಳು ಈಗಾಗಲೇ ಶಾಲೆ ತಲುಪಿದ್ದು, ಮೊದಲ ದಿನವೇ ವಿತರಣೆಯಾಗಲಿವೆ. ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗಬಾರದು.
>
> ■ ಎಂ.ಎ. ಫಣಿಬಂದ, ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ, ರೋಣ

ತೋರಣಗಳ ಶೃಂಗಾರ

ನಮ್ಮ ಶಾಲಾ ಅಂಗಳವನ್ನು ಹಸಿರು ತೋರಣಗಳಿಂದ ಶೃಂಗರಿಸಲಾಗಿದ್ದು, ಮಕ್ಕಳಲ್ಲಿ ಕಲಿಕೆಯ ಬಗ್ಗೆ ಆಸಕ್ತಿ ಮೂಡಿಸಲು ಮೊದಲ ದಿನವೇ ಪೂಜೆ, ಸಿಹಿ ಹಂಚಿಕೆ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದೇವೆ ಎನ್ನುತ್ತಾರೆ ಗಜೇಂದ್ರಗಡದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆನಂ 6ರ ಮುಖ್ಯಶಿಕ್ಷಕ ಆರ್. ಕೆ.ಕವಡಿಮಟ್ಟಿ.

ಮೊದಲ ದಿನ ಪಠ್ಯಪುಸ್ತಕ

ಮೊದಲ ದಿನವೇ ಪಠ್ಯಪುಸ್ತಕ ಹಾಗೂ ಸಮವಸ್ತ್ರ ವಿತರಿಸಲು ಶಿಕ್ಷಣ ಇಲಾಖೆ ಕ್ರಮ ಕೈಗೊಂಡಿದೆ. ತಾಲೂಕಿನ ಕೇಂದ್ರಗಳಿಗೆ ಪುಸ್ತಕಗಳು ತಲುಪಿದ್ದು, ಅಲ್ಲಿಂದ ಶಾಲೆಗಳಿಗೆ ರವಾನಿಸುವ ಕಾರ್ಯ ಪೂರ್ಣಗೊಂಡಿದೆ. ಕೆಲವು ಗ್ರಾಮಗಳಲ್ಲಿ ಮಕ್ಕಳನ್ನು ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಪಥಸಂಚಲನ ಮೆರವಣಿಗೆ ನಡೆಸಿ ಶಾಲೆಗೆ ಕರೆತರುವ ಮೂಲಕ ಶಿಕ್ಷಣದ ಮಹತ್ವವನ್ನು ಸಾರುವ ದಾಖಲಾತಿ ಆಂದೋಲನಕ್ಕೆ ಚಾಲನೆ ನೀಡಲಾಗುತ್ತಿದೆ.

ಜಿಲ್ಲಾಡಳಿತದ ವಿಳಂಬ ನೀತಿ ಸಮಸ್ಯೆಗೆ ಕಾರಣ: ಆರೋಪ | ಸಾರ್ವಜನಿಕರ ಆಶಯ

ಮೂರಿನ ಕಟ್ಟೆ ವಿವಾದ ಅಂತ್ಯಗೊಳ್ಳಲಿ

ಸುಬ್ರಹ್ಮಣ್ಯ ದಾಸನಕುಡಿಗೆ





ದಿಗಂತ ವಿಶೇಷ

ಭಟ್ಕಳ: ಪಟ್ಟಣದ ನವಾಯತ್ ಕಾಲೋನಿಯ ರಾಷ್ಟ್ರೀಯ ಹೆದ್ದಾರಿ ಸಮೀಪದಲ್ಲಿ ಮಾರಿ ಹೊರ ಇಟ್ಟು ಪೂಜಿಸುವ ಮೂರಿನಕಟ್ಟೆ ಪ್ರದೇಶ ವಿವಾದಕ್ಕೆ ಕಾರಣವಾಗಿರುವುದು ಹಿಂದೂಗಳ ಆಕ್ರೋಶಕ್ಕೆ ಕಾರಣವಾಗಿದ್ದು, ಈ ವಿವಾದ ಇನ್ನಷ್ಟು ಬೆಂಕಿ ಹೊತ್ತಿಸುವ ಮುನ್ನ ಇದಕ್ಕೊಂದು ಪರಿಹಾರ ಹುಡುಕುವ ಕಾರ್ಯ ಜಿಲ್ಲಾಡಳಿತದಿಂದ ಆಗಬೇಕೆಂಬ ಮಾತು ಜನಸಾಮಾನ್ಯರಿಂದ ಕೇಳಿ ಬಂದಿದೆ.

ಮೂರಿನಕಟ್ಟೆ ಪ್ರದೇಶದಲ್ಲಿ ತಲೆತಲಾಂತರದಿಂದಲೂ ಕಾರಗದ್ದೆ ಶಿರಾಲಿಸಲ್ ಮುಂತಾದ ಭಾಗದ ಜನರು ಮಾರಿ ಹೊರ ಇಟ್ಟು ಪೂಜಿಸುತ್ತಾ ಬಂದಿದ್ದು, ಇದೊಂದು ಹಿಂದೂಗಳ ಧಾರ್ಮಿಕ ಭಾವನಾತ್ಮಕ ಪ್ರದೇಶವಾಗಿದೆ. ಕಳೆದ ಐದಾರು ವರ್ಷಗಳಿಂದ ಈ ಪ್ರದೇಶ ಹೆದ್ದಾರಿ ಅಗಲೀಕರಣಕ್ಕೆ ಹೋಗುವುದರಿಂದ ಪ್ರತ್ಯೇಕ ಕಟ್ಟೆ ನಿರ್ಮಿಸಿ ಮಾರಿ ಹೊರ ಇಟ್ಟು ಪೂಜಿಸಲು ಅವಕಾಶ ಮಾಡಿಕೊಡಬೇಕೆಂದು ಭಕ್ತರು ಆಗ್ರಹಿಸುತ್ತಲೇ ಬಂದಿದ್ದರು. ಆದರೆ ಜಿಲ್ಲಾಡಳಿತ, ತಾಲೂಕು ಆಡಳಿತ ಈ ಬೇಡಿಕೆಯನ್ನು ಗಂಭೀರವಾಗಿ ಸ್ವೀಕರಿಸಿ ಪರಿಹಾರ ಹುಡುಕಿದ್ದರೆ, ಇಂದಿನ ವಿವಾದಕ್ಕೆ ಆಸ್ಪದವೇ ಇರುತ್ತಿರಲಿಲ್ಲ ಎನ್ನುವುದು ಜನರ ಅಭಿಮತ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಐಆರ್‌ಬಿ ಅವರು ಈ ಜಾಗದ ಬಗ್ಗೆ ಗಂಭೀರತೆ ಹೊಂದಿದ್ದರೆ ಇಷ್ಟರೊಳಗೆ ಮೂರಿನಕಟ್ಟೆ ಆಗುತ್ತಿತ್ತು. ಆದರೆ ಇವರೂ ಸಹ ಈ ಬಗ್ಗೆ ನಿರ್ಲಕ್ಷ್ಯ ತಾಳಿದರು.

ಮೊನ್ನೆ ದಿನ ಹಿಂದೂ ಕಾರ್ಯಕರ್ತರು ಪೊಲೀಸ್ ಬಂದೋಬಸ್ತಿನಲ್ಲಿ ಮೂರಿನಕಟ್ಟೆ ಪ್ರದೇಶ ಅರಣ್ಯ ಭೂಮಿ ಜಾಗದಲ್ಲಿ ಕಟ್ಟೆ ನಿರ್ಮಿಸಿದ್ದರು. ಆದರೆ ಇದನ್ನು ವಿರೋಧಿಸಿದ ಮುಸ್ಲಿಂ ಸಮುದಾಯ ಕಟ್ಟೆ ನಿರ್ಮಾಣದ ದಿನವೇ ಧ್ವಂಸ ಮಾಡಿದ್ದರಿಂದ ಹಿಂದೂ ಕಾರ್ಯಕರ್ತರು, ಬಿಜೆಪಿಯವರಿಂದ ತೀವ್ರ ಆಕ್ರೋಶ ವ್ಯಕ್ತವಾಯಿತು. ಹೀಗಾಗಿ ಈ ವಿವಾದಕ್ಕೆ ಕಾರಣ ಹಿಂದೂ ಸಂಘಟನೆಗಳೇ ಅಥವಾ ಆಡಳಿತವರ್ಗದ ನಿರ್ಲಕ್ಷ್ಯವೇ ಎನ್ನುವುದು ಚರ್ಚೆಗೆ ಒಳಗಾದ ಸಂಗತಿ.


ತಾರತಮ್ಯದ ಆರೋಪ: ಮೂರಿನಕಟ್ಟೆಯನ್ನು ಧ್ವಂಸ ಮಾಡಿದ್ದನ್ನು ಖಂಡಿಸಿ ಬಿಜೆಪಿ ಮತ್ತು ಹಿಂದೂಪರ ಸಂಘಟನೆಯ ಕಾರ್ಯಕರ್ತರು ಪೊಲೀಸ ಠಾಣೆ ಮುಂದೆ ಧರಣಿ ನಡೆಸಿದ್ದಕ್ಕೆ ಅವರ ಮೇಲೆ ಕೇಸು ದಾಖಲಿಸಿದ್ದು, ಅದೇ ಸಾವಿರಾರು ಮುಸ್ಲಿಮರು ಗುಂಪು ಸೇರಿ ಕಟ್ಟೆ ಧ್ವಂಸ ಮಾಡಿದ್ದಲ್ಲದೇ ಪೊಲೀಸರನ್ನು ತಳ್ಳಾಟ ಮಾಡಿದ್ದರೂ ಕೇವಲ ತೋರಿಕೆಗಾಗಿ 6 ಜನರನ್ನು ಬಂಧಿಸಿರುವುದಕ್ಕೆ ಬಿಜೆಪಿ ಮತ್ತು ಹಿಂದೂ ಪರ ಸಂಘಟನೆಯವರು ತೀವ್ರ ಆಕ್ರೋಶ ವ್ಯಕ್ತಪಡಿಸಿ ಜಿಲ್ಲಾಡಳಿತ ತಾರತಮ್ಯ ನೀತಿ ಅನುಸರಿಸಿದೆ ಎಂದು ಆರೋಪಿಸಿದ್ದಾರೆ. ಇದೆಲ್ಲವೂ ಈಗ ಬೂದಿ ಮುಚ್ಚಿದ ಕೆಂಡದಂತಿದ್ದು, ಮತ್ತೆ ಸ್ಫೋಟಗೊಳ್ಳಲು ಅವಕಾಶ ನೀಡದೇ ಜಿಲ್ಲಾಡಳಿತ ಇದಕ್ಕೊಂದು ಅಂತ್ಯ ಹಾಡಲಿ ಎಂದು ಜನಸಾಮಾನ್ಯರು ಆಶಿಸುತ್ತಿದ್ದಾರೆ.

ತಂಜಿಂ ಸಂಸ್ಥೆಗೆ ಆಸಕ್ತಿ ಏಕೆ?

ಇದರ ಮಧ್ಯೆ ಹಿಂದೂ ಧಾರ್ಮಿಕ ಶ್ರದ್ಧಾ ಕೇಂದ್ರದ ವಿಷಯದಲ್ಲಿ ಭಟ್ಕಳದ ಮುಸ್ಲೀಂರ ಪರಮೋಚ್ಚ ಸಂಘಟನೆ ಎಂದು ಹೇಳಿಕೊಳ್ಳುವ ಮಜ್ಲಿಸೆ ಇಸ್ಲಾಹ ವ ತಂಜೀಂ ತಲೆ ಹಾಕುತ್ತಿರುವುದು ತೀವ್ರ ಆಕ್ರೋಶಕ್ಕೆ ಕಾರಣವಾಗಿದ್ದಂತೂ ನಿಜ. ಅನಾದಿ ಕಾಲದಿಂದ ಇರುವ ಮೂರಿನಕಟ್ಟೆ ಬಗ್ಗೆ ತಂಜೀಂನ ಮುಖಂಡರಿಗೆ ಮಾಹಿತಿ ಇದ್ದರೂ ಈ ವಿಷಯದಲ್ಲಿ ಅಷ್ಟೊಂದು ಆಸಕ್ತಿ ಏಕೆ ಬಂತು? ತಾನು ಶಾಂತಿ ಪ್ರಿಯ, ಸೌಹಾರ್ದತೆಯ ಹರಿಕಾರ, ಶಾಂತಿ ನೆಲಸಬೇಕು ಎಂದು ಹೇಳುವ ತಂಜೀಂನ ಪ್ರಮುಖರಿಗೆ ತಮ್ಮ ಸಮುದಾಯದ ಜನರಿಗೆ ರಸ್ತೆ ತಡೆ ಮಾಡದಂತೆ, ಕಟ್ಟೆ ಧ್ವಂಸ ಮಾಡದಂತೆ ಸೂಚಿಸಲು ಆಗಲಿಲ್ಲವೇ ಎನ್ನುವ ಪ್ರಶ್ನೆ ಎದ್ದಿದೆ.

ಧಾರವಾಡ ಪಾಲಿಕೆಗೆ ರಾಜ್ಯಪಾಲರ ಅಂಕಿತ




Hon'ble Governor has ordered as below in the file.

Perusal the file

I have gone through the proposal, as well as legal opinion tendered by Additional Solicitor General of India dated 25-05-2026

I advise the State Government to go through the following provisions;

1. Article 243U (1) of the Constitution of India, which reads as below;

In view of restriction from the directorate of census not to change any existing boundaries of administrative units, until completion of the census operations, this notification be affected after the completion of the restrictions of census operations.

Further, I would like to advice the State Government to take all necessary steps to make available sufficient financial assistance and revenue distribution for the benefit of both the corporations.

With above instructions, return the State Government file for further necessary action.

(Thaawarchand Gehlot)
Governor of Karnataka

Hence, the Government file is returned herewith for further necessary action as directed by the Hon'ble Governor.

(R Prabhushankar)
Special Secretary to Governor.

Secretary to Government,
Urban Development Department,
Vikas Soudha, Bengaluru.

ಧಾರವಾಡ: ಧಾರವಾಡ ಪ್ರತ್ಯೇಕ ಪಾಲಿಕೆ ಹೋರಾಟ ತೀವ್ರಗೊಂಡ ಹಿನ್ನೆಲೆ ರಾಜ್ಯ ಸರ್ಕಾರದ ಪ್ರಸ್ತಾವನೆಗೆ ಕೊನೆಗೆ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅಂಕಿತ ಹಾಕುವ ಮೂಲಕ ಧಾರವಾಡ ಜನರಿಗೆ ಪೇಡಾ ತಿನಿಸಿದ್ದಾರೆ.

ಕಳೆದ 12 ದಿನಗಳಿಂದ ಪಾಲಿಕೆ ಕಚೇರಿ ಮುಂಭಾಗ ವಕೀಲ ಬಿ.ಡಿ.ಹಿರೇಮಠ ನೇತೃತ್ವದಲ್ಲಿ ನಡೆದ ಸತ್ಯಪ್ರತಿಪಾದನೆ ಸತ್ಯಾಗ್ರಹಕ್ಕೆ ಬಿಜೆಪಿ ಬೆಂಬಲಿಸಿದ ಕೆಲವೇ ಗಂಟೆಗಳಲ್ಲಿ ಪ್ರತ್ಯೇಕ ಪಾಲಿಕೆ ಕಡತಕ್ಕೆ ರಾಜ್ಯಪಾಲರ ಮೊಹರು ಬಿದ್ದಿದೆ.

ಸರ್ಕಾರದ ಪ್ರಸ್ತಾವನೆ ಕುಲಂಕುಷವಾಗಿ ಪರಿಶೀಲಿಸಿ ರಾಜ್ಯಪಾಲರ ಆದೇಶದಿಂದ ಹುಬ್ಬಳ್ಳಿ ಹಾಗೂ ಧಾರವಾಡ ಪ್ರತ್ಯೇಕ ಪಾಲಿಕೆಗಳು ಅಸ್ತಿತ್ವಕ್ಕೆ ಬರಲಿದ್ದು, ಧಾರವಾಡ ಜನರ ಬಹುದಿನಗಳ ಬೇಡಿಕೆಯೂ ಕೂಡ ಈಡೇರಿದಂತಾಗಲಿದೆ.

ರಾಜ್ಯಪಾಲರು ಎರಡು ಪಾಲಿಕೆಗಳ ಅಧಿಕಾರಕ್ಕೆ ಸದೃಢತೆಗೆ ರಾಜ್ಯ ಸರ್ಕಾರದ ಅಗತ್ಯ ಆರ್ಥಿಕ ನೆರವು ಮತ್ತು ಆದಾಯ ಹಂಚಿಕೆಯಲ್ಲಿ ಸಮಾನತೆ ಕಾಯ್ದುಕೊಳ್ಳಬೇಕು ಎಂದು ರಾಜ್ಯ ಸರ್ಕಾರಕ್ಕೂ ಸಲಹೆ ನೀಡಿದ್ದಾರೆ. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್.ಪ್ರಭುಶಂಕರ್, ಮುಂದಿನ ಕ್ರಮಕ್ಕೆ ಆದೇಶದ ಪ್ರತಿಯನ್ನು ನಗರಾಭಿವೃದ್ಧಿ ಇಲಾಖೆಗೆ ರವಾನಿಸಿದ್ದು, ಸಂವಿಧಾನದ ವಿಧಿ 243ಯು 1 ಪ್ರಕಾರ ಆದೇಶ ಜಾರಿಗೆ ಬರಲಿದೆ. ಅಂದರೆ, ಚುನಾಯಿತ ಸ್ಥಳೀಯ ಸಂಸ್ಥೆಗಳ ಅವಧಿಯು ಐದು ವರ್ಷಗಳಿದ್ದು, ಹಾಲಿ ಇರುವ ಪಾಲಿಕೆ ಆಡಳಿತ ಅವಧಿ ಮುಗಿದ ನಂತರವೇ ವಿಭಜನೆಯ ಅಧಿಸೂಚನೆ ಜಾರಿಗೆ ಬರಲಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ. ಧಾರವಾಡ ಪ್ರತ್ಯೇಕ ಪಾಲಿಕೆಗೆ ಆಗ್ರಹಿಸಿ ಬಿ.ಡಿ.ಹಿರೇಮಠ ನೇತೃತ್ವದ ಸ್ವಾಭಿಮಾನಿ ಹೋರಾಟ ಸಮಿತಿ ಕೈಗೊಂಡ ಕಳೆದ 12 ದಿನಗಳ ಸತ್ಯಪ್ರತಿಪಾದನೆ ಸತ್ಯಾಗ್ರಹ ಕೊನೆಗೆ ಫಲಿಸಿದೆ.

ಪ್ರತ್ಯೇಕ ಪಾಲಿಕೆಗೆ ಆಗ್ರಹಿಸಿ ರಕ್ತ ಫಲಕ

ಧಾರವಾಡ: ಪ್ರತ್ಯೇಕ ಪಾಲಿಕೆಗೆ ಆಗ್ರಹಿಸಿ ನಡೆದ ಸತ್ಯಪ್ರತಿಪಾದನೆ ಸತ್ಯಾಗ್ರಹ 12ನೇ ದಿನಕ್ಕೆ ಮುಂದುವರಿದಿತ್ತು. ಸೋಮವಾರ ಆಹೋರಾತ್ರಿ ಧರಣಿ ನಡೆಸಿ, ಮಂಗಳವಾರ ಸತ್ಯಾಗ್ರಹ ಸ್ಥಳದಲ್ಲಿ ಸ್ನಾನ ಮತ್ತು ಲಿಂಗಪೂಜೆ ಮೂಲಕ ಧರಣಿ ಕೈಗೊಂಡಿದ್ದರು. ಅಲ್ಲದೇ, ಪಾಲಿಕೆ ಸದಸ್ಯೆ ದೀಪಾ ನೀರಲಕಟ್ಟಿ, ಮುಖಂಡ ಬಸವರಾಜ ಜಾಧವ, ಅನೇಕ ಯುವಕರು ತಮ್ಮ ರಕ್ತದ ಮೂಲಕ 'ಮಹಾನಗರ ಪಾಲಿಕೆ ಆಂದೋಲನ ಆಗಬೇಕು. ಧಾರವಾಡ ಜನರ ತಾಳ್ಮೆ ಪರೀಕ್ಷಿಸದಂತೆ' ಫಲಕ ಬರೆದು ಆಗ್ರಹಿಸಿದ್ದರು.

ಕಿರುಸುದ್ದಿ

ಹೊಸ ಹಂಪಿ ಬಳಿ ಚಿರತೆ ಪ್ರತ್ಯಕ್ಷ: ಆತಂಕ



ವಿಜಯನಗರ: ಹೊಸಪೇಟೆ ತಾಲೂಕಿನ ಹೊಸ ಹಂಪಿಯ ಜನವಸತಿ ಪ್ರದೇಶದಲ್ಲಿ ನಿನ್ನೆ ತಡರಾತ್ರಿ 12 ಗಂಟೆ ಸುಮಾರಿಗೆ ಚಿರತೆಯೊಂದು ಪ್ರತ್ಯಕ್ಷವಾಗಿದೆ. ಮನೆಗಳ ಬಳಿ ಚಿರತೆ ಮುಕ್ತವಾಗಿ ಓಡಾಡುತ್ತಿರುವ ದೃಶ್ಯಗಳು ಸ್ಥಳೀಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಈ ಹಿಂದೆಯೂ ಹಂಪಿಯ ಜನತಾ ಪ್ಲಾಟ್‌ನಲ್ಲಿ ಚಿರತೆ ಕಾಣಿಸಿಕೊಂಡು ಆತಂಕ ಸೃಷ್ಟಿಸಿತ್ತು. ಈಗ ಮತ್ತೆ ಹೊಸ ಹಂಪಿಯಲ್ಲಿ ಚಿರತೆ ಪ್ರತ್ಯಕ್ಷವಾಗಿರುವುದರಿಂದ ಸ್ಥಳೀಯ ನಿವಾಸಿಗಳು ಭೀತರಾಗಿದ್ದು, ತಕ್ಷಣವೇ ಚಿರತೆಯನ್ನು ಸೆರೆ ಹಿಡಿಯುವಂತೆ ಅರಣ್ಯ ಇಲಾಖೆಗೆ ಆಗ್ರಹಿಸಿದ್ದಾರೆ.

ಪುರಸಭೆ ಸಿಬ್ಬಂದಿಗೆ ನಿಂದನೆ: ಪ್ರಕರಣ ದಾಖಲು

ಹಳಿಯಾಳ: ಕುಡಿಯುವ ನೀರಿನ ಬಿಲ್ ಪಾವತಿಸುವಂತೆ ನೋಟಿಸ್ ನೀಡಿದ ಹಿನ್ನೆಲೆಯಲ್ಲಿ ಪುರಸಭೆ ಕಚೇರಿಗೆ ಬಂದು ಸಿಬ್ಬಂದಿಗೆ ನಿಂದನೆ ಮಾಡಿ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ವ್ಯಕ್ತಿಯೊಬ್ಬರ ವಿರುದ್ಧ ಹಳಿಯಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೆರವಾಡ ಗ್ರಾಮದ ಅನೀಲ ಯಲ್ಲಾಪ್ಪ ಚಲುವಾದಿ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿದ್ದು, ಅವರು ಹಳಿಯಾಳ ಪುರಸಭೆಯಲ್ಲಿ ಪ್ರಥಮ ದರ್ಜೆ ಸಹಾಯ ಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಮೇ 13ರಿಂದ ಸೋಮವಾರದವರೆಗೆ ಆರೋಪಿತನು ಪ್ರತಿದಿನ ಪುರಸಭೆ ಕಚೇರಿಗೆ ಬಂದು ಸಿಬ್ಬಂದಿಯೊಂದಿಗೆ ಅವಾಚ್ಯವಾಗಿ ವರ್ತಿಸಿ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಈ ಕುರಿತು ಹಳಿಯಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಮೇ 29ರಂದು ಬೃಹತ್ ಪ್ರತಿಭಟನೆ



ಭಟ್ಕಳ: ಪಟ್ಟಣದ ಮೂರಿನಕಟ್ಟೆಯಲ್ಲಿ ನಿರ್ಮಿಸಿದ ಕಟ್ಟೆಯನ್ನು ಧ್ವಂಸ ಮಾಡಿ ಹಿಂದೂಗಳ ಭಾವನೆ ಧಕ್ಕೆ ತಂದಿರುವುದಕ್ಕೆ ತೀವ್ರವಾಗಿ ಖಂಡಿಸಿದ ಜಿಲ್ಲಾ ಬಿಜೆಪಿ ಅಧ್ಯಕ್ಷ ಎನ್.ಎಸ್.ಹೆಗಡೆ ಅವರು ಈ ಬಗ್ಗೆ ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಅವರ ನೇತೃತ್ವದಲ್ಲಿ ಮೇ 29ರಂದು ಭಟ್ಕಳದಲ್ಲಿ ಹಿಂದೂ ಸಂಘಟನೆಗಳು, ಬಿಜೆಪಿಯ ಸಹಯೋಗದಲ್ಲಿ ಬೃಹತ್ ಪ್ರತಿಭಟನೆ ನಡೆಯಲಿದೆ ಎಂದರು.

ಮಂಗಳವಾರ ಸಂಜೆ ಬಿಜೆಪಿ ಕಚೇರಿಯಲ್ಲಿ ಕರೆದ ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿದ ಅವರು, ಪೊಲೀಸ್ ಇಲಾಖೆ ಮೂರಿನಕಟ್ಟೆಯಲ್ಲಿ ನಿರ್ಮಿಸಲಾದ ಕಟ್ಟೆಯನ್ನು ಧ್ವಂಸ ಮಾಡಿದವರ ಮೇಲೆ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳುವುದನ್ನು ಬಿಟ್ಟು ನ್ಯಾಯ ಕೇಳಲು ಹೋದ ಹಿಂದೂ ಕಾರ್ಯಕರ್ತರ ಮೇಲೆ ಪ್ರಕರಣ ದಾಖಲಿಸಿದೆ.

ರಾಜ್ಯದ ಕಾಂಗ್ರೆಸ್ ಸರ್ಕಾರ ಹಿಂದೂ ಕಾರ್ಯಕರ್ತರ ಮೇಲೆ ಕೇಸ್ ದಾಖಲಿಸುತ್ತಿದೆ. ಕಾಂಗ್ರೆಸ್ ಓಲೈಕೆ ರಾಜಕಾರಣ ಮಾಡುತ್ತಿರುವುದಕ್ಕೆ ಇದೇ ಸಾಕ್ಷಿಯಾಗಿದೆ. ಮೂರಿನಕಟ್ಟೆ ಪ್ರದೇಶ ಹಿಂದೂಗಳ ಶ್ರದ್ಧಾಭಕ್ತಿಯ ಸ್ಥಳವಾಗಿದ್ದು, ಇಲ್ಲಿ ನಿರ್ಮಿಸಲಾದ ಕಟ್ಟೆಯನ್ನು ಪೊಲೀಸರ ಸಮ್ಮುಖದಲ್ಲಿ ಸಾವಿರಾರು ಜನರು ಬಂದು ಧ್ವಂಸ ಮಾಡಿದ್ದರೂ ಸಮರ್ಪಕ ಕ್ರಮ ಕೈಗೊಂಡಿಲ್ಲ.

ಮೂರಿನನಕಟ್ಟೆಯಲ್ಲಿ ಕಟ್ಟೆ ಮರು ನಿರ್ಮಾಣ ಮಾಡಬೇಕು. ಕಟ್ಟೆ ಧ್ವಂಸ ಮಾಡಿದವರನ್ನು ಬಂಧಿಸಬೇಕು. ಸ್ಥಳದಲ್ಲಿ ವಿಡಿಯೋ ಮಾಡಿ ಸಾವಿರಾರು ಜನರು ಸೇರುವಂತೆ ಮಾಡಿದವನನ್ನು ಬಂಧಿಸಬೇಕು. ಹಿಂದೂ ಕಾರ್ಯರ್ತರ ಮೇಲಿನ ಪ್ರಕರಣ ವಾಪಾಸ್ ಪಡೆಯಬೇಕೆಂದು ಆಗ್ರಹಿಸಿ ಮೇ 29ರಂದು ಬೆಳಗ್ಗೆ 10 ಗಂಟೆಗೆ ಭಟ್ಕಳದ ರಿಕ್ಷಾ ಯೂನಿಯನ್ ಗಣೇಶೋತ್ಸವ ಮೈದಾನದಿಂದ ಪ್ರತಿಭಟನಾ ಮೆರವಣಿಗೆ ನಡೆಸಿ ಆಡಳಿತ ಸೌಧಕ್ಕೆ ತೆರಳಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಲಿದ್ದೇವೆ.

ಪ್ರತಿಭಟನೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್ ಅಶೋಕ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ ಸೇರಿದಂತೆ ಹಲವು ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದರು.

ಹಲವರ ಮೇಲೆ ಪ್ರಕರಣ ದಾಖಲು

ಭಟ್ಕಳ: ಮೂರಿನಕಟ್ಟೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಶಾಸಕ ಸುನೀಲ ನಾಯ್ಕ, ಪಶ್ಚಿಮಘಟ್ಟಗಳ ಕಾರ್ಯಪಡೆ ಅಧ್ಯಕ್ಷ ಗೋವಿಂದ ನಾಯ್ಕ ಸೇರಿದಂತೆ ಹಲವರ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೇ 24ರಂದು ತಡರಾತ್ರಿ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಭಟ್ಕಳ ನಗರ ಪೊಲೀಸ್ ಠಾಣೆಯ ಆವರಣದಲ್ಲಿ ಬಂದು ನಾವು ಮೂರಿನಕಟ್ಟೆಯಲ್ಲಿ ಕಟ್ಟೆ ಪುನಃ ಕಟ್ಟೆ ಕಟ್ಟುತ್ತೇವೆ ಎಂದು ಹೇಳುತ್ತಾ ಪೊಲೀಸ್ ಇಲಾಖೆಯ ವಿರುದ್ಧ ಘೋಷಣೆಗಳನ್ನು ಕೂಗಿ ಠಾಣೆಯ ಎದುರು ಪ್ರತಿಭಟನೆ ಮಾಡಿ ಸಾರ್ವಜನಿಕರಿಗೆ ಉಪದ್ರವ ನೀಡಿದ್ದಾರೆ ಎಂದು ಸರ್ಕಾರದ ಪರವಾಗಿ ದೂರು ದಾಖಲಿಸಲಾಗಿದೆ ಎಂದು ತಿಳಿಸಲಾಗಿದೆ. ಮೂರಿನಕಟ್ಟೆಯಲ್ಲಿ ಹೊಸದಾಗಿ ನಿರ್ಮಿಸಲಾದ ಕಟ್ಟೆಯ ಧ್ವಂಸದ ಬಗ್ಗೆ ನ್ಯಾಯ ಕೇಳಲು ಹೋದರೆ ನಮ್ಮ ಮೇಲೆ ದೂರು ದಾಖಲಿಸಿಕೊಳ್ಳಲಾಗಿದೆ. ಇದೊಂದು ವ್ಯವಸ್ಥಿತ ಪಿತೂರಿ ಎಂದು ಬಿಜೆಪಿ ಮತ್ತು ಹಿಂದೂ ಕಾರ್ಯಕರ್ತರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಾಜಿ ಸಚಿವ ಶಿವಾನಂದ ನಾಯ್ಕ, ಮಾಜಿ ಶಾಸಕ ಸುನೀಲ ನಾಯ್ಕ, ಭಟ್ಕಳ ಬಿಜೆಪಿ ಮಂಡಲಾಧ್ಯಕ್ಷ ಲಕ್ಷ್ಮೀನಾರಾಯಣ ನಾಯ್ಕ, ಹೊನ್ನಾವರ ಮಂಡಲಾಧ್ಯಕ್ಷ ಮಂಜುನಾಥ ನಾಯ್ಕ, ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಶಿವಾನಿ ಶಾಂತರಾಮ ಭಟ್ಕಳ, ಪ್ರಮುಖರಾದ ಸುಬ್ರಾಯ ದೇವಡಿಗ, ಖೇದಾರ ಕೊಲ್ಲೆ, ಶ್ರೀಕಾಂತ ನಾಯ್ಕ, ಶ್ರೀನಿವಾಸ ನಾಯ್ಕ, ಶ್ರೀಧರ ನಾಯ್ಕ ಮುಂತಾದವರಿದ್ದರು.

ಜಿಲ್ಲೆಯ ಆರು ಜನರಿಗೆ ಫೆಲೋಶಿಪ್ ಪ್ರಶಸ್ತಿ



ಧಾರವಾಡ: ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ವಿಯೆಟ್ನಾಂ ದೇಶದಲ್ಲಿ ಹಮ್ಮಿ ಕೊಂಡ ವೈಜ್ಞಾನಿಕ ಸಮ್ಮೇಳನದಲ್ಲಿ ಧಾರವಾಡಜಿಲ್ಲೆಯಆರುಸದಸ್ಯರಿಗೆ ಫೆಲೋಶಿಪ್ ಪ್ರಶಸ್ತಿ–2026 ನೀಡಿ, ಗೌರವಿಸಿದ್ದಾಗಿ ಪರಿಷತ್ ಜಿಲ್ಲಾ ಗೌರವಾಧ್ಯಕ್ಷೆ ಶ್ರೀದೇವಿ ಲದ್ದಿಮಠ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿ, ಜಿಲ್ಲಾಧ್ಯಕ್ಷೆ ಮಂಜುಳಾ ಹಾರಿಕೊಪ್ಪ, ಪ್ರಧಾನ ಕಾರ್ಯದರ್ಶಿ ಮಹೇಶ್ವರಿ ಉಳ್ಳಿಕಾಶಿ, ಕೋಶಾಧ್ಯಕ್ಷ ಆರ್.ಎಸ್ .ಹಿರೇಗೌಡರ, ವಿದ್ಯಾರ್ಥಿ ಪ್ರತಿನಿಧಿ ಸಹನಾತಿಲಗರ,ಪದಾಧಿಕಾರಿಗಳಾದ ಭಾರತಿ ನಾಯ್ಕರ, ಮಹಾದೇವಿ ದೊಡಮನಿ ಸೇರಿ ರಾಜ್ಯದ 70 ಜನರಿಗೆ ಈ ಫೆಲೋಶಿಪ್ ನೀಡಿದೆ ಎಂದರು.

ಪರಿಷತ್ ಜಿಲ್ಲಾಧ್ಯಕ್ಷೆ ಮಂಜುಳಾ ಹಾರಿಕೊಪ್ಪ ಮಾತನಾಡಿ, ಮೇ 17ರಿಂದ 22 ರವರೆಗೆ ನಡೆದ ವಿಯೆಟ್ನಾಂ ಪ್ರವಾಸದಲ್ಲಿ ಸಂಸ್ಕೃತಿ, ಪರಂಪರೆ ಪರಿಚಯಿಸಿದೆ. ಅಲ್ಲಿನ ಜನರಲ್ಲಿ ಮೂಢನಂಬಿಕೆಗಳಿಗೆ ಆದ್ಯತೆಯೇ ಇಲ್ಲ. ಅಲ್ಲಿನ ಶ್ರಮ ಸಂಸ್ಕೃತಿ ಜೀವನ ಗಮನ ಸೆಳೆದರೆ, ಸಮ್ಮೇಳನವು ವೈಜ್ಞಾನಿಕ ಚಿಂತನೆಗಳಿಗೆ ವೇದಿಕೆ ನೀಡಿತು ಎಂದರು.

ಸುದ್ದಿಗೋಷ್ಠಿಯಲ್ಲಿ ಆರ್.ಎಸ್. ಹಿರೇಗೌಡರ, ಮಹೇಶ್ವರಿ ಉಳ್ಳಿಕಾಶಿ, ಮಹಾದೇವಿ ದೊಡಮನಿ, ಭಾರತಿ ನಾಯ್ಕರ, ಸಹನಾ ತಿಲಗರ ಇದ್ದರು.

ಗಾಳಿಯಲ್ಲಿ ಗುಂಡು: ಯುವಕನಿಗೆ ಗಾಯ

ಜಮೀನು ವಿವಾದ

ಧಾರವಾಡ: ಜಮೀನಿನ ವಿವಾದದ ಹಿನ್ನೆಲೆಯಲ್ಲಿ ನಡೆದ ಗಲಾಟೆಯಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರ ಅಂಗರಕ್ಷರು ಎಂಟು ಸುತ್ತು ಗುಂಡು ಹಾರಿಸಿದ್ದು, ಈ ಪೈಕಿ ಒಂದು ಗುಂಡು ಯುವಕನ ಕಾಲಿಗೆ ತಾಗಿರುವ ಘಟನೆ ಮಂಗಳವಾರ ನಡೆದಿದೆ.

ನಗರದ ಹೊರ ವಲಯದ ಐಐಐಟಿ ಬಳಿ ಹುಬ್ಬಳ್ಳಿ ಮೂಲದ ಫೆಲೋಮಿನಾ ಎಂಬುವರಿಗೆ ಸೇರಿದ್ದ ಮೂರು ಎಕರೆ ಜಮೀನಿಗೆ ಸಂಬಂಧಿಸಿದಂತೆ ಈ ಘಟನೆ ನಡೆದಿದೆ.

ಈ ಜಮೀನಿನಲ್ಲಿ ನಿವೇಶನ ಮಾಡಲು ಫೆಲೋಮಿನಾ ಹಾಗೂ ಅವರ ಬೆಂಬಲಿಗರು ಮಂಗಳವಾರ ಮುಂದಾದಾಗ ಜಮೀನಿನ ಪಕ್ಕದವರು ವಿರೋಧ ಮಾಡಿದ್ದಾರೆ.

ಈ ಮಧ್ಯೆ ಎರಡು ಗುಂಪುಗಳ ಮಧ್ಯೆ ಮಾತಿನ ಚಕಮಕಿ ನಡೆದು, ಜಮೀನು ಅಳತೆ ಮಾಡಿಸಿ ನಿವೇಶನ ಅಭಿವೃದ್ಧಿ ಮಾಡಲು ಸ್ಥಳೀಯರು ಆಗ್ರಹಿಸಿದ್ದಾರೆ.

ಈಗಾಗಲೇ ನಮ್ಮ ಪರವಾಗಿ ನ್ಯಾಯಾಲಯದ ತೀರ್ಪು ಬಂದಿದ್ದು ಮತ್ತೇಕೆ ಅಳತೆ ಮಾಡುವುದು ಎಂದು ಫೆಲೋಮಿನಾ ಬೆಂಬಲಿಗರು ವಾದಿಸಿದ್ದಾರೆ.

ಎರಡು ಗುಂಪುಗಳ ಮಧ್ಯೆ ವಾಗ್ವಾದ ಜೋರಾದಾಗ, ಫೆಲೋಮಿನಾ ಅವರ ಅಂಗರಕ್ಷರು ಏಳು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿದ್ದು, ಒಂದು ನೆಲಕ್ಕೆ ಹಾರಿಸಿದ್ದಾರೆ. ಈ ಸಮಯದಲ್ಲಿ ಸ್ಥಳೀಯರಾದ ವಿಠ್ಠಲ್ ವಾಲೀಕಾರ್ (24) ಎಂಬುವರ ಕಾಲಿಗೂ ಗುಂಡು ತಾಗಿದ್ದು, ಸಣ್ಣ ಪುಟ್ಟ ಗಾಯಗಳಾಗಿವೆ. ಗಾಯಾಳನ್ನು ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ವಿದ್ಯಾಗಿರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಘಟನೆ ಸುದ್ದಿ ತಿಳಿದು ಪೊಲೀಸ ಆಯುಕ್ತ ಎನ್.ಶಶಿಕುಮಾರ ಸ್ಥಳಕ್ಕೆ ಆಗಮಿಸಿ ಮಾಹಿತಿ ಪಡೆದಿದ್ದಾರೆ.



ಧರ್ಮಸ್ಥಳ: ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಅವರು ಕುಟುಂಬ ಸಮೇತರಾಗಿ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡಿ ಶ್ರೀ ಮಂಜುನಾಥ ಸ್ವಾಮಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಚಿವರು ಹಾಗೂ ಅವರ ಕುಟುಂಬದ ಸದಸ್ಯರು ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ.ವೀರೇಂದ್ರ ಹೆಗ್ಗಡೆಯವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ಬಿ.ಎಲ್.ಸಂತೋಷ ಸ್ವಾಗತಿಸಿದ ಬಾಲಚಂದ್ರ ಜಾರಕಿಹೊಳಿ



ಬೆಳಗಾವಿ: ಖಾಸಗಿ ಕಾರ್ಯಕ್ರಮಕ್ಕೆ ಬೆಳಗಾವಿಗೆ ಆಗಮಿಸಿದ್ದ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ ಅವರನ್ನು ಶಾಸಕ ಹಾಗೂ ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಖಾಸಗಿ ಹೋಟೆಲ್‌ನಲ್ಲಿ ಬರಮಾಡಿಕೊಂಡರು. ಬಿಜೆಪಿ ಮುಖಂಡರ ಜೊತೆ ಬೆಳಗಿನ ಉಪಹಾರ ಸೇವಿಸಿದ ಬಿ.ಎಲ್. ಸಂತೋಷ್ ಕೆಲ ಕಾಲ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಬಗ್ಗೆ ಚರ್ಚಿಸಿದರು. ಈ ವೇಳೆ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಶಾಸಕ ಅಭಯ್ ಪಾಟೀಲ್, ಮಾಜಿ ಶಾಸಕ ಅನಿಲ್ ಬೆನಕೆ, ಜಗದೀಶ್ ಮೆಟಗುಡ್ಡ, ಮಹಾಂತೇಶ್ ಕವಟಗಿಮಠ ಸೇರಿ ಹಲವರು ಉಪಸ್ಥಿತರಿದ್ದರು.

ಡೈನಾಮಿಕ್ ಯುಪಿಐಗೆ ಚಾಲನೆ



ಹುಬ್ಬಳ್ಳಿ: ಇಲ್ಲಿಯ ಗೋಕುಲ ರಸ್ತೆ ಬಸ್ ನಿಲ್ದಾಣದಲ್ಲಿ ಇಟಿಎಂ ಯಂತ್ರಗಳ ವ್ಯವಸ್ಥೆ (ಡೈನಾಮಿಕ್ ಯುಪಿಐ)ಗೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಗಾ ಎಂ. ಅವರು ಚಾಲನೆ ನೀಡಿದರು.

ನಗದು ರಹಿತ ವಹಿವಾಟುಗಳನ್ನು ಉತ್ತೇಜಿಸಲು ಕರ್ನಾಟಕದಲ್ಲಿಯೇ ಮೊದಲ ಬಾರಿಗೆ ವಾಕರಸಾ ಸಂಸ್ಥೆಯ ಎಲ್ಲಾ ಬಸ್‌ಗಳಲ್ಲಿ ಸ್ಟಾಟಿಕ್ ಯುಪಿಐ ಮೂಲಕ ಹಣ ಸ್ವೀಕೃತಿ ವ್ಯವಸ್ಥೆಯನ್ನು ಅಳವಡಿಸಲಾಗಿತ್ತು. ಪ್ರಸ್ತುತ ತಂತ್ರಜ್ಞಾನದಲ್ಲಿನ ಬದಲಾವಣೆ ಹಾಗೂ ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಡೈನಾಮಿಕ್ ಯುಪಿಐ ವ್ಯವಸ್ಥೆಗೆ ಮತ್ತು ಕಾರ್ಡ್ ಆಧಾರಿತ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಒಳಗೊಂಡ ಆಂಡ್ರಾಯ್ಡ್ ಆಧಾರಿತ ಸ್ಮಾರ್ಟ್ ಇಟಿಎಂಗಳನ್ನು ಸಂಸ್ಥೆಯ ಎಲ್ಲಾ ಘಟಕಗಳಲ್ಲಿ ಅಳವಡಿಸಲಾಗುತ್ತಿದೆ.

ಪ್ರಥಮವಾಗಿ ಪ್ರಯಾಣಿಕರ ಸೌಲಭ್ಯಕ್ಕಾಗಿ ಅತ್ಯಾಧುನಿಕ ಡೈನಾಮಿಕ್ ಯುಪಿಐ ಪಾವತಿ ವ್ಯವಸ್ಥೆಯನ್ನು ಪ್ರಾರಂಭಿಸುವ ಮೂಲಕ ಮಹತ್ವದ ಹೆಜ್ಜೆ ಇಟ್ಟಿದೆ ಎಂದು ಸಂಸ್ಥೆ ತಿಳಿಸಿದೆ.

ಮುಖ್ಯ ಸಂಚಾರ ವ್ಯವಸ್ಥಾಪಕ ವಿವೇಕಾನಂದ ವಿಶ್ವಜ್ಞ, ಮುಖ್ಯ ಲೆಕ್ಕಾಧಿಕಾರಿ ಜಗದಂಬಾ ಕೋಪರ್ಡೆ, ಗ್ರಾಮಾಂತರ ವಿಭಾಗೀಯ ನಿಯಂತ್ರಣಾಧಿಕಾರಿ ಎಚ್. ರಾಮನಗೌಡರ, ಮುಖ್ಯ ಗಣಕ ವ್ಯವಸ್ಥಾಪಕ ಶ್ರೀನಾಥ ಜಿ. ಇದ್ದರು.

ದೇಶದ ಪ್ರಗತಿಗೆ ಜೈನ ಸಮುದಾಯ ಕೊಡುಗೆ ಅಪಾರ: ಗೆಹ್ಲೋಟ್



ಚಿಕ್ಕೋಡಿ: ಅಹಿಂಸೆ, ನೈತಿಕತೆ, ಶಿಸ್ತು, ರಾಷ್ಟ್ರ ಸಮರ್ಪಣೆ ಸೇರಿದಂತೆ ವಿವಿಧ ಗುಣ ಹೊಂದಿರುವ ಜೈನ ಸಮುದಾಯ ರಾಷ್ಟ್ರದ ಸಮಗ್ರತೆಗೆ ದೊಡ್ಡ ಕೊಡುಗೆ ನೀಡಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಹೇಳಿದರು.

ತಾಲೂಕಿನ ಶಮನವೇವಾಡಿ ಗ್ರಾಮದಲ್ಲಿ ಮಂಗಳವಾರ ಎಜಿಎಂ ಎಂಜಿನಿಯರಿಂಗ್ ಕಾಲೇಜ್ ಉದ್ಘಾಟನೆ, 151 ಅಡಿ ಎತ್ತರದ ಭಗವಾನ ಪಾರ್ಶ್ವನಾಥರ ಮೂರ್ತಿ ಶಂಕುಸ್ಥಾಪನೆ ಹಾಗೂ ಸರಸ್ವತಿ ಮೂರ್ತಿ ಪ್ರತಿಷ್ಠಾಪನೆ ನೆರವೇರಿಸಿ ಮಾತನಾಡಿದ ಅವರು, ರಾಷ್ಟ್ರಸಂತ ಆಚಾರ್ಯ ಗುಣಧರನಂದಿ ಮಹಾರಾಜರು ಅಧ್ಯಾತ್ಮದೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿಯೂ ಸಾಕಷ್ಟು ಪ್ರಗತಿಯನ್ನು ಕೈಗೊಂಡಿದ್ದಾರೆ. ಬಡ ವಿದ್ಯಾರ್ಥಿಗಳಿಗಾಗಿ ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸುವ ಮೂಲಕ ಮಹಾರಾಜರು ಮಾನವ ಕಲ್ಯಾಣದ ಸಂದೇಶ ನೀಡಿದ್ದಾರೆ. ಶಿಕ್ಷಣ, ಸಮಾಜಸೇವೆ, ರಾಷ್ಟ್ರ ನಿರ್ಮಾಣ ಕಾರ್ಯಗಳು ನಿರಂತರವಾಗಿ ಮುಂದುವರಿಯಬೇಕೆಂಬ ಆಶಯ ವ್ಯಕ್ತಪಡಿಸಿದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ ಮಾತನಾಡಿ, ಭಾರತೀಯ ಸಂಸ್ಕೃತಿಯನ್ನು ಬ್ರಿಟಿಷರು ತಮ್ಮ ಆಡಳಿತ ಅವಧಿಯಲ್ಲಿ ಮುರಿಯುವ ಕಾರ್ಯ ಮಾಡಿದ್ದು, ಅದನ್ನು ಪುನರ್ ಪ್ರತಿಷ್ಠಾಪಿಸುವ ಕಾರ್ಯ ನಡೆಯಬೇಕಿದೆ. ಭಾರತೀಯ ಸಂಸ್ಕೃತಿಯ ಬೇರುಗಳನ್ನು ನಾವೆಲ್ಲರಗೂ ಗಟ್ಟಿಗೊಳಿಸಿಕೊಂಡು ಮುಂದೆ ಸಾಗಬೇಕಿದೆ. ಶಿಕ್ಷಕರು ಮಕ್ಕಳಿಗೆ ಶಿಕ್ಷಣ ನೀಡುವುದರೊಂದಿಗೆ ರಾಷ್ಟ್ರ ನಿರ್ಮಾಣಕ್ಕೆ ಸಿದ್ಧಗೊಳಿಸಬೇಕು ಎಂದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ರಾಷ್ಟ್ರಸಂತ, ಆಚಾರ್ಯ ಗುಣಧರನಂದಿ ಮಹಾರಾಜರು ಮಾತನಾಡಿ, ಧಾರ್ಮಿಕ ಕಾರ್ಯಗಳ ಮೂಲಕ ಸಾಮಾಜಿಕ ಕಾರ್ಯಗಳನ್ನು ಈ ಪ್ರದೇಶದಲ್ಲಿ ಕೈಗೊಳ್ಳಲಾಗುತ್ತಿದೆ. ಖಾಸಗಿ ಎಂಜಿನಿಯರಿಂಗ್ ಕಾಲೇಜಾಗಿದ್ದರೂ ಇಲ್ಲಿ ಸರ್ಕಾರಿ ಶುಲ್ಕಕ್ಕಿಂತಲೂ ವಿದ್ಯಾರ್ಥಿಗಳಿಂದ ಕಡಿಮೆ ಫೀ ಪಡೆದುಕೊಂಡು ಶಿಕ್ಷಣ ನೀಡುವ ಮೂಲಕ ಸಮಾಜದಲ್ಲಿ ಬಡವರಿಗೆ ಉನ್ನತ ಶಿಕ್ಷಣ ದೊರೆಯುವಂತೆ ಮಾಡುವ ಉದ್ದೇಶ ಹೊಂದಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ರಾಷ್ಟ್ರೀಯ ಪ್ರದಾನ ಕಾರ್ಯದರ್ಶಿ ಬಿ.ಎಲ್.ಸಂತೋಷ ಅವರಿಗೆ ''ಕರ್ಮಯೋಗಿ ಪ್ರಶಸ್ತಿ''ಯನ್ನು ರಾಷ್ಟ್ರಸಂತ ಗುಣಧರನಂದಿ ಮಹಾರಾಜರು ಪ್ರದಾನ ಮಾಡಿದರು. ಯುಪಿಎಸ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ ಪಡೆದ ಕಿರಣ ಕಮತೆ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಧರ್ಮಸೇನ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ, ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ, ಶಾಸಕಿ ಶಶಿಕಲಾ ಜೊಲ್ಲೆ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ, ಶಾಸಕ ದುರ್ಯೋಧನ ಐಹೊಳೆ, ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ, ಸಂಜಯ ಪಾಟೀಲ, ಪಿ.ರಾಜೀವ್, ಅನಿಲ ಬೆನಕೆ, ಮಹೇಶ ಕುಮಟಳ್ಳಿ, ಜಯಕುಮಾರ ಖೋತ, ಭರತೇಶ ಬಣವನೆ, ಪ್ರಸನ್ನ ಹಜಾರೆ, ಸತೀಶ ಹಜಾರೆ, ಸುದರ್ಶನ ಖೋತ ಮುಂತಾದವರು ಇದ್ದರು.

ಬೊಮ್ಮನಳ್ಳಿ ಜಲಾಶಯದಲ್ಲಿ ಕಾಡಾನೆಯ ಮೃತದೇಹ ಪತ್ತೆ



ದಾಂಡೇಲಿ: ತಾಲೂಕಿನ ಬೊಮ್ಮನಳ್ಳಿ ಜಲಾಶಯದಲ್ಲಿ ಕಾಡಾನೆಯೊಂದರ ಮೃತದೇಹ ಪತ್ತೆಯಾದ ಘಟನೆ ನಡೆದಿದೆ.

ಮೃತ ಆನೆಯ ಸಾವಿಗೆ ನಿಖರ ಕಾರಣ ಇನ್ನೂ ತಿಳಿದು ಬಂದಿಲ್ಲ. ಮಾಹಿತಿ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬಳಿಕ ಜಲಾಶಯದಿಂದ ಆನೆಯ ಮೃತದೇಹವನ್ನು ಹೊರ ತೆಗೆದು ಮರಣೋತ್ತರ ಪರೀಕ್ಷೆ ನಡೆಸಲಾಗಿದೆ ಎಂದು ತಿಳಿದುಬಂದಿದೆ.

ಮೃತ ಕಾಡಾನೆ ಸುಮಾರು 9ರಿಂದ 10 ವರ್ಷದ ಗಂಡು ಆನೆ ಎಂದು ಗುರುತಿಸಲಾಗಿದೆ. ಆನೆಯ ಸಾವಿನ ನಿಖರ ಕಾರಣ ಮರಣೋತ್ತರ ಪರೀಕ್ಷೆಯ ವರದಿ ಬಂದ ಬಳಿಕ ತಿಳಿದು ಬರಲಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastem part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ರಾಮಕೃಷ್ಣ ನಾಯ್ಕರಿಗೆ ಸನ್ಮಾನ

◆ **ಅಂಕೋಲಾ:** ಉಪ ವಲಯ ಅರಣ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿ ವಲಯ ಅರಣ್ಯಾಧಿಕಾರಿಯಾಗಿ ಬಡ್ತಿ ಪಡೆದು ಕಾರವಾರದ ಡಿಎಫ್‌ಒ ಕಚೇರಿಯಲ್ಲಿ ಸರ್ವೇ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಮಕೃಷ್ಣ ಎಚ್. ನಾಯ್ಕ ಇವರಿಗೆ ರಾಷ್ಟ್ರೀಯ ಈಡಿಗ ಮಹಾಮಂಡಳಿಯ ವತಿಯಿಂದ ಸನ್ಮಾನಿಸಿ ಗೌರವಿಸಿದರು. ರಾಷ್ಟ್ರೀಯ ಈಡಿಗ ಮಹಾಮಂಡಳಿಯ ತಾಲೂಕು ಅಧ್ಯಕ್ಷ ದಾಮೋದರ ಜಿ. ನಾಯ್ಕ, ವೈದ್ಯ ಡಾ. ಕರುಣಾಕರ ನಾಯ್ಕ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ರಾಜೇಂದ್ರ ವಿ. ನಾಯ್ಕ, ಈಡಿಗ ಮಹಾಮಂಡಳಿಯ ಯುವ ಘಟಕದ ಅಧ್ಯಕ್ಷ ಮಂಜುನಾಥ ಕೆ. ನಾಯ್ಕ, ಉಪಾಧ್ಯಕ್ಷರಾದ ರಮೇಶ ಎಸ್. ನಾಯ್ಕ, ರಮೇಶ ಎನ್. ನಾಯ್ಕ, ಸಂಜಯ ಆರ್. ನಾಯ್ಕ, ಸಹಕಾರ್ಯದರ್ಶಿ ವಸಂತ ನಾಯ್ಕ, ಪ್ರ. ಕಾರ್ಯದರ್ಶಿ ನಾಗರಾಜ ಮಂಜಗುಣಿ ಇತರರಿದ್ದರು.

ನದಿಯಲ್ಲಿ ಮುಳುಗಿ ಮೃತಪಟ್ಟವರಿಗೆ ಸಂತಾಪ



◆ **ಹೊನ್ನಾವರ:** ಭಟ್ಕಳ ತಾಲೂಕಿನ ಸಾರದಹೊಳೆಯ ಒಂದೇ ಕುಟುಂಬದ 11 ಜನರು ನೀರಿನ ಸೆಳೆತಕ್ಕೆ ಸಿಲುಕಿ ಮೃತಪಟ್ಟಿರುವುದು ಅತೀವ ದುಃಖವನ್ನುಂಟುಮಾಡಿದೆ. ಅವರ ಕುಟುಂಬದ ಜೊತೆಗೆ ನಾವೆಲ್ಲರೂ ಸಹಕಾರಿಯಾಗಿ ಇರುತ್ತೇವೆ ಎಂದು ಹೊನ್ನಾವರ ತಾಲೂಕು ನಾಮಧಾರಿ ಅಭಿವೃದ್ಧಿ ಸಂಘದ ಅಧ್ಯಕ್ಷ ಟಿ.ಟಿ.ನಾಯ್ಕ ಮೂಡ್ಕಣಿ ತಿಳಿಸಿದ್ದಾರೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ನಿರ್ಗಮನದಿಂದ ಉಂಟಾಗಿರುವ ಆಘಾತವನ್ನು ಎದುರಿಸುವ ಶಕ್ತಿ ಅವರ ಕುಟುಂಬಕ್ಕೆ ಸಿಗಲಿ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ಕಾಣೆ



◆ **ಅಂಕೋಲಾ:** ವ್ಯಕ್ತಿಯೋರ್ವರು ಕಳೆದ 11 ತಿಂಗಳುಗಳಿಂದ ಮನೆಗೆ ಬರದೇ ಕಾಣೆಯಾಗಿರುವ ಕುರಿತಂತೆ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ತಾಲೂಕಿನ ಬೆಲೇಕೇರಿಯ ನಿವಾಸಿ ಗಿರೀಶ ಚಾತುರ ನಾಯ್ಕ(42) ಕಾಣೆಯಾಗಿರುವ ವ್ಯಕ್ತಿಯಾಗಿದ್ದು ಈತ ಕಳೆದ ವರ್ಷ ಜೂ.26ರಂದು ಮಧ್ಯಾಹ್ನ 3 ಗಂಟೆಗೆ ತಾಲೂಕಿನ ಬೆಲೇಕೇರಿಯ ತನ್ನ ಮನೆಯಿಂದ ಮಂಗಳೂರಿಗೆ ಹೋಗಿ ಬರುವುದಾಗಿ ಹೇಳಿ ಹೋದವನು ಇದುವರೆಗೆ ಮನೆಗೆ ಮರಳಿ ಬರದೇ ತನ್ನ ಇರುವಿಕೆ ಬಗ್ಗೆ ಯಾವುದೇ ಮಾಹಿತಿ ನೀಡದೆ ಕಾಣೆಯಾಗಿರುವುದಾಗಿ ತಿಳಿದು ಬಂದಿದೆ. ಗೋದಿ ಮೈ ಬಣ್ಣ ಸದೃಢ ಮೈಕಟ್ಟು ಹೊಂದಿರುವ ಗೋಲು ಮುಖದವನಾಗಿರುವ ಕಾಣೆಯಾದ ವ್ಯಕ್ತಿ 5.3 ಅಡಿ ಎತ್ತರ ಹೊಂದಿದ್ದು ಕನ್ನಡ,ಕೊಂಕಣಿ,ಹಿಂದಿ ಭಾಷೆ ಮಾತನಾಡಲು ಬರುತ್ತಿದೆ.ವ್ಯಕ್ತಿಯ ಕುರಿತಂತೆ ಮಾಹಿತಿ ಇದ್ದರೆ ಅಂಕೋಲಾ ಪೊಲೀಸ್ ಠಾಣೆಯನ್ನು ಸಂಪರ್ಕಿಸುವಂತೆ ತಿಳಿಸಲಾಗಿದೆ.

ನಿಧನ ಸುದ್ದಿ

ಮಂಜುನಾಥ ಖಾಂಡೇಕರ್



◆ **ಯಲ್ಲಾಪುರ:** ಮಂಚೀಕೇರಿ ಅರಣ್ಯ ವಲಯದ ಚಿಪಗೇರಿಯಲ್ಲಿ ಕಳೆದ 40 ವರ್ಷಗಳಿಂದ ಅರಣ್ಯ ಪಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದ ಮಂಜುನಾಥ ಖಾಂಡೇಕರ್ (53) ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಪುತ್ರರು ಹಾಗೂ ಸಹೋದರರು, ಸಹೋದರಿಯರು, ಅಪಾರ ಬಂಧು-ಬಳಗ ಇದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	61899	68299
ಬಿಳಿಗೋಟು	25009	37199
ಕೆಂಪುಗೋಟು	26219	34719
ಬೆಟ್ಟೆ	36099	47800
ರಾಶಿ	48009	53000
ಚಾಲಿ	42100	46501

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	60777	60777
ರಾಶಿ	49869	57519
ಬೆಟ್ಟೆ	37299	48769
ಕೆಂಪುಗೋಟು	16081	36099
ಬಿಳಿಗೋಟು	16109	36899
ಚಾಲಿ	36899	46899
ಕೋಕಾ	16000	31209
ಕಾಳುಮೆಣಸು	57005	67689



ಅಂಕೋಲಾ: ಉಪ ವಲಯ ಅರಣ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿ ವಲಯ ಅರಣ್ಯಾಧಿಕಾರಿಯಾಗಿ ಬಡ್ತಿ ಪಡೆದು ಕಾರವಾರದ ಡಿಎಫ್‌ಒ ಕಚೇರಿಯಲ್ಲಿ ಸರ್ವೇ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಮಕೃಷ್ಣ ಎಚ್. ನಾಯ್ಕ ಇವರಿಗೆ ರಾಷ್ಟ್ರೀಯ ಈಡಿಗ ಮಹಾ ಮಂಡಳಿಯ ವತಿಯಿಂದ ಸನ್ಮಾನಿಸಿ ಗೌರವಿಸಿದರು. ರಾಷ್ಟ್ರೀಯ ಈಡಿಗ ಮಹಾಮಂಡಳಿಯ ತಾಲೂಕು ಅಧ್ಯಕ್ಷ ದಾಮೋದರ ಜಿ. ನಾಯ್ಕ, ವೈದ್ಯ ಡಾ. ಕರುಣಾಕರ ನಾಯ್ಕ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ರಾಜೇಂದ್ರ ವಿ. ನಾಯ್ಕ ಇತರರು ಇದ್ದರು.

ಪುರಸಭೆ ಸಿಬ್ಬಂದಿಗಳಿಂದ ಪ್ರತಿಭಟನೆ

◆ **ಹಳಿಯಾಳ:** ಪಟ್ಟಣದ ಪುರಸಭೆಯಲ್ಲಿ ಕರ್ತವ್ಯ ನಿರತ ಪುರಸಭೆ ಸಿಬ್ಬಂಧಿಗಳಿಗೆ ಮನಸೋ ಇಚ್ಛೆ ನಿಂದಿಸಿರುವ ಹಾಗೂ ದೈನಂದಿನ ಕಾರ್ಯ ನಿರ್ವಹಣೆಗೆ ಮಾನಸಿಕ ವ್ಯಥೆಯಾಗುವಂತೆ ವರ್ತಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಪ.ಜಾ. ಹಾಗೂ ಪ.ಪಂ. ದ ವ್ಯಕ್ತಿಯೊಬ್ಬನು ಮಾನಸಿಕ ವ್ಯಥೆಯೊಡ್ಡಲು ಪ್ರಯತ್ನಿಸಿದ ಆರೋಪದ ಮೇಲೆ ಹಾಗೂ ಆತನ ಮೇಲೆ ಕಾನೂನಿನ ಕ್ರಮ ಜರುಗಿಸುವಂತೆ ಪುರಸಭೆ ಸಿಬ್ಬಂದಿಗಳು ಪ್ರತಿಭಟನೆ ನಡೆಸಿ ತಾಲೂಕಾಡಳಿತದ ತಹಶೀಲ್ದಾರ್ ರವರಿಗೆ ಮನವಿ ಸಲ್ಲಿಸಿದ ಪ್ರಸಂಗ ಮೇ 26 ರಂದು ನಡೆಯಿತು.

ಪುರಸಭೆ ಮುಖ್ಯಾಧಿಕಾರಿ ಅಶೋಕ ಸಾಳೆನವರ, ಪುರಸಭೆ ವ್ಯವಸ್ಥಾಪಕ ಈರಪ್ಪ ಕೊಡ್ಲಿ, ಅಕೌಂಟಂಟ್ ಮಹ್ಮದ ರಫಿಕ ಫಕ್ರುಸಾಬ ವಸ್ತಾದ, ಕಂದಾಯ ಅಧಿಕಾರಿ ಮಂಜುನಾಥ ಹರಿಜನ, ಎಪ್ಡಿಎ ರವಿ ಪಟ್ಟಿಹಾಳ, ನೀರು ಸರಬರಾಜು ವಿಭಾಗದ ಪ್ರಕಾಶ ಟೋಸೂರ ಹಾಗೂ ಸಿಬ್ಬಂಧಿ ಗಳಾದ ಧನಂಜಯ ಹಾಗೂ ಇತರರೊಂದಿಗೆ ಅನುಚಿತ ವರ್ತನೆ ತೋರಿ ಅವಮಾನಕಾರಿಯಾಗಿ ನಡೆದುಕೊಂಡ ಬಗ್ಗೆ ದೂರಿನಲ್ಲಿ ದೂರಲಾಗಿದೆ.

ಆರ್ ಟಿ ಆಯ್ ಕಾರಣ ನೀಡುತ್ತಾ ಸಿಬ್ಬಂಧಿಗಳಿಗೆ ಹೆದರಿಸುತ್ತಾ ಬೆದರಿಸುತ್ತಾ ಕರ್ತವ್ಯಕ್ಕೆ ಸಾಕಷ್ಟು ಬಾರಿ ಅಡ್ಡಿ ಮಾಡಿರುವ ಕುರಿತು ಮನವಿಯಲ್ಲಿ ಪುರಸಭೆ ಮುಖ್ಯಾಧಿಕಾರಿ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಪುರಸಭೆಯ ಸರ್ವ ಸಿಬ್ಬಂಧಿಗಳು ಹಾಜರಿದ್ದರು.



ಹಳಿಯಾಳ: ಪಟ್ಟಣದ ಪುರಸಭೆ ಸಿಬ್ಬಂದಿಗಳು ಪ್ರತಿಭಟನೆ ನಡೆಸಿ ತಾಲೂಕಾಡಳಿತದ ತಹಶೀಲ್ದಾರ್‌ರವರಿಗೆ ಮನವಿ ಸಲ್ಲಿಸಿದರು.

48 ಗಂಟೆಯೊಳಗೆ ಮರುಸ್ಥಾಪನೆಯಾಗದಿದ್ದರೆ ಪ್ರತಿಭಟನೆ: ನಾಯ್ಕ

ಮೂರಿನಕಟ್ಟೆ ಧ್ವಂಸ ಖಂಡನೀಯ

◆ **ಭಟ್ಕಳ:** ಪಟ್ಟಣದ ಮೂರಿನಕಟ್ಟೆ ಹಿಂದೂಗಳು ಪೂಜಿಸುವ ಸ್ಥಳ. ಇದಕ್ಕೆ ಇತಿಹಾಸ ಇದ್ದು, ಇಂತಹ ಪ್ರದೇಶದಲ್ಲಿ ನಿರ್ಮಿಸಿದ ಕಟ್ಟೆಯನ್ನು ಮುಸ್ಲಿಮರು ಸಾವಿರಾರು ಜನರು ಆಗಮಿಸಿ ಧ್ವಂಸಗೊಳಿಸಿರುವುದು ತೀವ್ರ ಖಂಡನೀಯವಾಗಿದ್ದು, ಕಟ್ಟೆಯನ್ನು 48 ಗಂಟೆಯೊಳಗೆ ಮರುಸ್ಥಾಪನೆ ಮಾಡದೇ ಇದ್ದಲ್ಲಿ ಉಗ್ರ ರೀತಿಯ ಪ್ರತಿಭಟನೆ ಮಾಡಲಾಗುವುದು ಎಂದು ವಿಶ್ವಹಿಂದೂ ಪರಿಷತ್ ತಾಲೂಕು ಅಧ್ಯಕ್ಷ ರಾಮಕೃಷ್ಣ ನಾಯ್ಕ ಹೇಳಿದರು.

ಅವರು ಹಿಂದೂಪರ ಸಂಘಟನೆಗಳ ಒಕ್ಕೂಟದಿಂದ ಮುಟ್ಟಳ್ಳಿಯ ಲಕ್ಷ್ಮೀನರಸಿಂಹ ದೇವಸ್ಥಾನದ ಸಭಾಗೃಹದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಮೂರಿನಕಟ್ಟೆ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕಾಮಗಾರಿಗೆ ತೆರವು ಆಗುವುದರಿಂದ ಇದಕ್ಕೆ ಕಟ್ಟೆ ಕಟ್ಟುವಂತೆ ಹಲವು ಬಾರಿ ನಾವು ಜಿಲ್ಲಾಡಳಿತ ಮತ್ತು ತಾಲೂಕು ಆಡಳಿತವನ್ನು ಆಗ್ರಹಿಸುತ್ತಲೇ ಬಂದಿದ್ದೆವು. ಆದರೆ ಮೇ. 24 ರಂದು ಭಾನುವಾರ ಬೆಳಿಗ್ಗೆ ಮೂರಿನಕಟ್ಟೆ ಪ್ರದೇಶದಲ್ಲಿ ಕಟ್ಟೆ ನಿರ್ಮಿಸಲು ತಾಲೂಕು ಆಡಳಿತ ನಕ್ಷೆ ಮಾಡಿಕೊಟ್ಟಂತೆ ಪೊಲೀಸ್ ಭದ್ರತೆಯಲ್ಲಿ ಹಿಂದೂ ಕಾರ್ಯಕರ್ತರು ಅಡಿಗಲ್ಲು ಪೂಜೆ ನೆರವೇರಿಸಿ ಕಟ್ಟೆ ನಿರ್ಮಾಣ ಮಾಡಿದ್ದೆವು. ಇದಕ್ಕೆ ಕೆಲ ಮುಸ್ಲಿಮರು ಆಕ್ಷೇಪಿಸಿದಾಗ ಸ್ಥಳದಲ್ಲಿದ್ದ ಪೊಲೀಸರು, ಕಂದಾಯ ಅಧಿಕಾರಿಗಳು ಅವರನ್ನು ಸಮಾಧಾನಿಸಿ ಕಳುಹಿಸಿದ್ದರು. ಆದರೆ ರಾತ್ರಿ ಏಕಾಏಕಿ ಮುರಿನಕಟ್ಟೆ ಸಾವಿರಾರು ಮುಸ್ಲೀಮರು ಆಗಮಿಸಿ ನಾವು ಶ್ರದ್ಧಾಭಕ್ತಿ ಭಾವದಿಂದ ಪೂಜಿಸಿ ನಿರ್ಮಿಸಿದ್ದ ಮುರಿನಕಟ್ಟೆಯನ್ನು ಚಪ್ಪಲಿ ಕಾಲಿನಿಂದ ಒದ್ದಿದ್ದಲ್ಲದೇ ಅದನ್ನು ಧ್ವಂಸಗೊಳಿಸಿದ್ದಾರೆ. ಪೊಲೀಸರ ಎದುರೇ ಈ ಕೃತ್ಯ ನಡೆಸಿದ್ದು, ಇದನ್ನು ಹಿಂದೂಪರ ಸಂಘಟನೆಗಳ ಒಕ್ಕೂಟ ಬಲವಾಗಿ ಖಂಡಿಸುತ್ತದೆ ಎಂದರು.



ಧಾರ್ಮಿಕ ಭಾವನೆಗೆ ಧಕ್ಕೆ

ಕಟ್ಟೆ ಧ್ವಂಸದ ಬಗ್ಗೆ ಠಾಣೆಯಲ್ಲಿ ನ್ಯಾಯ ಕೇಳಲು ಧರಣಿಸಿ ನಡೆಸಿದ 50 ಕಾರ್ಯಕರ್ತರ ಮೇಲೆ ಕೇಸು ದಾಖಲಿಸಿದ್ದಾರೆ. ಆದರೆ ಕಟ್ಟೆ ಧ್ವಂಸ ಮಾಡುವ ವೇಳೆ ಸಾವಿರಾರು ಮುಸ್ಲೀಮರು ಇದ್ದರೂ ಸಹ ಕೇವಲ 10-15 ಜನರ ಮೇಲೆ ಕೇಸು ದಾಖಲಿಸಲಾಗಿದೆ. ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಆಗಬೇಕು. ಮೂಲ ಮೂರಿನಕಟ್ಟೆಗೆ ಏನೂ ಆಗಿಲ್ಲ ಎಂದು ಹೇಳುವವರು ನಾವು ಪೂಜಿಸಿ ನಿರ್ಮಿಸಿದ ನೂತನ ಮುರಿನಕಟ್ಟೆ ಧ್ವಂಸದ ಬಗ್ಗೆ ಯಾಕೆ ಮಾತನಾಡುತ್ತಿಲ್ಲ ಎಂದು ಪ್ರಶ್ನಿಸಿದರು. ಜಿಲ್ಲಾಡಳಿತ, ಪೊಲೀಸ್ ಇಲಾಖೆ ಕಟ್ಟೆ ಧ್ವಂಸದ ಬಗ್ಗೆ ನ್ಯಾಯ ಕೇಳಿದ ಹಿಂದೂಗಳ ಮೇಲಿನ ಕೇಸನ್ನು ತಕ್ಷಣ ವಾಪಾಸ್ ಪಡೆಯಬೇಕು. ಮುಸ್ಲೀಮರು ಕಟ್ಟೆ ಧ್ವಂಸ ಮಾಡಿದ್ದರಿಂದ ಹಿಂದೂಗಳಿಗೆ ನೋವಾಗಿದೆ. ಧಾರ್ಮಿಕ ಭಾವನೆಗೆ ಧಕ್ಕೆ ತಂದಿದೆ ಎಂದರು.

> ಮುರಿನಕಟ್ಟೆ ಪ್ರಕರಣದಲ್ಲಿ ತಂಝೀಂ ಶಾಮೀಲಾತಿ ಇದೆ. ಮುರಿನಕಟ್ಟೆ ಪ್ರಕರಣವನ್ನು ಹಿಂದೂಗಳ ಮತ್ತು ತಾಲ್ಲೂಕು ಆಡಳಿತ ನೋಡಿಕೊಳ್ಳುತ್ತಿತ್ತು. ಆದರೆ ಇದರಲ್ಲಿ ತಂಝೀಂ ತಲೆ ಹಾಕಿ ದೊಡ್ಡದು ಮಾಡಿದೆ. ಮುರಿನಕಟ್ಟೆಗೂ ತಂಜೀಂಗೂ ಯಾವುದೇ ಸಂಬಂಧ ಇಲ್ಲ. ಮುಸ್ಲೀಮರು ಮೊದಲು ತಮ್ಮ ಮಾನಸಿಕತೆಯನ್ನು ಸರಿ ಮಾಡಿಕೊಳ್ಳಬೇಕು. ಬೇರೆಯವರ ಭಾವನೆಗೂ ಗೌರವ ಕೊಡಬೇಕು.
>
> ■ **ಸುಬ್ರಾಯ ದೇವಡಿಗ.ಬಿಜೆಪಿ ಜಿಲ್ಲಾ ಕಾರ್ಯದರ್ಶಿ**

ಹಿಂದೂ ಜಾಗರಣ ವೇದಿಕೆಯ ಸಂಚಾಲಕ ಜಯಂತ ನಾಯ್ಕ, ಪ್ರಮುಖರಾದ ಭಾಸ್ಕರ ದೈಮನೆ, ನಾಗರಾಜ ನಾಯ್ಕ, ಸುಬ್ರಾಯ ನಾಯ್ಕ ಮುಂತಾದವರಿದ್ದರು.

ತಪ್ಪು ಮಾಹಿತಿ ಪೋಸ್ಟ್ ಮಾಡಿದರೆ ಕ್ರಮ: ಡಿಸಿ

◆ **ಭಟ್ಕಳ:** ನಗರದ ಮೂಲಕ ಹಾದುಹೋಗುವ ರಾ.ಹೆ-66 ರ ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಸಮಯದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದ ಹಾಗೆ ಅಮ್ಮನವರ ಹೊರೆಯನ್ನಿಡುವ ಮುರುವಿನಕಟ್ಟೆಯನ್ನು ಎನ್‌ಎಚ್‌ಎಐ ರವರಿಂದ ಆರ್‌ಒಡಬ್ಲ್ಯೂ ವ್ಯಾಪ್ತಿಯಲ್ಲಿ ಲಭ್ಯ ಸರ್ಕಾರಿ ಜಮೀನಿನಲ್ಲಿ ಮೇ 24ರಂದು ಕೆಂಪು ಕಲ್ಲಿನಿಂದ ಕಟ್ಟಲಾಗುತ್ತಿರುವ ಸಂರಚನೆಯನ್ನು ಯಾರೋ ಕಿಡಿಗೇಡಿಗಳು ನಾಶಪಡಿಸಿದ್ದು, ಸದರಿಯವರ ಮೇಲೆ ಎಲ್ಲ ರೀತಿಯ ಕಾನೂನು ಕ್ರಮ ಜರುಗಿಸಲಾಗುತ್ತಿದೆ ಎಂಬುದಾಗಿ ಈಗಾಗಲೇ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಲಾಗಿದೆ.

ಮುಂದುವರೆದು ಸಾಂಪ್ರದಾಯಿಕವಾಗಿ ಅಮ್ಮನವರ ಹೊರೆಯನ್ನಿಡಲಾಗುತ್ತಿರುವ ಮೂಲಕಟ್ಟೆಯಿರುವ ಮುರುವಿನಕಟ್ಟೆ ಸ್ಥಳವು ಯಥಾಸ್ಥಿತಿಯಲ್ಲಿರುವ ಬಗ್ಗೆಯೂ ಸಹ ಪ್ರಕಟಣೆಯಲ್ಲಿ ತಿಳಿಯಪಡಿಸಲಾಗಿರುತ್ತದೆ.

ಆದರೆ ಕೆಲವು ಸಮಾಜಘಾತುಕ ಶಕ್ತಿಗಳು ಸಾಮಾಜಿಕ ಜಾಲತಾಣಗಳಲ್ಲಿ ತಪ್ಪಾದ ಹಾಗೂ ಸುಳ್ಳು ಮಾಹಿತಿಯನ್ನು ಹರಿಬಿಟ್ಟು ಮೂಲ ಮುರುವಿನಕಟ್ಟೆಗೆ ಧಕ್ಕೆಯಾಗಿರುವ ರೀತಿಯಲ್ಲಿ ಸುದ್ದಿಯನ್ನು ಪ್ರಸಾರ ಮಾಡುತ್ತಿರುವುದು ಕಂಡುಬಂದಿದೆ. ಕಾರಣ ಸಾರ್ವಜನಿಕರು ಇಂತಹ ಸುದ್ದಿಗಳನ್ನ ನಂಬಬಾರದಾಗಿ ಈ ಮೂಲಕ ಕೋರಲಾಗಿದೆ.

ಸಾಂಪ್ರದಾಯಿಕವಾಗಿ ಅಮ್ಮನವರ ಹೊರೆಯನ್ನಿಡುವ ಮೂಲ ಸ್ಥಳ ಮುರುವಿನಕಟ್ಟೆಯು ಯಥಾಸ್ಥಿತಿಯಲ್ಲಿ ರುತ್ತದೆ ಎಂಬುದಾಗಿ ಮತ್ತೊಮ್ಮೆ ಸ್ಪಷ್ಟೀಕರಣ ನೀಡಲಾಗಿದೆ. ಮುಂದುವರೆದು ಯಾರಾದರೂ ಇಂತಹ ಸುಳ್ಳು ಹಾಗೂ ತಪ್ಪು ಮಾಹಿತಿಯನ್ನು ಸಾಮಾಜಿಕ ಜಾಲತಾಣದ ಮೂಲಕ ಪೋಸ್ಟ್ ಮಾಡಿದಲ್ಲಿ ಅಂತಹವರ ವಿರುದ್ಧ ಕಾನೂನಿನಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಕೆ. ಲಕ್ಷ್ಮಿ ಪ್ರಿಯಾ ಸೂಚಿಸಿದ್ದಾರೆ.

ಬಿಜೆಪಿ ಮಂಡಲದಿಂದ ಇಂದು ಪ್ರತಿಭಟನೆ

◆ **ಸಿದ್ದಾಪುರ:** ಪಟ್ಟಣದ ಕೊಂಡ್ಲಿ ಗ್ರಾಮದ ಸರ್ವೆ ನಂಬರ್ 100/ಬ ಇದರ ಒಂದು ಎಕರೆ ಪಟ್ಟಣ ಪಂಚಾಯತ ಜಾಗವನ್ನು ಅತಿಕ್ರಮಣ ಮಾಡಲು ಹುನ್ನಾರ ಮಾಡಲಾಗುತ್ತಿದೆ. ಅಲ್ಲಿರುವ ಉರ್ದು ಶಾಲೆ ಬೇರೆಡೆಗೆ ಸ್ಥಳಾಂತರಗೊಂಡಿದ್ದರೂ ಮತ್ತೆ ಉರ್ದು ಶಾಲೆಯನ್ನು ಅಲ್ಲೇ ಪ್ರಾರಂಭಿಸುವ ಉದ್ದೇಶದಿಂದ ಶಿಥಿಲಗೊಂಡು ಕುಸಿಯುವ ಹಂತದಲ್ಲಿರುವ ಅಪಾಯಕಾರಿಯಾಗಿರುವ ಕಟ್ಟಡವನ್ನು ತೆರವುಗೊಳಿಸದೇ ತಡೆಗೋಡೆ ನಿರ್ಮಾಣಕ್ಕೆ ತಯಾರಾಗಿರುವುದನ್ನು ವಿರೋಧಿಸಿ ಸಾರ್ವಜನಿಕರ ಆಸ್ತಿ ರಕ್ಷಣೆಗಾಗಿ ಮೇ 27 ರಂದು ಬೆಳಿಗ್ಗೆ 10 ಗಂಟೆಗೆ ತಹಶೀಲ್ದಾರರ ಕಚೇರಿ ಆವರಣದಲ್ಲಿ ಬಿಜೆಪಿ ಸಿದ್ದಾಪುರ ಮಂಡಲದಿಂದ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದೇವೆ.

ಈ ಪ್ರತಿಭಟನೆಯಲ್ಲಿ ತಾಲೂಕಿನ ಸಮಸ್ತ ನಾಗರಿಕರು, ಪಕ್ಷದ ಮುಖಂಡರು, ಪಕ್ಷದ ವಿವಿಧ ಮೋರ್ಚಾಗಳ ಅಧ್ಯಕ್ಷರುಗಳು, ಬೂತ್ ಅಧ್ಯಕ್ಷರುಗಳು, ಪದಾಧಿಕಾರಿಗಳು, ಕಾರ್ಯಕರ್ತರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಬಿಜೆಪಿ ಸಿದ್ದಾಪುರ ಮಂಡಲ ಅಧ್ಯಕ್ಷ ತಿಮ್ಮಪ್ಪ ಎಂ.ಕೆ.ಪ್ರಕಟಣೆಯ ಮೂಲಕ ಕೋರಿದ್ದಾರೆ.

ಗೋ ಹತ್ಯೆ, ಕಳ್ಳತನ ತಡೆಯಲು ಮನವಿ

◆ **ಮುಂಡಗೋಡ:** ಗೋ ಹತ್ಯೆ, ಗೋ ಕಳ್ಳತನ ಹಾಗೂ ಗೋ ಮಾಂಸ ಸಾಗಾಟ ಕುರಿತು ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಮಂಗಳವಾರ ತಾಲೂಕಿನ ಹಿಂದೂಪರ ಸಂಘಟನೆಗಳು ಪೊಲೀಸ್ ಠಾಣೆ ಮತ್ತು ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಮುಂಡಗೋಡ ತಾಲೂಕಿನಲ್ಲಿ ನಿರಂತರವಾಗಿ ಗೋ ಕಳ್ಳತನ, ಗೋ ಹತ್ಯೆ ಹಾಗೂ ಗೋಮಾಂಸ ಸಾಗಾಟದ ಪ್ರಕರಣಗಳು ನಡೆಯುತ್ತಿರುವ ಬಗ್ಗೆ ಸಾರ್ವಜನಿಕರಲ್ಲಿ ಆತಂಕ ಉಂಟಾಗಿದೆ. ಪಕ್ಕದ ತಾಲೂಕುಗಳಾದ ಸವಣೂರು, ಹಾನಗಲ್, ಬಂಕಾಪುರ, ಹುಬ್ಬಳ್ಳಿ ಹಾಗೂ ಕಲಘಟಗಿ ಭಾಗಗಳಿಂದ ಅಕ್ರಮವಾಗಿ ಗೋಮಾಂಸ ಸಾಗಾಟ ನಡೆಯುತ್ತಿರುವ ಮಾಹಿತಿ ಲಭ್ಯವಾಗುತ್ತಿದೆ. ಜೊತೆಗೆ ನಗರದ ಕೆಲವು ಬಿರಿಯಾನಿ ಹೋಟೆಲ್‌ಗಳಲ್ಲಿ ಗೋಮಾಂಸದಿಂದ ತಯಾರಿಸಿದ ಆಹಾರ ಪದಾರ್ಥಗಳು ಮಾರಾಟವಾಗುತ್ತಿರುವ ಬಗ್ಗೆ ಸಾರ್ವಜನಿಕ ವಲಯದಲ್ಲಿ ಆರೋಪಗಳು ಕೇಳಿಬರುತ್ತಿವೆ.

ತಾಲೂಕಿನ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಅಮಾಯಕ ಗೋವುಗಳನ್ನು ಕಳ್ಳ ಸಾಗಾಣಿಕೆ ಮೂಲಕ ವಧೆ ಉದ್ದೇಶಕ್ಕಾಗಿ ಸಾಗಿಸಲಾಗುತ್ತಿದ್ದು, ನಗರದ ಬನ್ನಿಕಟ್ಟೆ ಸಮೀಪ ಅನಧಿಕೃತ ಕಸಾಯಿಖಾನೆ ಕಾರ್ಯ ನಿರ್ವಹಿಸುತ್ತಿದೆ ಎಂಬ ಮಾಹಿತಿ ಇದ್ದರೂ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡಿಲ್ಲ ಎಂಬುದು ಸಾರ್ವಜನಿಕರ ಅಸಮಾಧಾನ ವ್ಯಕ್ತವಾಗುತ್ತಿದೆ. ಈ ಕುರಿತು ಹಿಂದೂಪರ ಸಂಘಟನೆಗಳು ಹಾಗೂ ಸಾರ್ವಜನಿಕರು ಅನೇಕ ಬಾರಿ ಸಂಬಂಧಪಟ್ಟ ಇಲಾಖೆಗಳಿಗೆ ಮತ್ತು ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಇದುವರೆಗೆ ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗಿಲ್ಲ, ಸಾರ್ವಜನಿಕರಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ, ತಕ್ಷಣ ಕ್ರಮ ನಮ್ಮ ಮನವಿಯನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳುವಂತೆ ಅವರು ನೀಡಿದ ಮನವಿಯಲ್ಲಿ ತಿಳಿಸಿದ್ದಾರೆ. ಮುಖಂಡರಾದ ಪ್ರಕಾಶ ಬಡಿಗೇರ, ಶಂಕರ್ ಲಮಾಣಿ, ಮಂಜು ಹರಿಜನ, ವಿಶ್ವನಾಥ ನಾಯರ, ತಗಂ ಚಿನ್ನನ್, ಮಂಜುನಾಥ ಪಾಟೀಲ, ಸುರೇಶ ಕಲ್ಲೊಳ್ಳಿ, ರಾಕೇಶ್ ಹಿರೇಮಠ, ಭರತ್ ಹದಲಗಿ, ಚಿದಾನಂದ್ ಬಡಿಗೇರ, ಮಲ್ಲಿಕಾರ್ಜುನ ಗೌಳಿ, ಶ್ರೀಕಾಂತ ಭೋವಿ, ಸಂಜು ಹರಿಜನ ಸೇರಿದಂತೆ ಇತರರಿದ್ದರು.



ನೂತನ ಅಂಗನವಾಡಿ ಕಟ್ಟಡದ ಉದ್ಘಾಟನೆ



◆ **ದಾಂಡೇಲಿ:** ನಗರದ ಹಳೆ ದಾಂಡೇಲಿಯ ಲಮಾಣಿಚಾಳದಲ್ಲಿ ವೆಸ್ಟ್ ಕೋಸ್ಟ್ ಕಾಗದ ಕಾರ್ಖಾನೆಯು ಕಂಪನಿಯ ಸಾಮಾಜಿಕ ಹೊಣೆಗಾರಿಕೆ ಯೋಜನೆಯಡಿ ನಿರ್ಮಿಸಲಾದ ನೂತನ ಅಂಗನವಾಡಿ ಕಟ್ಟಡವನ್ನು ಸೋಮವಾರ ಶಾಸಕ ಆರ್ .ವಿ.ದೇಶಪಾಂಡೆ ಉದ್ಘಾಟಿಸಿದರು.

ಆರ್.ವಿ. ದೇಶಪಾಂಡೆ ಮಾತನಾಡಿ, ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಪೌಷ್ಟಿಕ ಆಹಾರ, ಪೂರ್ವ ಪ್ರಾಥಮಿಕ ಶಿಕ್ಷಣ ಹಾಗೂ ಅಂಗನವಾಡಿ ಕೇಂದ್ರಗಳು ಮಹತ್ವದ ಪಾತ್ರ ವಹಿಸುತ್ತವೆ. ಈ ನೂತನ ಅಂಗನವಾಡಿ ಕೇಂದ್ರವು ಸ್ಥಳೀಯ ಮಕ್ಕಳಿಗೆ ಉತ್ತಮ ಶೈಕ್ಷಣಿಕ ಹಾಗೂ ಆರೋಗ್ಯಕರ ವಾತಾವರಣ ಒದಗಿಸುವುದರೊಂದಿಗೆ ಸ್ಥಳೀಯ ಜನತೆಗೆ ಅನುಕೂಲವಾಗಲಿದೆ ಎಂದರು.

ವೆಸ್ಟ್‌ಕೋಸ್ಟ್‌ಕಾಗದಕಾರ್ಖಾನೆಯ ಸಾಮಾಜಿಕ ಹಾಗೂ ಶೈಕ್ಷಣಿಕ ಕಾಳಜಿ ಮತ್ತು ಬದ್ಧತೆಯನ್ನು ಕೊಂಡಾಡಿ, ಕೃತಜ್ಞತೆಗಳನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಪೌರಾಯುಕ್ತ ವಿವೇಕ ಬನ್ನೆ, ಸಿಡಿಪಿಒ ಸಿದ್ದಲಿಂಗಪ್ಪ ಕೊರವರ, ಪಂಚ ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ರಿಯಾಜ್ ಬಾಬು ಸೈಯದ್, ಕಾರ್ಖಾನೆಯ ಸಾರ್ವಜನಿಕ ಸಂಪರ್ಕಾಧಿಕಾರಿಗಳಾದ ರಾಘವೇಂದ್ರ ಜೆ.ಆರ್ ಮತ್ತು ರಾಜೇಶ ತಿವಾರಿ, ಮಾಜಿ ನಗರ ಸಭಾ ಸದಸ್ಯರಾದ ಅನಿಲ್ ನಾಯ್ಕರ ಮತ್ತು ರಾಮಲಿಂಗಜಾಧವ, ಮುಖಂಡರಾದ ಆರ್.ಪಿ.ನಾಯ್ಕ, ದಿವಾಕರ ನಾಯ್ಕ, ರಫೀಕ್ ಖಾನ್, ಉದ್ಯಮಿ ಮಹೇಶ ನಾಯ್ಕ, ಅಂಗನವಾಡಿ ಮೇಲ್ವಿಚಾರಿಲಿ ಮಂಜುಳಾ ಟೋನಿ, ಅಂಗನವಾಡಿ ಕಾರ್ಯಕರ್ತೆ ಅಮೀನಾ ಖಾನ್, ಸಹಾಯಕಿ ತಾರಾವತಿ ಹಾಗೂ ವಿವಿಧ ಅಂಗನವಾಡಿ ಕೇಂದ್ರಗಳ ಕಾರ್ಯಕರ್ತರು ಸಹಾಯಕರು, ಸ್ಥಳೀಯ ಸಾರ್ವಜನಿಕರು ಉಪಸ್ಥಿತರಿದ್ದರು.

ತಲೆಮರೆಸಿಕೊಂಡಿದ್ದ ಆರೋಪಿ ಬಂಧನ

◆ **ಮುಂಡಗೋಡ:** ವ್ಯಕ್ತಿಯೊಬ್ಬ 10 ವರ್ಷದಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಇಲ್ಲಿನ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಚಿತ್ರದುರ್ಗದ ಜಿಲ್ಲೆಯ ಹೊಸದುರ್ಗ ತಾಲೂಕಿನ ಗಂಜಿಗೇರಿ ಗ್ರಾಮದ ಗವಿರಾಜ ಯಾನೆ ಮಂಜು ಯಾನೆ ದೇವರಾಜ ಬಂಧಿತ ಆರೋಪಿ. ಈತನ ವಿರುದ್ಧ ಮುಂಡಗೋಡ ಪೊಲೀಸ್ ಠಾಣೆಯಲ್ಲಿ ಒಂದು ಪ್ರಕರಣ ಮತ್ತು ಬನವಾಸಿ ಪೊಲೀಸ್ ಠಾಣೆಯಲ್ಲಿ ಐದು ಪ್ರಕರಣ ದಾಖಲಾಗಿದೆ.

ಕಳೆದ 10 ವರ್ಷದಿಂದ ನ್ಯಾಯಾಲಯದ ಮುದ್ದತ್ತಗೆ ಹಾಜರಾಗದೆ ತಲೆಮರೆಸಿಕೊಂಡು ಓಡಾಡುತ್ತಿದ್ದ. ನ್ಯಾಯಾಲಯವು ಈತನ ವಿರುದ್ಧ ಬಂಧನದ ವಾರೆಂಟ್ ಜಾರಿ ಮಾಡಿತ್ತು. ಪೊಲೀಸರು ಆರೋಪಿಯನ್ನು ಬಂಧಿಸಿಸಲು ವಿಶೇಷ ತಂಡ ರಚಿಸಿ ಖಚಿತ ಮಾಹಿತಿ ಮೇರೆಗೆ ಸೋಮವಾರ ಬೆಂಗಳೂರಿನ ಹೆಬ್ಬಗೋಡಿಯಲ್ಲಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ನ್ಯಾಯಾಲಯವು ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಿದೆ.

ಮೇಲಾಧಿಕಾರಿಗಳ ಮಾರ್ಗ ದರ್ಶನದಲ್ಲಿ ಇಲ್ಲಿನ ಸಿಪಿಐ ರಮೇಶ ಹಾನಪುರ, ಪಿಎಸ್‌ಐ ಮಂಜುನಾಥ ಗೌಡರ, ಬನವಾಸಿ ಪಿಎಸ್‌ಐ ಮಾಹಾಂತೇಶ ಕಂಬಾರ, ರವೀಂದ್ರ ಬೀರಾದರ ನೇತೃತ್ವದಲ್ಲಿ ಸಿಬ್ಬಂದಿಗಳಾದ ಅನ್ವರ್ ಬಮ್ಮಿಗಟ್ಟಿ, ಶಿವಾನಂದ, ಶರತ್ ಮಂಜುನಾಥ ಕಾರ್ಯಾಚರಣೆಯಲ್ಲಿದ್ದರು.



ಹಣ ಹೂಡಿಕೆ ನೆಪದಲ್ಲಿ ವಂಚನೆ: ದೂರು ದಾಖಲು

◆ **ಅಂಕೋಲಾ:** ಆನ್‌ಲೈನ್ ಹೂಡಿಕೆ ಹೆಚ್ಚಿನ ಲಾಭಾಂಶದ ಹೆಸರಿನಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಬರುವ ಸೈಬರ್ ವಂಚಕರ ಜಾಲದ ಕುರಿತಂತೆ ಪೊಲೀಸ್ ಇಲಾಖೆಯ ವತಿಯಿಂದ ಸಾಕಷ್ಟು ಜನಜಾಗೃತಿ ಮೂಡಿಸುವ ಕಾರ್ಯ ಒಂದೆಡೆ ನಡೆಯುತ್ತಿದ್ದರೂ ವಂಚಕರ ಜಾಲಕ್ಕೆ ಸಿಲುಕಿ ಮೋಸ ಹೋಗುವವರ ಸಂಖ್ಯೆ ಹೆಚ್ಚುತ್ತಲೇ ಇದ್ದು ಟ್ರೇಡಿಂಗ್ ಆ್ಯಪ್ ಒಂದರಲ್ಲಿ ಹಣ ಹೂಡಿಕೆ ಮಾಡಿರುವ ವ್ಯಕ್ತಿಯೋರ್ವರು ಲಕ್ಷಾಂತರ ರೂಪಾಯಿ ಹಣ ಕಳೆದುಕೊಂಡಿರುವ ಕುರಿತಂತೆ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಅಂಕೋಲಾ ತಾಲೂಕಿನ ಮಠಾಕೇರಿಯ ನಿವಾಸಿ ರಾಮನಾಥ ಪೂರ್ಣಾನಂದ ಭಟ್ಟ(44) ವಂಚಕರ ಜಾಲದಿಂದ ಮೋಸ ಹೋಗಿರುವ ವ್ಯಕ್ತಿಯಾಗಿದ್ದು ಸುಮಾರು16.78 ಲಕ್ಷ ರೂಪಾಯಿ ಹಣವನ್ನು ಇವರಿಂದ ಹೂಡಿಕೆಯ ಹೆಸರಲ್ಲಿ ಪಡೆದು ವಂಚಿಸಲಾಗಿದೆ.

ರಾಮನಾಥ ಅವರು 2026 ರ ಮಾರ್ಚ 28ರಂದು ಸಾಮಾಜಿಕ ಜಾಲತಾಣ ಬಳಸುತ್ತಿರುವ ಸಂದರ್ಭದಲ್ಲಿ ಅವರಿಗೆ ಸಂದೇಶವೊಂದು ಬಂದಿದ್ದು ಸ್ಮಾರ್ಟ್ ವೈಸ್ ಕ್ವಾಂಟ್ ಫಂಡ್ ಎಂಬ ಕಂಪನಿಯಲ್ಲಿ ಹೂಡಿಕೆ ಮಾಡಿದರೆ ಅತಿ ಹೆಚ್ಚಿನ ಲಾಭಾಂಶ ಪಡೆಯಬಹುದು ಎಂದು ನಮೂದಿಸಿ ವಾಟ್ಸಪ್ ಗುಂಪಿನ ಲಿಂಕ್ ನೀಡಲಾಗಿತ್ತು, ರಾಮನಾಥ ಅವರು ಲಿಂಕ್ ಕ್ಲಿಕ್ ಮಾಡಿದಾಗ ಅದೇ ಕಂಪನಿಯ ಹೆಸರಿನ ಬೆಂಗಳೂರು ಟೀಮ್ ಎಂಬ ಟ್ರೇಡಿಂಗ್ ಆಪ್ ನ ವಾಟ್ಸಪ್ ಗ್ರೂಪಿಗೆ ಸೇರ್ಪಡೆಯಾದ್ದು ಗ್ರೂಪ್ ಆಡ್ಮಿನ್ ಆಗಿರುವ ಅನನ್ಯಾ,ದಿವ್ಯಾ ಮತ್ತು ಮೀರಾ ಎನ್ನುವವರು ಟ್ರೇಡಿಂಗ್ ಆಫ್ ನಲ್ಲಿ ಹಣ ಹೂಡಿಕೆ ಮಾಡಿ ಹೆಚ್ಚಿನ ಲಾಭಾಂಶ ಪಡೆಯುವ ಕುರಿತಂತೆ ತರಬೇತಿ ನೀಡುತ್ತಿದ್ದರು.



ಅವರ ಮಾತನ್ನು ನಂಬಿದ ರಾಮನಾಥ ಅವರು 2026 ಮಾರ್ಚ್ 28 ರಿಂದ ಮೇ14 ರ ವರೆಗೆ ಅವರು ನೀಡಿರುವ ವಿವಿಧ ಖಾತೆಗಳಿಗೆ 16,78,052 ರೂಪಾಯಿ ಹಣ ಜಮಾ ಮಾಡಿದ್ದು ಯಾವುದೇ ರೀತಿಯ ಲಾಭಾಂಶವಾಗಲಿ ಹೂಡಿಕೆ ಮಾಡಿರುವ ಹಣವಾಗಲಿ ಮರಳಿ ಬರದೇ ಇರುವುದರಿಂದ ಇದೀಗ ಕಾರವಾರದ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡ ಸೈಬರ್ ಅಪರಾಧ ವಿಭಾಗದ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ವಿವಿಧ ಕಡೆಗಳಲ್ಲಿ ಜನಸಾಮಾನ್ಯರು ಸೈಬರ್ ವಂಚಕರ ಜಾಲಕ್ಕೆ ಸಿಲುಕಿ ಲಕ್ಷಾಂತರ ರೂಪಾಯಿ ಹಣ ಕಳೆದುಕೊಂಡಿರುವ ಘಟನೆಗಳು ಇತ್ತೀಚೆಗೆ ಹೆಚ್ಚಿದ್ದು ಮೊಬೈಲಿಗೆ ಬರುವ ಅಪರಿಚಿತ ಲಿಂಕ್ ಮತ್ತು ಎಪಿಕೆ ಫೈಲುಗಳನ್ನು ತೆರೆಯದಂತೆ, ಆನ್ ಲೈನ್ ಟ್ರೇಡಿಂಗ್ ಮತ್ತು ಹಣ ದ್ವಿಗುಣ ಮಾಡುವ ಕುರಿತಂತೆ ಬರುವ ವಾಟ್ಸಪ್ ಗ್ರೂಪುಗಳಿಂದ ದೂರವಿದ್ದು ಯಾವುದೇ ರೀತಿಯ ಪ್ರತಿಕ್ರಿಯೆ ತೋರದಂತೆ,ಪೊಲೀಸ್ ಇಲಾಖೆ ಅಥವಾ ಸರ್ಕಾರಿ ಅಧಿಕಾರಿಗಳ ಹೆಸರಿನಲ್ಲಿ

ವಿಡಿಯೋ ಕರೆ ಮಾಡಿ ವಿಚಾರಣೆ ನಡೆಸುವುದಾಗಿ ಹೆದರಿಸಿದರೆ, ಹಣಕ್ಕಾಗಿ ಬೇಡಿಕೆಯಿಟ್ಟರೆ ಹಣ ನೀಡದಂತೆ ತಕ್ಷಣ 1930 ಸಂಖ್ಯೆಗೆ ಕರೆ ಮಾಡಿ ದೂರು ಸಲ್ಲಿಸುವಂತೆ ಉತ್ತರ ಕನ್ನಡ ಜಿಲ್ಲಾ ಪೊಲೀಸ್ ಇಲಾಖೆಯಿಂದ ಸೂಚಿಸಲಾಗಿದೆ.

ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಹದಗೆಟ್ಟಿದೆ: ಶಾಸಕ ದಿನಕರ ಶೆಟ್ಟಿ

◆ **ಹೊನ್ನಾವರ:** ನೆರೆಯ ಭಟ್ಕಳ ತಾಲೂಕಿನ ಮೂರಿನಕಟ್ಟೆ ಪುನರ್ ನಿರ್ಮಾಣ ಶತಸಿದ್ಧ, ಈ ಬಗ್ಗೆ ರಾಜ್ಯ ಬಿಜೆಪಿ ನಾಯಕರೊಂದಿಗೆ ಸಮಾಲೋಚಿಸಿ ಮುಂದಿನ ಹೋರಾಟ ನಡೆಸುವುದಾಗಿ ಕುಮಟಾ- ಹೊನ್ನಾವರ ಕ್ಷೇತ್ರದ ಶಾಸಕ ದಿನಕರ ಶೆಟ್ಟಿ ಹೇಳಿದರು.

ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ, ಯಾರೂ ಏನೂ ಮಾಡಲು ಸಾಧ್ಯವಿಲ್ಲ ಎನ್ನುವಂತೆ ಅನ್ಯ ಕೋಮಿನ ಕೆಲವು ದುಷ್ಕರ್ಮಿಗಳ ಅಟ್ಟಹಾಸ ನಡೆಸುತ್ತಿದ್ದಾರೆ. ವೆಂಕಟಾಪುರ ನದಿಯಲ್ಲಿ 11 ಜನರ ಮೃತಪಟ್ಟಿರುವ ಶೋಕಾಚರಣೆಯಲ್ಲಿರುವಾಗ, ಭಟ್ಕಳದ ಮೂರಿನಕಟ್ಟೆಯನ್ನು ಧ್ವಂಸಗೊಳಿಸಿದ ಪ್ರಕರಣ ಹಿಂದು ಸಮಾಜದವರಿಗೆ ತುಂಬಾ ನೋವಾಗಿದೆ.

ಈ ಹಿಂದೆ ಐ ಆರ್ ಬಿ ರಸ್ತೆ ಅಗಲೀಕರಣ ಸಮಯದಲ್ಲಿ ತೆರವಾಗಿ ಅಲ್ಲೆ ಸನಿಹದಲ್ಲಿ ಪುನಃ ನಿರ್ಮಾಣ ಮಾಡಿದಾಗ ಹಾನಿ ಮಾಡಿದ್ದಾರೆ. ಅದನ್ನು ತಡೆಯಲು ಯತ್ನಿಸಿದ ಪೊಲೀಸ್ ಸಿಬ್ಬಂದಿಯ ಮೇಲೆಯೇ ಉದ್ರಿಕ್ತ ಗುಂಪು ಹಲ್ಲೆ ನಡೆಸಿದ್ದಾರೆ. ಹಿಂದುಗಳು ಮುಸ್ಲಿಂ ಧರ್ಮದವರ ಆಚರಣೆಗೆ ತೊಂದರೆ ಕೊಟ್ಟಿಲ್ಲ, ಆದರೆ ಸದಾ ಕಾಲ ನಮ್ಮ ಧರ್ಮದ ಆಚರಣೆಗೆ ಅನ್ಯ ಕೋಮಿನವರು ಅಡ್ಡಿ ಪಡಿಸುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರದ ನಿರಂತರ ತುಷ್ಟೀಕರಣ ಮತ್ತು ಓಲೈಕೆಯ ರಾಜಕೀಯ, ಸಮಾಜವಿರೋಧಿ ಶಕ್ತಿಗಳಿಗೆ ಧೈರ್ಯ ನೀಡಿರುವುದೇ ರಾಜ್ಯದಲ್ಲಿ ಇಂತಹ ಘಟನೆ ನಡೆಯುತ್ತಿದೆ ಎಂದು ಆರೋಪಿಸಿದರು.



ಈ ಘಟನೆಯಿಂದ ಹಿಂದುಗಳ ಭಾವನೆಗೆ ದಕ್ಕೆಯಾಗಿದೆ. ಈ ಸ್ಥಳದಲ್ಲಿ ಕಟ್ಟೆ ನಿರ್ಮಾಣ ಶತಸಿದ್ದ. ಹಿಂದು ಸಮಾಜದವರೆಲ್ಲ ಒಟ್ಟಾಗಿ ನಿರ್ಮಾಣ ಮಾಡುತ್ತೇವೆ. ಜಿಲ್ಲೆಯಲ್ಲಿ ನಾನು ಬಿಜೆಪಿಯ ಓರ್ವ ಶಾಸಕನಾಗಿದೇನೆ. ನಾನು ರಾಜ್ಯದ ನಾಯಕರೊಂದಿಗೆ ಸಮಾಲೋಚಿಸಿ ಅಧಿವೇಶನದಲ್ಲಿ ಈ ವಿಷಯ ಪ್ರಸ್ತಾಪಿಸಿ ನಿರ್ಮಾಣ ನಡೆಸದಾಗಿ ತಿಳಿಸಿದರು. ಈ ವಿಷಯದ ಬಗ್ಗೆ ಪೊಲೀಸರು ಎಷ್ಟೆ ಪ್ರಕರಣ ದಾಖಲಿಸಿದರು ಹಿಂದಕ್ಕೆ ಸರಿಯುವ ಪ್ರಶ್ನೆಯೆ ಇಲ್ಲ ಎಂದರು.

> ಭಟ್ಕಳದ ತಟ್ಟಿಹಕ್ಕಲು ಸಮೀಪ ನಡೆದ ದುರಂತದಲ್ಲಿ 11 ಜನರು ಮೃತಪಟ್ಟಿದ್ದಾರೆ. ಈ ಘಟನೆಯಿಂದ ಮನಸ್ಸಿಗೆ ನೋವಾಗಿದೆ. ಮೃತಪಟ್ಟಿರುವರಿಗೆ ಕೇಂದ್ರ ಸರ್ಕಾರ 2 ಲಕ್ಷ ಪರಿಹಾರ ಗಾಯಗೊಂಡವರಿ 50 ಸಾವಿರ ಪರಿಹಾರ ಘೋಷಣೆ ಮಾಡಿದೆ. ಕುಟುಂಬದವರಿಗೆ ನೋವು ಭರಿಸುವ ಶಕ್ತಿ ಆ ಭಗವಂತ ನೀಡಲಿ.
>
> ■ **ದಿನಕರ ಶೆಟ್ಟಿ, ಶಾಸಕ**

ಪತ್ರಿಕಾಗೋಷ್ಠಿಯಲ್ಲಿ ಮಂಡಲಧ್ಯಕ್ಷ ಯೋಗೇಶ ಮೇಸ್ತ, ಪ್ರಧಾನ ಕಾರ್ಯದರ್ಶಿ ಗೋವಿಂದ ಗೌಡ, ಪರಮೇಶ್ವರ ನಾಯ್ಕ ಹಳದೀಪುರ, ಮಾಜಿ ಪ.ಪಂ. ಉಪಾಧ್ಯಕ್ಷ ಸುರೇಶ ಹೊನ್ನಾವರ, ಸದಸ್ಯ ಸುಭಾಸ ಹರಿಜನ, ಮುಖಂಡರಾದ ಎಂ.ಎಸ್. ಹೆಗಡೆ ಕಣ್ಣಿ, ನಾರಾಯಣ ಹೆಗಡೆ, ಪರಮೇಶ್ವರ ಮಡಿವಾಳ, ಶಿವಾನಂದ ಮರಾಠಿ, ಕೇಶವ ಗೌಡ ಮತ್ತಿತರಿದ್ದರು.

ಕಿರುಸುದ್ದಿ

ಪಾದಚಾರಿಗೆ ಹಿಂದಿನಿಂದ ಗುದ್ದಿದ ಕಾರು: ಸಾವು

ಹಾವೇರಿ: ರಸ್ತೆಯ ಎಡಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಪಾದಚಾರಿಗೆ ಹಿಂಬದಿಯಿಂದ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ಗೌರಾಪುರ ಗ್ರಾಮದಲ್ಲಿ ನಡೆದಿದೆ.

ಗೌರಾಪುರ ಗ್ರಾಮದ ಫಕ್ಕೀರಪ್ಪ ಭರಮಪ್ಪ ಮರಲಿಂಗಣ್ಣನವರ ಎಂಬುವವರೇ ಮೃತಪಟ್ಟವರು. ಯಾವುದೋ ಅಪರಿಚಿತ ಕಪ್ಪು ಬಣ್ಣದ ಕಾರಿನ ಚಾಲಕ ಸಂಗೂರು ಕಡೆಯಿಂದ ಹಾವೇರಿ ಕಡೆಗೆ ವೇಗವಾಗಿ ಹೋಗುತ್ತಿರುವಾಗ ಗೌರಾಪುರ ಗ್ರಾಮದ ಬಳಿ ನಡೆದುಕೊಂಡು ಹೋಗುತ್ತಿದ್ದ ಪಾದಾಚಾರಿಗೆ ಡಿಕ್ಕಿ ಹೊಡೆದು ಪರಾರಿಯಾಗಿದ್ದಾರೆ.

ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ವ್ಯಕ್ತಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಕಾರಿನ ಚಾಲಕನ ಹೆಸರು ವಿಳಾಸ ತಿಳಿದುಬಂದಿಲ್ಲ ಎಂದು ಮೃತರ ಮಗ ಚನ್ನಪ್ಪ ಫಕ್ಕೀರಪ್ಪ ಮರಲಿಂಗಣ್ಣವರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್ ಸ್ಕಿಡ್, ಮೂವರಿಗೆ ಗಾಯ

ಹಾವೇರಿ: ನಗರದ ಹೊರವಲಯದಲ್ಲಿರುವ ಬೈಪಾಸ್‌ನಲ್ಲಿ ಬೈಕ್ ನಿಯಂತ್ರಿಸಲಾಗದೆ ಸ್ಕಿಡ್ ಆಗಿ ಬಿದ್ದು, ಮೂವರು ಗಾಯಗೊಂಡಿರುವ ಘಟನೆ ನಡೆದಿದೆ. ಹಾನಗಲ್ ತಾಲೂಕು ಬಾಳೂರ ಗ್ರಾಮದ ಬೈಕ್ ಸವಾರ ಮಹ್ಮದರೇಹಾನ್ ದೊಡ್ಡಮನಿ, ಪತ್ನಿ ಸರತಾಜಬಾನು ಹಾಗೂ ಒಂದೂವರೆ ವರ್ಷದ ಮಗಳು ಆರ್ಮಿ ಫಾತೀಮಾ ಗಾಯಗೊಂಡವರು.

ಆರೋಪಿ ಬೈಕ್ ಸವಾರ ಬಂಕಾಪುರ ಕಡೆಯಿಂದ ಹಾವೇರಿ ಕಡೆಗೆ ವೇಗವಾಗಿ ಮತ್ತು ನಿರ್ಲಕ್ಷ್ಯತನದಿಂದ ಬೈಕ್ ಚಲಾಯಿಸಕೊಂಡು ಬಂದು ನಗರದ ಹೊರವಲಯದಲ್ಲಿ ಬೈಕ್ ನಿಯಂತ್ರಿಸಲಾಗದೆ ಬಿದ್ದು ಅಪಘಾತಕ್ಕೀಡಾಗಿದ್ದಾರೆ.

ಗಾಯಾಳುಗಳನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿ ಕಿಮ್ಸ್‌ಗೆ ದಾಖಲಿಸಲಾಗಿದೆ ಎಂದು ಮಹ್ಮದಹನೀಫ ದೊಡ್ಡಮನಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತೆಂಗಿನಕಾಯಿ ಇಳಿಸುವ ವಿಚಾರದಲ್ಲಿ ಜಗಳ

ಹಾವೇರಿ: ತೆಂಗಿನಮರ ಏರಿ ಎಳನೀರು ಕಾಯಿ ಕೀಳುವ ವಿಚಾರಕ್ಕೆ ಸಂಬಂಧಿಸಿದಂತೆ ಯುವಕನ ಮೇಲೆ ಇಬ್ಬರು ಹಲ್ಲೆಗೈದ ಹಿನ್ನೆಲೆಯಲ್ಲಿ ದೂರು ದಾಖಲಾದ ಘಟನೆ ತಾಲೂಕಿನ ಗುತ್ತಲ ಪಟ್ಟಣದಲ್ಲಿ ನಡೆದಿದೆ.

ಗುತ್ತಲ ಪಟ್ಟಣದ ಸಂತೋಷ ದುರ್ಗಪ್ಪ ಭೋವಿ (20) ಹಾಗೂ ನಾಗರಾಜ ಹಾಲಪ್ಪ ಬೋವಿ (25) ಎಂಬುವವರ ಮೇಲೆ ದೂರು ದಾಖಲಾಗಿದೆ.

ಆರೋಪಿತರು ಹಾಲೇಶನಿಗೆ ಪೋನ್ ಮಾಡಿ ಪಟ್ಟಣದ ಮಡಿವಾಳರ ಕೆರೆ ಹತ್ತಿರ ಬರಲು ತಿಳಿಸಿದ್ದರಿಂದ, ಹಾಲೇಶ ಸ್ಥಳಕ್ಕೆ ಬಂದಿದ್ದಾನೆ. ಸ್ಥಳದಲ್ಲಿದ್ದ ತೆಂಗಿನಮರ ಹತ್ತಿ ಎಳನೀರು ಕಾಯಿ ಇಳಿಸುವಂತೆ ಆರೋಪಿತರು ತಿಳಿಸಿದ್ದು, ನನಗೆ ಗಿಡ ಹತ್ತಲು ಬರುವುದಿಲ್ಲ, ನಾನು ಹತ್ತಲ್ಲ, ಮನೆಗೆ ಹೋಗುತ್ತೇನೆ ಎಂದು ಹೇಳಿದ್ದಾನೆ.

ಆಗ ಸಂತೋಷ ಅವಾಚ್ಯ ಶಬ್ದಗಳಿಂದ ಬೈದು ಕಾಯಿ ಇಳಿಸಿಯೇ ಹೋಗಬೇಕೆಂದು ಕಂಡೀಷನ್ ಹಾಕಿದ್ದಾರೆ. ಅದಕ್ಕೆ ಒಪ್ಪದ ಹಿನ್ನೆಲೆ ಸಂತೋಷ ಕೈಯಲ್ಲಿದ್ದ ಕಂದಲಿಯಿಂದ ಹಾಲೇಶನ ಮೇಲೆ ಹಲ್ಲೆ ನಡೆಸಿದ್ದಾನೆ. ನಾಗಾರಾಜನೂ ಸಹಿತ ಕೊಲೆ ಮಾಡುವ ಉದ್ದೇಶದಿಂದ ಹಲ್ಲೆಗೈದಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೇಣು ಬಿಗಿದುಕೊಂಡು ಯುವತಿ ಆತ್ಮಹತ್ಯೆ

ಹಾವೇರಿ: ಯುವತಿಯೊಬ್ಬಳು ತನ್ನಷ್ಟಕ್ಕೆ ತಾನೇ ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿರುವ ಘಟನೆ ಶಿಗ್ಗಾವಿ ತಾಲೂಕು ಬಂಕಾಪುರದ ಕೊಟ್ಟಿಗೇರಿಯಲ್ಲಿ ನಡೆದಿದೆ.

ಬಂಕಾಪುರ ಕೊಟ್ಟಿಗೇರಿ ನಿವಾಸಿ ರತ್ನಾ ಕಲ್ಲನಗೌಡ ಸಂಶಿ (36) ಮೃತಪಟ್ಟ ಯುವತಿ.

ಈಕೆ ಋತುಚಕ್ರ ಸಮಸ್ಯೆ ಹಾಗೂ ಮದುವೆ ಆಗುವಂತೆ ಹೇಳಿದ್ದರಿಂದ ಅದನ್ನೆ ಮನಸ್ಸಿಗೆ ಹಚ್ಚಿಕೊಂಡು ಚಿಂತೆಗೀಡಾಗಿ ಮನೆಯಲ್ಲಿ ಯಾರೂ ಇಲ್ಲದಿರುವಾಗ ಹಾಲ್‌ನಲ್ಲಿನ ತೊಲೆಗೆ ವೇಲ್ ಕಟ್ಟಿ ತನ್ನಷ್ಟಕ್ಕೆ ತಾನೇ ನೇಣು ಹಾಕಿಕೊಂಡು ಮೃತಟ್ಟಿದ್ದಾಳೆ ಎಂದು ಮೃತಳ ತಾಯಿ ವಿಜಯಲಕ್ಷ್ಮೀ ಸಂಶಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಬಂಕಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಗದಗ: ನಗರದ ಜಿಲ್ಲಾಧಿಕಾರಿಗಳ ಕಾರ್ಯಾಲಯ ಆವರಣದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೂತನ ಪತ್ರಿಕಾ ವಾಹನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಚಾಲನೆ ನೀಡಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಬಿ.ಬಿ.ಅಸೂಟಿ, ತಾಲೂಕು ಅಧ್ಯಕ್ಷ ಅಶೋಕ ಮಂದಾಲಿ, ನೀಲವ್ವ ಬೋಳನವರ, ಮಾಜಿ ಶಾಸಕ ರಾಮಣ್ಣ ಲಮಾಣಿ, ಪಾರುಕ್ ಹುಬ್ಬಳ್ಳಿ, ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್., ಜಿಲ್ಲಾ ವಾರ್ತಾಧಿಕಾರಿ ವಸಂತ ಮಡ್ಲೂರ ಇದ್ದರು.

ಸಿದ್ದಾರೂಢರ ಸ್ವಾಮೀಜಿರವರ ಪುರಾಣ ಪ್ರವಚನ

ರಾಣೇಬೆನ್ನೂರ: ಸಿದ್ದಾರೂಢರ ನಡೆ, ನುಡಿ, ಬದುಕು ಹಾಗೂ ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಉತ್ತಮ ಸಮಾಜ ಕಟ್ಟಲು ಸಾಧ್ಯ ಎಂದು ಜೋಡಕುರಳಿ ಸಿದ್ದಾರೂಢಮಠದ ಚಿದ್ಬಾನಾನಂದ ಭಾರತಿ ಸ್ವಾಮೀಜಿ ಹೇಳಿದರು.

ಇಲ್ಲಿನ ಮೇಡ್ಲೇರಿ ರಸ್ತೆಯ ವಾಗೀಶನಗರದ 5 ನೇ ಕ್ರಾಸ್‌ನಲ್ಲಿರುವ ವೀರಭದ್ರೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ವೀರಭದ್ರದೇವಸ್ಥಾನ ಸಮಿತಿಯಿಂದ ಅಧಿಕ ಮಾಸದ ಪ್ರಯುಕ್ತ ಏರ್ಪಡಿಸಿದ ಸಿದ್ದಾರೂಢ ಸ್ವಾಮೀಜಿ ಅವರ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನಾಡಿನ ಸಾಧು, ಸಂತರು, ಅವತಾರಿ ಪುರುಷರು ಸಮಾಜದ ಒಳಿತಿಗೆ ಉತ್ತಮ ಮೌಲ್ಯ ಬಿತ್ತಿದ್ದಾರೆ. ಅದರಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದ ಭಾಗದ ಸದ್ಗುರು ಸಿದ್ದಾರೂಢ ಸ್ವಾಮೀಜಿ ಅಗ್ರಗಣ್ಯರು. ಅವರ ಬದುಕಿನ ಮರ್ಮ ತಿಳಿದುಕೊಳ್ಳಬೇಕು ಎಂದರು. ಸುಕ್ಷೇತ್ರ ಐರಾವತ ಕ್ಷೇತ್ರ ಐರಣಿ ಹೊಳೆಮಠದ ಸಿದ್ದಾರೂಢ ಭಾರತಿ ಸ್ವಾಮೀಜಿ ಅವರು ಸಿದ್ದಾರೂಢರ ಮೂರ್ತಿಗೆ ಪೂಜೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವೀರಭದ್ರದೇವಸ್ಥಾನ ಟ್ರಸ್ಟ್ ಕಮೀಟಿ ಅಧ್ಯಕ್ಷ ವೀರೇಶ ಮೋಟಗಿ, ಗುರುಬಸಪ್ಪ ಐರಣಿ, ವಿನೋಧ ಜಂಬಿಗಿ, ಪಿ.ಮಂಜುನಾಥ, ಶರಣಪ್ಪ ಮುಚಡಿ, ನಾಗರಾಜ ಮೋಟಗಿ, ನಾಗಣ್ಣ ಮುಂಡಾಸದ, ಗದಿಗೆಪ್ಪ ಹೊಟ್ಟಿಗೌಡ್ರ, ವಿರುಪಾಕ್ಷಪ್ಪ ಅಂಗಡಿ, ಚನ್ನಬಸರಾಜ ನ್ಯಾಮತಿ, ಕರಬಸಪ್ಪ ರಾಮಲಿಂಗಣ್ಣನವರ, ನಾಗರಾಜ ಅಂಗಡಿ, ಬಸಣ್ಣ ರವದಿ ಇದ್ದರು.



ರಾಣೇಬೆನ್ನೂರ: ಮೇಡ್ಲೇರಿ ರಸ್ತೆಯ ವಾಗೀಶನಗರದ 5 ನೇ ಕ್ರಾಸ್‌ನಲ್ಲಿರುವ ವೀರಭದ್ರೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ವೀರಭದ್ರದೇವಸ್ಥಾನ ಸಮಿತಿಯಿಂದ ಅಧಿಕ ಮಾಸದ ಪ್ರಯುಕ್ತ ಏರ್ಪಡಿಸಿದ ಸಿದ್ದಾರೂಢ ಸ್ವಾಮೀಜಿ ಅವರ ಪುರಾಣ ಪ್ರವಚನ ಕಾರ್ಯಕ್ರಮ ನಡೆಯಿತು. ಜೋಡಕುರಳಿ ಸಿದ್ಧರೂಢಮಠದ ಚಿದ್ಬಾನಾನಂದ ಭಾರತಿ ಸ್ವಾಮೀಜಿ, ಸುಕ್ಷೇತ್ರ ಐರಾವತ ಕ್ಷೇತ್ರ ಐರಣಿ ಹೊಳೆಮಠದ ಸಿದ್ದಾರೂಢ ಭಾರತಿ ಸ್ವಾಮೀಜಿ, ವೀರಭದ್ರದೇವಸ್ಥಾನ ಟ್ರಸ್ಟ್ ಕಮೀಟಿ ಅಧ್ಯಕ್ಷ ವೀರೇಶ ಮೋಟಗಿ, ಗುರುಬಸಪ್ಪ ಐರಣಿ, ವಿನೋಧ ಜಂಬಿಗಿ, ಪಿ.ಮಂಜುನಾಥ, ಇತರರು ಇದ್ದರು.

ಜನರಲ್ಲಿ ಅರಿವು ಮೂಡಿಸಿದ ವಿಶೇಷ ಕರ ವಸೂಲಾತಿ ಅಭಿಯಾನ

ಡಂಗೂರ ಬಡಿದು ಕರ ವಸೂಲಿ

ಹಾವೇರಿ: ಝುಡ್ ಝುಡ್ಡಿ ನಕ್ಕ ನಕ್ಕಾ ನಕ್ಕ ನಕ್ಕಾ.. ಝುಡ್ ಝುಡ್ಡಿ ನಕ್ಕ ನಕ್ಕಾ ನಕ್ಕ ನಕಾ.. ಕೇಳ್ರಪ್ಪೋ.. ಕೇಳ್ರಿ.. ನಗರಸಭೆ ತೆರಿಗೆ ಬಾಕಿ ಉಳಿಸ್ಕೊಂಡೋರು ಲಗೂನ ತುಂಬ ಬೇಕಂತಾ..? ಇಲ್ಲಾಂದ್ರ ದಂಡ ಹಾಕ್ತಾರಂತ ಕೇಳ್ರಪ್ಪೋ.. ಕೇಳ್ರೀ?

ಇದು ಮಂಗಳವಾರ ಜಿಲ್ಲಾ ಕೇಂದ್ರ ಹಾವೇರಿ ನಗರಸಭೆ ವ್ಯಾಪ್ತಿಯಲ್ಲಿ ನೀರಿನ ಕರ, ಆಸ್ತಿ ತೆರಿಗೆ, ಖಾಲಿ ನಿವೇಶನದ ತೆರಿಗೆ ಹೀಗೆ ಹಲವು ಕರ ಬಾಕಿ ಉಳಿಸಿಕೊಂಡವರನ್ನು ಎಚ್ಚರಿಸಲು ಸ್ವತಃ ನಗರಸಭೆ ಪೌರಾಯುಕ್ತ ಎಚ್. ಕಾಂತರಾಜು ನೇತೃತ್ವದಲ್ಲಿ ನಗರಸಭೆ ಅಧಿಕಾರಿ ಸಿಬ್ಬಂದಿಗಳು ಕರ ವಸೂಲಿಗಾಗಿ ಹಲಗೆ ಬಾರಿಸುತ್ತಾ ಅಶ್ವಿನ ನಗರದಾದ್ಯಂತ ಓಡಾಡಿ ಜನರಲ್ಲಿ ಅರಿವು ಮೂಡಿಸಿ, ಕರ ವಸೂಲಿಗೆ ಮುಂದಾಗಿದ್ದು ಜನರ ಗಮನ ಸೆಳೆಯಿತು.

ನಗರಸಭೆ ವ್ಯಾಪ್ತಿಯಲ್ಲಿ ಸುಮಾರು 4800ಕ್ಕೂ ಹೆಚ್ಚು ಅನಧಿಕೃತ ನಳ ಸಂಪರ್ಕ ಇರುವುದನ್ನು ನಗರಸಭೆ ಅಧಿಕಾರಿಗಳು ಪತ್ತೆ ಹಚ್ಚಿದ್ದು, ಇವುಗಳಿಗೆ ತಲಾ ರೂ.10,660 ದಂಡ ತುಂಬಿ ಅಧೀಕೃತ ಮಾಡಿಕೊಳ್ಳಲು ಅವಕಾಶ ನೀಡಿದೆ. ಈ ಕುರಿತು ನಗರಸಭೆ ಮಂಗಳವಾರದಿಂದ ವಿಶೇಷ ಕರ ವಸೂಲಾತಿ ಅಭಿಯಾನವನ್ನೂ ಈ ಮೂಲಕ ಆರಂಭಿಸಿದೆ.

ಹಾವೇರಿ ನಗರಸಭೆ ವ್ಯಾಪ್ತಿಯಲ್ಲಿ 90 ಸಾವಿರಕ್ಕೂ ಹೆಚ್ಚು ಜನ ವಾಸಿಸುತ್ತಿದ್ದು, ಪ್ರಸ್ತುತ 9 ಸಾವಿರಕ್ಕೂ ಅಧಿಕ ನಳಗಳ ಸಂಪರ್ಕ ಇವೆ. ಜನಸಂಖ್ಯೆಗೆ ಅನುಗುಣವಾಗಿ 16 ಸಾವಿರ ನಳಗಳು ಇರಬೇಕಿತ್ತು. ನಿಗದಿತ ಅವಧಿಯೊಳಗೆ ಅನಧಿಕೃತ ನಳಗಳನ್ನು ಅಧೀಕೃತ ಮಾಡಿಕೊಳ್ಳದಿದ್ದರೆ, ನಳಗಳನ್ನು ಸಂಪೂರ್ಣವಾಗಿ ಬಂದ್ ಮಾಡುವ ಬಗ್ಗೆ ಖಡಕ್ ಎಚ್ಚರಿಕೆಯನ್ನು ನೀಡಿದರು.

7 ಕೋಟಿ ಬಾಕಿ: ನಗರಸಭೆ ವ್ಯಾಪ್ತಿಯಲ್ಲಿ ಸುಮಾರು 7 ಕೋಟಿ ರೂ.ಕರ ಬಾಕಿ ಬರಬೇಕಿದೆ. 2005ರಿಂದ, 2014ರಿಂದಲೂ ಮನೆ ಕರ, ನೀರಿನ ಕರ ಪಾವತಿಸದೆ ಇರುವವರು ಇದ್ದಾರೆ. ಕನಿಷ್ಠ 5 ಸಾವಿರದಿಂದ ಗರಿಷ್ಠ 25 ಸಾವಿರ ರೂ.ತನಕ ಬಾಕಿ ಇದೆ. ತಿಂಗಳಿಗೆ 120ರೂ., ವರ್ಷಕ್ಕೆ 1,400 ರೂ. ಕರ ಪಾವತಿಸಬೇಕಿದೆ. ಹೆಚ್ಚಿಗೆ ಬಾಕಿ ಉಳಿಸಿಕೊಂಡವರು ಕಂತಿನ ಪ್ರಕಾರ ಬಾಕಿ ಕರ ಪಾವತಿಸಲು ಅವಕಾಶ ನೀಡಲಾಗಿದೆ ಎಂದು ಪೌರಾಯುಕ್ತ ಎಚ್. ಕಾಂತರಾಜು ತಿಳಿಸಿದರು.

ಈ ವೇಳೆ ಪೌರಾಯುಕ್ತ ಕಾಂತರಾಜು ಹೆಚ್., ಪಿ.ಡಿ. ಚಂದ್ರಪ್ಪ ಸಿ., ಎಇಇ ಮಹೇಶ ಕಲಾಲ, ಮಹ್ಮದ ಸಮೀರ, ರೇಣುಕಾ ಆರ್, ಗಿರಿಜಾ ಹಾದಿಮನಿ, ನಿರ್ಮಲಾ ಅಂಗಡಿ, ಪರಶುರಾಮ ಹೆಬ್ಬಾರ, ಪ್ರಶಾಂತ ಪೂಜಾರ ಸೇರಿದಂತೆ ಎಲೆಕ್ಟ್ರಿಷಿಯನ್, ಬಿಲ್ ಕಲೆಕ್ಟರ್, ವಾಲ್‌ಮೆನ್ ಹಾಗೂ ಪೌರ ಕಾರ್ಮಿಕರು ಇದ್ದರು.



ನಗರಸಭೆ ವ್ಯಾಪ್ತಿಯಲ್ಲಿ 35 ನೀರಗಂಟಿಗಳಿದ್ದು, ನೀರು ಸರಬರಾಜಿಗೆ 17 ಜನ, ಉಳಿದವರು ಪಂಪ್‌ಹೌಸ್, ಜಾಕವೆಲ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಹಿಂದೆ ಬೇರೆ ಯೋಜನೆಯಡಿ ಸಂಗ್ರಹವಾಗುತ್ತಿದ್ದ ಹಣವನ್ನು ಹೊಂದಿಸಿಕೊಂಡು ಸಂಬಳ ನೀಡಿದ್ದೇವೆ. ಮೂರು ತಿಂಗಳಿನಿಂದ ಸಂಬಳ ನೀಡಿಲ್ಲ, ಜತೆಗೆ ನಿರ್ವಹಣೆ ವೆಚ್ಚ, ಕೆಮಿಕಲ್ಸ್ ಖರೀದಿ, ಪೈಪ್‌ಲೈನ್ ದುರಸ್ಥಿಗೂ ಸಮಸ್ಯೆಯಾಗುತ್ತಿದೆ. ಹಾಗಾಗಿ ಕರ ವಸೂಲಿ ಅಭಿಯಾನದ ಮೂಲಕ ಸಂಗ್ರಹವಾಗುವ ಹಣದಿಂದ ಸಂಬಳ ಪಾವತಿ, ಕೆಮಿಕಲ್ ಖರೀದಿ, ನಿರ್ವಹಣೆ ಕಾರ್ಯಕ್ಕೆ ಅನುಕೂಲವಾಗುತ್ತದೆ. ಜನರು ನಿಗದಿತ ಕಾಲಮಿತಿಯೊಳಗೆ ತೆರಿಗೆ ಹಣ ನೀಡಿದಲ್ಲಿ ಸಿಬ್ಬಂದಿಗಳಿಗೆ ಸಂಬಳ ಹಾಗೂ ಹೆಚ್ಚಿನ ಸೇವೆಗಳನ್ನು ಒದಗಿಸಲು ಅನುಕೂಲವಾಗಲಿದೆ. ನಗರದ ಸಾರ್ವಜನಿಕರು ನಗರಸಭೆಗೆ ಸಹಕರಿಸಬೇಕು.

■ ಕಾಂತರಾಜು ಹೆಚ್., ಪೌರಾಯುಕ್ತರು.

ವಾಗ್ವಾದ

ಇಲ್ಲಿಯ ಅಶ್ವಿನಿ ನಗರದಲ್ಲಿ ಮಂಗಳವಾರ ನಗರಸಭೆ ಅಧಿಕಾರಿ, ಸಿಬ್ಬಂದಿಗಳು ಕರ ವಸೂಲಿಗೆ ಬಂದಾಗ ಪಾವತಿಸದ 10ಕ್ಕೂ ಹೆಚ್ಚು ಮನೆಗಳ ನಳ ಸಂಪರ್ಕವನ್ನು ಬಂದ್ ಮಾಡಿಸಲಾಯಿತು. ವಿಶ್ವೇಶತೀರ್ಥ ನಗರದಲ್ಲಿ ನಗರಸಭೆ ಅನುಮತಿ ಪಡೆಯದೆ ರಸ್ತೆಯಲ್ಲಿ ಗೂಡಂಗಡಿ ಇಟ್ಟಿದ್ದ ಮಹಿಳೆ ಅನುಮತಿ ಪಡೆದುಕೊಳ್ಳುವ ವಿಚಾರವಾಗಿ ನಗರಸಭೆ ಸಿಬ್ಬಂದಿಗೆ ಜತೆ ವಾಗ್ವಾದ ನಡೆಸಿದರು.

ಶೌಚಾಲಯಕ್ಕೆ ಬೀಗ: ಪ್ರಯಾಣಿಕರ ಪರದಾಟ

ತಡಸ: ಸ್ಥಳೀಯ ಬಸ್ ನಿಲ್ದಾಣದಲ್ಲಿರುವ ಸಾರ್ವಜನಿಕ ಶೌಚಾಲಯಕ್ಕೆ ಕಳೆದ ಎರಡು ದಿನಗಳಿಂದ ಕಂಟ್ರೋಲ್ದಾರ್ ಚಾವಿ (ಬೀಗ) ಹಾಕಿ ಬಂದ್ ಮಾಡಿದ್ದು, ಪ್ರಯಾಣಿಕರು ಹಾಗೂ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುವಂತಾಗಿದೆ. ಜವಾಬ್ದಾರಿಯುತ ಸ್ಥಾನದಲ್ಲಿರುವವರ ಈ ಬೇಜವಾಬ್ದಾರಿ ನಡವಳಿಕೆ ತಡಸ ಗ್ರಾಮದ ಜನರಲ್ಲಿ ತೀವ್ರ ಬೇಸರ ಹಾಗೂ ಆಕ್ರೋಶಕ್ಕೆ ಕಾರಣವಾಗಿದೆ.

ಪ್ರತಿದಿನನೂರಾರುಪ್ರಯಾಣಿಕರು, ಮಹಿಳೆಯರು, ಮಕ್ಕಳು ಮತ್ತು ವೃದ್ಧರು ಈ ಬಸ್ ನಿಲ್ದಾಣಕ್ಕೆ ಬಂದು ಹೋಗುತ್ತಾರೆ. ಆದರೆ, ಶೌಚಾಲಯಕ್ಕೆ ಬೀಗ ಹಾಕಿರುವುದರಿಂದ ತುರ್ತು ಪರಿಸ್ಥಿತಿಯಲ್ಲಿ ಸಾರ್ವಜನಿಕರು ಎಲ್ಲೆಂದರಲ್ಲಿ ಅಲೆಯುವಂತಾಗಿದೆ. ಅದರಲ್ಲೂ ಮಹಿಳಾ ಪ್ರಯಾಣಿಕರ ಸ್ಥಿತಿಯಂತೂ ಹೇಳತೀರದಾಗಿದೆ.

ಕಳೆದ 2 ದಿನಗಳಿಂದ ಬಂದ್: ಯಾವುದೇ ಮುನ್ಸೂಚನೆ ಇಲ್ಲದೆ ಶೌಚಾಲಯವನ್ನು ಬಂದ್ ಮಾಡಲಾಗಿದೆ.

ಸ್ಥಳೀಯರ ಆಕ್ರೋಶ: ಸಾರ್ವಜನಿಕ ಸ್ವತ್ತನ್ನು ಸ್ವಂತ ಆಸ್ತಿಯಂತೆ ಬೀಗ ಹಾಕಿ ಜನರಿಗೆ ತೊಂದರೆ ಕೊಡುತ್ತಿರುವುದಕ್ಕೆ ಗ್ರಾಮಸ್ಥರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗ್ರಾಮಸ್ಥರ ಆಗ್ರಹ: ಕರ್ನಾಟಕ ರಕ್ಷಣಾ ವೇದಿಕೆ ಗ್ರಾಮ ಘಟಕದ ಅಧ್ಯಕ್ಷರಾದಂತ ಶ್ರೀಯುತ ಗಂಗಾಧರ ಬೆಂಡ್ಲಗಟ್ಟಿ ಮತ್ತು ಕರ್ನಾಟಕ ಚಾಲಕರ ಒಕ್ಕೂಟದ ತಾಲೂಕಾಧ್ಯಕ್ಷರಾದಂತ ಶ್ರೀಯುತ ರಮೇಶ್ ಗೌಳಿ ಅವರು ತಡಸ ಗ್ರಾಮದ ಹಿರಿಯರು ''ಬಸ್ ನಿಲ್ದಾಣದ ಶೌಚಾಲಯವು ಸಾರ್ವಜನಿಕರ ಬಳಕೆಗೆ ಇರುವುದೇ ಹೊರತು, ಯಾರೋ ಒಬ್ಬರ ಇಷ್ಟದಂತೆ ಬೀಗ ಹಾಕುವುದಕ್ಕಲ್ಲ. ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ತಕ್ಷಣವೇ ಮಧ್ಯಪ್ರವೇಶಿಸಿ, ಶೌಚಾಲಯವನ್ನು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು. ಇಲ್ಲದಿದ್ದರೆ ಪ್ರತಿಭಟನೆ ನಡೆಸಬೇಕಾಗುತ್ತದೆ.'' ಎಂದು ಇದಕ್ಕೆ ಒತ್ತಾಯಿಸಿದರು

ಸಾರ್ವಜನಿಕರ ಹಿತದೃಷ್ಟಿಯಿಂದ ಈಸಮಸ್ಯೆಯನ್ನು ತಕ್ಷಣವೇ ಬಗೆಹರಿಸಿ, ಬೀಗ ತೆರವುಗೊಳಿಸಬೇಕೆಂದು ತಡಸ ಗ್ರಾಮಸ್ಥರು ಹಾಗೂ ಪ್ರಯಾಣಿಕರು ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.




ಮೇ 31ಕ್ಕೆ ಆರೋಗ್ಯ ತಪಾಸಣೆ ಉಚಿತ ಶಿಬಿರ

ರಾಣೇಬೆನ್ನೂರ: ಸ್ಥಳೀಯ ಕುರುಹಿನಶೆಟ್ಟಿ ಸಮಾಜ ಹಾಗೂ ಕಾಕಿ ಜನಸೇವಾ ಸಂಸ್ಥೆಯ ಸಹಯೋಗದಲ್ಲಿ ಆರೋಗ್ಯ ಉಚಿತ ತಪಾಸಣೆ ಶಿಬಿರ, ರಕ್ತದಾನ ಶಿಬಿರ, ದೇಹದಾನ ಕುರಿತು ಅರಿವು ಹಾಗೂ ಕುರುಹಿನಶೆಟ್ಟಿ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಮೇ 31ರಂದು ನಗರದ ಹುಣಸಿಕಟ್ಟಿ ರಸ್ತೆಯ ರಾಣೇಬೆನ್ನೂರು ಚೇಸಿವಾಣಿ ಅರಮನೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಾಕಿ ಜನಸೇವಾ ಸಂಸ್ಥೆಯ ಅಧ್ಯಕ್ಷ ಶ್ರೀನಿವಾಸ ಕಾಕಿ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಸಂಸ್ಥೆ ಸದಸ್ಯರಿಗೆ ಪ್ರತಿವರ್ಷ ಉಚಿತ ನಿವೇಶನ ಡ್ರಾ ಮೂಲಕ ನೀಡಲಾಗುತ್ತಿದೆ. ಬಡವರಿಗೆ ಹಾಗೂ ಕೂಲಿ ಕಾರ್ಮಿಕರಿಗೂ ಅನುಕೂಲವಾಗುವ ನಿಟ್ಟಿನಲ್ಲಿ ಕಂತುಗಳ ಮೂಲಕ ನಿವೇಶನ ಹಂಚಿಕೆ ಮಾಡಲಾಗುತ್ತಿದೆ. ಕಳೆದ 50ವರ್ಷದಿಂದ ಕಾಕಿ ಕುಟುಂಬದ ವತಿಯಿಂದ ನಂಬಿಕೆ, ವಿಶ್ವಾಸ ಹಾಗೂ ಪಾರದರ್ಶಕವಾಗಿ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಕಾಕಿ ಸಮೂಹ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದೆ. ಪ್ರತಿವರ್ಷ ಸಾಮಾಜಿಕ ಕಾರ್ಯಗಳ ಮೂಲಕ ಸಾಧ್ಯವಾದಷ್ಟು ಜನಸೇವೆ ಮಾಡುವ ನಿಟ್ಟಿನಲ್ಲಿ ಸಾಮೂಹಿಕ ವಿವಾಹ ಮಹೋತ್ಸವ, ವಿದ್ಯಾರ್ಥಿಗಳಿಗೆ ಬುಕ್, ಪಠ್ಯಪುಸ್ತಕಗಳು, ಅನೇಕ ವೈದ್ಯಕೀಯ ಶಿಬಿರಗಳು ಮಾಡಲಾಗುತ್ತಿದೆ. ಕಳೆದ ವರ್ಷದಿಂದ ನೇಕಾರ ಕುರುಹಿನಶೆಟ್ಟಿ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಾ ಬರಲಾಗಿದೆ. ಈ ವರ್ಷ ಶೇ.60ಅಂಕ ಪಡೆದ ವಿದ್ಯಾರ್ಥಿಗಳಿಗೂ ಪುರಸ್ಕಾರ ನೀಡಲಾಗುತ್ತಿದ್ದು ಸುಮಾರು 25-30 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯಲಿದ್ದಾರೆ. ಸಂಸ್ಥೆಯಿಂದ ವಿಶೇಷ ಯೋಜನೆಗಳನ್ನು ಜಾರಿಗೆಗೊಳಿಸಲಾಗಿದ್ದು ಎಲ್ಲಾ ವರ್ಗದ ಜನರಿಗೆ ಸಹಾಯವಾಗಲಿದೆ.

ಇದೇ ಸಂದರ್ಭದಲ್ಲಿ ನಮ್ಮ ಸಂಸ್ಥೆ ಸದಸ್ಯರುಗಳಿಗೆ ಸೈಟ್ ವಿತರಣೆ ಮಾಡಲಾಗುವುದು. ಜನರಿಗೆ ಅರಿವು ಮೂಡಿಸುವ ಉದ್ದೇಶದಿದ ದೇಹದಾನ ಕುರಿತು ಜಾಗೃತಿ, ರಕ್ತದಾನ ಶಿಬಿರ ಹಾಗೂ ಆರೋಗ್ಯ ತಪಾಸಣೆ ಶಿಬಿರ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು.

ಕುರುಹಿನಶೆಟ್ಟಿ ಸಮಾಜದ ಅಧ್ಯಕ್ಷ ಹನುಮಂತಪ್ಪಅಮಾಸಿ, ಉಪಾಧ್ಯಕ್ಷಶಿವಾನಂದ ಸಾಲಗೇರಿ, ಕಾರ್ಯದರ್ಶಿ ಮಂಜುನಾಥ ಹೊಸಪೇಟೆ, ಖಜಾಂಚಿ ಹನುಮಂತಪ್ಪ ಕಾಕಿ, ಮುಖಂಡರಾದ ಶಿವಾನಂದ ಬಗಾದಿ, ನಿತ್ಯಾನಂದ ಕುಂದಪುರ, ಕೊಟ್ರೇಶಪ್ಪ ಎಮ್ಮಿ ಸೇರಿದಂತೆ ಮತ್ತಿತರರಿದ್ದರು.



ವಿಶ್ವ ಭೂಗೋಳ ದಿನ ಆಚರಣೆ

ರಾಣೇಬೆನ್ನೂರ: ಭೂಗೋಳವು ಪೃಥ್ವಿಯ ಮೇಲೆ ಪ್ರಕೃತಿಯ ಹಾಗೂ ಮಾನವನ ಸಂಬಂಧವನ್ನು ವಿವರಿಸುತ್ತದೆ. ಭೂಮಿಯ ರಕ್ಷಣೆ ಮಾಡಿ ಭೂಮಿಯು ಹಲವಾರು ಜೀವ ರಾಶಿಗಳಿಗೆ ಆಶ್ರಯ ತಾಣವಾಗಿದೆ. ವಿದ್ಯಾರ್ಥಿಗಳು ಭೂಗೋಳ ವಿಜ್ಞಾನದ ಕಲಿಕೆಯಲ್ಲಿ ಆಸಕ್ತಿಯನ್ನು ಮೂಡಿಸಿಕೊಳ್ಳಬೇಕೆಂದು ಕೆಎಲ್‌ಇ ಸಂಸ್ಥೆಯ ರಾಜರಾಜೇಶ್ವರಿ ಕಾಲೇಜಿನ ಪ್ರೊ. ಎಂ.ಎನ್. ಸೂರಣಗಿ ಹೇಳಿದರು.

ಸೋಮವಾರ ಇಲ್ಲಿನ ಆರ್‌ಟಿಇಎಸ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಭೂಗೋಳ ಶಾಸ್ತ್ರ ವಿಭಾಗದಿಂದ ಹಾಗೂ ಐ ಕ್ಯೂ ಎ ಸಿ ಆಶ್ರಯದಲ್ಲಿ ಏರ್ಪಡಿಸಿದ ವಿಶ್ವ ಭೂಗೋಳ ದಿನ ಆಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಶಾಲಾ ಕಾಲೇಜುಗಳಲ್ಲಿ ಶೈಕ್ಷಣಿಕ ಪ್ರವಾಸದ ಸಂದರ್ಭದಲ್ಲಿ ತಾವು ಪ್ರವಾಸಿಸುವಪ್ರತಿಯೊಂದುಸನ್ನಿವೇಶವನ್ನು ಕುತೂಹಲದಿಂದ ಗಮನಿಸಬೇಕು. ಆ ಮೂಲಕ ಭೂಗೋಳ ವಿಜ್ಞಾನದ ಕಲಿಕೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದರು.

ಪ್ರಾಚಾರ್ಯ ಪ್ರೊ.ರಾಮರೆಡ್ಡಿ ಎಸ್. ರಡ್ಡೇರ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಸೌರವ್ಯೂಹದಲ್ಲಿ ಜೀವಿಗಳಿರುವ ಏಕೈಕ ಗ್ರಹ ಭೂಗೋಳವಾಗಿದೆ. ವಿಜ್ಞಾನದ ಕಲಿಕೆಯಲ್ಲಿ ವಿದ್ಯಾರ್ಥಿಗಳು ಅಭಿರುಚಿಯನ್ನು ಬೆಳೆಸಿಕೊಳ್ಳಬೇಕು ಎಂದರು. ಆರ್‌ಟಿಇಎಸ್ ಸಂಸ್ಥೆಯ ಅಧ್ಯಕ್ಷ ಸಂಜಯ್ ಎಸ್. ಸಾವುಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಭೂಗೋಳ ಶಾಸ್ತ್ರ ವಿಭಾಗದ ಪ್ರೊ. ಸಿ.ಎನ್. ಪೂಜಾರ, ರಶ್ಮಿ, ಮಾಲತೇಶ ಎಂ.ಪೂಜಾರ ಇದ್ದರು.



ರೈತರಿಗೆ ಗುಣಮಟ್ಟದ ಸಸಿಗಳ ಲಭ್ಯತೆ

ಹಾವೇರಿ: ಜಿಲ್ಲೆಯ ರೈತರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ತೋಟಗಾರಿಕೆ ಇಲಾಖೆಯ ವಿವಿಧ ಕ್ಷೇತ್ರಗಳಲ್ಲಿ ಗುಣಮಟ್ಟದ ತೆಂಗು ಹಾಗೂ ಇತರೆ ಹಣ್ಣು ಮತ್ತು ಅಲಂಕಾರಿಕ ಸಸಿಗಳನ್ನು ಮಾರಾಟಕ್ಕೆ ಇಡಲಾಗಿದೆ ಎಂದು ಹಾವೇರಿಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

ತೋಟಗಾರಿಕೆ ಇಲಾಖೆಯ ನಿಯಮಾವಳಿಗಳ ಪ್ರಕಾರ ದೃಢೀಕರಿಸಲಾದ ಉತ್ತಮ ತಳಿಯ 'ಅರಸೀಕೆರೆ ಟಾಲ್' ತೆಂಗಿನ ಸಸಿಗಳು ಸೇರಿದಂತೆ ವಿವಿಧ ತಳಿಯ ಹಣ್ಣು ಮತ್ತು ಅಲಂಕಾರಿಕ ಗಿಡಗಳು ಇಲಾಖೆಯ ನಿಗದಿತ ದರದಲ್ಲಿ ಲಭ್ಯವಿವೆ.

ರೈತರು ಅಗತ್ಯ ದಾಖಲಾತಿಗಳೊಂದಿಗೆ ಸಂಬಂಧಿತ ತೋಟಗಾರಿಕೆ ಕ್ಷೇತ್ರದ ಸಿಬ್ಬಂದಿಯನ್ನು ಸಂಪರ್ಕಿಸಿ ಸಸಿಗಳನ್ನು ಖರೀದಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬ್ಯಾಡಗಿ, ಸವಣೂರು ತೋಟಗಾರಿಕೆ ಕ್ಷೇತ್ರದಲ್ಲಿ ಅರಸೀಕೆರೆ ಟಾಲ್ ತೆಂಗು, ಮಾವು, ಲಿಂಬೆ ಹಾಗೂ ಸ್ಥಳೀಯ ಮತ್ತು ಅಲಂಕಾರಿಕ ಗಿಡಗಳು, ಹಾವೇರಿ : ವಿವಿಧ ಅಲಂಕಾರಿಕ ಗಿಡಗಳು ಲಭ್ಯವಿವೆ.

ಅದೇ ರೀತಿ ರಟ್ಟಿಹಳ್ಳಿ, ಹಾನಗಲ್, ರಾಣೆಬೆನ್ನೂರ ತಾಲೂಕಿನ ಚೌಡಯ್ಯದಾನಪುರ ಹಾಗೂ ಶಿಗ್ಗಾಂವಿ ತಾಲೂಕಿನ ಯತ್ತಿನಹಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ ಅರಸೀಕೆರೆ ಟಾಲ್ ತೆಂಗಿನ ಸಸಿಗಳು ಲಭ್ಯವಿರುತ್ತವೆ.

ರೈತರು ತಮ್ಮ ಸಮೀಪದ ತೋಟಗಾರಿಕೆ ಕ್ಷೇತ್ರಗಳಿಗೆ ಭೇಟಿ ನೀಡಿ ಇಲಾಖೆಯ ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳುವಂತೆ ಮನವಿ ಮಾಡಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಹಾವೇರಿಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಾರ್ಯಾಲಯವನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ರಾಜ್ಯ ಮಾಹಿತಿ ಆಯುಕ್ತರಿಂದ ಅಹವಾಲು ಸ್ವೀಕಾರ

ಹಾವೇರಿ: ರಾಜ್ಯ ಮಾಹಿತಿ ಪೀಠ ಸಂ.4ರ ಆಯುಕ್ತರಾದ ರುದ್ರಣ್ಣ ಹರ್ತಿಕೋಟಿ ಹಾಗೂ ಪೀಠ 5ರ ಆಯುಕ್ತರಾದ ರಾಜಶೇಖರ ಎಸ್ ಅವರು ಮೇ 30ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಹಾಗೂ ಜಿಲ್ಲೆಯ ವಿವಿಧ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆ ಕುರಿತು ಜರುಗುವ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಲಿದ್ದಾರೆ. ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಧ್ಯಾಹ್ನ 2 ಗಂಟೆಗೆ ಸಾರ್ವಜನಿಕರ ಅಹವಾಲು ಸ್ವೀಕರಿಸಲಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಸೋಯಾಬಿನ್ ಬಿತ್ತನೆ ಬೀಜ ಸಿಗದೇ ರೈತರು ಹೈರಾಣ

ಹಾವೇರಿ: ಮುಂಗಾರು ಆರಂಭವಾಗುತ್ತಿದ್ದಂತೆ ಬಿತ್ತನೆ ಚಟುವಟಿಕೆಗಳು ಚುರುಕುಗೊಂಡಿದ್ದರೂ, ಜಿಲ್ಲೆಯ ರೈತ ಸಂಪರ್ಕ ಕೇಂದ್ರಗಳಲ್ಲಿ ಸೋಯಾಬಿನ್ ಬಿತ್ತನೆ ಬೀಜಗಳ ಕೊರತೆ ಉಂಟಾಗಿ ಅನ್ನದಾತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬೆಳಿಗ್ಗೆ 5 ಗಂಟೆಯಿಂದಲೇ ಸರತಿ ಸಾಲಿನಲ್ಲಿ ನಿಂತರೂ ರೈತರಿಗೆ ಬೀಜ ಸಿಗದೇ ಹೈರಾಣಾಗುವ ಸ್ಥಿತಿ ನಿರ್ಮಾಣವಾಗಿದೆ.

ಜಿಲ್ಲೆಯ ವಿವಿಧ ರೈತ ಸಂಪರ್ಕ ಕೇಂದ್ರಗಳ ಮುಂದೆ ನೂರಾರು ರೈತರು ಕ್ಯೂನಲ್ಲಿ ನಿಂತು ಬೀಜಕ್ಕಾಗಿ ಕಾಯುತ್ತಿರುವ ದೃಶ್ಯ ಸಾಮಾನ್ಯವಾಗಿದೆ. ಪ್ರಸಕ್ತ ವರ್ಷ ಜಿಲ್ಲೆಯಲ್ಲಿ ಸೋಯಾಬಿನ್ ಬೀಜಕ್ಕೆ ರೈತರಿಂದ ಭಾರೀ ಬೇಡಿಕೆ ಬಂದಿದ್ದರಿಂದ ಈ ಸಮಸ್ಯೆ ಎದುರಾಗಿದ್ದು, ಈಗಾಗಲೇ ಕೃಷಿ ಇಲಾಖೆ 10,500 ಕ್ವಿಂಟಲ್ ಸೋಯಾಬಿನ್ ಬೀಜ ವಿತರಿಸಿದ್ದರೂ ರೈತರಿಂದ ಹೆಚ್ಚಿನ ಬೇಡಿಕೆ ಕೇಳಿಬರುತ್ತಿದೆ.

ಬಿತ್ತನೆ ಸಮಯ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ರೈತರು ತಮ್ಮ ಕೃಷಿ ಕೆಲಸಗಳನ್ನು ಬಿಟ್ಟು ದಿನಪೂರ್ತಿ ಕೇಂದ್ರಗಳ ಎದುರು ಕಾಯಬೇಕಾದ ಪರಿಸ್ಥಿತಿ ಎದುರಾಗಿದೆ. ಕೆಲ ರೈತರು ಬೆಳಗ್ಗೆಯಿಂದ ಸಂಜೆವರೆಗೂ ಕಾದರೂ ಬೀಜ ಸಿಗದೇ ನಿರಾಸೆಯಿಂದ ಮನೆಗೆ ಹಿಂತಿರುಗಿದ್ದಾರೆ. ಇನ್ನೂ ಕೆಲವರು ಬಿತ್ತನೆ ಬೀಜ ಬರಬಹುದು ಎಂಬ ನಿರೀಕ್ಷೆಯಲ್ಲಿ ಸರತಿ ಸಾಲಿನಲ್ಲಿ ನಿಂತೇ ಕಾಯುತ್ತಿದ್ದ ದೃಶ್ಯ ಕಂಡು ಬಂತು. ಇದೇ ವೇಳೆ ಮನೆಯಲ್ಲಿ ಬಾಣಂತಿ ಮಹಿಳೆಯನ್ನು ಮನೆಯಲ್ಲಿ ಬಿಟ್ಟು, ಮೊಮ್ಮಗಳೊಂದಿಗೆ ಬೀಜಕ್ಕಾಗಿ ರೈತ ಸಂಪರ್ಕ ಕೇಂದ್ರಕ್ಕೆ ಬಂದಿದ್ದ ಅಜ್ಜಿಯೊಬ್ಬರ ಪರಿಸ್ಥಿತಿ ಎಲ್ಲರ ಮನಕಲಕುವಂತಿತ್ತು. ಮೊಮ್ಮಗಳ ಜೊತೆ ಕೇಂದ್ರದ ಎದುರು ಕುಳಿತಿದ್ದ ಅಜ್ಜಿ, ಸಮಯಕ್ಕೆ ಸರಿಯಾಗಿ ಬಿತ್ತನೆ ಬೀಜ ಸಿಗದೇ ಬಿತ್ತನೆಗೆ ಭೂಮಿ ಹದ ತಪ್ಪಿದರೆ ವರ್ಷದ ಜೀವನವೇ ಕಷ್ಟ ಎಂದು ಬೇಸರ ವ್ಯಕ್ತಪಡಿಸಿದರು.

ಈಗಾಗಲೇ ಮಳೆ ಬಿದ್ದಿರುವ ಹಿನ್ನೆಲೆಯಲ್ಲಿ ರೈತರು ಬಿತ್ತನೆಗೆ ಸಿದ್ಧರಾಗಿದ್ದು, ಸರಿಯಾದ ಸಮಯಕ್ಕೆ ಬೀಜ ಸಿಗದಿದ್ದರೆ ಬೆಳೆ ಉತ್ಪಾದನೆ ಮೇಲೂ ಪರಿಣಾಮ ಬೀಳುವ ಆತಂಕ ಎದುರಾಗಿದೆ. ಆದರೆ ರೈತರ ಬೇಡಿಕೆಗೆ ಅನುಗುಣವಾಗಿ ಬೀಜ ಪೂರೈಕೆ ಮಾಡಲು ಕೃಷಿ ಇಲಾಖೆ ವಿಫಲವಾಗಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ತಕ್ಷಣವೇ ಜಿಲ್ಲೆಗೆ ಅಗತ್ಯ ಪ್ರಮಾಣದ ಸೋಯಾಬಿನ್ ಬೀಜ ಪೂರೈಕೆ ಮಾಡಿ ರೈತರ ಸಂಕಷ್ಟಕ್ಕೆ ಸ್ಪಂದಿಸಬೇಕು ಎಂದು ಆಗ್ರಹಿಸಿದ್ದಾರೆ.



ಪ್ರಸಕ್ತ ವರ್ಷ ಜಿಲ್ಲೆಯಲ್ಲಿ ಸೋಯಾಬಿನ್ ಬಿತ್ತನೆ ಬೀಜಕ್ಕೆ ರೈತರಿಂದ ಹೆಚ್ಚಿನ ಬೇಡಿಕೆ ಇದೆ. ಕಳೆದ ವರ್ಷ 7,296 ಕ್ವಿಂಟಲ್ ಸೋಯಾಬಿನ್ ಬೀಜ ವಿತರಿಸಲಾಗಿತ್ತು. ಪ್ರಸಕ್ತ ವರ್ಷ 10,500 ಕ್ವಿಂಟಲ್ ಸೋಯಾಬಿನ್ ಬೀಜ ವಿತರಿಸಲಾಗಿದೆ. ರೈತರ ಬೇಡಿಕೆಗೆ ಅನುಗುಣವಾಗಿ ಬೀಜ ಪೂರೈಸಲು ಕೃಷಿ ಇಲಾಖೆ ಸಿದ್ಧವಿದೆ. ಸೋಯಾಬಿನ್ ಬಿತ್ತನೆಗೆ ಅಧಿಕ ತೇವಾಂಶ ಅಗತ್ಯವಿದ್ದು, ರೈತರು ಅವಸರ ಮಾಡದೇ ಭೂಮಿಯ ತೇವಾಂಶದ ಪ್ರಮಾಣ ನೋಡಿಕೊಂಡು ಬಿತ್ತನೆ ಮಾಡಬೇಕು.

■ ಡಾ.ಮಲ್ಲಿಕಾರ್ಜುನ ಕೆ., ಜಂಟಿ ಕೃಷಿ ನಿರ್ದೇಶಕರು ಹಾವೇರಿ

ರೈಲ್ವೆ ಇಲಾಖೆಯ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡಿಗರಿಗೆ ಅನ್ಯಾಯ

ಹಾವೇರಿ: ರೈಲ್ವೆ ಇಲಾಖೆಯ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಪ್ರವೀಣಕುಮಾರ ಶೆಟ್ಟಿ ಬಣದ ಪದಾಧಿಕಾರಿಗಳು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಕಾಗಿನೆಲೆ ರಸ್ತೆಯ ಮುರುಘಾಮಠದಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿ, ಹಳೆಯ ಪಿ.ಬಿ. ರಸ್ತೆ, ಹೊಸಮನಿ ಸಿದ್ದಪ್ಪ ವೃತ್ತದ ಮಾರ್ಗವಾಗಿ ಸಾಗಿ ತಾಪಂ ಆವರಣದಲ್ಲಿನ ಸಂಸದರ ಕಚೇರಿಗೆ ತೆರಳಿ ಅಲ್ಲಿ ಸಂಸದರ ಕಚೇರಿ ಸಹಾಯಕರಿಗೆ ಮನವಿ ಸಲ್ಲಿಸಿದರು.

ಕೇಂದ್ರ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುವ ರೈಲ್ವೆ ಇಲಾಖೆಯು ದೇಶಾದ್ಯಂತ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುತ್ತಿದ್ದು ಇಂಗ್ಲೀಷ್ ಮತ್ತು ಸ್ಥಳೀಯಭಾಷಾ ಮಾಧ್ಯಮದಲ್ಲಿ ಮಾತ್ರವೇ ಪರೀಕ್ಷೆಗಳನ್ನು ನಡೆಸುತ್ತಿದೆ. ಆದರೆ ಕರ್ನಾಟಕದಲ್ಲಿ ಇಂಗ್ಲೀಷ್ ಮತ್ತು ಹಿಂದಿ ಭಾಷೆಯಲ್ಲಿ ಪರೀಕ್ಷೆಗಳನ್ನು ನಡೆಸುವ ಮೂಲಕ ತಾರತಮ್ಯ ನೀತಿ ಪಾಲಿಸಲಾಗುತ್ತಿದೆ. ಅಂದರೆ ಅಂತಾರಾಷ್ಟ್ರೀಯ ಭಾಷೆ ಹಾಗೂ ಆಯಾ ರಾಜ್ಯಗಳ ಪ್ರಾದೇಶಿಕ ಭಾಷೆಗಳಲ್ಲಿ ದ್ವಿಭಾಷಾ ಸೂತ್ರದ ಅಡಿಯಲ್ಲಿ ಪರೀಕ್ಷೆ ನಡೆಸಬೇಕೆಂದು ಹಲವು ಹೋರಾಟಗಳನ್ನು ಸಂಘಟನೆ ನಡೆಸುತ್ತಲೇ ಬಂದಿದೆ. ಈ ಕುರಿತು ಮಾಜಿ ಸಿಎಂ ಹಾಗೂ ಸಂಸದರಾದ ಬಸವರಾಜ ಬೊಮ್ಮಾಯಿ ಕೇಂದ್ರ ಸರ್ಕಾರದ ಗಮನ ಸೆಳೆದು ವ್ಯವಸ್ಥೆ ಸರಿಪಡಿಸಬೇಕೆಂದು ಆಗ್ರಹಿಸಿದರು.

ಈ ಕುರಿತು ಸಂಘಟನೆಯ ಜಿಲ್ಲಾಧ್ಯಕ್ಷ ಮಂಜುನಾಥ ಓಲೇಕಾರ ಮಾತನಾಡಿ, ರೈಲ್ವೆ ಇಲಾಖೆಯಲ್ಲಿ ಕನ್ನಡ ಭಾಷೆಯ ನಿರ್ಲಕ್ಷ್ಯ ಹಾಗೂ ಸಂವಿಧಾನ ಉಲ್ಲಂಘನೆ ಆಗುತ್ತಿರುವುದನ್ನು ಕರ್ನಾಟಕ ರಕ್ಷಣಾ ವೇದಿಕೆ ತೀವ್ರವಾಗಿ ಖಂಡಿಸುತ್ತದೆ. ಭಾರತೀಯ ರೈಲ್ವೆ ಇಲಾಖೆಯಲ್ಲಿ ವಿವಿಧ ನೇಮಕಾತಿ ಪ್ರಕ್ರಿಯೆಗಳಲ್ಲಿ ಕನ್ನಡಿಗ ಅಭ್ಯರ್ಥಿಗಳಿಗೆ ನಿರಂತರವಾಗಿ ಅನ್ಯಾಯ ಆಗುತ್ತಿದೆ. ಸ್ಥಳೀಯ ಕನ್ನಡ ಭಾಷೆಯ ಕಡೆಗಣನೆ ಹಾಗೂ ಸ್ಥಳೀಯ ಯುವಕರ ಹಕ್ಕುಗಳ ಹರಣದ ವಿಚಾರವನ್ನು ಅನೇಕ ಬಾರಿ ಕೇಂದ್ರ ಸರ್ಕಾರದ ಗಮನಕ್ಕೆ ತಂದರು ಯಾವುದೇ ಕ್ರಮವಾಗಿಲ್ಲ. ನೇಮಕಾತಿ ಪರೀಕ್ಷೆಗಳು ಹಾಗೂ ಆಡಳಿತ ಕ್ರಮಗಳು ಮುಖ್ಯವಾಗಿ ಹಿಂದಿ ಮತ್ತು ಇಂಗ್ಲೀಷ್ ಭಾಷಾ ಕೇಂದ್ರಿತವಾಗಿದೆ. ಇದರಿಂದ ಕನ್ನಡ ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿದ ಕನ್ನಡಿಗರಿಗೆ ಅನ್ಯಾಯವಾಗುತ್ತದೆ. ಅಲ್ಲದೇ ರೈಲ್ವೆ ಇಲಾಖೆಯಲ್ಲಿ ಮುಂಬಡ್ತಿ ನೀಡುವಲ್ಲಿ ಕನ್ನಡಿಗರಿಗೆ ಅನ್ಯಾಯ ಎಸಗಲಾಗುತ್ತಿದೆ. ಕಳೆದ ಮೂರು ವರ್ಷಗಳಿಂದ ಕನ್ನಡಿಗ ನೌಕರರಿಗೆ ಮುಂಬಡ್ತಿ ನೀಡುತ್ತಿಲ್ಲ, ಕೂಡಲೆ ಇದನ್ನು ಸರಿಪಡಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಕಾರ್ಯಧ್ಯಕ್ಷ ಮುಟ್ಟಪ್ಪ ಹಿತ್ತಲಮನಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕುಮಾರ ಸುಳ್ಳನವರ, ಮುಖಂಡರಾದ ಮಾರುತಿ ಹಾಲಗಿ, ಅನಸುಯಾ ಸಿದ್ದಪ್ಪಳ್ಳವರ, ಮಹಾದೇವಪ್ಪ ಹೆಡಿಗೊಂಡ, ವಿಜಯ ಕುಮಾರ ಎನ್.ಎಂ, ಜಿಲ್ಲಾ ವಕ್ತಾರ ಮೌಲಾಸಾಬ ನದಾಫ, ಮಾಲತೇಶ ಜಿ.ಕೆ., ದ್ಯಾಮಣ್ಣ ಮಲ್ಲಾಡದ, ಫಕ್ಕಿರಪ್ಪ ಕಟ್ಟಿಮನಿ, ಮೌಲಾಲಿ ಯರೆಮನಿ, ಸುಧಾ ಪಾಟೀಲ, ತನುಶ್ರೀ ಧಾರವಾಡ, ಯುವರಾಜ ನವಲಗುಂದ, ರಮೇಶ ದಾಸಪ್ಪನವರ, ಸುರೇಶ ಲಚಮಣ್ಣನವರ, ಸ್ವಾತಿ ಮಡಿವಾಳರ, ಪ್ರತೀಶಾ ಓಲೇಕಾರ, ಲಕ್ಷ್ಮೀ ದೊಡ್ಡಮನಿ, ರತ್ನಮ್ಮ ಸಂಗಪ್ಪನವರ, ಇದ್ದರು.





ಮೂಡಲಗಿ: ನಗರದ ಸಿಪಿಐ ಕಚೇರಿಯಲ್ಲಿ ವಿವಿಧ ಕಡೆಗಳಲ್ಲಿ ಕಳೆದುಹೋಗಿದ್ದ ಸುಮಾರು 15 ಮೊಬೈಲ್ ಗಳನ್ನು ಪತ್ತೆ ಮಾಡಿ ಮೂಡಲಗಿ ಪೊಲೀಸ್ ಇಲಾಖೆ ವತಿಯಿಂದ ಮೊಬೈಲಗಳನ್ನು ಮಾಲಿಕರಿಗೆ ಹಸ್ತಾಂತರಿಸಿದರು.

ಮಾಲೀಕರಿಗೆ ಮೊಬೈಲ್ ಮರಳಿಸಿದ ಪೊಲೀಸರು

ಮೂಡಲಗಿ: ಪೊಲೀಸ್ ಇಲಾಖೆ ಯಾವತ್ತು ಸಾರ್ವಜನಿಕರ ಹಿತ ಕಾಯುತ್ತದೆ. ಅನ್ಯಾಯವಾದರೆ ಧೈರ್ಯವಾಗಿ ಠಾಣೆಗೆ ಬಂದು ದೂರದಾಖಲಿಸಬೇಕು. ಕಳೆದುಕೊಂಡ ವಸ್ತುಗಳ ಬಗ್ಗೆ ಮಾಹಿತಿಯನ್ನು ಖರೀದಿಸಿದ ರಸೀದಿಯ ಸಮೇತ ದೂರು ದಾಖಲಿಸಿದರೆ ಕಳೆದುಕೊಂಡು ವಸ್ತುವನ್ನು ಹುಡುಕುವುದು ಸುಲಭ ಎಂದು ಸಿಪಿಐ ಶ್ರೀಶೈಲ ಬ್ಯಾಕೂಡ ಹೇಳಿದರು

ಮಂಗಳವಾರ ನಗರದ ಸಿಪಿಐ ಕಚೇರಿಯಲ್ಲಿ ವಿವಿಧ ಕಡೆಗಳಲ್ಲಿ ಕಳೆದುಹೋಗಿದ್ದ ಸುಮಾರು 15 ಮೊಬೈಲ್ ಗಳನ್ನು ಟ್ರೇಸ್ ಮಾಡಿ ಮೂಡಲಗಿ ಪೊಲೀಸ್ ಇಲಾಖೆ ವತಿಯಿಂದ ಮೋಬೈಲಗಳನ್ನು ಮಾಲಿಕರಿಗೆ ನೀಡಿ ಮಾತನಾಡಿದರು.

ಪಿಎಸ್ಐ ರಾಜು ಪೂಜೇರಿ ಮಾತನಾಡಿ, ಸದಾ ಇಲಾಖೆಯ ಸಿಬ್ಬಂದಿ ಜಾಗೃತರಾಗಿರುತ್ತಾರೆ.ಯಾವುದೇ ವಸ್ತುಗಳು ಕಳೆದಂತೆ ಇಟ್ಟು ಕೊಳ್ಳುವದು ಸಹ ಕಾನೂನಿಗೆ ಸಹಕರಿಸಿದಂತೆ ಆಕಸ್ಮಾತ ಕಳೆದರೆ ಅದನ್ನು ಹುಡುಕುವುದು ನಮ್ಮ ಜವಾಬ್ದಾರಿಯಾಗಿದ್ದು, ಖರೀದಿಸಿದ ವಸ್ತುಗಳ ರಸೀದಿ ಮುಖ್ಯ ಎಂದರು

ಸಿಎಐಆರ್ ವತಿಯಿಂದ ಕಳೆದುಕೊಳ್ಳಲಾಗಿದ್ದ ಮೊಬೈಲ್‌ಗಳನ್ನು ಟ್ರೇಸ್ ಮಾಡಲಾಗಿದ್ದು, ಸಿಕ್ಕ ಮೊಬೈಲ್‌ಗಳನ್ನು ಅವುಗಳ ಮಾಲೀಕರಿಗೆ ಒಪ್ಪಿಸಲಾಯಿತು. ಈ ಸಂದರ್ಭದಲ್ಲಿ ಪ್ರೊಬೇಶನರಿ ಪಿಎಸ್ಐ ರಾಜು ಪಿ. ಪೂಜಾರ, ಸಿಬ್ಬಂದಿಗಳಾದ ಎಸ್ ಜಿ ಮಣ್ಣಾಪೂರ, ಎಲ್ ಎಸ್ ಜೊಕ್ಕಾನಟ್ಟಿ, ಕೆ ಸಿ ಬಾಗಲಿ ಹಾಗೂ ಲಕ್ಷ್ಮಣ ಗುಡೇರ ಉಪಸ್ಥಿತರಿದ್ದರು.



ಗೋಕಾಕ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕಕ್ಕೆ ನೂತನವಾಗಿ ಅವಿರೋಧ ಆಯ್ಕೆಗೊಂಡ ಕಾರ್ಯಕಾರಿ ಸಮಿತಿಯ ಸದಸ್ಯರು ಶಾಸಕ ರಮೇಶ ಜಾರಕಿಹೊಳಿ ಅವರನ್ನು ಮಂಗಳವಾರದಂದು ಅವರ ಕಾರ್ಯಾಲಯದಲ್ಲಿ ಸತ್ಕರಿಸಿದರು. ಜಿಲ್ಲಾ ಉಪಾಧ್ಯಕ್ಷ ಜಿ.ಆರ್. ಸನದಿ, ತಾಲೂಕು ಅಧ್ಯಕ್ಷ ಪ್ರಕಾಶ ಮುರ್ಕಿಭಾಂವಿ, ಉಪಾಧ್ಯಕ್ಷ ಕೆ.ಕೆ. ಹೊಳಕರ ಹಾಗೂ ಎಸ್. ಆರ್. ಮಗದು, ಪ್ರಧಾನ ಕಾರ್ಯದರ್ಶಿ ವಿ. ವಿ. ನಾಯ್ಕರ, ಖಜಾಂಚಿ ಎಸ್. ಬಿ. ಕೋಟುರ, ಸಹ ಕಾರ್ಯದರ್ಶಿ ಬಿ ಎಚ್ ಭಜಂತ್ರಿ, ಎಮ್. ಬಿ. ಪಾಟೀಲ, ಈರಣ್ಣ ಡುಮ್ಮಗೋಳ, ಎಸ್. ಎಸ್ ನಂದಿಮಠ, ಎಮ್ ಬಿ ನಾಲಪರೋಶಿ, ಜಿ ಪಿ ದುರ್ಗನ್ನವರ, ಎಸ್.ಎಮ್. ಪಟೀಲ ಇದ್ದರು.

ಕಿರುಸುದ್ದಿ

ವಿದ್ಯಾರ್ಥಿಗಳ ಸಾಧನೆ



ಕಕಮರಿ: ಗ್ರಾಮದ ಶ್ರೀ ಅಮ್ಮಾಜೇಶ್ವರಿ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಯರಾದ ಸ್ಪರ್ಧಾ ಬಾಳಿಕಾಯಿ, ಅರ್ಪಿತಾ ನರಸಗೊಂಡ, ಸುಶ್ಮಿತಾ ಮಾಳಿ, ಸಮರ್ಥ ನಾಟೀಕಾರ, 2026-27ನೇ ಸಾಲಿನ ರಾಜ್ಯ ಮಟ್ಟದ ಪ್ರತಿಷ್ಠಿತ ಸಂಗೋಳ್ಳಿ ರಾಯಣ್ಣ ವಸತಿ ಶಾಲೆಗೆ ಆಯ್ಕೆಯಾಗಿದ್ದಾರೆ. ಹಾಗೂ ಗಂಗೋತ್ರಿ ಬಸರಗಿ ಮೊರಾರ್ಜಿ ವಸತಿ ಶಾಲೆಗೆ ಆಯ್ಕೆಯಾಗಿದ್ದಾಳೆ. ಆಯ್ಕೆಯಾದವರಿಗೆ ಶಾಲೆಯ ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯೋಪಾಧ್ಯಾಯರು, ಶಿಕ್ಷಕವೃಂದದವರು, ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದ್ದಾರೆ. ಮಾರ್ಗದರ್ಶಕರಾಗಿ ಶಿಕ್ಷಕ ಕಲ್ಮೇಶ ಹೊನವಾಡ ಕಾರ್ಯನಿರ್ವಹಿಸಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ: ತಾಲೂಕಿನ ಉಚಗಾಂವ ಪಿಎಂಶ್ರೀ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಪೂರ್ವ ಪ್ರಾಥಮಿಕ ತರಗತಿಗಳಿಗೆ ತಾತ್ಕಾಲಿಕವಾಗಿ 10 ತಿಂಗಳ ಅವಧಿಗೆ ಅತಿಥಿ ಶಿಕ್ಷಕಿ ಮತ್ತು ಆಯಾ ಹುದ್ದೆಗಳ ನೇಮಕಾತಿಗಾಗಿ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಮೇ 30 ರೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಮರಾಠಿ ಮಾದರಿ ಶಾಲೆಯ ಮುಖ್ಯೋಪಾಧ್ಯಾಯರ ಕಚೇರಿ, ಉಚಗಾಂವ. ಇಲ್ಲಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮುಖ್ಯ ಶಿಕ್ಷಕರು ಎ.ವಾಯ್ ತಳವಾರ, ಸಂಪರ್ಕಿಸಬಹುದಾಗಿದೆ ಎಂದು ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಮರಾಠಿ ಮಾದರಿ ಶಾಲೆಯ ಮುಖ್ಯೋಪಾಧ್ಯಾಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊಲೆ ಮಾಡಿದ ಆರೋಪಿಗಳ ಬಂಧನ

ಬೆಳಗಾವಿ: ಜಿಲ್ಲೆಯ ಮೂಡಲಗಿ ಪಟ್ಟಣದ ವಡ್ಡರ ಓಣಿಯ ಕಳಸನ್ನವರ ಪ್ಲಾಟ್‌ನಲ್ಲಿ ಮೇ 23ರಂದು ನಡೆದಿದ್ದ ಯುವಕನ ಭೀಕರ ಕೊಲೆ ಪ್ರಕರಣವನ್ನು ಪೊಲೀಸರು 24 ಗಂಟೆಯಲ್ಲೇ ಪತ್ತೆ ಹಚ್ಚಿ ಆರೋಪಿಗಳನ್ನು ಬಂಧಿಸಿದ್ದಾರೆ. ಲಕ್ಷ್ಮಣ ಬಂಡಿವಡ್ಡರ (22) ಕೊಲೆಯಾದ ದುರ್ದೈವಿ. ಆರೋಪಿಗಳು ತಿಮ್ಮಣ್ಣನಿಗೆ ಚೂರಿಯಿಂದ ಬರ್ಬರವಾಗಿ ಇರಿದು ಪರಾರಿಯಾದ ತಕ್ಷಣ, ಆತ ರಕ್ತದ ಮಡುವಿನಲ್ಲೇ ಬಿದ್ದೂ ತನ್ನ ಸಂಬಂಧಿಕರ ಮನೆಗೆ ಫೋನ್ ಕರೆ ಮಾಡಿದ್ದನು. ''ನನಗೆ ಯಾರೋ ಚಾಕು ಇರಿದಿದ್ದಾರೆ ಬನ್ನಿ'' ಎಂದಿದ್ದಾನೆ. ಗಾಬರಿಗೊಂಡ ಸಂಬಂಧಿಕರು ಸ್ಥಳಕ್ಕೆ ಓಡೋಡಿ ಬರುವಷ್ಟರಲ್ಲಿ ಅತಿಯಾದ ರಕ್ತಸ್ರಾವದಿಂದಾಗಿ ತಿಮ್ಮಣ್ಣ ಪ್ರಜ್ಞೆ ತಪ್ಪಿದ್ದನು. ತಕ್ಷಣವೇ ಆತನನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಿಸದೆ ಆತ ಮೃತಪಟ್ಟಿದ್ದಾನೆ. ಆರೋಪಿಗಳ ಪತ್ತೆಗಾಗಿ ಮೂಡಲಗಿ ಪೊಲೀಸರು ವಿಶೇಷ ತಂಡಗಳನ್ನು ರಚಿಸಿ ಜಾಲ ಬೀಸಿದ್ದರು. ಈ ವೇಳೆ ಹತ್ಯೆಗೀಡಾದ ಯುವಕನ ಮೊಬೈಲ್ ಫೋನ್‌ಗೆ ಬಂದಿದ್ದ ಕೊನೆಯ ಕರೆಯನ್ನು ಬೆನ್ನಟ್ಟಿದ ತನಿಖಾಧಿಕಾರಿಗಳಿಗೆ ಕೊಲೆಯ ಇಂಚಿಂಚು ರಹಸ್ಯಗಳು ಬಿಚ್ಚಿಕೊಂಡಿವೆ. ಮೃತ ತಿಮ್ಮಣ್ಣ ತನ್ನ ದೂರದ ಸಂಬಂಧದ ಹುಡುಗಿಯೊಬ್ಬಳನ್ನು ಪ್ರೀತಿಸುತ್ತಿದ್ದನು. ವಿಷಯ ತಿಳಿದ ಯುವತಿಯ ಮನೆಯವರು ಆಕೆಗೆ ಬೇರೆ ಕಡೆ ಮದುವೆ ಮಾಡಿಕೊಟ್ಟಿದ್ದರು. ಆದರೆ, ಮದುವೆಯಾದ ಮೇಲೂ ಆ ಯುವತಿ ತಿಮ್ಮಣ್ಣನ ಜೊತೆ ಫೋನ್ ಸಂಪರ್ಕದಲ್ಲಿದ್ದಳು ಎನ್ನಲಾಗಿದೆ. ಇದರಿಂದ ತೀವ್ರ ಆಕ್ರೋಶಗೊಂಡ ಯುವತಿಯ ದೊಡ್ಡಪ್ಪನ ಮಗ ತಿಮ್ಮಣ್ಣನನ್ನು ಮುಗಿಸಲು ಸಂಚು ರೂಪಿಸಿದ್ದಾನೆ. ತನ್ನ ಮೂವರು ಅಪ್ರಾಪ್ತ ಸ್ನೇಹಿತರನ್ನು ಜೊತೆಗೂಡಿಸಿಕೊಂಡು ಒಟ್ಟು ನಾಲ್ವರ ತಂಡ ಹತ್ಯೆ ಎಸಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಅಪರಿಚಿತ ಶವ ಪತ್ತೆ

ಸಂಕೇಶ್ವರ: ಸಮೀಪದ ಸೊಲ್ಲಾಪುರ ಗೇಟ್ ಬಳಿಯ ಬೆಂಗಳೂರು- ಪೂಣೆ ಹೈವೆ ಸರ್ವಿಸ್ ರಸ್ತೆಯ ಪಕ್ಕದಲ್ಲಿ ಅಪರಿಚಿತ ಮಹಿಳೆಯ ಶವ ಪತ್ತೆಯಾಗಿದ್ದು, ಮಹಿಳೆಗೆ 50 ರಿಂದ 55 ವರ್ಷ ವಯಸ್ಸಾಗಿದ್ದು, ಕ್ರಿಮ್ ಬಣ್ಣದ ಪತ್ತಲ ಶರಗಿಗೆ ಮತ್ತು ಪತ್ತಲದ ಕೆಳಬಾಜು ಚಾಕಲೇಟ್ ಮತ್ತು ಬಿಳಿ ಬಣ್ಣದ ಡಿಸೈನ್ ಸಿರೆ ಇದ್ದು, ಕಪ್ಪು ಬಣ್ಣದ ಬ್ಲೌಸ್, ಕೆಂಪು ಬಣ್ಣದ ಲಂಗ ಧರಸಿರುತ್ತಾರೆ.ಕಿವಿಯಲ್ಲಿ ಕಿವಿಯೋಲೆ, ಮೂಗುತಿ, ಎರಡು ಕೈಗಳಲ್ಲಿ ಬಂದರಂತೆ ಚಾಕಲೇಟ್ ಬಣ್ಣದ ಪ್ಲಾಸ್ಟಿಕ್ ಬಳೆಗಳು,ಕಾಲಲ್ಲಿ ಚಾಳ ಇರುತ್ತದೆ. ಮೃತಳು ಎರಡು ಕೈ ಕಾಲುಗಳ ಬೆರಳುಗಳಿಗೆ ಕೆಂಪು ಬಣ್ಣದ ನೇಲ್ ಪಾಲೀಶ ಹಚ್ಚಿದ್ದು ಇರುತ್ತದೆ. ಯಾರಾದರು ವಾರಾಸುದಾರರು ಇದ್ದಲ್ಲಿ ಸಂಕೇಶ್ವರ ಪೊಲೀಸ್ ಠಾಣೆಯನ್ನು ಸಂಪರ್ಕಿಸಲು ತಿಳಿಸಿದ್ದಾರೆ

ರೈತರಿಗೆ ಸಕಲ ಸೌಲಭ್ಯ ಒದಗಿಸಿ

ಗೋಕಾಕ: ರೈತರು ದೇಶದ ಬೆನ್ನೆಲುಬಾಗಿದ್ದು ಕ್ಷೇತ್ರದಲ್ಲಿ ಅವರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಿ ಅವರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವುದಾಗಿ ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಅವರು, ಮಂಗಳವಾರದಂದು ನಗರದ ತಮ್ಮ ಕಾರ್ಯಾಲಯದ ಆವರಣದಲ್ಲಿ ರೈತಬಾಂಧವರಿಗೆ ಕೃಷಿ ಇಲಾಖೆಯಿಂದ ಸಹಾಯಧನದಡಿಯಲ್ಲಿ ವಿವಿಧ ಬೆಳೆಗಳ ಬಿತ್ತನೆ ಬೀಜಗಳನ್ನು ವಿತರಿಸಿ ಮಾತನಾಡಿದರು.

ರೈತರಿಗೆ ಅವಶ್ಯವಿರುವ ಸೋಯಾಬಿನ, ಗೋವಿನಜೋಳ, ಸೂರ್ಯಕಾಂತಿ, ಹೈಬ್ರೀಡ ಜೋಳ ಇತ್ಯಾದಿ ಬೆಳೆಗಳ ದಾಸ್ತಾನು ಸಾಕಷ್ಟಿದ್ದು ಅವುಗಳನ್ನು ರೈತ ಸಂಪರ್ಕ ಕೇಂದ್ರದಲ್ಲಿ ವಿತರಿಸಲಾಗುತ್ತಿದೆ. ರೈತರು ಕೃಷಿ ಇಲಾಖೆ ಅಧಿಕಾರಿಗಳ ಮಾರ್ಗದರ್ಶನದಲ್ಲಿ ತಮ್ಮ ಕೃಷಿಯಲ್ಲಿ ಆಧುನಿಕ ಪದ್ಧತಿಯನ್ನು ಅಳವಡಿಸಿಕೊಳ್ಳಿ ಕೃಷಿಯೊಂದಿಗೆ ಹೈನುಗಾರಿಕೆಯಂತಹ



» ವಿವಿಧ ಬೆಳೆಗಳ ಬಿತ್ತನೆ ಬೀಜ ವಿತರಣೆ
» ಶಾಸಕ ರಮೇಶ ಜಾರಕಿಹೊಳಿ ಭಾಗಿ

ಇತರ ಉಪಕಸಬುಗಳನ್ನು ಅಳವಡಿಸಿಕೊಂಡು ಆರ್ಥಿಕವಾಗಿ ಪ್ರಗತಿ ಸಾಧಿಸಿ ಎಂದರು.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎಮ್ ಎಮ್ ನದಾಫ ಮಾತನಾಡಿ, ರೈತ ಬಾಂಧವರು ಆಧಾರ ಕಾರ್ಡ, ಜಮೀನುಗಳ ಪಹಣಿ ಪತ್ರಿಕೆ, ಬ್ಯಾಂಕ ಪಾಸ್ ಬುಕ್ ಝುರಾಕ್ಸನೊಂದಿಗೆ ರೈತ ಸಂಪರ್ಕಕೇಂದ್ರಗಳಲ್ಲಿ ಸಹಾಯಧನದಡಿ ಬಿತ್ತನೆ ಬೀಜ ಪಡೆಯುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯರಾದ ಟಿ ಆರ್ ಕಾಗಲ, ಎಂ.ಎಲ್. ತೋಳಿನವರ, ಶಾಸಕ ಕಚೇರಿಯ ಸಹಾಯಕರಾದ ಸುರೇಶ ನಸದಿ, ಕಾಂತು ಎತ್ತಿನಮನಿ, ಕೃಷಿ ಇಲಾಖೆ ಸಿಬ್ಬಂಧಿಗಳು ಸೇರಿದಂತೆ ಅನೇಕರು ಇದ್ದರು.

ಶಿವಂ ಅಸೋಸಿಯೇಟ್ಸ್‌ನಲ್ಲಿ ಠೇವಣಿ ಮಾಜಿ ಸೈನಿಕರ ಹಣ ಮರಳಿ ನೀಡಲು ಆಗ್ರಹ

ಬೆಳಗಾವಿ: ಶಿವಾನಂದ ನೀಲಣ್ಣವರ ಒಡೆತನದ ಶಿವಂ ಅಸೋಸಿಯೇಟ್ 4,500 ಕೋಟಿ ರೂಪಾಯಿ ವಂಚನೆ ಪ್ರಕರಣದ ಹಿನ್ನೆಲೆ ದೇಶ ಕಾಯುವ ಮಾಜಿ ಸೈನಿಕರು ತಮಗೆ ಬಂದಿದ್ದ ಪಿಂಚಣಿ ಹಾಗೂ ನಿವೃತ್ತಿ ಹಣವನ್ನು ಈ ಸಂಸ್ಥೆಯಲ್ಲಿ ಹೂಡಿಕೆ ಮಾಡಿದ್ದಾರೆ. ಈ ಹಿನ್ನೆಲೆ ಹೂಡಿಕೆ ಹಣ ವಾಪಸ್ ನೀಡುವಾಗ ಮೊದಲ ಆದ್ಯತೆಯನ್ನು ಮಾಜಿ ಸೈನಿಕರಿಗೆ ನೀಡಬೇಕು ಎಂದು ಮಾಜಿ ಸೈನಿಕರ ಸಂಘದ ಮಹಾಒಕ್ಕೂಟದ ಅಧ್ಯಕ್ಷ ಜಗದೀಶ ಪುಜಾರಿ, ಹೂಡಿಕೆ ಹಣ ವಾಪಸ್ ನೀಡುವಾಗ ಮೊದಲ ಆದ್ಯತೆಯನ್ನು ಮಾಜಿ ಸೈನಿಕರಿಗೆ ನೀಡಬೇಕು ಎಂದು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಸೈನಿಕರು ತಮ್ಮ ನಿವೃತ್ತಿ ಜೀವನದ ಭದ್ರತೆಗಾಗಿ ಹಾಗೂ ಒಳ್ಳೆಯ ಸದುದ್ದೇಶದಿಂದ ಈ ಹಣ ಹೂಡಿಕೆ ಮಾಡಿದ್ದರು. ಆದರೆ, ಈಗ ಇಡೀ ಪ್ರಕರಣ ಸಿಐಡಿ ಅಂಗಳದಲ್ಲಿ ಇರುವುದರಿಂದ ಸೈನಿಕರ ಕಷ್ಟದ ದುಡಿಮೆ ಮುಳುಗುವ ಆತಂಕ ಎದುರಾಗಿದೆ ಎಂದು ಮಾಜಿ ಸೈನಿಕರ ಸಂಘದ ಮಹಾ ಒಕ್ಕೂಟವು ಕಳವಳ ವ್ಯಕ್ತಪಡಿಸಿದೆ.

ಮಂಗಳವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಜಗದೀಶ್ ಪುಜಾರಿ ಅವರು, ಸರ್ಕಾರ

» ನಿವೃತ್ತ ಯೋಧರು ಇನ್ನುಮುಂದೆ ಇಂತಹ ಅನಧಿಕೃತ ಸಂಸ್ಥೆಗಳಲ್ಲಿ ಹಣ ಹೂಡಿಕೆ ಮಾಡದೆ, ಕೇವಲ ಸರ್ಕಾರದ ಕಾನೂನುಬದ ಬ್ಯಾಂಕ್‌ಗಳಲ್ಲಿ ಮಾತ್ರ ಹಣ ಹೂಡಿಕೆ ಮಾಡಿ ಜಾಗೃತರಾಗಿರಬೇಕು ಎಂದು ಒಕ್ಕೂಟವು ತನ್ನ ಸೈನಿಕರಲ್ಲಿ ಮನವಿ ಮಾಡಿಕೊಂಡರು.

ಮತ್ತು ಸಿಐಡಿ ಅಧಿಕಾರಿಗಳು ಹೂಡಿಕೆದಾರರ ಹಣವನ್ನು ಮರಳಿ ಕೊಡಿಸುವ ಪ್ರಕ್ರಿಯೆ ಆರಂಭಿಸಿದಾಗ, ಮೊದಲ ಹಂತದಲ್ಲೇ ಮಾಜಿ ಸೈನಿಕರನ್ನು ಪರಿಗಣಿಸಬೇಕು ಹಾಗೂ ಹಣ ಮರಳಿಸಲು ಮೊದಲ ಆದ್ಯತೆ ನೀಡಬೇಕು' ಎಂದು ಪತ್ರಿಕಾಗೋಷ್ಠಿಯ ಮೂಲಕ ಆಗ್ರಹಿ ಸಿದರು. ಇನ್ನು ಎರಡು ಮೂರು ದಿನಗಳಲ್ಲಿ ಈ ಸಂಬಂಧ ಜಿಲ್ಲಾಧಿಕಾರಿಗಳಿಗೂ ಅಧಿಕೃತ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು. ಈ ವೇಳೆ ಮಾಜಿ ಸೈನಿಕರ ಮಾಹಾವಕ್ಕೂಟದ ಎಲ್ಲ ಪದಾಧಿಕಾರಿಗಳು, ಸದಸ್ಯರುಗಳು, ಹಲವರು ಕಾರ್ಯಕರ್ತರು ಪಾಲ್ಗೊಂಡಿದ್ದರು.





ಗುಣಮಟ್ಟದ ಬಿತ್ತನೆ ಬೀಜ ಬಳಸಿ

ರಾಮದುರ್ಗ: ರೈತರು ಬಿತ್ತನೆಗೆ ಗುಣ ಮಟ್ಟದ ಹಾಗೂ ಕೃಷಿ ಇಲಾಖೆ ಶಿಫಾರಸು ಮಾಡಿರುವ ಉತ್ತಮ ಬೀಜ ಬಳಕೆ ಮಾಡುವ ಮೂಲಕ ಹೆಚ್ಚಿನ ಇಳುವರಿ ಪಡೆಯಬೇಕೆಂದು ಡಿಸಿಸಿ ಬ್ಯಾಂಕ್ ನಿರ್ದೇಶಕ, ಬಟಕುರ್ಕಿ ಪ್ರಾಥಮಿಕ ಕಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಲ್ಲಣ್ಣ ಯಾದವಾಡ ಹೇಳಿದರು.

ಬಟಕುರ್ಕಿಯಲ್ಲಿ ಬಟಕುರ್ಕಿ ಪ್ರಾಥಮಿಕ ಕಷಿ ಪತ್ತಿನ ಸಹಕಾರ ಸಂಘ ಹಾಗೂ ಕೃಷಿ ಇಲಾಖೆಯ ಸಹಯೋಗದಲ್ಲಿ ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಶಿದ್ದನಗೌಡ್ರ, ನಿರ್ದೇಶಕರಾದ ಹೇಮಂತ ದೇಸಾಯಿ, ಪಡದಪ್ಪ ನಿಜಗುಲಿ, ಶ್ರೀನಿವಾಸ ಬಾನಿ, ರಂಗಪ್ಪ ತಳವಾರ, ಶಂಕರ ಲಮಾಣಿ, ಗ್ರಾಪಂ ಮಾಜಿ ಅಧ್ಯಕ್ಷ ಹನಮಂತ ಲಕ್ಕನ್ನವರ ಸೇರಿದಂತೆ ಹಲವರಿದ್ದರು.

ಶಾಂತಿಯುತವಾಗಿ ಹಬ್ಬ ಆಚರಿಸಿ

ಸಂಕೇಶ್ವರ: ಶಾಂತಿ ಹಾಗೂ ಸಾಮರಸ್ಯಕ್ಕೆ ಹೆಸರು ವಾಸಿಯಾಗಿರುವ ಸಂಕೇಶ್ವರ ಪಟ್ಟಣದಲ್ಲಿ ಹಿಂದೂ-ಮುಸ್ಲಿ ಬಾಂಧವರು ಪರಸ್ಪರ ಸಹಕಾರ ಮತ್ತು ಸೌಹಾರ್ದತೆಯಿಂದ ಶಾಂತಿಯುತವಾಗಿ ಬಕ್ರೀದ್ ಹಬ್ಬ ಆಚರಿಸಬೇಕು ಎಂದು ಸಿಪಿಐ ಗಣಪತಿ ಕೊಂಗನೊಳ್ಳಿ ಹೇಳಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಬಕ್ರೀದ್ ಹಬ್ಬದ ನಿಮಿತ್ತ ಆಯೋಜಿಸಿದ್ದ ಪೂರ್ವಭಾವಿ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು, ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆ ಸದಾ ಸಜ್ಜಾಗಿದ್ದು, ಉಭಯ ಸಮುದಾಯಗಳು ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಅನಗತ್ಯ ಗೊಂದಲಕ್ಕೆ ಅವಕಾಶ ನೀಡದೇ ಸಾಮರಸ್ಯದಿಂದ ಹಬ್ಬಗಳನ್ನು ಆಚರಿಸಬೇಕು ಎಂದು ಮನವಿ ಮಾಡಿದರು.

ಡಾ. ಜಯಪ್ರಕಾಶ್ ಕರಜಗಿ, ಮುಕ್ತಾರ ನಧಾಪ ಮಾತನಾಡಿದರು.

ಈ ಸಂಧರ್ಭದಲ್ಲಿ ಮುಸ್ಲಿಂ ಸಮಾಜದ ಪ್ರಮುಖರಾದ ಹರುಣ ಮುಲ್ಲಾ, ದಸ್ತಗಿರಿ ತೇರಣಿ, ಅಲ್ತಾಪ ಶಾಯನ್ನವರ,ಮುಖಂಡರಾದ ಪ್ರಮೋದ ಹೊಸಮನಿ, ಆನಂದ ಸಂಸುದ್ದಿ, ಗಜಾನನ ಕ್ವಳ್ಳಿ, ನ್ಯಾಯವಾದಿ ಸಂತೋಷ ನೇಸರಿ, ಪ್ರವೀಣ್ ನೇಸರಿ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಹಾಜರಿದ್ದರು.



ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗೆ ಅರ್ಜಿ ಆಹ್ವಾನ

ಬೆಳಗಾವಿ: 2026-27 ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ, ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಆನ್ಲೈನ್ ಅರ್ಜಿ ಆಹ್ವಾನಿಸಲಾಗಿದೆ. https://shp.karnataka.gov.in/bcwd ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelp-line@gmail.com ಇ-ಮೇಲ್ ಮುಖಾಂತರ ಅಥವಾ ಜಿಲ್ಲಾ/ತಾಲೂಕು ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಳಗಾವಿ ಇವರನ್ನು ಕಚೇರಿ ವೇಳೆಯಲ್ಲಿ ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದಾಗಿದೆ. ಆನ್ಲೈನ್ ಮೂಲಕ ಅರ್ಜಿ ಸಲ್ಲಿಸುಲು ಜೂನ್ 8 ಕೊನೆಯ ದಿನವಾಗಿರುತ್ತದೆ ಎಂದು ಬೆಳಗಾವಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೀಜ, ಗೊಬ್ಬರದ ಸದುಪಯೋಗ ಪಡೆದುಕೊಳ್ಳಿ

ನೇಸರಗಿ: ನೇಸರಗಿ ಭಾಗದಲ್ಲಿ ಚೆನ್ನಾಗಿ ಮಳೆಯಾಗಿದ್ದು, ಮುಂದಿನ ದಿನಗಳಲ್ಲಿ ಇನ್ನು ಮಳೆಯಾಗುವ ಸಾಧ್ಯತೆ ಇದ್ದು, ಮುಂಗಾರು ಬಿತ್ತನೆ ಇನ್ನೇನು ಪ್ರಾರಂಭವಾಗಿದ್ದು, ರೈತರು ಬಿತ್ತನೆಗೆ ಬೇಕಾಗುವ ಬೀಜ ಮತ್ತು ಗೊಬ್ಬರಗಳನ್ನು ಕೃಷಿ ಇಲಾಖೆಯ ಸಹಯೋಗದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಲ್ಲಿ ಬೀಜ ಗೊಬ್ಬರ ಪಡೆದು ಬಿತ್ತನೆಕಾರ್ಯದಲ್ಲಿ ರೈತರು ಪಾಲ್ಗೊಳ್ಳಿ ಎಂದು ಕಿತ್ತೂರು ಶಾಸಕ ಬಾಬಾ ಸಾಹೇಬ ಪಾಟೀಲ ಹೇಳಿದರು.

ಅವರು ಮಂಗಳವಾರದಂದು ನೇಸರಗಿ ಗ್ರಾಮದ ಪ್ರಾಥಮಿಕ ಕೃಷಿ ಸಂಘದ ಬೀಜ ವಿತರಣೆ ಕೇಂದ್ರದಲ್ಲಿ ಜಿಲ್ಲಾ ಪಂಚಾಯತ ಬೆಳಗಾವಿ, ಕೃಷಿ ಇಲಾಖೆ ಬೈಲಹೊಂಗಲ, ರೈತ ಸಂಪರ್ಕ ಕೇಂದ್ರ ನೇಸರಗಿ ಇವರ ಸಹಯೋಗದಲ್ಲಿ ಮುಂಗಾರು ಬೆಳೆಗೆ ರೈತರಿಗೆ ಸೋಯಾಬೀನ್ ಬೀಜ ವಿತರಣೆ ಉದ್ಘಾಟನೆ ನೆರವೇರಿಸಿ ಮಾತನಾಡಿದರು.



ಕಾರ್ಯಕ್ರಮದಲ್ಲಿ ಮುಖಂಡರಾದ ಸಚಿನ ಪಾಟೀಲ, ಮಾಜಿ ಜಿ ಪಂ ಸದಸ್ಯ ನಿಂಗಪ್ಪ ಅರಿಕೇರಿ, ಅಡಿವಪ್ಪ ಮಾಳಣ್ಣವರ,ಜಿಲ್ಲಾ ಕೃಷಿ ಉಪ ನಿರ್ದೇಶಕರಾದ ಸಲೀಮ್ ಸಂಗ್ರಾವತ, ಬೈಲಹೊಂಗಲ ತಾಲೂಕ ಕೃಷಿ ಅಧಿಕಾರಿ ಬಿ ಎಲ್ ದಳವಾಯಿ, ಬಾಳಪ್ಪ ಮಾಳಗಿ ವೀರಪ್ಪಣ್ಣ ಚೋಭಾರಿ, ಎಸ್ ಎಂ ಪಾಟೀಲ, ಮಲ್ಲೇಶಪ್ಪ ಮಾಳಣ್ಣವರ, ನಿಂಗಪ್ಪ ತಳವಾರ, ಮಲ್ಲಿಕಾರ್ಜುನ ಕಲ್ಲೋಳಿ, ಗಂಗಪ್ಪ ಕಾಡಣ್ಣವರ, ಸಿದ್ದಪ್ಪ ತುಳಜಣ್ಣವರ, ಬಸವರಾಜ ಚಿಕ್ಕನಗೌಡ್ರ, ಅಡಿವಪ್ಪ ಚಿಗರಿ,ನೇಸರಗಿ ರೈತಸಂಪರ್ಕ ಕೇಂದ್ರದ ಅಧಿಕಾರಿ ಆರ್ ಐ ಕುಂಬಾರ, ಸುರೇಶ ಅಗಸಿಮನಿ, ವಿನಾಯಕ ಮಾಸ್ತಮರಡಿ, ಪಿ ಕೆ ಪಿ ಎಸ್ ವ್ಯವಸ್ಥಾಪಕ ವಿಶ್ವನಾಥ ಕೂಲಿನವರ, ಕೃಷಿ ಇಲಾಖೆ, ಪ್ರಾಥಮಿಕ ಕೃಷಿ ಸಂಘದ ಸಿಬ್ಬಂದಿ, ನೇಸರಗಿ, ಸೋಮನಟ್ಟಿ ಗ್ರಾಮಗಳ ಮುಖಂಡರು, ರೈತರು, ಗ್ರಾಮಸ್ಥರು ಇದ್ದರು.

ಉನ್ನತ ಸ್ಥಾನಕ್ಕೇರಲು ಗುರು ಕೃಪೆ ಅವಶ್ಯ: ಶ್ರೀಗಳು

ಚನ್ನಮ್ಮನ ಕಿತ್ತೂರು: ಭಾರತೀಯ ಸಂಸ್ಕೃತಿ ಪರಂಪರೆಯ ಗುರುವಿಗೆ ಉನ್ನತ ಸ್ಥಾನವಿದ್ದು ಸನ್ಮಾರ್ಗದಲ್ಲಿ ನಡೆದು ಉನ್ನತ ಸ್ಥಾನ ತಲುಪಲು ಗುರು ಕೃಪೆ ಅವಶ್ಯ ಎಂದು ಬಿಳಕಿ-ಅವರೊಳ್ಳಿ ರುದ್ರಸ್ವಾಮಿ ಮಠದ ಚನ್ನಬಸವದೇವರು ಹೇಳಿದರು.

ಅವರು ಸಮೀಪದ ಹಂದೂರ ಹುಲಿಕೊತ್ತಲ ಗ್ರಾಮದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ 2009 ಮತ್ತು 10 ನೇ ಸಾಲಿನ ವಿದ್ಯಾರ್ಥಿಗಳಿಂದ ನಡೆದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿ ತಾವು ಕಲಿತ ಶಾಲೆ ಮತ್ತು ವಿದ್ಯೆ ನೀಡಿದ ಗುರುಗಳ ಸೇವೆಯನ್ನು ಸ್ಮರಿಸಿ ಅವರನ್ನು ಸತ್ಕರಿಸಿ ಗುರುವಂದನೆ ಸಲ್ಲಿಸುವ ಕಾರ್ಯ ಶ್ಲಾಘನೀಯ ಎಂದರು.



ಶಿಕ್ಷಕರಾದ ಲಕ್ಮೇಶ ಕುರೇರ, ಶಿವಾನಂದ ನಂದಿಹಳ್ಳಿ, ಮಹೇಶ ಹೆಗಡೆ ಮಾತನಾಡಿದರು.

ಹಂದೂರ ಹುಲಿಕೊತ್ತಲ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಶಿಕ್ಷಕ ವೃಂದವನ್ನು ಸತ್ಕರಿಸಿ ಗುರುವಂದನೆ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ರಾಣಿ ಶುಗರ್ಸ್ ಮಾಜಿ ಉಪಾಧ್ಯಕ್ಷ ವೀರೇಶ ಕಂಬಳಿ, ರೈತ ಮುಖಂಡ ಬಸಪ್ಪ ಬಶೆಟ್ಟಿ, ಮುಖ್ಯಾಧ್ಯಾಪಕ ಪಿ ಎಸ್ ಮಾದಾರ, ಹಳೆಯ ವಿದ್ಯಾರ್ಥಿಗಳಾದ ಜಗದೀಶ ಕಂಬಳಿ, ಚನ್ನಯ್ಯ ಚಿಕ್ಕಮಠ, ಬಸಮ್ಮ ಹುಲಿಕೋತ್ತಲ, ಲಕ್ಷ್ಮೀ ತುಳಜಿ, ಮಲ್ಲಿಕಜಾನ ತಿಗಡೊಳ್ಳಿ, ಸಿದ್ದಾರೂಢ ಬಡಿಗೇರ ಹಾಗೂ ಇತರರು ಇದ್ದರು.

ಪಾಲಿಕೆ ಉಪ ಆಯುಕ್ತ ರಾಷ್ಟ್ರಮಟ್ಟಕ್ಕೆ ಆಯ್ಕೆ



ಬೆಳಗಾವಿ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಂಯುಕ್ತವಾಗಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಕ್ರೀಡಾ ಸ್ಪರ್ಧೆಯಲ್ಲಿ ಬೆಳಗಾವಿ ಮಹಾನಗರ ಪಾಲಿಕೆ ಕಂದಾಯ ವಿಭಾಗದ ಉಪ ಆಯುಕ್ತ ಡಾ. ಸಿದ್ದು ಹುಲ್ಲೋಳಿ ಅವರು ಟೆನ್ನಿಸ್ ಕ್ರೀಡೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾ ಸ್ಪರ್ಧೆ

ಈ ಸಾಧನೆಗೆ ಭಾಜನರಾಗಿರುವ ಡಾ. ಸಿದ್ದು ಹುಲ್ಲೋಳಿ ಅವರನ್ನು ಮಹಾನಗರ ಪಾಲಿಕೆಯ ಮೇಯರ ಪ್ರೀತಿ ಕಾಮಕರ, ಉಪಮೇಯರ ಹಣಮಂತ ಕೊಂಗಾಲಿ ಹಾಗೂ ನಗರಸೇವಕರು, ಆಯುಕ್ತ ಕಾರ್ತಿಕ್ ಎಂ ಹಾಗೂ ಸಿಬ್ಬಂದಿ ಸನ್ಮಾನಿಸಿ ಗೌರವಿಸಿ ಅಭಿನಂದಿಸಿದ್ದಾರೆ.

ಫಲಾನುಭವಿಗಳಿಗೆ ತಾಡಪತ್ರಿ ವಿತರಣೆ

ಗೋಕಾಕ: ಸಮಾಜ ಕಲ್ಯಾಣ ಇಲಾಖೆಯಿಂದ ಗೋಕಾಕ ಹಾಗೂ ಮೂಡಲಗಿ ತಾಲೂಕಿನ 50 ಅಲೆಮಾರಿ ಜನಾಂಗದ ಕುಟುಂಬದವರಿಗೆ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಮಂಜೂರದ ಟಾರಪಾಲ್ (ತಾಡಪತ್ರಿ) ಗಳನ್ನು ಶಾಸಕ ರಮೇಶ ಜಾರಕಿಹೊಳಿ ಅವರು ಮಂಗಳವಾರದಂದು ತಮ್ಮ ಕಾರ್ಯಾಲಯದಲ್ಲಿ ವಿತರಿಸಿದರು.

ತಾಪಂ ಇಓ ಪರಶುರಾಮ ಘಸ್ತೆ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಅಶೋಕ ಮಲಬನ್ನವರ, ಕಚೇರಿ ಅಧೀಕ್ಷಕ ಎಮ್ ಎಸ್ ಪಾಟೀಲ, ಅಲೆಮಾರಿ ಸಮಾಜ ಮುಖಂಡರಾದ ಈರಣ್ಣ ಸಂಗಮನವರ, ಸ್ವಾಮಿ ಕೋಮಾರಿ, ರಾಜು ಮದ್ದೆನ್ನವರ, ಈರಪ್ಪ ಹೊಲದವರ, ಆನಂದ ಪತ್ತಾಗಿನಿ ಹಾಗೂ ಇಲಾಖೆ ಸಿಬ್ಬಂಧಿ ಇದ್ದರು.



ಗ್ರಾಮಗಳ ಅಭಿವೃದ್ಧಿಗೆ ಬದ್ಧ: ಪಾಟೀಲ



ನೇಸರಗಿ: ಕಿತ್ತೂರು ಕ್ಷೇತ್ರದ ಗ್ರಾಮಗಳ ಅಭಿವೃದ್ಧಿಗೆ, ಮೂಲ ಸೌಕರ್ಯಗಳನ್ನು ಒದಗಿಸಲು ನಿರಂತರವಾಗಿ ಕೆಲಸ ಮಾಡಿ ಜನರ ಅಪೇಕ್ಷೆಗಳಿಗೆ ತಕ್ಕಂತೆ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇನೆ ಎಂದು ಚನ್ನಮ್ಮನ ಕಿತ್ತೂರು ಶಾಸಕರಾದ ಬಾಬಾಸಾಹೇಬ ಪಾಟೀಲ ಹೇಳಿದರು.

ಅವರು ಸಮೀಪದ ಸುತಗಟ್ಟಿ ಗ್ರಾಮದಲ್ಲಿ ತುಬಾಕಿ ಅವರ ಓಣಿಯಲ್ಲಿ ರೂ 10 ಲಕ್ಷ ಅನುಧಾನದ, ಪರಗನ್ನವರ ಓಣಿಯಲ್ಲಿ ರೂ. 10 ಲಕ್ಷ ಅನುಧಾನದ ಸಿ ಸಿ ರಸ್ತೆ ಕಾಮಗಾರಿ ಮತ್ತು ಬೈರನಟ್ಟಿ ಗ್ರಾಮದಲ್ಲಿ 15 ಲಕ್ಷ ರೂಪಾಯಿಗಳ ಅನುಧಾನದಲ್ಲಿ ಮುಖ್ಯ ರಸ್ತೆ ಸಿ ಸಿ ರಸ್ತೆ ನಿರ್ಮಾಣ ಮತ್ತು ಹಣಮನಹಟ್ಟಿ ಗ್ರಾಮದಲ್ಲಿ 10 ಲಕ್ಷ ರೂಪಾಯಿಗಳ ಸಿ ಸಿ ರಸ್ತೆ ನಿರ್ಮಾಣ ಅನುಧಾನದ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ಈ ಎಲ್ಲ ಕಾಮಗಾರಿಗಳನ್ನು ಗುತ್ತಿಗೆದಾರರು ಉತ್ತಮ ಗುಣಮಟ್ಟದಲ್ಲಿ ನಿರ್ಮಾಣ ಮಾಡಲು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಸುತಗಟ್ಟಿ, ಬೈರನಟ್ಟಿ, ಹನುಮನಹಟ್ಟಿ ಗ್ರಾಮಗಳ ಹಿರಿಯರು, ಮುಖಂಡರು, ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ಲಿಂ.ಸಂಕಪ್ಪಜ್ಜನವರಿಗೆ ನುಡಿ ನಮನ

ಯಮಕನಮರಡಿ: ಕುಂದರ ನಾಡು ಶಾಬಂದರ್ ಹಾಗೂ ಇಸ್ಲಾಂಪುರ್ ಹದ್ದಿಯಲ್ಲಿರುವ ಬಾಳಯ್ಯ ಅಜ್ಜನವರ ಭಕ್ತಿ ಮಠದ ಪೂಜ್ಯರಾಗಿದ್ದ ಲಿಂಗೈಕ್ಯ ಸಂಕಪ್ಪ ಅಜ್ಜನವರ ನುಡಿ ನಮನ ಕಾರ್ಯಕ್ರಮ ಭಕ್ತಿಪೂರ್ವಕವಾಗಿ ನಡೆಯಿತು.

ತೊಲಗಿ ಮಠದ ಅದೃಶ್ಯಾನಂದ ಸ್ವಾಮೀಜಿ, ಹಾಗೂ ಯಮಕನಮರಡಿಯ ಶೂನ್ಯ ಸಂಪಾದನ ಹುಣಸಿಕೊಳ್ಳ ಮಠದ ಉತ್ತರಾಧಿಕಾರಿ ಸಿದ್ದ ಬಸವ ದೇವರು, ತವಗಮಠದ ಬಾಳಯ್ಯ ಸ್ವಾಮೀಜಿ, ಹರಿಮಂದಿರದ ಆನಂದ ಮಹಾರಾಜ್ ಗೋಸಾವಿ, ವಿಠಲ ಶರಣರು, ಮಾರುತಿಶರಣರು, ಕೃಪಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಜಾರಕಿಹೊಳಿ ಹಾಗೂ ಏಕಸ್ ಕಂಪನಿ ರೂವಾರಿ ಮಹಾಂತೇಶ್ ಪಾಟೀಲ್, ಹುಕ್ಕೇರಿ ತಾಲೂಕ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಉಪಾಧ್ಯಕ್ಷ ಅಜಿತ್ ಮುನವಳ್ಳಿ, ರವೀಂದ್ರ ಸುತಾರ್, ಲಗಮಣ್ಣ ಪನಗುದ್ದಿ, ಸತೀಶ್ ಜಾರಕಿ ಹೊಳಿಯವರ ಆಪ್ತ ಸಹಾಯಕ ಶಬಂದರ್ ಗ್ರಾಮದ ಹಿರಿಯರಾದ ನಿಂಗಪ್ಪ ಜಕ್ಕಣ್ಣವರ್, ಮಾರುತಿ ಬೀರಂಜಿ, ಬಸಗೌಡ ಹಗೆದಾಳ, ಈರಪ್ಪ ಜೀನರಾಳಿ, ಲಗಮಣ್ಣ ಪೂಜಾರಿ, ಗಜಪ್ಪ ಪಾಟೀಲ್, ಶಿಕ್ಷಕರಾದ ಪಂಗಣ್ಣವರ್, ಕರ್ನಾಟಕ ರಕ್ಷಣಾ ವೇದಿಕೆ ಉಪಾಧ್ಯಕ್ಷ ರಾಜು ಉಪನಾಸಿಪುಡಿ ಸೇರಿದಂತೆ ಮತ್ತಿತರರು ಇದ್ದರು.



ಕಿರುಸುದ್ದಿ

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶ

ಬೆಳಗಾವಿ: ನಾಗನೂರು ಶ್ರೀ ರುದ್ರಾಕ್ಷಿ ಮಠದ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಮೇ 31ರಂದು ಐಎಎಸ್ ಹಾಗೂ ಕೆಎಎಸ್ ಆಕಾಂಕ್ಷಿಗಳಿಗೆ ಇಂಡಿಯಾ ಫಾರ್ ಐಎಎಸ್ ಸಂಸ್ಥೆಯಿಂದ ಆಲ್ ಇಂಡಿಯಾ ಸ್ಕಾಲರ್‌ಶಿಪ್ ಪರೀಕ್ಷೆ ನಡೆಸಲಾಗುತ್ತಿದೆ. ಈ ಪರೀಕ್ಷೆಯಲ್ಲಿ ಭಾಗವಹಿಸುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅರ್ಹತೆಯ ಮೇರೆಗೆ ಶೇ 100 ರ ವರೆಗೆ ವಿದ್ಯಾರ್ಥಿವೇತನ ನೀಡಲಾಗುವುದು. ಈ ಪರೀಕ್ಷೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ನಮ್ಮ ಬೆಳಗಾವಿ ಭಾಗದ ಯುವ ಪರೀಕ್ಷಾರ್ಥಿಗಳು ಈ ಸ್ಕಾಲರ್ ಶಿಪ್ ಟೆಸ್ಟ್‌ನ ಲಾಭ ಪಡೆದುಕೊಳ್ಳಿ. ಹೆಚ್ಚಿನ ಮಾಹಿತಿಗಾಗಿ 99024 04443 ನಂಬರ್ ಗೆ ಸಂಪರ್ಕಿಸಿ ಎಂದು ಬೆಳಗಾವಿ ಮಹಾಂತ ವಕ್ಕುಂದ ಫೌಂಡೇಶನ್ ತಿಳಿಸಿದೆ.

ಅರ್ಜಿ ಆಹ್ವಾನ

ಬೆಳಗಾವಿ : 2026–27 ನೇ ಸಾಲಿನ ಸವದತ್ತಿ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಡಾ. ಬಿ. ಆರ್. ಅಂಬೇಡ್ಕರ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.ಬಾಲಕರ ವಿದ್ಯಾರ್ಥಿ ನಿಲಯಗಳಾದ ಸವದತ್ತಿ, ರಮಾಪೂರ ಸೈಟ್, ಮುನವಳ್ಳಿ, ಬೆನಕಟ್ಟಿ, ಹಿರೆಬೂದನೂರ ಹಾಗೂ ಬಾಲಕಿಯರ ವಿದ್ಯಾರ್ಥಿ ನಿಲಯ ಹಾಗೂ ಸವದತ್ತಿ ವಿದ್ಯಾರ್ಥಿ ನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ಜನಾಂಗಗಳಿಗೆ ಸೇರಿದ 5 ರಿಂದ 10 ನೇ ತರಗತಿಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ಜೂನ್ 30 ರೊಳಗಾಗಿ ಇಲಾಖಾ ವೆಬ್ಸೈಟ್ https://swdh-mis.karnataka.gov.in/#/ekyc ಮೂಲಕ ಅರ್ಜಿಯನ್ನು ಸಲ್ಲಿಸಿದ ನಂತರ ಅರ್ಜಿ ಪ್ರತಿಯನ್ನು ಆನ್ಲೈನಲ್ಲಿ ಸಲ್ಲಿಸಿದ ಎಲ್ಲಾ ದಾಖಲಾತಿಗಳೊಂದಿಗೆ ಭೌತಿಕ ಅರ್ಜಿಯನ್ನು ಸಂಬಂಧಿಸಿದ ನಿಲಯ ಮೇಲ್ವಿಚಾರಕರಿಗೆ ಸಲ್ಲಿಸಬೇಕೆಂದು ಸವದತ್ತಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಿ

ಯರಗಟ್ಟಿ: ಭಾರತದ ಸಂಸ್ಕೃತಿ, ಪರಂಪರೆ ಮತ್ತು ಗ್ರಾಮೀಣ ಆರ್ಥಿಕತೆಯೊಂದಿಗೆ ಗೋವು ಶತಮಾನಗಳಿಂದ ಅವಿನಾಭಾವ ಸಂಬಂಧ ಹೊಂದಿದೆ. ಈ ಕಾರಣಗಳಿಂದ ಗೋವನ್ನು ಭಾರತದ ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಬೇಕು ಎಂದು ಮುಸ್ಲಿಂ ಸಮಾಜದ ಮುಖಂಡ ರಫೀಕ ಡಿ.ಕೆ. ಆಗ್ರಹಿಸಿದ್ದಾರೆ. ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಮಹತ್ವ: ವೇದಗಳಿಂದ ಪುರಾಣಗಳವರೆಗೆ ಗೋವನ್ನು 'ಕಾಮಧೇನು' ಮತ್ತು 'ಗೋಮಾತೆ' ಎಂದು ಪೂಜಿಸಲಾಗುತ್ತದೆ. ಹಿಂದೂ, ಜೈನ, ಸಿಖ್ ಮತ್ತು ಬೌದ್ಧ ಧರ್ಮಗಳಲ್ಲಿ ಗೋವಿಗೆ ಪವಿತ್ರ ಸ್ಥಾನವಿದೆ. ಹಳ್ಳಿಗಳಲ್ಲಿ ಇಂದಿಗೂ ಗೋಪೂಜೆ, ಗೋದಾನ ಸಂಪ್ರದಾಯ ಜೀವಂತವಾಗಿದೆ. ದೇಶಿ ಗೋತಳಿಗಳ ಸಂರಕ್ಷಣೆ ಮತ್ತು ಸಂವರ್ಧನೆಗೆ ಕಾನೂನು ಬಲ ಸಿಗುತ್ತದೆ. ಗೋಹತ್ಯೆ ನಿಷೇಧ ಕಟ್ಟುನಿಟ್ಟಾಗಿ ಜಾರಿಯಾಗುತ್ತದೆ. ಹೈನುಗಾರಿಕೆ ಮತ್ತು ಸಾವಯವ ಕೃಷಿಗೆ ಉತ್ತೇಜನ ಸಿಗುತ್ತದೆ. ಮುಂದಿನ ಪೀಳಿಗೆಗೆ ಭಾರತೀಯ ಮೌಲ್ಯಗಳ ಪರಿಚಯವಾಗುತ್ತದೆ. ಹುಲಿ ಶಕ್ತಿಯ ಸಂಕೇತವಾದರೆ, ಗೋವು ಸಹನೆ, ಪೋಷಣೆ ಮತ್ತು ತ್ಯಾಗದ ಸಂಕೇತ. ಭಾರತ ಎಂದರೆ ಕೇವಲ ಶಕ್ತಿಯಲ್ಲ, ಅದು 'ವಸುಧೈವ ಕುಟುಂಬಕಂ' ಎಂಬ ತತ್ವ, ಆ ತತ್ವದ ಜೀವಂತ ರೂಪವೇ ಗೋಮಾತೆ. ಆದ್ದರಿಂದ ಜನರ ಭಾವನೆ ಮತ್ತು ರಾಷ್ಟ್ರದ ಹಿತದೃಷ್ಟಿಯಿಂದ ಗೋವನ್ನು ಭಾರತದ ರಾಷ್ಟ್ರೀಯ ಪ್ರಾಣಿ ಎಂದು ಕೂಡಲೇ ಘೋಷಿಸಬೇಕು ಎಂದು ಮುಸ್ಲಿಂ ಸಮಾಜದ ಮುಖಂಡ ರಫೀಕ ಡಿ.ಕೆ. ಆಗ್ರಹಿಸಿದ್ದಾರೆ.

ಮೇ 30ರಂದು ಜಿಲ್ಲಾ ಯೋಜನಾ ಸಮಿತಿ ಸಭೆ

ಬೆಳಗಾವಿ : ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಅವರ ಅಧ್ಯಕ್ಷತೆಯಲ್ಲಿ ಮೇ 30ರಂದು ಬೆಳಿಗ್ಗೆ 11.30 ಗಂಟೆಗೆ ಬೆಳಗಾವಿ ಸುವರ್ಣ ವಿಧಾನಸೌಧದ ಸೆಂಟ್ರಲ್ ಹಾಲ್ನಲ್ಲಿ ಬೆಳಗಾವಿ ಜಿಲ್ಲಾ ಯೋಜನಾ ಸಮಿತಿ ಸಭೆಯನ್ನು ನಿಗದಿಪಡಿಸಲಾಗಿದೆ ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಟ್ಕಾ: ಆರೋಪಿ ಬಂಧನ

ಹಿರೇಬಾಗೇವಾಡಿ: ಇಲ್ಲಿನ ಮೋಮಿನಗಲ್ಲಿ ನಿವಾಸಿ ಶಕೀಲಅಹಮದ್ ಮಹಮ್ಮದಗೌಸ್ ಬಾಗವಾನ (64) ಎಂಬಾತನನ್ನು ಹಿರೇ ಬಾಗೇವಾಡಿ ಪೊಲೀಸರು ಮಟ್ಕಾ ಬರೆದುಕೊಳ್ಳುತ್ತಿದ್ದಾಗ ಸೋಮವಾರ ಬಂಧಿಸಿದ್ದಾರೆ. ಹಿರೇಬಾಗೇವಾಡಿ ಬಸ್ಸಾಪುರ ರಸ್ತೆ ಬಳಿ ಸಾರ್ವಜನಿಕ ಸ್ಥಳದಲ್ಲಿ ಮಟ್ಕಾ ಬರೆದುಕೊಳ್ಳುತ್ತಿದ್ದಾಗ ಪಿಎಸ್ಐ ಬಸವರಾಜ ಮಿಟಗಾರ ಹಾಗೂ ಸಿಬ್ಬಂದಿ ದಾಳಿ ನಡೆಸಿ ಬಂಧಿಸಿ ಪ್ರಕರಣ ದಾಖಲಿಸಿದ್ದಾರೆ.



ಬೆಳಗಾವಿ: ನಗರದಲ್ಲಿ ಕನ್ನಡಪರ ಸಂಘಟನೆಗಳ ವತಿಯಿಂದ ಮಂಗಳವಾರ ಹಲ್ಮಿಡಿ ಶಾಸನಕ್ಕೆ ಕ್ಷೀರಾಭಿಷೇಕ ಹಾಗೂ ಪವಿತ್ರ ಜಲಾಭಿಷೇಕ ನೆರವೇರಿಸಿದ ವಾಟಾಳ್ ನಾಗರಾಜ ಅವರನ್ನು ಕನ್ನಡ ಪರ ಸಂಘಟನೆಗಳ ಹೋರಾಟಗಾರರು ಸನ್ಮಾನಿಸಿದರು.

ಶಾಲೆ, ಅಂಗನವಾಡಿ ಪರಿಶೀಲಿಸಿ

ಬೆಳಗಾವಿ: ಶಾಲೆ ಹಾಗೂ ಅಂಗನವಾಡಿಗಳು ಮರುಆರಂಭವಾಗುತ್ತಿರುವುದರಿಂದ ಜಿಲ್ಲೆಯ ಎಲ್ಲ ಶಾಲೆ ಹಾಗೂ ಅಂಗನವಾಡಿಗಳ ಮೂಲಕಸೌಕರ್ಯಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ, ಅಗತ್ಯ ಸೌಕರ್ಯ ಕಲ್ಪಿಸಬೇಕು ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಸೂಚನೆ ನೀಡಿದರು.ಮಂಗಳವಾರ ಇಲ್ಲಿನ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಶಾಲೆ ಹಾಗೂ ಅಂಗನವಾಡಿಗಳ ಪ್ರಾರಂಭೋತ್ಸವದ ಕುರಿತು ಮಂಗಳವಾರ ಹಮ್ಮಿಕೊಂಡಿದ್ದ ವಿವಿಧ ಇಲಾಖೆಯ ಜಿಲ್ಲಾ ಹಾಗೂ ತಾಲೂಕುಮಟ್ಟದ ಅಧಿಕಾರಿಗಳ ವಿಡಿಯೋ ಸಂವಾದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.ಶಾಲೆ ಹಾಗೂ ಅಂಗನವಾಡಿಗಳ ಒಳ ಹಾಗೂ ಹೊರಭಾಗದಲ್ಲಿ ಸ್ವಚ್ಛತೆ ಕೈಗೊಳ್ಳಲು ಆದ್ಯತೆ ನೀಡಬೇಕು. ಆಹಾರ ಪದಾರ್ಥಗಳ ದಾಸ್ತಾನು ಕೊಠಡಿಯನ್ನು ಶುಚಿಯಾಗಿಟ್ಟುಕೊಳ್ಳಬೇಕು. ಆಹಾರ ಪದಾರ್ಥಗಳ ಗುಣಮಟ್ಟವನ್ನು ಪರಿಶೀಲಿಸಬೇಕು. ಕುಡಿಯುವ ನೀರು, ವಿದ್ಯುತ್ ಸೇರಿ ಇನ್ನಿತರೇ ಮೂಲಸೌಕರ್ಯಗಳನ್ನು ಒದಗಿಸಬೇಕು ಎಂದು ಸೂಚನೆ ನೀಡಿದರು.

ಈ ವೇಳೆ ಜಿಪಂ ಯೋಜನಾ ನಿರ್ದೇಶಕ ರವಿ ಬಂಗಾರೆಪ್ಪನವರ್, ಉಪ ಕಾರ್ಯದರ್ಶಿ (ಅಭಿವೃದ್ಧಿ) ಬಸವರಾಜ ಅಡವಿಮಠ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಲ್ಲಿಕಾರ್ಜುನ ಕಲಾದಗಿ ಸೇರಿ ವಿವಿಧ ಇಲಾಖೆಯ ಜಿಲ್ಲಾ ಹಾಗೂ ತಾಲೂಕುಮಟ್ಟದ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತಿ ಇದ್ದರು.



ಬೆಳಗಾವಿ: ಇಲ್ಲಿನ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಶಾಲೆ ಹಾಗೂ ಅಂಗನವಾಡಿಗಳ ಪ್ರಾರಂಭೋತ್ಸವದ ಕುರಿತು ಮಂಗಳವಾರ ಹಮ್ಮಿಕೊಂಡಿದ್ದ ವಿವಿಧ ಇಲಾಖೆಯ ಜಿಲ್ಲಾ ಹಾಗೂ ತಾಲೂಕುಮಟ್ಟದ ಅಧಿಕಾರಿಗಳ ವಿಡಿಯೋ ಸಂವಾದ ಸಭೆಯಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ ಭಾಗಿ

ಹಲ್ಮಿಡಿ ಶಾಸನಕ್ಕೆ ಕ್ಷೀರಾಭಿಷೇಕ

ಬೆಳಗಾವಿ: ನಗರದಲ್ಲಿ ಕನ್ನಡಪರ ಸಂಘಟನೆಗಳ ವತಿಯಿಂದ ಮಂಗಳವಾರ ಹಲ್ಮಿಡಿ ಶಾಸನಕ್ಕೆ ಕ್ಷೀರಾಭಿಷೇಕ ಹಾಗೂ ಪವಿತ್ರ ಜಲಾಭಿಷೇಕ ನೆರವೇರಿಸಿ, ಕನ್ನಡದ ಅಸ್ತಿತ್ವ ಮತ್ತು ಗೌರವವನ್ನು ಪ್ರತಿಪಾದಿಸುವ ವಿಶಿಷ್ಟ ಕಾರ್ಯಕ್ರಮ ಜರುಗಿತು. ಕನ್ನಡಪರ ಹೋರಾಟಗಾರರು, ವಿವಿಧ ಸಂಘಟನೆಗಳ ಕಾರ್ಯಕರ್ತರು ಹಾಗೂ ನೂರಾರು ಕನ್ನಡಾಭಿಮಾನಿಗಳು ಭಾಗವಹಿಸಿ ಬೆಳಗಾವಿ ಕನ್ನಡಿಗರ ಗಂಡು ಮೆಟ್ಟಿದ ನೆಲ ಎಂಬ ಘೋಷಣೆಗಳೊಂದಿಗೆ ಕನ್ನಡಪರ ವಾತಾವರಣ ನಿರ್ಮಿಸಿದರು.

ಈ ಸಂದರ್ಭದಲ್ಲಿ ಹಿರಿಯ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಮಾತನಾಡಿ, ಹಲ್ಮಿಡಿ ಶಾಸನ ಕನ್ನಡದ ಇತಿಹಾಸದ ಹೆಮ್ಮೆಯ ಸಂಕೇತ. ಕನ್ನಡ ಭಾಷೆ, ನೆಲ ಮತ್ತು ಸಂಸ್ಕೃತಿಯ ಮೇಲೆ ಯಾರೇ ದಾಳಿ ಮಾಡಲು ಮುಂದಾದರೂ ಕನ್ನಡಿಗರು ತಕ್ಕ ಉತ್ತರ ನೀಡುತ್ತಾರೆ ಎಂದು ಎಚ್ಚರಿಕೆ ನೀಡಿದರು.

ಬೆಳಗಾವಿ ಕನ್ನಡಿಗರ ಆಸ್ತಿ : ಕಾರ್ಯಕ್ರಮದಲ್ಲಿ ಮಾತನಾಡಿದ ಕನ್ನಡಪರ ನಾಯಕರು, ಬೆಳಗಾವಿ ಕನ್ನಡಿಗರ ಗಂಡು ಮೆಟ್ಟಿದ ನೆಲ. ಇದು ಕನ್ನಡಿಗರ ಆಸ್ತಿ. ಈ ನೆಲದ ಇತಿಹಾಸ, ಸಂಸ್ಕೃತಿ ಮತ್ತು ಭಾಷೆಯನ್ನು ಉಳಿಸುವ ಜವಾಬ್ದಾರಿ ಪ್ರತಿಯೊಬ್ಬ ಕನ್ನಡಿಗರ ಮೇಲಿದೆ ಎಂದು ಹೇಳಿದರು.

ನಗರದ ವಿವಿಧ ಭಾಗಗಳಿಂದ ಆಗಮಿಸಿದ್ದ ಕನ್ನಡಪರ ಕಾರ್ಯಕರ್ತರು ಹಲ್ಮಿಡಿ ಶಾಸನದ ಪ್ರತಿರೂಪಕ್ಕೆ ಹಾಲು ಹಾಗೂ ಪವಿತ್ರ ಜಲಾಭಿಷೇಕ ನೆರವೇರಿಸಿ, ಕನ್ನಡ ಧ್ವಜಗಳನ್ನು ಪ್ರದರ್ಶಿಸಿ ಘೋಷಣೆ ಕೂಗಿದರು. ಕನ್ನಡ ಉಳಿಯಬೇಕು, ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ, ಕನ್ನಡ ವಿರೋಧಿಗಳಿಗೆ ತಕ್ಕ ಪಾಠ ಕಲಿಸುತ್ತೇವೆ ಎಂಬ ಘೋಷಣೆಗಳು ಮೊಳಗಿದವು.



ಪೊಲೀಸ್ ಬಿಗಿ ಭದ್ರತೆ

ಕಾರ್ಯಕ್ರಮದ ಹಿನ್ನೆಲೆ ನಗರದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆ ಬಿಗಿ ಭದ್ರತೆ ಕೈಗೊಂಡಿತ್ತು. ಪ್ರಮುಖ ವೃತ್ತಗಳು ಹಾಗೂ ಕಾರ್ಯಕ್ರಮ ನಡೆದ ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಕಾರ್ಯಕ್ರಮ ಶಾಂತಿಯುತವಾಗಿ ನಡೆಯಿತು.

ಕನ್ನಡಿಗರಲ್ಲಿ ಉತ್ಸಾಹ

ಕಾರ್ಯಕ್ರಮದಲ್ಲಿ ಯುವಕರು, ಮಹಿಳೆಯರು ಹಾಗೂ ಹಿರಿಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದು ಗಮನ ಸೆಳೆಯಿತು. ಕನ್ನಡ ಧ್ವಜಗಳನ್ನು ಹಿಡಿದು ಘೋಷಣೆ ಕೂಗಿದ ಕಾರ್ಯಕರ್ತರು ಕನ್ನಡಪರ ಹೋರಾಟಕ್ಕೆ ಇನ್ನಷ್ಟು ಬಲ ತುಂಬುವ ಸಂಕಲ್ಪ ವ್ಯಕ್ತಪಡಿಸಿದರು.

ಪಾಲಿಕೆಯಲ್ಲಿ ಕನ್ನಡಪರ ನಿರ್ಣಯಕ್ಕೆ ಒತ್ತಾಯ

ಈ ವೇಳೆ ಮಾತನಾಡಿದ ಹೋರಾಟಗಾರರು, ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಕನ್ನಡಪರ ನಿರ್ಣಯಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಕನ್ನಡ ನಾಮಫಲಕ, ಸರ್ಕಾರಿ ಕಚೇರಿಗಳಲ್ಲಿ ಕನ್ನಡದ ಬಳಕೆ ಹಾಗೂ ಕನ್ನಡಿಗರ ಹಿತಾಸಕ್ತಿಗೆ ಸಂಬಂಧಿಸಿದ ವಿಷಯಗಳಲ್ಲಿ ಸ್ಪಷ್ಟ ನಿಲುವು ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.ಬೆಳಗಾವಿಯಲ್ಲಿ ಕನ್ನಡದ ಅಸ್ತಿತ್ವಕ್ಕೆ ಧಕ್ಕೆ ತರಲು ಯತ್ನಿಸುವ ಯಾವುದೇ ಶಕ್ತಿಯನ್ನು ಕನ್ನಡಿಗರು ಸಹಿಸುವುದಿಲ್ಲ. ಕನ್ನಡ ವಿರೋಧ ಮಾಡುವವರಿಗೆ ಪಾಠ ಕಲಿಸುವುದು ನಮಗೆ ಗೊತ್ತಿದೆ ಎಂದು ವಾಟಾಳ್ ನಾಗರಾಜ್ ಹೇಳಿದರು.

ಕನ್ನಡದ ಇತಿಹಾಸವನ್ನು ಸಾರುವ ಹಲ್ಮಿಡಿ ಶಾಸನಕ್ಕೆ ಅಭಿಷೇಕ ನೆರವೇರಿಸುವ ಮೂಲಕ ಬೆಳಗಾವಿಯಲ್ಲಿ ಮತ್ತೊಮ್ಮೆ ಕನ್ನಡಾಭಿಮಾನ ಉಕ್ಕಿ ಹರಿದ ದೃಶ್ಯ ಕಂಡುಬಂದಿತು.

ಬೆಳಗಾವಿ ಪಾಲಿಕೆಗೆ ಜೂನ್ 2ರ ಗಡುವು

ಬೆಳಗಾವಿ:ಜೂನ್ 2ರೊಳಗೆ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಮತ್ತು ಮಹಾಜನ್ ವರದಿ ಜಾರಿಗೆ ತರುವ ನಿಟ್ಟಿನಲ್ಲಿ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ನಿರ್ಣಯ ಕೈಗೊಳ್ಳಬೇಕು. ಇಲ್ಲದಿದ್ದರೆ ಜೂನ್ 4ರಂದು ಬೆಂಗಳೂರಿನಲ್ಲಿ ಸಭೆ ಕರೆದು, ಅಖಂಡ ಕರ್ನಾಟಕ ಬಂದ್ ಗೆ ಕರೆ ನೀಡಲಾಗುವುದು ಎಂದು ಹಿರಿಯ ಕನ್ನಡ ಹೋರಾಟಗಾರ ವಾಟಾಳ್ ನಾಗರಾಜ್ ಹೇಳಿದರು.

ಮಂಗಳವಾರ ಬೆಳಗಾವಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾನಗರ ಪಾಲಿಕೆ ಯಾವ ನೆಲದಲ್ಲಿದೆ..? ಎಂಬುದನ್ನು ಪಾಲಿಕೆಯಲ್ಲಿ ಅಧಿಕಾರದಲ್ಲಿ ಇರುವವರು ಅರ್ಥ ಮಾಡಿಕೊಳ್ಳಬೇಕು. ಬೆಳಗಾವಿ ಕನ್ನಡಿಗರ ಗಂಡು ಮೆಟ್ಟಿದ ನೆಲ. ಇದು ಕರ್ನಾಟಕದ ಅವಿಭಾಜ್ಯ ಅಂಗ. ಮಹಾಜನ್ ವರದಿ ಜಾರಿ ಆಗಲೇಬೇಕು ಅಂತಾ ನಿರ್ಣಯ ಮಾಡಬೇಕು. ಮಾಡದಿದ್ದರೆ ಬೆಳಗಾವಿಯಲ್ಲಿ ಕಂಡು ಕೇಳರಿಯದ ರೀತಿಯ ಕ್ರಾಂತಿ ಆಗುತ್ತದೆ. ಇವತ್ತಿನಿಂದ ಒಂದು ವಾರದೊಳಗೆ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ, ಮಹಾನಜನ್ ವರದಿ ಜಾರಿಗೆ ತರಬೇಕು ಅಂತಾ ನಿರ್ಣಯ ತೆಗೆದುಕೊಳ್ಳಬೇಕು. ಅಲ್ಲಿಯವರೆಗೆ ನಾವು ಗಡುವು ಕೊಡುತ್ತೇವೆ. ಆಗಲೂ ನೀವು ಎಚ್ಚೆತ್ತುಕೊಳ್ಳದಿದ್ದರೆ, ಜೂನ್4ರಂದು ಬೆಂಗಳೂರಲ್ಲಿಎಲ್ಲಾ ಕನ್ನಡ ಸಂಘಟನೆಗಳು ಸಭೆ ಸೇರುತ್ತೇವೆ. ಪ್ರವೀಣ ಶೆಟ್ಟಿ, ಶಿವರಾಮೇಗೌಡ, ನಾರಾಯಣಗೌಡ ಸೇರಿ ಎಲ್ಲ ಬಣಗಳ ಕನ್ನಡ ಸಂಘಟನೆಗಳ ಮುಖಂಡರನ್ನು ಸಭೆಗೆ ಆಹ್ವಾನಿಸುತ್ತೇವೆ. ಅಲ್ಲಿ ಅಖಂಡ ಕರ್ನಾಟಕ ಬಂದ್ ಗೆ ಕರೆ ಕೊಡುತ್ತೇವೆ ಎಂದು ಪಾಲಿಕೆಗೆ ಎಚ್ಚರಿಕ ನೀಡಿದರು. ಬೆಳಗಾವಿಯಿಂದಲೇ ಬಹುದೊಡ್ಡ ಕ್ರಾಂತಿ ಆರಂಭವಾಗಲಿದೆ. ಹೊಸ ಕ್ರಾಂತಿಗೆ ದಿಕ್ಸೂಚಿ ಸಿಗಲಿದೆ. ಇಲ್ಲಿಂದ ಕ್ರಾಂತಿಯ ಕಹಳೆ ಮೊಳಗಲಿದೆ. ಇಡೀ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಜನರು ಬೆಳಗಾವಿ ಜೊತೆಗೆ ನಿಲ್ಲಬೇಕು. ನಮ್ಮ ದೇಹದಲ್ಲಿ ರಕ್ತದ ಕೊನೆ ಹನಿ ಇರೋವರೆಗೂ ಹೋರಾಡಲು ನಾವು ಸಿದ್ಧರಿದ್ದೇವೆ ಎಂದು ವಾಟಾಳ್ ನಾಗರಾಜ ಸ್ಪಷ್ಟಪಡಿಸಿದರು.

ಮುಂದೆ ನಾನೇ ಮುಖ್ಯಮಂತ್ರಿ: ಈ ಹೋರಾಟದಿಂದ ಮುಂದೆ ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬರುತ್ತದೆ. ಕನ್ನಡ ಹೆಸರಲ್ಲಿ ಸರ್ಕಾರ ಬರಬೇಕು. ಆಗ ಸುವರ್ಣವಿಧಾನಸೌಧದಲ್ಲಿ ಕನ್ನಡ ಸಂಘಟನೆಗಳಿಗೆ ಒಂದು ಕೊಠಡಿ ನೀಡಬೇಕು. ಪ್ರತಿ ಕನ್ನಡ ಸಂಘಟನೆಗೆ ವರ್ಷಕ್ಕೆ 1 ಕೋಟಿ ಅನುದಾನ ಘೋಷಿಸಬೇಕು. ಪ್ರೆಸ್ ಕ್ಲಬ್ ಗೆ 5 ಕೋಟಿ ಕೊಡಬೇಕು. ಇದು ಯಾವಾಗ ಸಾಧ್ಯ ಆಗುತ್ತದೆ ಎಂದರೆ ನಾನು ಮುಖ್ಯಮಂತ್ರಿ ಆಗಬೇಕು. ಮುಂದೆ ನಾನೇ ಸಿಎಂ ಆಗೋದು. ನಮ್ಮ ಜೊತೆಗಿರುವ ಕನ್ನಡ, ರೈತಪರ ಸಂಘಟನೆ ಹಾಗೂ ಪತ್ರಕರ್ತರಿಗೂ ಸಚಿವ ಸ್ಥಾನ ಕೊಡುತ್ತೇನೆ ಎಂದು ವಾಟಾಳ್ ನಾಗರಾಜ ಹಾಸ್ಯ ಚಟಾಕಿ ಹಾರಿಸಿದರು.

ಈ ವಿಚಾರವಾಗಿ ರಾಜ್ಯ ಸರ್ಕಾರದ ಜೊತೆಗೂ ನಾವು ಮಾತನಾಡುತ್ತೇವೆ. ಸಿದ್ದರಾಮಯ್ಯನವರೇ ನೀವು ಏನು ಕಣ್ಮುಚ್ಚಿ ಕುಳಿತಿದ್ದಿರಾ? ಇದೇನು ಹುಡುಗಾಟವೇ? ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಅಂತಾ ನಿರ್ಣಯ ಮಾಡಿಸಿ, ಇಲ್ಲವಾದರೆ ಮಹಾನಗರ ಪಾಲಿಕೆ ವಜಾ ಮಾಡಿ ಅಂತಾ ವಾಟಾಳ್ ನಾಗರಾಜ ಒತ್ತಾಯಿಸಿದರು.

ರಸ್ತೆ ಸುಧಾರಣಾ ಕಾಮಗಾರಿಗೆ ಭೂಮಿಪೂಜೆ

ಚಿಕ್ಕೋಡಿ: ನಾಲ್ಕು ಬಾರಿ ಶಾಸಕನಾಗಿ ಆಯ್ಕೆಯಾಗಲು ಉಮರಾಣಿ ಗ್ರಾಮದ ಮತದಾರರಕೊಡುಗೆಬಹಳಷ್ಟಿದೆ.ಉಮರಾಣಿ ಗ್ರಾಮದಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೊಂಡು ಪ್ರಗತಿ ಸಾಧಿಸುವ ಮೂಲಕ ಋಣ ತೀರಿಸುವ ಕೆಲಸ ಮಾಡಿದ ಹೆಮ್ಮೆಯಿದೆ ಎಂದು ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಹೇಳಿದರು.

ತಾಲೂಕಿನ ಉಮರಾಣಿ ಗ್ರಾಮದಲ್ಲಿ ಮಂಗಳವಾರ 80 ಲಕ್ಷ ರೂ. ಮೊತ್ತದಲ್ಲಿ ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ನೀರಾವರಿ, ರಸ್ತೆ, ಚರಂಡಿ, ಸಮುದಾಯ ಭವನಸೇರಿದಂತೆ ಹಲವು ಕಾಮಗಾರಿಗಳನ್ನು ಕಳೆದ ನಾಲ್ಕು ಅವಧಿಯಲ್ಲಿಕೈಗೊಳ್ಳಲಾಗಿದೆ. ಇನ್ನು ಏನೆಲ್ಲ ಸೌಲಭ್ಯಗಳ ಅವಶ್ಯಕತೆ ಇದೆಯೋ ಅದೆಲ್ಲವನ್ನು ಮಾಡುವ ಮೂಲಕ ಉಮರಾಣಿ ಗ್ರಾಮದ ಜನರು ತನ್ನ ಮೇಲೆ ಇಟ್ಟಿರುವ ಪ್ರೀತಿಗೆ ಋಣಿಯಾಗಿರುವೆ ಎಂದರು.

ಹಿರಿಯ ಸಾಹಿತಿ ಪ್ರೊ ಎಸ್ ವೈ ಹಂಜಿ ಮಾತನಾಡಿ, ಚಿಕ್ಕೋಡಿ ಪಟ್ಟಣದಿಂದ ರಾಮಲಿಂಗಕೋಡಿ ದೇವಸ್ಥಾನ ಸಂಪರ್ಕಿಸುವ ರಸ್ತೆ ಹಾಳಾಗಿ ಹಲವು ದಿನಗಳೇ ಕಳೆದಿದ್ದವು. ಇದೀಗ ಶಾಸಕ ದುರ್ಯೋಧನ ಐಹೊಳೆ ಅವರ ಇಚ್ಛಾಶಕ್ತಿಯಿಂದ ಅಭಿವೃದ್ಧಿ ಕಾಣುತ್ತಿದೆ ಎಂದು ಹೆಮ್ಮೆಪಟ್ಟರು.

40 ಲಕ್ಷ ರೂ. ಮೊತ್ತದಲ್ಲಿ ಉಮರಾಣಿ–ಜೋಡಕುರಳಿ ರಸ್ತೆ, 40 ಲಕ್ಷರೂ. ಅನುದಾನದಲ್ಲಿ ಹಳಿಜೋಳಕೋಡಿ–ರೇಣುಕಾ ನಗರ ರಸ್ತೆ ಸುಧಾರಣೆ ಕಾಮಗಾರಿಗೆ ಶಾಸಕ ದುರ್ಯೋಧನ ಐಹೊಳೆ ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಉಮರಾಣಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಲಕ್ಷ್ಮಣ ಪೂಜೇರಿ, ಮುರಗೆಪ್ಪ ಅಡಿಶೇರಿ, ಶಿವಮೂರ್ತಿ ಹಳಿಜೋಳೆ, ರುದ್ರಗೌಡ ಪಾಟೀಲ, ಮಲಗೌಡ ಪಾಟೀಲ, ವಿವೇಕಾನಂದ ಸಂಬಾಜೆ, ತಬಗೌಡ ಪಾಟೀಲ, ಧನಪಾಲ ಭೀಮನಾಯ್ಕ, ರಾಜು ಜಿದ್ದಿಮನಿ, ಗಜಾನಂದ ದಾನನ್ನವರ, ಎಸ್. ಎಸ್. ಹೊಸಮನಿ, ಪಿಂಟು ರಾಮನಕಟ್ಟಿ, ಬಾಳೇಶ ಕುಟೋಳಿ, ಮಹಾಂತೇಶ ಭದ್ರನಾಯಕ, ಮಾಯಪ್ಪ ಮಗದುಮ್ಮ ಇತರರು ಇದ್ದರು.



ಬಸವ ಶಾಲೆಯಲ್ಲಿ ಉಚಿತ ಯೋಗ ಶಿಬಿರ ಉದ್ಘಾಟನೆ

ತೆಲಸಂಗ: ಕೆಲಸದ ಒತ್ತಡ ಮತ್ತು ಸಂಸಾರದ ಜಂಜಾಟಗಳ ನಡುವೆಯೂ ಹೇಗೆ ಸ್ಥಿತಪ್ರಜ್ಞರಾಗಿ ಇರಬೇಕು ಎಂಬುದನ್ನು ಯೋಗ ಕಲಿಸಿಕೊಡುತ್ತದೆ ಎಂದು ಹಿರೇಮಠದ ವೀರೇಶ್ವರ ದೇವರು ಹೇಳಿದರು.

ಗ್ರಾಮದ ಎಸ್.ಎಸ್.ಎಂ.ಕೆ. ಶಿಕ್ಷಣ ಪ್ರತಿಷ್ಠಾನದ ಬಸವ ಅಂತಾರಾಷ್ಟ್ರೀಯ ಶಾಲೆಯ ಆವರಣದಲ್ಲಿ ಪತಂಜಲಿ ಯೋಗ ಸಮಿತಿ ಹಾಗೂ ಭಾರತೀಯ ಸಂಸ್ಕೃತಿ ಸಂಸ್ಥೆ ಅಥಣಿ ಸಹಯೋಗದಲ್ಲಿ ನಡೆದ ಉಚಿತ ಯೋಗ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿ ಮನುಷ್ಯ ತಂತ್ರಜ್ಞಾನದ ದಾಸನಾಗಿದ್ದಾನೆ. ಬೆಳಿಗ್ಗೆ ಎದ್ದ ತಕ್ಷಣ ಸೂರ್ಯನನ್ನೋ, ಹೆತ್ತವರನ್ನೋ ನೋಡುವ ಮುನ್ನ ಮೊಬೈಲ್ ಸ್ಕ್ರೀನ್ ನೋಡುವ ಪರಿಸ್ಥಿತಿ ಬಂದಿದೆ. ಕೇವಲ ಹಣ ಗಳಿಕೆಯ ಬೆನ್ನತ್ತಿ ಓಡುತ್ತಿರುವ ಮನುಷ್ಯ ಆಫೀಸಿನ ಕೆಲಸದ ಒತ್ತಡ ಮತ್ತು ಸಂಸಾರಿಕ ಜಂಜಾಟಗಳನ್ನು ನಿಭಾಯಿಸಲಾಗದೆ ಮಾನಸಿಕವಾಗಿ ಕುಸಿಯುತ್ತಿದ್ದಾನೆ. ಸಾಮಾಜಿಕ ಜಾಲತಾಣಗಳ ಬೇಡದ ವಿಷಯಗಳಿಗೆ ತಲೆಕೆಡಿಸಿಕೊಂಡು ನೆಮ್ಮದಿ ಕಳೆದುಕೊಳ್ಳುತ್ತಿದ್ದಾನೆ. ಹಣದಿಂದ ಬೆಡ್ ಖರೀದಿಸಬಹುದು ಆದರೆ ನಿದ್ದೆಯನ್ನಲ್ಲ ಎಂಬುದನ್ನು ಮರೆತು ಆರೋಗ್ಯ ಕೆಡಿಸಿಕೊಳ್ಳುತ್ತಿರುವ ಇಂದಿನ ಸಮಾಜಕ್ಕೆ ಯೋಗವೇ ಸಂಜೀವಿನಿಯಾಗಿದೆ ಎಂದರು.

ಯೋಗ ಎಂದರೆ ಕೇವಲ ದೈಹಿಕ ಕಸರತ್ತಲ್ಲ, ಅದು ದೇಹ, ಮನಸ್ಸು ಮತ್ತು ಆತ್ಮವನ್ನು ಜೋಡಿಸುವ ಕಲೆ. ದಿನಕ್ಕೆ ಕನಿಷ್ಠ 30 ನಿಮಿಷ ಯೋಗಕ್ಕಾಗಿ ಮೀಸಲಿಟ್ಟರೆ ಮೊಬೈಲ್‌ನಿಂದ ಬರುವ ಬೇಡದ ಆಲೋಚನೆಗಳು ದೂರವಾಗಿ, ಮಾನಸಿಕ ಸ್ಥಿರತೆ ಸಿಗುತ್ತದೆ ಎಂದು ಹೇಳಿದರು.



ಡಾ. ಬಿ. ಎಸ್. ಕಾಮನ್, ಡಾ. ಆರ್. ಡಿ. ಪೂಜಾರಿ, ಗಡಿನಾಡು ಕನ್ನಡ ಬಳಗದ ಅಧ್ಯಕ್ಷ ಗುರುರಾಜ್ ಕುಂಬಾರ, ನ್ಯಾಯವಾದಿ ಅಮೋಘ ಖೊಬ್ರಿ ಉಪಸ್ಥಿತರಿದ್ದರು.

ಪಾಲಿಕೆಯ ಕಂದಾಯ ವಾರ್ಡ್‌ಗಳು ಇನ್ನು ಮುಂದೆ ಚುನಾವಣಾ ವಾರ್ಡ್‌ಗಳು

ಬೆಳಗಾವಿ : ಇಲ್ಲಿನ ಮಹಾನಗರ ಪಾಲಿಕೆ ವ್ಯಾಪ್ತಿಯ ಕಂದಾಯ ವಾರ್ಡ್‌ಗಳು ಇನ್ನು ಮುಂದೆ ಚುನಾವಣಾ ವಾರ್ಡಗಳಾಗಲಿವೆ ಎಂದು ಪಾಲಿಕೆಯ ಆಯುಕ್ತ ಕಾರ್ತಿಕ್ ಎಂ. ಹೇಳಿದರು.



ಈ ಕುರಿತು ಪಾಲಿಕೆ ಕಚೇರಿಯಲ್ಲಿ ಮಾಹಿತಿ ನೀಡಿದ ಅವರು, ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 58 ವಾರ್ಡಗಳ ಗಡಿ ಗುರುತಿಸಿ ನಿಗದಿಗೊಳಿಸಲಾಗಿದೆ. ಈ ಹಿಂದಿನಿಂದ ಸದರಿ ವಾರ್ಡುಗಳನ್ನು ಕಂದಾಯ ವಾರ್ಡ್ ಗಳೆಂದು ಕರೆಯಲಾಗುತ್ತಿತ್ತು. ಆದರೆ ಪಾಲಿಕೆಯ ಅಭಿಯಂತರ ವಿಭಾಗ ಸೇರಿದಂತೆ ವಿವಿಧ ವಿಭಾಗದವರು ಹಾಗೂ ನಗರಸೇವಕರು ಬೇರೆ ಬೇರೆ ರೀತಿಯಲ್ಲಿ ಗುರುತಿಸುತಿಸುವಂತಾಗಿತ್ತು. ಇದರಿಂದಾಗಿ ಆಡಳಿತದಲ್ಲಿ ಅನಗತ್ಯ ಗೊಂದಲ ಸೃಷ್ಟಿಯಾಗಿತ್ತು. ಕಾರಣ ಇನ್ನು ಮುಂದೆ ಕಂದಾಯ ವಾರ್ಡ್ ಗಳೆಂಬುದು ರದ್ದಾಗಿ, ಅದರ ಬದಲಾಗಿ ಚುನಾವಣಾ ವಾರ್ಡ್ ಗಳೆಂಬ ಪರಿಕಲ್ಪನೆ ಮುಂದುವರೆಯಲಿದೆ.

ಈ ಹಿನ್ನೆಲೆಯಲ್ಲಿ ಪಾಲಿಕೆಯ ಸಂಪೂರ್ಣ ಆಡಳಿತವು ಚುನಾವಣಾ ವಾರ್ಡ್ ಗಳ ವ್ಯಾಪ್ತಿಗೆ ಒಳಪಡುತ್ತಿದೆ. ಈ ಹಿಂದೆ ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕರ ವಸೂಲಿಗಾರರು ಹಾಗೂ ಕಂದಾಯ ನಿರೀಕ್ಷಕರು ಸೇರಿದಂತೆ ಇನ್ನಿತರ ಸಿಬ್ಬಂದಿಗೆ ಚುನಾವಣಾ ವಾರ್ಡ್ ಪ್ರಕಾರ ಮರು ಕಾರ್ಯ ನಿಯೋಜನೆ ಮಾಡಲಾಗಿದೆ.

ಚುನಾವಣಾ ವಾರ್ಡ್ ಗಳ ಪ್ರಕಾರವೇ ಪಿಐಡಿ ರಚನೆಯಾಗುತ್ತವೆ ಹಾಗೂ ಇದರಂತೆಯೇ ಕರ ಪಾವತಿ ಮಾಡಬೇಕಾಗುವದು. ಈ ಬದಲಾವಣೆಯನ್ನು ಸಾರ್ವಜನಿಕರು ಗಮನಿಸಬೇಕೆಂದು ಪಾಲಿಕೆ ಆಯುಕ್ತ ಕಾರ್ತಿಕ್ ಎಂ. ತಿಳಿಸಿದ್ದಾರೆ.

ರೋಹಿಣಿ ಮಳೆ ನಿರೀಕ್ಷೆ:ಮುಂಗಾರು ಬಿತ್ತನೆಗೆ ಭರದ ಸಿದ್ಧತೆ

ಮಾಂಜರಿ: ತಾಲೂಕಿನಾದ್ಯಂತ ಮುಂಗಾರು ಪೂರ್ವ ಮಳೆ ಆರಂಭವಾಗಿರುವುದರಿಂದ ರೈತರು ಮುಂಗಾರು ಬಿತ್ತನೆಗೆ ಭರದ ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಭೂಮಿ ಹದಗೊಳಿಸುವ ಜೊತೆಗೆ ಕೃಷಿ ಪರಿಕರಗಳ ದುರಸ್ತಿ ಹಾಗೂ ಸ್ವಚ್ಛತೆಯಲ್ಲಿ ನಿರತರಾಗಿದ್ದಾರೆ.

ರೈತರ ನಂಬಿಗಸ್ತ ಮಳೆ ರೋಹಿಣಿ ಮೇ 25 ರಿಂದ ಪ್ರಾರಂಭವಾಗುತ್ತಿದ್ದು, ಈ ರೋಹಿಣಿ ಮಳೆ ಕೈ ಹಿಡಿದರೆ ಬದುಕು ಬಂಗಾರವಾಗುತ್ತದೆ ಎಂಬ ಆಸೆಯಿಂದ ರೈತ ಕುಳಿತಿದ್ದು, ಪ್ರತಿ ಬಾರಿಯೂ ಮಳೆಗಾಗಿ ಕಾಯುವ ರೈತರು ಬಿತ್ತನೆ ಬೀಜವನ್ನಿಟ್ಟುಕೊಂಡು ಆಕಾಶದತ್ತ ಮುಖ ಮಾಡಿರುವುದು ಸರ್ವೇ ಸಾಮಾನ್ಯ.

ರೈತರು ಬಿತ್ತನೆಗೆ ಬೇಕಾದ ಕುಂಟೆ, ಪಲಗಾ, ಕೂರಿಗೆ, ನೊಗ, ಬುಕ್ಕಾ ಸಿದ್ಧತೆಗೊಳಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಬಡಿಗೇರ ಹಾಗೂ ಕಮ್ಮಾರರ ಬಳಿ ತಮ್ಮ ಪರಿಕರಗಳ ದುರಸ್ತಿ ಮಾಡಿಸಿಕೊಂಡು ಬಿತ್ತನೆಗೆ ಸಿದ್ಧವಾಗಿದ್ದಾರೆ.



ಕೆಲವು ಭಾಗ ಕೃಷ್ಣಾ ನದಿಯ ನೀರನ್ನು ಅವಲಂಬಿಸಿದರೆಕೆಲವು ಭಾಗ ಮಳೆ ಹಾಗೂ ಘಟಪ್ರಭಾ ಎಡದಂಡೆ ಕಾಲುವೆಯನ್ನು ಅವಲಂಬಿಸಿದ್ದಾರೆ. ಮುಂಗಾರು ಬೆಳೆಗಳಾದ ದ್ವಿದಳ ದಾನ್ಯಗಳಾದ ಸೋಯಾಬೀನ್, ಬೆಳೆ, ಉದ್ದು, ಹೆಸರು, ಮಡಿಕೆಕಾಳು ಸೇರಿದಂತೆ ವಿವಿಧ ಬೆಳೆಗಳ ಜೊತೆ ವಾಣಿಜ್ಯ ಬೆಳೆಗಳಾದ ಕಬ್ಬು ಹಾಗೂ ಅರಿಶಿಣ ಬಿತ್ತನೆ ಮಾಡಲು ರೈತರು ಚಟುವಟಿಕೆ ಪ್ರಾರಂಭಿಸಿದ್ದಾರೆ.

ಬಿತ್ತನೆ ಗುರಿ: ಚಿಕ್ಕೋಡಿ ತಾಲೂಕಿನಲ್ಲಿ ಈ ಬಾರಿ ಮುಂಗಾರು ಹಂಗಾಮಿಗೆ ಗೋವಿನ ಜೋಳ 8900 ಹೆಕ್ಟೇರ್ ಪ್ರದೇಶ, ತೊಗರಿ 1000 ಹೆಕ್ಟೇರ್ ಪ್ರದೇಶ, ಹುರುಳಿ 10 ಹೆಕ್ಟೇರ್, ಹೆಸರು 800 ಹೆಕ್ಟೇರ್, ಉದ್ದು 300 ಹೆಕ್ಟೇರ್, ಅವರೆ 20 ಹೆಕ್ಟೇರ್, ಶೇಂಗಾ 100 ಹೆಕ್ಟೇರ್, ಸೂರ್ಯಕಾಂತಿ 500 ಹೆಕ್ಟೇರ್, ಸೋಯಾಬೀನ್ 200 ಹೆಕ್ಟೇರ್, ಕಬ್ಬು ಪಿ 3750 ಹೆಕ್ಟೇರ್, ಕಬ್ಬು ಹೆಚ್ 12500 ಹೆಕ್ಟೇರ್, ಒಟ್ಟು 28080 ಹೆಕ್ಟೇರ ಪ್ರದೇಶದಲ್ಲಿ ಮುಂಗಾರು ಬಿತ್ತನೆ ಗುರಿ ಹೊಂದಲಾಗಿದೆ.

> ಕೂಲಿ ಕಾರ್ಮಿಕರ ಕೊರತೆ: ಪ್ರತಿ ವರ್ಷದಂತೆ ಈ ಬಾರಿಯೂ ಕೃಷಿ ಕೂಲಿ ಕಾರ್ಮಿಕರ ಕೊರತೆ ಕಂಡುಬಂದಿದೆ. ಕೃಷಿ ವೃತ್ತಿಯನ್ನು ಮಾಡುವವರ ಸಂಖ್ಯೆ ಕ್ಷೀಣಿಸುತ್ತಿದೆ. ಇದ್ದರಿಂದ ರೈತರು ಬಹುತೇಕ ಕೃಷಿ ಯಂತ್ರಗಳತ್ತ ಮುಖ ಮಾಡಿದ್ದಾರೆ.
>
> ■ ರಾಹುಲ್ ಇಚಲಕರಂಜಿ
> ರೈತರು ಹಾಗೂ ಕೃಷಿ ತಜ್ಞರು

> ತಾಲೂಕಿನಲ್ಲಿ ರೈತರು ಕೃಷಿ ಚಟುವಟಿಕೆ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ತಾಲೂಕಿಗೆ ಬೇಡಿಕೆ ತಕ್ಕಂತೆ ಸಂಬಂಧಿಸಿದ ಬೀಜಗಳ ಕಂಪನಿಗಳಿಗೆ ಬೇಡಿಕೆಯನ್ನು ಸಲ್ಲಿಸಿ ಬೀಜ ಸಂಗ್ರಹಿಸಲು ಎಲ್ಲ ವ್ಯವಸ್ಥೆ ಮಾಡಿಕೊಂಡಿದ್ದೇವೆ.
>
> ■ ಕೋಳೇಕರ್, ಕೃಷಿ
> ನಿರ್ದೇಶಕರು ಬೆಳಗಾವಿ

ಉಚಿತ ಸೇವೆಯ ಲಾಭ ಪಡೆದುಕೊಳ್ಳಿ: ಶ್ರೀಗಳು

ಘಟಪ್ರಭಾ: ಶ್ರೀ ಜೆ.ಜಿ.ಕೋ ಆಸ್ಪತ್ರೆಯ ಅಮೃತ ಮಹೋತ್ಸವದ ಅಂಗವಾಗಿ ಮತ್ತು ಲಿಂ. ಗಂಗಾಧರ ಸ್ವಾಮೀಜಿಯವರ 23ನೇ ಪುಣ್ಯಸ್ಮರಣೆ ನಿಮಿತ್ತ ಆಸ್ಪತ್ರೆಯು ಮೇ 26ರಿಂದ ಉಚಿತ ಮೆಡಿಕಲ್ ವಾರ್ಡ್ ಸೇವೆಯನ್ನು ಪ್ರಾರಂಭಿಸಿದೆ. ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ಗುಬ್ಬಲಗುಡ್ಡ ಕೆಂಪಯ್ಯಸ್ವಾಮಿ ಮಠದ ಪೀಠಾಧಿಕಾರಿ ಡಾ. ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ಅವರು ಮಂಗಳವಾರ ಶ್ರೀ ಜೆ.ಜಿ.ಕೋ ಆಸ್ಪತ್ರೆಯಲ್ಲಿ ಜಗದ್ಗುರು ಲಿಂ. ಗಂಗಾಧರ ಮಹಾಸ್ವಾಮಿಗಳ 23ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಕಾರ್ಯಕ್ರಮದ ಮೊದಲಿಗೆ ಪೂಜ್ಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು, ನಂತರ ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ಹಣ್ಣು–ಹಾಲು ವಿತರಿಸಿದರು.

ಈ ಆಸ್ಪತ್ರೆಯನ್ನು ಅಂದಿನ ಜಗದ್ಗುರು ಲಿಂ. ಗುರುಸಿದ್ಧ ಮಹಾಸ್ವಾಮಿಗಳು ಸಮಾಜದ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ಉದ್ದೇಶದಿಂದ ಸ್ಥಾಪಿಸಿದ್ದರು. ನಂತರ ಪೀಠವನ್ನು ಮುನ್ನಡೆಸಿದ ಜಗದ್ಗುರು ಲಿಂ. ಗಂಗಾಧರ ಮಹಾಸ್ವಾಮಿಗಳು ಕೂಡ ಆಸ್ಪತ್ರೆಯ ಅಭಿವೃದ್ಧಿಗೆ ವಿಶೇಷ ಕಾಳಜಿ ವಹಿಸಿ, ಉನ್ನತ ಮಟ್ಟದ ಆರೋಗ್ಯ ಸೇವೆ ನೀಡುವ ಸಂಸ್ಥೆಯಾಗಿ ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿದ್ದರು. ಈ ಹಿನ್ನಲೆಯಲ್ಲಿ ಉಚಿತ ಮೆಡಿಕಲ್ ವಾರ್ಡ್ ಸೇವೆಗೆ ಚಾಲನೆ ನೀಡಲಾಗಿದೆ ಎಂದು ಶ್ರೀಗಳು ತಿಳಿಸಿದರು.



ಜಗದ್ಗುರು ಲಿಂ. ಗಂಗಾಧರ ಮಹಾಸ್ವಾಮಿಗಳ 23ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿಸಂಸ್ಥೆಯ ಅಧ್ಯಕ್ಷರಾದ ಅಪ್ಪಯ್ಯಪ್ಪ ಬಡಕುಂದ್ರಿ, ಉಪಾಧ್ಯಕ್ಷರಾದ ಅನಿಲ ನೇರ್ಲಿ, ಚಂದ್ರಶೇಖರ ಕಾಡದವರ, ಆಶಾದೇವಿ ಕತ್ತಿ, ಎಸ್.ಎಸ್.ದಳವಾಯಿ, ಚನ್ನಪ್ಪ ಸನದಿ, ಅಣ್ಣಪ್ಪ ತಳವಾರ, ಎಂ.ಎ. ಪಾಟೀಲ್, ಸಿಇಓ ಡಾ. ಬಿ.ಕೆ.ಎಚ್ .ಪಾಟೀಲ ಸೇರಿದಂತೆ ಆಸ್ಪತ್ರೆಯ ಸಿಬ್ಬಂದಿ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸಂಸ್ಥೆಯ ವ್ಯವಸ್ಥಾಪಕರಾದ ವಿಠ್ಠಲ ಕೌಜಲಗಿ ನಿರೂಪಿಸಿ, ವಂದಿಸಿದರು.

ಕಿರುಸುದ್ದಿ

ಮೇ 29ರಂದು ಕುಂದುಕೊರತೆ ಸಭೆ

ಗುಳೇದಗುಡ್ಡ: ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದಲ್ಲಿ ತಾಲೂಕು ಮಟ್ಟದ ವಿಶಿಷ್ಟಚೇತನರ ಕುಂದುಕೊರತೆ ಸಭೆ ಮೇ 29ರಂದು ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದ್ದು, ವಿಶಿಷ್ಟಚೇತನರು ತಮ್ಮ ಸಮಸ್ಯೆಗಳ ಲಿಖಿತ ಅರ್ಜಿಯೊಂದಿಗೆ ಸಭೆಗೆ ಹಾಜರಾಗಬೇಕು. ಸಭಗೆ ತಾಲೂಕುಮಟ್ಟದ ಎಲ್ಲ ಅಧಿಕಾರಿಗಳು ಅಗತ್ಯ ಮಾಹಿತಿಯೊಂದಿಗೆ ಖುದ್ದಾಗಿ ಹಾಜರಾಗಬೇಕು ಎಂದು ತಹಶೀಲ್ದಾರ್ ಎಸ್ .ಬಿ.ಬೊಮ್ಮನ್ನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೀರು ಹೊರಹಾಕಲು ಹರಸಾಹಸ

ರಬಕವಿ-ಬನಹಟ್ಟಿ: ಮಹಿಷವಾಡಗಿ ಸೇತುವೆ ಕಾಮಗಾರಿಗೆ ಸಂಬಂಧಿತ ಪಿಲ್ಲರ್ ನಂ.7 ಮತ್ತು 8 ರ ಕಾರ್ಯಕ್ಕೆ ವೇಗ ಪಡೆಯುತ್ತಿರುವಂತೆ ಸುತ್ತಲೂ ತಡೆಗೋಡೆ ರೀತಿಯಲ್ಲಿ ವ್ಯವಸ್ಥೆ ಕಲ್ಪಿಸಲಾಗಿದ್ದರೂ



ಪಿಲ್ಲರ್‌ಗಳ ಸುತ್ತಲೂ ಒಡ್ಡು ಹಾಕಿದ್ದರೂ ನೀರು ಮಾತ್ರ ಬಸಿನೀರಿನಿಂದ ಒಳ ಬರುತ್ತಿರುವದನ್ನು ತಡೆಯಲು ಹರಸಾಹಸ ಪಡುವಲ್ಲಿ ಕಾರಣವಾಗಿದೆ.ಕಳೆದ ಮೂರು ದಿನಗಳಿಂದ ನೀರನ್ನು ಹೊರಹಾಕುವಲ್ಲಿ ಪೈಪ್‌ಗಳ ಮೂಲಕ ನೀರನ್ನು ಹೊರಹಾಕಲಾಗುತ್ತಿದೆಯಾದರೂ ಕಾರ್ಯ ಕೈಗೂಡುತ್ತಿಲ್ಲ. ಇನ್ನೆರಡು ದಿನಗಳಲ್ಲಿ ಎರಡೂ ಪಿಲ್ಲರ್‌ಗಳ ಕಾರ್ಯ ಪ್ರಾರಂಭಗೊಳಿಸಿದ್ದಲ್ಲಿ ಕನಿಷ್ಠ 15 ದಿನಗಳಾದರೂ ಕಾಮಗಾರಿಗೆ ಸಮಯ ಬೇಕು. ಅಷ್ಟರೊಳಗಾಗಿ ನದಿಯಲ್ಲಿ ಸದ್ಯ ನೀರಿನಮಟ್ಟ ಕಡಿಮೆಯಾಗಿದ್ದು, ಮಹಾರಾಷ್ಟ್ರದಲ್ಲಿ ಮಳೆ ಶುರುವಾದರೆ ಮತ್ತೇ ಕಾಮಗಾರಿಗೆ ಕಂಟಕ ಎದುರಾಗುವಲ್ಲಿ ಕಾರಣವಾಗಿದೆ.ಇದೇ ಕಾರಣಕ್ಕೆ ಗುತ್ತಿಗೆದಾರರು ಹಾಗೂ ಕೆಆರ್‌ಡಿಸಿಎಲ್ ಅಧಿಕಾರಿಗಳು ಸ್ಥಳದಲ್ಲಿ ಬೀಡು ಬಿಟ್ಟಿದ್ದು, ಶತಾಯ-ಗತಾಯ ನೀರು ಹೊರಹಾಕುವ ಮೂಲಕ ಕಾಮಗಾರಿ ವೇಗ ಹೆಚ್ಚಿಸಲು ಪ್ರಯತ್ನ ಮಾಡುತ್ತಿದ್ದಾರೆ.

ರಾಷ್ಟ್ರಮಟ್ಟಕ್ಕೆ ಆಯ್ಕೆ

ರಬಕವಿ-ಬನಹಟ್ಟಿ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಮ್ಮಿಕೊಂಡ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಕ್ರೀಡಾಕೂಟದಲ್ಲಿ 77 ಕೆಜಿ ಗ್ರೀಕೋ ರೋಮನ್ ಕುಸ್ತಿ



ವಿಭಾಗದಲ್ಲಿ ರಬಕವಿ-ಬನಹಟ್ಟಿ ತಾಲೂಕಿನ ಆಸಂಗಿ ಸರ್ಕಾರಿ ಪ್ರೌಢಶಾಲೆ ದೈಹಿಕ ಶಿಕ್ಷಕ ರವಿ ಬಸಗೊಂಡನವರ ಮೈಸೂರಿನ ಕುಸ್ತಿ ಪಟು ಮೊಹಮ್ಮದ ಇಲಿಯಾಸ ವಿರುದ್ಧ ಜಯಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ದಂಡಿನ ದುರ್ಗಾದೇವಿ ಜಾತ್ರೆ ಸಂಭ್ರಮ

ಕಲಾದಗಿ: ಗ್ರಾಮದ ಹರಣಶಿಕಾರಿ ಕಾಲೋನಿಯಲ್ಲಿ ಮಂಗಳವಾರ ಅದ್ದೂರಿಯಾಗಿ ಜರುಗಿದ ದಂಡಿನ ದುರ್ಗಾದೇವಿ ಜಾತ್ರೆಯಲ್ಲಿ ನೂರಾರು ಭಕ್ತರ ಮಧ್ಯ ದಂಡಿನ ದುರ್ಗಾದೇವಿ ದೇವಾಲಯದ ಪೂಜಾರಿಗಳು ತಲೆಗೆ ತೆಂಗಿನ ಕಾಯಿಗಳನ್ನು ಒಡೆದುಕೊಳ್ಳುವ ಮೂಲಕ ತಮ್ಮ ಪೂರ್ವಜರ ವಿಶಿಷ್ಠ ಧಾರ್ಮಿಕ



ಆಚರಣೆಯ ಸಂಪ್ರದಾಯವನ್ನು ಶ್ರದ್ಧಾ ಭಕ್ತಿಯಿಂದ ನೆರವೇರಿಸಿದರು. ಇಲ್ಲಿನ ಹರಣಶಿಕಾರಿ ಸಮಾಜ ಕಾಲೋನಿಯ 30ನೇ ವರ್ಷದ ದಂಡಿನ ದುರ್ಗಾದೇವಿ ಜಾತ್ರೆ ವೇಳೆ ವಿಶೇಷ ಪೂಜೆ ಸಲ್ಲಿಸಿ ದೇವಾಲಯದ ಪೂಜಾರಿಗಳಾದ ಚಂದಪ್ಪ ಕಾಳೆ ಹಾಗೂ ಲಕ್ಷ್ಮಣ ಕಾಳೆ ಜಾತ್ರೆಯಲ್ಲಿ ನೆರೆದಿದ್ದ ಭಕ್ತರ ಸಮ್ಮುಖದಲ್ಲಿ ದೇವಾಲಯದಲ್ಲಿದ್ದ ಹತ್ತಾರು ತೆಂಗಿನಕಾಯಿಗಳನ್ನು ತೆಗೆದುಕೊಂಡು ಒಂದೇಸಮನೆ ಪಟಪಟನೆ ತಲೆಗೆ ಒಡೆದುಕೊಂಡು ಹೋಳು ಮಾಡುತ್ತಾ ನೆರೆದಿದ್ದ ನೂರಾರು ಭಕ್ತರನ್ನು ವಿಸ್ಮಯಗೊಳಿಸಿ ದೇವಿಗೆ ಸೇವೆ ಒಪ್ಪಿಸಲಾಯಿತು. ಹತ್ತಾರು ವರ್ಷಗಳ ಪರಂಪರೆಯಂತೆ ಪ್ರತಿವರ್ಷದಂತೆ ಜಾತ್ರೆಯಲ್ಲಿ ತೆಂಗಿನಕಾಯಿ ಒಡೆದುಕೊಳ್ಳುವ ಹಿರಿಯ ಪೂಜಾರಿಗಳ ಸಂಪ್ರದಾಯವನ್ನು ಯುವ ಪೂಜಾರಿಗಳಾದ ಚಂದಪ್ಪ ಕಾಳೆ ಹಾಗೂ ಲಕ್ಷ್ಮಣ ಕಾಳೆ ಶ್ರದ್ಧಾ ಭಕ್ತಿಯಿಂದ ಮುಂದುವರೆಸಿದರು. ನೆರೆದಿದ್ದ ಭಕ್ತರಿಂದ ಉದೋ ಉದೋ ಉದ್ಘೋಷಣೆ ಹಾಕುತ್ತಾ ಭಕ್ತಿ ಪರಾಕಾಷ್ಟೆ ಮೆರೆದರು.



ಕಲಾದಗಿ: ಗ್ರಾಮದ 30ನೇ ವರ್ಷದ ದಂಡಿನ ದುರ್ಗಾದೇವಿ ಜಾತ್ರೆಯ ನಿಮಿತ್ತ ದುರ್ಗಾದೇವಿಯ ಬೆಳ್ಳಿ ಮೂರ್ತಿ ಹೊತ್ತು ಗ್ರಾಮದ ಪ್ರಮೂಖ ಬೀದಿಗಳಲ್ಲಿ ಡೊಳ್ಳು ಬಾರಿಸುತ್ತಾ ಭಂಡಾರ ಎರಚುತ್ತಾ ಪಲ್ಲಕ್ಕಿ ಮಹೋತ್ಸವ ಅದ್ದೂರಿಯಾಗಿ ಜರುಗಿತು. ಮೆರವಣಿಗೆಯುದ್ದಕ್ಕೂ ಪಟಾಕಿ ಸಿಡಿಸಿ ಸಂಗೀತನಾದಕ್ಕೆ ನೂರಾರು ಯುವಕ ಯುವತಿಯರು ಕುಣಿದು ಕುಪ್ಪಳಿಸಿದರು.ನಂತರ ದೇವಸ್ಥಾನದ ಆವರಣದಲ್ಲಿ ಭಕ್ತರಿಂದ ಧೀಡ ನಮಸ್ಕಾರ ಸಲ್ಲಿಸಿ ಮಹಾಪ್ರಸಾದ ಸೇವೆ ಜರುಗಿತು.

ನಿತ್ಯ ಯೋಗ, ವ್ಯಾಯಾಮ ಅಳವಡಿಸಿಕೊಳ್ಳಿ

ರಬಕವಿ-ಬನಹಟ್ಟಿ: ಇಂದಿನ ನಿತ್ಯದ ಜಂಜಾಟದ ಬದುಕಿನಲ್ಲಿ ಮಾನವ ಆರೋಗ್ಯದತ್ತ ಗಮನಕೊಡದೆ ಇಳಿವಯ್ಯಸ್ಸಿನಲ್ಲಿ ತುಂಬಾ ಅನಾರೋಗ್ಯಕ್ಕೆ ಇಡಾಗುತ್ತಿದ್ದಾನೆ. ಆದ್ದರಿಂದ ನಿತ್ಯ ಬೆಳಗಿನ ಜಾವ ಯೋಗ ವ್ಯಾಯಾಮ ಮತ್ತು ಆಹಾರ ಪದ್ಧತಿಯ ಕುರಿತು ಅರಿವು ಮೂಡಿಸಿಕೊಳ್ಳಿ ಎಂದು ರಬಕವಿ ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ದೇಶ್ವರ ಶ್ರೀಗಳು ಹೇಳಿದರು. ರಬಕವಿ ಆಶ್ರಮದಲ್ಲಿ ಜಮಖಂಡಿಯ ಅರುಣ ತಿಕೋಟಿಕರ ಗುರುಜಿಯವರ ನೇತೃತ್ವದಲ್ಲಿ ಹಮ್ಮಿಕೊಂಡ ಸಿದ್ಧ ಸಮಾದಿ ಯೋಗ ಶಿಬಿರದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಇದು ಕೇವಲ ದೈಹಿಕ ವ್ಯಾಯಾಮವಲ್ಲದೆ, ಮಾನಸಿಕ ಒತ್ತಡ ನಿವಾರಣೆ ಮತ್ತು ಆನಂದಮಯ ಜೀವನ ನಡೆಸುವ ಕಲೆಯನ್ನು ಕಲಿಸುತ್ತದೆ ಎಂದರು. ಯೋಗ ಗುರು ಹಾಗು ಸಿಬಿರದ ನೃತೃತ್ವ ವಹಸಿದ್ದ ಅರುಣ ತಿಕೋಟಿಕರ ಮಾತನಾಡಿ, ಶಿಬಿರದ ಪ್ರಮುಖ ಅಂಶ ಎಂದರೆ ಧ್ಯಾನ ಮತ್ತು ಪ್ರಾಣಾಯಾಮ, ಮನಸನ್ನು ಶಾಂತಗೊಳಿಸಲು ಮತ್ತು ಏಕಾಗ್ರತೆಯನ್ನು ಹೆಚ್ಚಿಸಲು ವಿಶೇಷ ಧ್ಯಾನ ತಂತ್ರಗಳನ್ನು ಕಲಿಸಲಾಗುತ್ತದೆ. ಆರೋಗ್ಯಕರ ಜೀವನಶೈಲಿಗಾಗಿ ಸರಿಯಾದ ಆಹಾರ ಪದ್ಧತಿಯ ಬಗ್ಗೆ ಮಾರ್ಗದರ್ಶನ ನೀಡಲಾಗುತ್ತದೆ. ವ್ಯಕ್ತಿಯಲ್ಲಿನ ನಕಾರಾತ್ಮಕ ಭಾವನೆಗಳನ್ನು ತೊಡೆದುಹಾಕಿ, ಸಕಾರಾತ್ಮಕ ಶಕ್ತಿಯನ್ನು ಹೆಚ್ಚಿಸಲು ಶಿಬಿರ ಸಹಾಯ ಮಾಡುತ್ತದೆ. ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ಮೂಲಕ ಸ್ವಾಭಾವಿಕವಾಗಿ ಕಾಯಿಲೆಗಳಿಂದ ದೂರವಿರುವ ವಿಜ್ಞಾನವನ್ನು ಪರಿಚಯಿಸಲಾಗುತ್ತದೆ. ನಿತ್ಯದ ಬದುಕಿನಲ್ಲಿ ಯೋಗ, ಧ್ಯಾನ, ಪ್ರಾಣಾಯಾಮ ಅಳವಡಿಸಿಕೊಳ್ಳುವುದರಿಂದ ಔಷಧಿ ಮುಕ್ತ ಜೀವನ ನಡೆಸಭುದು ಎಂದು ತಿಕೋಟಿಕರ ಹೇಳಿದರು. ಶಿಬಿರದಲ್ಲಿ ಅನೇಕ ಮಹಿಳೆಯರು, ವೃದ್ದರು, ಯುವಕರು ಭಾಗವಹಿಸಿದ್ದರು.



ರಬಕವಿ-ಬನಹಟ್ಟಿ: ಎಸ್‌ಎಸ್‌ಎಲ್‌ಸಿ ಮರುಮೌಲ್ಯಮಾಪನದಲ್ಲಿ 2 ಅಂಕ ಹೆಚ್ಚುವರಿಯೊಂದಿಗೆ 614 ಅಂಕ ಪಡೆದು ಬನಹಟ್ಟಿಯ ಎಸ್‌ಆರ್‌ಎ ಪ್ರೌಢಶಾಲೆಗೆ ತೃತಿಯ ಸ್ಥಾನ ಪಡೆದ ವಿದ್ಯಾರ್ಥಿನಿ ಸಾಧನಾ ಕಿರಣ ಆಳಗಿಯನ್ನು ಶಾಲಾವೃಂದ ಮಂಗಳವಾರ ಸನ್ಮಾನಿಸಿತು.

ಬಾಗಲಕೋಟೆಯಲ್ಲಿ ಅನಧಿಕೃತ ಕಸಾಯಿಖಾನೆಗಳ ಹಾವಳಿ

ಗೋ ಹತ್ಯೆ ತಡೆಯಲು ಒತ್ತಾಯ

ಬಾಗಲಕೋಟೆ: ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಜಿಲ್ಲೆಯ ಹಲವೆಡೆ ಅನಧಿಕೃತ ಕಸಾಯಿಖಾನೆಗಳಲ್ಲಿ ಕಾನೂನು ಬಾಹಿರವಾಗಿ ಗೋಹತ್ಯೆ ನಡೆಯುತ್ತಿದ್ದು ಪೊಲೀಸ್ ಇಲಾಖೆ ಎಚ್ಚರಗೊಂಡು ಗೋಹತ್ಯೆ ತಡೆಗಟ್ಟಬೇಕು ಎಂದು ಹಿಂದೂ ಜಾಗರಣ ವೇದಿಕೆ ಜಿಲ್ಲಾ ಸಂಯೋಜಕ ಮಲ್ಲು ಕೋಟಿ ಹೇಳಿದರು.

ನವನಗರದ ಪತ್ರಿಕಾಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಾದ್ಯಂತ ತಾಲೂಕುವಾರು, ಪಟ್ಟಣ, ನಗರ, ಕೇಂದ್ರಗಳಲ್ಲಿ ಬಕ್ರೀದ ಹಬ್ಬದ ನಿಮತ್ತ ಗೋ-ಸಾಗಾಟ ಹಾಗೂ ಕಸಾಯಿಖಾನೆಗಳಲ್ಲಿ ಅವ್ಯಾಹತವಾಗಿ ಗೋ ಹತ್ಯೆ ನಡೆಯುತ್ತಿದ್ದು, ಜಿಲ್ಲೆಯಲ್ಲಿ ಗೋ ಹತ್ಯೆ ಕಾಯ್ದೆ -2023 ಕಟ್ಟು ನಿಟ್ಟಾಗಿ ಪಾಲನೆಯಾಗುತ್ತಿಲ್ಲ, ಸಂಬಧಪಟ್ಟ ಇಲಾಖೆಗಳು ಕಾರ್ಯನಿರ್ವಹಿಸುವಲ್ಲಿ ವಿಫಲವಾಗುತ್ತಿವೆ. ಮೇ.28ರಂದು ಬಕ್ರೀದ ಹಬ್ಬದ ನಿಮಿತ್ತ ಜಿಲ್ಲೆಯ ವಾಹನಗಳಲ್ಲಿ ಗೋ ಸಾಗಾಟ ಮಾಡಲು ಹಾಗೂ ಜಿಲ್ಲೆಯಲ್ಲಿ ದನದ ಸಂತೆಗಳಲ್ಲಿ -ಮಾರಾಟ ನಡೆಯುತ್ತಿದ್ದು ದಲ್ಲಾಳಿಗಳ ಹಾವಳಿ ಹೆಚ್ಚಾಗಿದೆ. ಜಿಲ್ಲಾ ಆಡಳಿತ -ಪೊಲೀಸ್ ಇಲಾಖೆ ಹಾಗೂ ಪ್ರಾಣಿ ಸಂರಕ್ಷಣಾ ಇಲಾಖೆ ಕಟ್ಟುನಿಟ್ಟಿನ ಕ್ರಮ ವಹಿಸಬೇಕು.ಇಲ್ಲವಾದಲ್ಲಿ ಅದಕ್ಕೆ ಸಂಬಂಧಪಟ್ಟ ಇಲಾಖೆ ನೇರ ಹೊಣೆಯಾಗಲಿದೆ ಎಂದು ಆಗ್ರಹಿಸಿದರು.

ಜಿಲ್ಲೆಯ ವಿವಿಧ ಭಾಗಗಳಲ್ಲಿ ಅನಧಿಕೃತವಾಗಿ ಗೋವುಗಳನ್ನು ಕತ್ತರಿಸಿ, ಅವುಗಳ ತ್ಯಾಜ್ಯವನ್ನು ನದಿಗೆ ಎಸೆಯುವ ಮೂಲಕ ಪರಿಸರ ಮಾಲಿನ್ಯ ಮಾಡಲಾಗುತ್ತಿದೆ. ಈ ಕುರಿತು ಈಗಾಗಲೇ ಪೊಲೀಸ್ ಇಲಾಖೆಗೆ ಸೂಕ್ತ



ಸಾಕ್ಷ್ಯಾಧಾರಗಳೊಂದಿಗೆ ಹಲವು ಬಾರಿ ಮಾಹಿತಿ ನೀಡಲಾಗಿದ್ದರೂ ಯಾವುದೇ ಕಟ್ಟುನಿಟ್ಟಿನ ಕ್ರಮ ಕೈಗೊಂಡಿಲ್ಲ ಎಂದು ಹೇಳಿದರು. ಬಕ್ರೀದ್ ಹಬ್ಬದ ಅಂಗವಾಗಿ ಗೋಹತ್ಯೆ ನಡೆಯುತ್ತಿರುವ ಸ್ಥಳಗಳ ಛಾಯಾಚಿತ್ರಗಳು ಹಾಗೂ ಕಳೆದ ವರ್ಷ ಮುಧೋಳದಲ್ಲಿ ನಡೆದ ಇಂತಹದೇ ಘಟನೆಯ ಸಾಕ್ಷ್ಯಗಳನ್ನು ಕೂಡ ಸಂಬಂಧಪಟ್ಟವರಿಗೆ ನೀಡಲಾಗಿದೆ.

28 ರಂದು ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಗೋಹತ್ಯೆ ತಡೆಯಲು ಪೊಲೀಸ್ ಇಲಾಖೆ ಈಗಿನಿಂದಲೇ ಮುನ್ನೆಚ್ಚರಿಕೆ ವಹಿಸಬೇಕು. ಒಂದು ವೇಳೆ ಇಲಾಖೆಯು ಸೂಕ್ತ ಕ್ರಮ ಕೈಗೊಳ್ಳದಿದ್ದರೆ, ಹಿಂದೂ ಸಂಘಟನೆಗಳೇ ಕಾನೂನುಬಾಹಿರ ಗೋ ಸಾಗಾಟ ಮತ್ತು ಹತ್ಯೆಯನ್ನು ತಡೆಯಲು ಮುಂದಾಗಬೇಕಾಗುತ್ತದೆ. ಈ ವೇಳೆ ಏನಾದರೂ ಅಹಿತಕರ ಘಟನೆಗಳು ಸಂಭವಿಸಿದರೆ ಅದಕ್ಕೆ ಜಿಲ್ಲಾಡಳಿತ ಮತ್ತು ಬಾಗಲಕೋಟೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೇ ನೇರ ಹೊಣೆಗಾರರಾಗುತ್ತಾರೆ ಎಂದು ಸಂಘಟನೆಯು ಎಚ್ಚರಿಕೆ ನೀಡಿದೆ ಎಂದು ಹೇಳಿದರು.

ಹಿಂದೂ ಜಾಗರಣ ವೇದಿಕೆ ಮುಖಂಡ ಕುಮಾರಸ್ವಾಮಿ ಹಿರೇಮಠ ಮಾತನಾಡಿ, ಪೋಕ್ಸೋ ಕಾಯ್ದೆ ಬಗ್ಗೆ ಜಾಗೃತಿ ಮೂಡಿಸುವ ಪೊಲೀಸ್ ಅಧಿಕಾರಿಗಳು, ಜಿಲ್ಲಾಧಿಕಾರಿಗಳು ಕೆರೂರ, ಅಮೀನಗಡ ಸೇರಿದಂತೆ ಜಿಲ್ಲೆಯ ವಿವಿಧ ಕಡೆ ನಡೆಯುವ ಜಾನುವಾರ ಸಂತೆಯಲ್ಲಿ ಗೋ ಹತ್ಯೆ ನಿಷೇಧ ಕಾಯ್ದೆ 2023ನ್ನು ಜಾಗೃತಿ ಮೂಡಿಸಲು ಮುಂದಾಗಬೇಕು ಎಂದು ಹೇಳಿದರು.

ಇಳಕಲ್ ಮಹಾಂತ ಸ್ವಾಮೀಜಿ ಗದ್ದುಗೆ ಸಮೀಪ, ಬಾಗಲಕೋಟೆ ಮಟನ್ ಮಾರ್ಕೆಟ್, ನವನಗರದ ಸೆ.3ರ ಮುಖ್ಯ ರಸ್ತೆ, ಮುಧೋಳ ಜನತಾಪ್ಲಾಟ್ ಬಳಿ ಹಾಗೂ ಕೆರೂರ ಕೆರೆ ಬಳಿ ಹೀಗೆ ಜಿಲ್ಲೆ ನಾನಾ ಕಡೆ ಗೋ ಹತ್ಯೆ ಮಾಡಲಾಗುತ್ತಿದೆ ಎಂಬುದರ ಕುರಿತು ಮಾಹಿತಿಯನ್ನು ನೀಡಿದಾಗ್ಯೂ ಅಧಿಕಾರಿಗಳು ಎಚ್ಚೆತ್ತುಕೊಳ್ಳದಿದ್ದರೆ ಹಿಂದೂ ಜಾಗರಣ ವೇದಿಕೆ ಹಾಗೂ ಹಿಂದೂ ಸಂಘಟನೆಗಳ ಕಾರ್ಯಕರ್ತರು ಗೋ ಹತ್ಯೆ ನಡೆಯುವ ಸ್ಥಳಕ್ಕೆ ಹೋಗಬೇಕಾಗುತ್ತದೆ. ಅಲ್ಲಿ ಆಗುವ ಅನಾಹುತಕ್ಕೆ ಜಿಲ್ಲಾಡಳಿತ ಹೊಣೆಯಾಗಬೇಕಾಗುತ್ತದೆ ಎಂದರು.

ಕೃಷಿ ಸಾಮಗ್ರಿ ಮಳಿಗೆ ಪ್ರಾರಂಭ

ಕಲಾದಗಿ: ಗುಣಮಟ್ಟದ ಕೃಷಿ ಉಪಯೋಗಿ ಸಾಮಗ್ರಿಗಳ ನೂತನ ಮಾರಾಟ ಮಳಿಗೆಯನ್ನು ನಮ್ಮ ಸಂಸ್ಥೆಯ ಮೂಲಕ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಆವರಣದ ಗೋದಾಮಿನಲ್ಲಿ ಪ್ರಾರಂಭಿಸಲಾಗಿದ್ದು, ರೈತ ಪರ ಕಾಳಜಿ ಹೊಂದಿದೆ. ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದ್ದು, ರೈತರು ಇದರ ಸದುಪಯೋಗ ಪಡಿಸಿಕೊಳ್ಳಿ ಎಂದು ಬಾಗಲಕೋಟೆ ತಾಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಂಘದ ಅಧ್ಯಕ್ಷ ವೆಂಕಟೇಷ ರಂಗನ್ನವರ ಹೇಳಿದರು.

ಗ್ರಾಮದ ಕೃಷಿ ಪತ್ತಿನ ಸಹಕಾರಿ ಸಂಘದ ಆವರಣದಲ್ಲಿ ನಡೆದ ನೂತನ ಮರಾಟ ಮಳಿಗೆ ಪ್ರಾರಂಭೋತ್ಸವದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಬಾಗಲಕೋಟೆ ತಾಲೂಕಿನಲ್ಲಿ ಈ ವರೆಗೆ ಎರಡು ಮಾರಾಟ ಮಳಿಗೆಗಳಿದ್ದವು ಇಲ್ಲಿನ ಸ್ಥಳೀಯ ರೈತರ ಬೇಡಿಕೆಗೆ ಅನುಗುಣವಾಗಿ ಕಲಾದಗಿಯಲ್ಲಿಯೂ ಮೂರನೇ ಮಳಿಗೆ ಪ್ರಾರಂಭಿಸಲಾಗಿದೆ.ರೈತರಿಗೆ ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ಕೃಷಿ ದಿನಬಳಕೆ ವಸ್ತುಗಳ ಸಹಿತ ಬೀಜ ಗೊಬ್ಬರ ಮಾರಾಟ ಮಾಡುವ ಪರವಾಣಿಗೆ ಪಡೆಯಲಾಗಿದ್ದು ಯೋಗ್ಯ ರಿಯಾಯತಿ ದರದಲ್ಲಿ ಗೊಬ್ಬರವನ್ನು ಸಹ ಇನ್ನೇನು ಕೆಲವೇ ದಿನಗಳಲ್ಲಿ ಪ್ರಾರಂಭಿಸಲಾಗುವುದು ಎಂದರು. ಮುಖಂಡ ಶ್ರೀಧರ ವಾಘ ಮಾತನಾಡಿಗ್ರಾಮೀಣಭಾಗದರೈತರಿಗಾಗಿ ಉಪಯೋಗವಾಗುವ ದೃಷ್ಟಿಯಿಂದ ಮಳಿಗೆಯನ್ನು ಪ್ರಾರಂಭಿಸಲಾಗಿದ್ದು ಇದರ ಸದುಪಯೋಗವಾಗಲಿ ಎಂದರು.

ಬಾಗಲಕೋಟೆ ತಾಲೂಕ ಒಕ್ಕಲುತನ ಹುಟ್ಟುವಳಿ ಮಾರಾಟಗಾರರ ಸಂಘದ ಉಪಾಧ್ಯಕ್ಷ ಸಿದ್ದಯ್ಯ ಹಿರೇಮಠ, ಕೃಷಿ ಅಧಿಕಾರಿ ಪ್ರಸನ್ನ ಮಾನೆ, ಸಹಾಯಕ ನಿಭಂದಕಿ ರೇಣುಕಾ, ಪಿಕೆಪಿಎಸ್ ಅಧ್ಯಕ್ಷ ಮಂಜುನಾಥ ಬಿಲಕೇರಿ, ಉಪಾದ್ಯಕ್ಷ ರಾಜೇಶ ಕಾಮನ್ನವರ, ಬಸವರಾಜ ಮಂಡಿಕಟಗಿ, ಆನಂದ ಅರಕೇರಿ, ಎಪಿಎಂಸಿ ಮಾಜಿ ಅಧ್ಯಕ್ಷ ನಿಂಗಪ್ಪ ಅರಕೇರಿ, ಈರಪ್ಪ ಅರಕೇರಿ, ಮಹೇಶ ಆಡಗಲ್, ಲಕ್ಷ್ಮಣ ಶಿರಬೂರ, ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ರೈತ ಮುಖಂಡರು ಆಗಮಿಸಿದ್ದರು.



ಕನ್ನಡ, ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಕೆ ಪ್ರಾರಂಭ



ಬೀಳಗಿ: ತಾಲೂಕಿನ ಎಲ್ಲ ಸರ್ಕಾರಿ ಶಾಲೆಗಳಲ್ಲಿ 1ರಿಂದ 5ನೇ ತರಗತಿಯ ಮಕ್ಕಳಿಗೆ ಕನ್ನಡ ಹಾಗೂ ಇಂಗ್ಲಿಷ ದ್ವಿಭಾಷಾ ಮಾಧ್ಯಮದಲ್ಲಿ ಕಲಿಕೆ ಪ್ರಾರಂಭವಾಗುವುದೆಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್.ಆದಾಪೂರ ತಿಳಿಸಿದರು.

ಬೀಳಗಿ ಕ್ರಾಸ್-3 ರಲ್ಲಿನ ಸರಕಾರಿ ಆದರ್ಶ ವಿದ್ಯಾಲಯದಲ್ಲಿ ಪ್ರಸಕ್ತ 2026-27ನೇ ಸಾಲಿನಲ್ಲಿ ತಾಲೂಕಿನ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರ ಸಭೆಯಲ್ಲಿ ಮಾತನಾಡಿದರು. ಪ್ರಸಕ್ತ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ದ್ವಿಭಾಷಾ ಕನ್ನಡ ಹಾಗೂ ಇಂಗ್ಲಿಷ ಮಾಧ್ಯಮದಲ್ಲಿ 1 ರಿಂದ 5 ನೇ ತರಗತಿವರೆಗೆ ಪ್ರಾರಂಭಿಸಲಾಗುತ್ತಿದೆ. ಅದೇ ರೀತಿ ಕೆ.ಪಿ.ಎಸ್., ಪಿಎಂಶ್ರೀ ಶಾಲೆಗಳು ಹಾಗೂ 25 ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷೆಯಲ್ಲಿ ಎಲ್.ಕೆ.ಜಿ., ಯು.ಕೆ.ಜಿ ಪ್ರಾರಂಭಿಸಲಾಗಿದೆ ಎಂದರು. ಈಗಾಗಲೇ ತಾಲೂಕಿನ ಎಲ್ಲ ಅನುಷ್ಠಾನ ಅಧಿಕಾರಿಗಳಿಗೆ ಹಾಗೂ 1ರಿಂದ 5 ನೇ ತರಗತಿ ಬೋಧಿಸುವ ಎಲ್ಲ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಐದು ದಿನಗಳ ತರಬೇತಿ ನೀಡಿ ಬೋಧನೆಗೆ ಶಿಕ್ಷಕರನ್ನು ಸನ್ನದ್ಧಗೊಳಿಸಿದ್ದು, ತಾಲೂಕು ಹಂತದ ತಂಡಗಳ ಮೂಲಕ ಶಿಕ್ಷಕರಿಗೆ ನಿರಂತರ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯೊಂದಿಗೆ ಪ್ರತಿ ಮಾಸಿಕ ಹಿಮ್ಮಾಹಿತಿಯನ್ನು ಪಡೆದು ಸೂಕ್ತ ಸಲಹೆ ನೀಡಲಾಗುವದು ಎಂದರು.ಉಜ್ವಲ ಭವಿಷ್ಯ ಎಂಬ ಧ್ಯೇಯದೊಂದಿಗೆ ಕಾರ್ಯ ನಿರ್ವಹಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಸರ್ಕಾರ ಘೋಷಿಸಿದಂತೆ ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ವಿಭಾಗಗಳಲ್ಲಿ ಎಲ್‌ಕೆಜಿ ತರಗತಿಗಳನ್ನು ಆರಂಭಿಸುವುದು. ನಮ್ಮ ಶಾಲೆ, ನಮ್ಮ ಹೆಮ್ಮೆ ಎನ್ನುವ ಮನೋಭಾವದೊಂದಿಗೆ ಎಲ್ಲ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸಲು ಎಲ್ಲ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರು ಸಮುದಾಯದ ಸಹಕಾರದಿಂದ ಮನೆ ಮನೆ ಭೇಟಿ ನೀಡುತ್ತಿದ್ದಾರೆಂದು ಹೇಳಿದರು.

ಕ್ಷೇತ್ರ ಸಮನ್ವಯಾಧಿಕಾರಿ ಶಿವಾಜಿ ಕಾಂಬಳೆ, ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ಶಿವಾಜಿ ನಾಯಕ, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ಎಸ್.ಎ.ಎತ್ತಿನಮನಿ, ಶಿಕ್ಷಣ ಸಂಯೋಜಕ ಜಗದೀಶ ಖೋತ, ಬಿಆರ್‌ಪಿ ಮಂಜುನಾಥ ಕಣಬೂರ, ಸೋಮಶೇಖರ ತಳೇವಾಡ, ಕೆ.ಎಸ್.ಗೌಡ್ರ, ಎಚ್.ಟಿ.ಸಣ್ಣಗೌಡರ, ಎನ್.ಎಸ್.ಪಾಟೀಲ, ಬಸವರಾಜ ಲಮಾಣಿ, ಸಿಆರ್‌ಪಿಗಳು ಹಾಜರಿದ್ದರು.

ವೀರ ಸಾವರ್ಕರ ಜನ್ಮದಿನಾಚರಣೆ: ದಂಪತಿಗಳಿಗೆ ಸನ್ಮಾನ

ಜಮಖಂಡಿ: ನಗರದ ಬಸವ ಭವನ ಆವರಣದಲ್ಲಿ ಸ್ವಾತಂತ್ರ್ಯ ವೀರ ಸಾವರ್ಕರ ಪ್ರತಿಷ್ಠಾನದಿಂದ ವೀರ ಸಾವರ್ಕರ ಜನ್ಮದಿನಾಚರಣೆ ಆಚರಿಸಲಾಯಿತು. ಈ ವೇಳೆ ಸುಮಾರು ಹತ್ತಕ್ಕೂ ಅಧಿಕ ಎರಡಕ್ಕೂ ಅಧಿಕ ಮಕ್ಕಳನ್ನು ಹೆತ್ತ ದಂಪತಿಗಳಾದ ಸದಾಶಿವ ಕುಳಲಿ 11 ಜನ ಮಕ್ಕಳು, ಸಿದ್ದು ಗಾಳಿ 5 ಜನ, ಪ್ರಕಾಶ ಪುರೋಹಿತ 5 ಜನ, ಸಿದ್ದು ಮರನೂರ 4 ಜನ, ದೀಪಕ ಮಾನೆ 4 ಜನ, ರಾಜು ಐಹೊಳಿ 4 ಜನ, ರಾಜು ಪತ್ತಾರ 4, ಮಹಾದೇವ ತಳವಾರ 4ಜನ, ಮಪ್ಪಲ್ಲ ಹಟ್ಟಿ 4 ಜನ, ದಿಗ್ವಿಜಯ ಬಾಂಗಿ 3 ಜನ,ಚೈತನ್ಯ ಓಸ್ವಾಲ 3 ಜನ ಮಕ್ಕಳನ್ನು ಹೆತ್ತ ಹಿಂದೂ ದಂಪತಿಗಳ ಸನ್ಮಾನ ನಡೆಯಿತು.

ಸಾನ್ನಿಧ್ಯ ವಹಿಸಿದ್ದ ರುದ್ರಾವದೂತ ಮಠದ ಕೃಷ್ಣಾನಂದ ಅವದೂತರು ಆಶೀರ್ವಚನ ನೀಡಿದರು. ಡಾ.ತಾತಾಸಾಹೇಬ ಬಾಂಗಿ ಅಧ್ಯಕ್ಷತೆ ವಹಿಸಿದ್ದರು.

ರಾಜ್ಯಸಭಾ ಸದಸ್ಯ ನಾರಯಣಸಾ ಬಾಂಡಗೆ, ಶಾಸಕರಾದ ಸಿದ್ದು ಸವದಿ, ಜಗದೀಶ ಗುಡಗುಂಟಿ, ಹನುಮಂತ ನಿರಾಣಿ, ಮಾಜಿ ಸಚಿವ ಮುರಗೇಶ



ನಿರಾಣಿ, ಮಾಜಿ ಶಾಸಕರಾದ ಶ್ರೀಕಾಂತ ಕುಲಕರ್ಣಿ, ರಾಜಶೇಖರ ಶೀಲವಂತ, ಜಿ.ಎಸ್.ನ್ಯಾಮಗೌಡ, ಭಾಜಪ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಉಮೇಶ ಮಹಾಬಳಶೆಟ್ಟಿ, ಮೋಹನ ಜಾಧವ, ಡಾ|ಆರ್.ಎನ್.ಸೋನವಾಳಕರ, ಅರವಿಂದರಾವ ದೇಶಪಾಂಡೆ. ಪ್ರತಿಷ್ಠಾನದ ಅಧ್ಯಕ್ಷ ಶೈಲೇಶ ಅಪ್ಪೆ, ಗಿರೀಶ ಮನಗೂಳಿ, ಶ್ರೀಕರ ಸವಾಯಿ, ಡಾ.ಅಜಯ ಕುಲಕರ್ಣಿ, ಮಚ್ಚೇಂದ್ರ ಮುಳಿಕ, ಕುಮಾರ ಹವಾಲದಾರ, ಹರೀಶ ಪವಾರ ಇದ್ದರು.

ಸೂಚನಾ ಫಲಕ ಅಳವಡಿಕೆಗೆ ಸೂಚನೆ

ಮಹಾಲಿಂಗಪುರ: ರಸ್ತೆ ವಿಭಜಕ; ಜನರ ಜೀವದ ಜೊತೆ ಚೆಲ್ಲಾಟ ಎಂಬ ಶೀರ್ಷಿಕೆಯಡಿ ಹೊಸ ದಿಗಂತ ಪತ್ರಿಕೆಯಲ್ಲಿ ಪ್ರಕಟವಾದ ಲೇಖನಕ್ಕೆ ಸ್ಪಂದಿಸಿದ ಶಾಸಕ ಸಿದ್ದು ಸವದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ತಕ್ಷಣವೇ ಸೂಚನಾ ಫಲಕ ಅಳವಡಿಕೆ ಮಾಡಿಸಿದರು. ಎರಡೂ ಬದಿಯ ರಸ್ತೆಯಲ್ಲಿ ನಿಂತಿದ್ದ ಮೋಟಾರ್ ಸೈಕಲ್ ತೆಗೆಸಿ ಇನ್ನು ಮುಂದೆ ರಸ್ತೆ ಬದಿಯಲ್ಲಿ ವಾಹನ ನಿಲ್ಲದಂತೆ ಖಡಕ್ ಸೂಚನೆ ನೀಡಿದರು. ಬ್ಯಾರಿಕೇಡ್ ಅಳವಡಿಸಲಾಯಿತು.ಸಿಪಿಐ ಆರ್.ಆರ್.ಪಾಟೀಲ, ಪಿಎಸ್‌ಐ ಕಿರಣ ಸತ್ತೀಗೇರಿ, ಪುರಸಭಾ ಮುಖ್ಯಾಧಿಕಾರಿ ನಾಮದೇವ ಲಮಾಣಿ ಇದ್ದರು.

ದಿಗಂತ ವರದಿ ಪರಿಣಾಮ



ಸೌಹಾರ್ದಯುತವಾಗಿ ಬಕ್ರೀದ್ ಆಚರಿಸಿ

ಕಲಾದಗಿ: ತ್ಯಾಗ ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಶಾಂತಿ ಸೌಹಾರ್ದಯುತವಾಗಿ ಆಚರಿಸಬೇಕೆಂದು ಕಲಾದಗಿ ಪೊಲೀಸ್ ಠಾಣೆ ಪಿಎಸ್‌ಐ ಪ್ರವೀಣ ಬೀಳಗಿ ಮನವಿ ಮಾಡಿದರು.

ಗ್ರಾಮದ ಪೋಲಿಸ್ ಠಾಣೆಯಲ್ಲಿ ನಡೆದ ಶಾಂತಿಪಾಲನಾ ಸಭೆಯಲ್ಲಿ ಮಾತನಾಡಿದ ಅವರು ಹಿಂದೂ ಮುಸ್ಲಿಂ ಸಮಾಜದ ಹಿರಿಯರು ಒಗ್ಗಟ್ಟಿನಿಂದ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಶಾಂತಿಯುತವಾಗಿ ಹಬ್ಬಗಳನ್ನು ಆಚರಿಸಿ ಎಂದು ಹೇಳಿದರು.



ಹಿರಿಯರಾದ ಹಸನಅಹ್ಮದ ರೋಣ, ಮಲ್ಲಪ್ಪ ಜಮಖಂಡಿ, ರೆಹಮಾನಸಾಬ ಬಾರೂದವಾಲೆ ಮಾತನಾಡಿದರು. ಮುಖಂಡರಾದ ಬಂದೇನವಾಜ ಸೌದಾಗರ, ಹಾಜಿ ರಫೀಕಸಾಬ ಬೇಪಾರಿ, ರಾಜೇಸಾಬ ಗೋಠೆ, ಬಾಬು ತೇಲಿ, ಅಬ್ದುಲಖಾನ ಪಠಾಣ, ರೆಹಮಾನಸಾಬ ಮಕಾನದಾರ, ಹಣಮಂತ ತಳವಾರ, ಸುಭಾಸ ದುರ್ವೆ, ಶ್ರೀಧರ ಮಾದರ, ರಿಯಾಜ ಪೀರಜಾದೆ, ಅಂಜಲಿ ಬಾನು, ಸಂಜಯ ಗಣಾಚಾರಿ, ಗಣಪತಿ ಚವಾಣ ಇತರರಿದ್ದರು.

ಜೂ.3ರಂದು ಮಹಾಂತದೇವರ ಪಟ್ಟಾಧಿಕಾರ ಮಹೋತ್ಸವ

ಬಾಗಲಕೋಟೆ: ಜಿಲ್ಲೆಯ ಬಾದಾಮಿ ತಾಲೂಕಿನ ಬೇಲೂರ ಗ್ರಾಮದ ಗುರುಬಸವೇಶ್ವರ ಮಠದ ಕಾಯಕಯೋಗಿ ಬಸವಪ್ರಸಾದ ಶಿವಯೋಗಿಗಳವರ 10ನೇ ವರ್ಷದ ಪುಣ್ಯ ಸ್ಮರಣೋತ್ಸವ ಹಾಗೂ ಮಹಾಂತದೇವರ ನಿರಂಜನ ಪಟ್ಟಾಧಿಕಾರ ಮಹೋತ್ಸವ ಜೂ.3ರಂದು ಬೆಳಗ್ಗೆ 11 ಗಂಟೆಗೆ ಬೇಲೂರ ಗ್ರಾಮದ ಮಠದ ಆವರಣದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ.

ನವನಗರದ ಪತ್ರಿಕಾಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಂತದೇವರ ಪಟ್ಟಾಧಿಕಾರ ಸ್ವಾಗತ ಸಮಿತಿ ಮುಖ್ಯಸ್ಥ ಸಿದ್ದಣ್ಣ ಶಿವನಗುತ್ತಿ, ಜೂ.3ರಂದು ಬೆಳಗ್ಗೆ 5 ಗಂಟೆಗೆ ಮಠದ ಆವರಣದಲ್ಲಿ ಬಸವ ಪ್ರಸಾದ ಶಿವಯೋಗಿಗಳವರ ಕರ್ತೃಗದ್ದುಗೆಗೆ ವಚನಾಭಿಷೇಕ, ಪುಷ್ಪಾಲಂಕಾರ ಮತ್ತು ಮಹಾಮಂಗಳಾರತಿ ಜರುಗಲಿದೆ. ಬೆಳಗ್ಗೆ 9ಗಂಟೆಗೆ ಮಾತೋಶ್ರೀ ಮುಕ್ತಾಯಮ್ಮನವರು ಷಟಸ್ಥಲ ಧ್ವಜಾರೋಹಣ ನೆರವೇರಿಸುವರು ಎಂದು ಹೇಳಿದರು. ಬೆಳಗ್ಗೆ 11 ಗಂಟೆಗೆ ಶೂನ್ಯ ಸಿಂಹಾಸನರೋಹಣ ಹಾಗೂ ಸಮಾಜ ಸೇವಾ ದೀಕ್ಷಾ ಸಮಾರಂಭ ನಡೆಯಲಿದ್ದು ಪಾಂಡವಮಟ್ಟಿ ವಿರಕ್ತಮಠದ ಡಾ.ಗುರುಬಸವ ಸ್ವಾಮೀಜಿ, ಬೇಲೂರ ಗುರುಬಸವೇಶ್ವರ ಮಠದ ಗುರು ಬಸವಪ್ರಸಾದ ಸ್ವಾಮೀಜಿ ವಹಿಸುವರು. ಪಾವನ ಸಾನ್ನಿಧ್ಯವನ್ನು ಗದಗ ತೋಂಟದಾರ್ಯ ಮಠದ ಸಿದ್ಧರಾಮ ಸ್ವಾಮೀಜಿ, ಹುಬ್ಬಳ್ಳಿ ಮೂರುಸಾವಿರಮಠದ ಗುರುಶಿದ್ದರಾಜಯೋಗೀಂದ್ರ ಶ್ರೀಗಳು, ನಿಡಸೋಶಿ ಸಂಸ್ಥಾನಮಠದ ಶಿವಲಿಂಗೇಶ್ವರ ಶ್ರೀಗಳು, ಹಾಲಕೇರಿ ಅನ್ನದಾನೀಶ್ವರ ಸಂಸ್ಥಾನಮಠದ ಮುಪ್ಪಿನ ಬಸವಲಿಂಗ ಶ್ರೀಗಳು ವಹಿಸುವರು. ಇಳಕಲ್ ಚಿತ್ತರಗಿ ಸಂಸ್ಥಾನಮಠದ ಗುರುಮಹಾಂತ ಶ್ರೀಗಳು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದ ಪಿ.ಸಿ.ಗದ್ದಿಗೌಡರ, ಶಾಸಕ ಬಿ.ಬಿ.ಚಿಮ್ಮನಕಟ್ಟಿ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ, ಜೆಡಿಎಸ್ ಜಿಲ್ಲಾಧ್ಯಕ್ಷ ಹಣಮಂತ ಮಾವಿನಮರದ, ಬಾದಾಮಿ ಪಿಎಲ್‌ಡಿ ಬ್ಯಾಂಕಿನ ಅಧ್ಯಕ್ಷ ಮಹಾಂತೇಶ ಮಮದಾಪೂರ, ಕಾಂಗ್ರೆಸ್ ಮುಖಂಡರಾದ ಸಂಯುಕ್ತ ಪಾಟೀಲ ಸೇರಿದಂತೆ ಅನೇಕ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ



ಎಂದು ಹೇಳಿದರು.

ಗುರುಬಸವೇಶ್ವರ ಮಠದ ಮಹಾಂತದೇವರ ಸ್ವಾಮೀಜಿ ಮಾತನಾಡಿ, ಬಾದಾಮಿ ತಾಲೂಕಿನ ಬೇಲೂರ ಗ್ರಾಮದ ಗುರುಬಸವೇಶ್ವರ ಮಠವು ತನ್ನದೇಯಾದ ಭವ್ಯ ಶರಣ ಪರಂಪರೆಯನ್ನು ಮತ್ತು ಐತಿಹಾಸಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿರುವ ಮಠವಾಗಿದೆ. ಬಡ ಮಕ್ಕಳಿಗೆ ಶಿಕ್ಷಣ ಒದಗಿಸುವುದು, ಭಕ್ತರಿಗೆ ಅನ್ನದಾಸೋಹ ಕಾರ್ಯಕ್ರಮಕ್ಕೆ ಆಧ್ಯತೆ ನೀಡಲಾಗುವುದು ಎಂದು ಹೇಳಿದರು.

ಬಾಲ್ಕಿ ತಾಲೂಕಿನ ಗೋರಚಿಂಚೋಳ್ಳಿ ಸಿದ್ಧರಾಮೇಶ್ವರ ಮಠದ ಸಿದ್ಧರಾಮ ಪಟ್ಟದೇವರು ಮಾತನಾಡಿ, ಗುರುಬಸವೇಶ್ವರ ಮಠಕ್ಕೆ ಮಹಾಂತ ದೇವರ ಪಟ್ಟಾಧಿಕಾರ ಮಹೋತ್ಸವ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಲು ಎಲ್ಲ ಸಿದ್ಧತೆಯನ್ನು ಬೇಲೂರ ಗ್ರಾಮಸ್ಥರು, ಭಕ್ತರು ಮಾಡಿದ್ದಾರೆ. ಶ್ರೀಗಳು ಪ್ರವಚನದ ಪಕರವಾಗ್ಮಿಗಳು, ಚತುರ್ಭಾಷಾ ಪಂಡಿತರಾಗಿದ್ದಾರೆ. ತತ್ವ ಶಾಸ್ತ್ರದಲ್ಲಿ ಎಂ.ಎ.ಪದವಿ ಪಡೆದ ಪೂಜ್ಯರು ಶ್ರೀಲಂಕಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪಡೆದವರಾಗಿದ್ದಾರೆ. ಲಕ್ಷಾಂತರ ಭಕ್ತರ ಪ್ರೀತಿ ಪಾತ್ರರಾದ ಶ್ರೀಗಳ ಗದುಗಿನ ಲಿಂ.ಸಿದ್ದಲಿಂಗ ಅಪ್ಪಗಳವರ ವಿಶ್ವಾಸ ಮತ್ತು ಅಭಿಮಾನವನ್ನು ಸಂಪಾದಿಸಿದವರಾಗಿದ್ದಾರೆ ಎಂದು ಹೇಳಿದರು. ವೀರಣ್ಣ ಮಠಪತಿ, ಎಂ.ಸಿ.ಗೋಗೇರಿ, ಶರಣಪ್ಪ ಗಂಗಲ್, ಗಿರೀಶ ಗಾಣಿಗೇರ ಇದ್ದರು.

ಸೌಹಾರ್ದತೆಯಿಂದ ಬಕ್ರೀದ್ ಆಚರಿಸಿ

ಕೆರೂರ : ತ್ಯಾಗ, ಬಲಿದಾನದ ಪ್ರತೀಕವಾದ ಬಕ್ರೀದ್ ಹಬ್ಬದವನ್ನು ಶಾಂತಿ ಮತು ಸೌಹಾರ್ದತೆಯಿಂದ ಆಚರಿಸಿರಿ ಎಂದು ಕೆರೂರ ಪೊಲೀಸ್ ಠಾಣೆಯ ಪ್ರಬಾರ ಪಿಎಸ್‌ಐ ನಿತೀನ ಕುಮಾರ ಹೇಳಿದರು.

ಪಟ್ಟಣದ ಪೋಲೀಸ್ ಠಾಣೆಯ ಆವರಣದಲ್ಲಿ ಆಯೋಜಿಸಿದ್ದ ಬಕ್ರೀದ್ ಹಬ್ಬದ ಶಾಂತಿ ಸಭೆಯಲ್ಲಿ ಮಾತನಾಡಿದರು. ಗೋ ಹತ್ಯೆ ಕಾಯ್ದೆ ಜಾರಿಯಲ್ಲಿದೆ. ಸಂಭ್ರಮದಿಂದ ಹಬ್ಬವನ್ನು ಆಚರಿಸಿ. ಎಲ್ಲಿಯಾದರೂ ಕಾನೂನು ಬಾಹಿರ ಚಟುವಟಿಕೆಗಳು ಕಂಡು ಬಂದಲ್ಲಿ, ಕಾನೂನಿನ ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಮುಸ್ಲಿಂ ಸಮಾಜದ ಮುಖಂಡ ಉಸ್ಮಾನ ಮುಲ್ಲಾ ಮಾತನಾಡಿ, ಇಸ್ಲಾಂ ಸಂಪ್ರದಾಯದ ಪ್ರಕಾರ ಬಕ್ರೀದ್ ಹಬ್ಬ ಕೊನೆಯ ಹಬ್ಬವಾಗಿದ್ದು ತ್ಯಾಗ ಬಲಿದಾನಕ್ಕೆ ಹೆಸರಾಗಿದ್ದು, ಈ ವರ್ಷ ಮೇ 28ರಂದು ಬಕ್ರೀದ್ ಹಬ್ಬವನ್ನು ಆಚರಿಸುತ್ತಿದ್ದು, ಹಬ್ಬದ ಪ್ರಯುಕ್ತ ಕುರಬಾನಿ ನೀಡಲು ಗೋಮಾತೆಯನ್ನು ವಧಿಸುವುದಿಲ್ಲವೆಂದು ತಿಳಿಸಿದರು.



20ನೇ ದಿನಕ್ಕೆ ಮುಂದುವರಿದ ಧರಣಿ



ಹುನಗುಂದ: ತಾಲೂಕಿನ ಇದ್ದಲಗಿ ಗ್ರಾಮದ ಮುಳಗಡೆ ಸಂತ್ರಸ್ತರು ಶಿಥಿಲಗೊಂಡ ಶೆಡ್ ಪುನರ್ ನಿರ್ಮಾಣ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿಯ 20ನೇ ದಿನವಾದ ಸೋಮವಾರ ಕೂಡಾ ಮುಂದುವರೆಯಿತು.

ಶಾಸಕರು ಬಂದು ಹೋದ ಮೇಲೆ ಪುನರ್ವಸತಿ ಮತ್ತು ಪುನರ ನಿರ್ಮಾಣ ಇಲಾಖೆ ಸೇರಿದಂತೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಸಂತ್ರಸ್ತರ ಧರಣಿ ಸ್ಥಳದತ್ತಸುಳಿಯುತ್ತಿಲ್ಲ,ನಮ್ಮ ಸಮಸ್ಯೆಗಳಿಗೆಸ್ಪಂಧಿಸುತ್ತಿಲ್ಲ.ಮುಂದಿನವಾರದಿಂದ ಮಳೆಗಾಲ ಆರಂಭವಾಗುತ್ತಿದೆ.ಶೆಡ್ ಗಳೆಲ್ಲಾ ಸಂಪೂರ್ಣ ಶಿಥಿಲಗೊಂಡಿದ್ದು ಜೋರಾದ ಗಾಳಿ ಬೀಸಿದರೇ ಎಲ್ಲ ಶೆಡ್ ಗಳು ನೆಲಸಮವಾಗುವ ಸ್ಥಿತಿ ತಲುಪಿದ್ದರೂ ನಮ್ಮಗಳ ಗೋಳು ಕೇಳೋರಿಲ್ಲದಂತಾಗಿದೆ ಎಂದು ಧರಣಿ ನಿರತ ಸಂತ್ರಸ್ತರು ಅಧಿಕಾರಿಗಳ ವಿರುದ್ಧ ಹಿಡಿಶಾಪ ಹಾಕುತ್ತಿದ್ದಾರೆ. ಭೀಮಪ್ಪ ಆಡಿಹಾಳ, ಕಲ್ಲಪ್ಪ ಆನೆಹೊಸೂರ, ಶರಣಪ್ಪ ಮುಳ್ಳೂರ,ಬಸವರಾಜ ಮುಳ್ಳೂರ,ಹಬೀಸಾಬ ಮುಲ್ಲಾ,ಹುಚ್ಚಪ್ಪ ಬೂದಗೂಳಿ,ಹನಮಂತ ಹಡಪದ,ಮಹಾಂತೇಶ ವಾಲೀಕಾರ,ಇಮಾಮಸಾಬ ಹುನಗುಂದ,ಶರಣಪ್ಪ ಬೇನಾಳ,ಮಲ್ಲಮ್ಮ ಗಡ್ಡಿಮಠ, ಮುತ್ತವ್ವ ಬೇನಾಳ, ಮಹಾದೇವಿ ತೋಟಗೇರಿ, ನೀಲಮ್ಮ ಮಾಗಿ, ಭೀಮವ್ವ ಬೇನಾಳ,ಸಂಗವ್ವ ಹಾವರಗಿ ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ಪ್ರತಿಯೊಂದು ಹಬ್ಬಗಳಲ್ಲಿ ಸಹೋದರತ್ವವಿರಲಿ

ದೇವರಹಿಪ್ಪರಗಿ: ಪ್ರತಿಯೊಂದು ಹಬ್ಬ ಹರಿದಿನಗಳಲ್ಲಿ ಎಲ್ಲರೂ ಸಹೋದರತ್ವ ಭಾವನೆಯಿಂದ ಆಚರಿಸಬೇಕು. ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಿಲ್ಲ ಶಾಂತಿಯಿಂದ ಹಬ್ಬ ಆಚರಿಸಬೇಕೆಂದು ದೇವರಹಿಪ್ಪರಗಿ ಪೊಲೀಸ್ ಠಾಣೆಯ ಪಿಎಸ್ಐ ಸಚೇನ್ ಆಲಮೇಲಕರ ಹೇಳಿದರು. ಪಟ್ಟಣದ ಪೊಲೀಸ್ ಠಾಣೆಯಲ್ಲಿ ಬಕ್ರೀದ್ ಹಬ್ಬದ ಪ್ರಯುಕ್ತ ಹಮ್ಮಿಕೊಂಡ ಶಾಂತಿ ಸಭೆಯ ನೇತೃತ್ವ ವಹಿಸಿ ಮಾತನಾಡಿದ ಅವರು,

ದೇವರಹಿಪ್ಪರಗಿ ಯಾವಾಗಲೂ ಶಾಂತಿ ಸೌಹಾರ್ದತೆಗೆ ಹೆಸರಾಗಿದೆ. ಇಲ್ಲಿ ಎಲ್ಲರೂ ಒಕ್ಕಟ್ಟಿನಿಂದ ಯಾವುದೇ ಬೇಧ ಭಾವವಿಲ್ಲದೆ ಹಬ್ಬಗಳನ್ನು ಆಚರಿಸುತ್ತ ಬಂದಿರುವುದು ಸಂಪ್ರದಾಯವಾಗಿದೆ. ಇದನ್ನು ಮುಂದುವರೆಸಿಕೊಂಡು ಹೋಗಬೇಕು. ಹಬ್ಬದ ದಿನ ಶಾಂತಿ ಕಾಪಾಡಬೇಕು. ಪೊಲೀಸ್ ಇಲಾಖೆಯಿಂದ ಆಯ ಕಟ್ಟಿನಲ್ಲಿ ಸೂಕ್ತ ಪೊಲೀಸ್ ಬಂಧೋಬಸ್ತ ನಡೆಸಲಾಗುತ್ತಿದೆ ಎಂದರು. ಅಂಜುಮನ್ ಇಸ್ಲಾಂ ಕಮೀಟಿ ಅಧ್ಯಕ್ಷ ಮಹಿಬೂಬ ಹುಂಡೇಕಾರ, ಮುಖಂಡರಾದ ಶಂಕರಗೌಡ ಪಾಟೀಲ ಮಾತನಾಡಿ, ದೇವರಹಿಪ್ಪರಗಿ ಪಟ್ಟಣದಲ್ಲಿ ಎಲ್ಲ ಸಮೂದಾಯದವರು ಸಹೋದರರಂತೆ ಇದ್ದೇವೆ. ಹಬ್ಬ ಹರಿದಿನಗಳಲ್ಲಿಯೂ ಸಹ ಎಲ್ಲರೂ ಪರಸ್ಪರ ಸೌಹಾರ್ದತೆಯಿಂದ ಹಬ್ಬ ಆಚರಿಸುತ್ತೇವೆ. ಯಾವುದೇ ವಿಚಾರಗಳಿಗೂ ಕಿವಿಗೊಡಬಾರದು. ಪಟ್ಟಣದ ಸೌಹಾರ್ಧತೆಗೆ ದಕ್ಕೆ ತರುವ ಕೆಲಸ ಯಾರು ಮಾಡಬಾರದು ಎಂದು ವಿನಂತಿಸಿದರು. ಪಪಂ ಅಧ್ಯಕ್ಷರ ಪ್ರತಿನಿಧಿ ಬಸವರಾಜ ದೇವಣಗಾಂವ, ಪ್ರಕಾಶ ಮಲ್ಹಾರಿ, ಶಬ್ಬಿರ ಮುಲ್ಲಾ, ಅಜೀಜ ಯಲಗಾರ, ಮುನ್ನಾ ಮಳಖೇಡ, ಕಾಸು ಜಮಾದಾರ, ಕಾಶೀನಾಥ ಬಜಂತ್ರಿ, ತಾರಾಸಿಂಗ ರಾಠೋಡ ಸೇರಿದಂತೆ ಗಣ್ಯರು, ಸಾರ್ವಜನಿಕರು, ಸಿಬ್ಬಂಧಿ ಪಾಲ್ಗೊಂಡಿದ್ದರು.

ಸಿಎಂ ಅವರಿಂದ ಜಾಣ ಕಿವುಡು ಪ್ರದರ್ಶನ: ಯತ್ನಾಳ

ವಿಜಯಪುರ: ಭೂ ಮಾಪಕರ ಧರಣಿಯಿಂದ ಜಮೀನು ಸರ್ವೆ ವಿವಾದಗಳು ನಿರ್ಧಾರವಾಗದೆ, ರೈತರು ಸರ್ವೇ ಆಗದ ದಾಖಲಾತಿ ಪಡೆಯದ



ಕಾರಣ ಅವರಿಗೆ ಬೆಳೆ ಸಾಲ ಸಿಗುತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಹಿಂದೆ ಪ್ರತಿಪಕ್ಷ ನಾಯಕರಾಗಿದ್ದಾಗ ಭೂ ಮಾಪಕರ ಪರ ಧ್ವನಿ ಎತ್ತಿದ್ದರು, ಈಗ ಜಾಣ ಕಿವುಡು ಪ್ರದರ್ಶಿಸುತ್ತಿದ್ದಾರೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳರು ಕಿಡಿಕಾರಿದ್ದಾರೆ.

ಭೂಮಾಪಕರ ಧರಣಿಯಿಂದ ರೈತರಿಗೆ ಬೇಕಾದ ಅಗತ್ಯ ಸೇವೆ ಸಿಗದೇ ಪರದಾಡುತ್ತಿದ್ದು, ಇತ್ತ ಸರ್ಕಾರ ಅವರ ಸಮಸ್ಯೆಗಳನ್ನು ಆಲಿಸಲು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ರಾಜ್ಯದಲ್ಲಿ ಶೇ 45 ರಷ್ಟು ಭೂ ಮಾಪಕರ ಹುದ್ದೆಗಳು ಖಾಲಿಯಿವೆ. ಈ ಬೇಡಿಕೆಯನ್ನು ಪೂರೈಸಲು ಸರ್ಕಾರ ಸುಮಾರು 4,500 ಖಾಸಗಿ ಭೂಮಾಪಕರನ್ನು ನಿಯೋಜಿಸಿದೆ. ಖಾಸಗಿ ಭೂ ಮಾಪಕರ ಪ್ರತಿಭಟನೆಯಿಂದ 5.78 ಲಕ್ಷ ಸರ್ವೇ ಅರ್ಜಿಗಳು ಬಾಕಿ ಉಳಿದಿವೆ.

ಮ್ಯುಟೇಷನ್ ಪೂರ್ವ ನಕ್ಷೆತಯಾರಿಕೆ, ತತ್ಕಾಲ್ ಪೋಡಿ ಅಳತೆ, ದರಖಾಸ್ತು ಪೋಡಿ, ಮರುಭೂಮಾಪನ, ಕೆರೆ ಅಳತೆ, ನಾಳ, ವಿದ್ಯುತ್ ಮಾರ್ಗ, ಹೆದ್ದಾರಿ, ಮುಜರಾಯಿ ದೇವಸ್ಥಾನಗಳ ಭೂಮಾಪನವನ್ನು ಇವರು ಮಾಡುತ್ತಿದ್ದಾರೆ. ಸರ್ವೇ ಕೆಲಸ ಇಲ್ಲದ ಸಮಯದಲ್ಲಿ ದಾಖಲೆಗಳ ಡಿಜಟಲೀಕರಣ, ನಿರ್ವಹಣೆ, ಹಿಸ್ಸಾ ತಿದ್ದುಪಡಿ, ಜಾಮೀನು ಒಟ್ಟುಗೂಡಿಸುವಿಕೆ ಕೆಲಸವನ್ನು ಸರ್ಕಾರ ನೀಡುತ್ತದೆ. ಗಾಯದ ಮೇಲೆ ಬರೆ ಇಟ್ಟಂತೆ ಸುಮಾರು 300 ಪ್ರತಿಭಟನಾ ನಿರತ ಭೂ ಮಾಪಕರ ಪರವಾನಗಿಯನ್ನು ರಾತ್ರೋ ರಾತ್ರಿ ಸರ್ಕಾರ ರದ್ದುಗೊಳಿಸಿದೆ. ಮುಖ್ಯ ಮಂತ್ರಿಗಳು ಕೂಡಲೇ ಗಮನವಹಿಸಿ ಇವರ ಬೇಡಿಕೆಗಳಿಗೆ ನ್ಯಾಯಯುತವಾದ ಪರಿಹಾರವನ್ನು ಆದ್ಯತೆಯ ಮೇಲೆ ನೀಡಲಿ ಎಂದು ತಮ್ಮ ಎಕ್ಸ್ ಖಾತೆಯಲ್ಲಿ ಟ್ವಿಟ್ ಮಾಡಿದ್ದಾರೆ.

ಇಂದು ಉಚಿತ ಶಿಬಿರ

ಕೊಲ್ಹಾರ: ಪಟ್ಟಣದಲ್ಲಿ ಮೇ 27ರಂದು ಬುಧವಾರ ಕುಲ್ಲೊಳ್ಳಿ ಇನ್ಸಟ್ಯೂಟ್ ಆಫ್ ಹೆಲ್ತ್ ಸರ್ವಿಸಸ್ ಡಾ.ಕುಲ್ಲೊಳ್ಳಿ ಮತ್ತು ಅವರ ನುರಿತ ವೈದ್ಯರ ತಂಡದಿಂದ ಕೊಲ್ಹಾರ ಪಟ್ಟಣದ ಎಂಪಿಎಸ್ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಕೊಲ್ಹಾರ ಪಟ್ಟಣದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ರೈತರು, ಎಲ್ಲ ಜನರು ಈ ಶಿಬಿರದಲ್ಲಿ ಭಾಗವಹಿಸಿ ತಮ್ಮ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಉಚಿತ ಔಷಧೋಪಚಾರ ಪಡೆಯಲು ವಿನಂತಿಸಿಕೊಳ್ಳುತ್ತೇವೆ. ಈ ಹಿಂದೆ ಯಾವುದೇ ರೀತಿಯ ಚಿಕಿತ್ಸೆ ಪಡೆಯುತ್ತಿದ್ದಲ್ಲಿ ಆ ವೈದ್ಯರು ನೀಡಿರುವ ಫೈಲ್ ಗುಳಿಗೆ ಮಾತ್ರೆಗಳ ಔಷಧ ಚೀಟಿ ತೆಗೆದುಕೊಂಡು ಬರಬೇಕು ತಿಳಿಸಿದರು.



ದೇವರಹಿಪ್ಪರಗಿ: ಪಟ್ಟಣದ ಪೊಲೀಸ್ ಠಾಣೆಯಲ್ಲಿ ಬಕ್ರೀದ್ ಹಬ್ಬದ ಪ್ರಯುಕ್ತ ಹಮ್ಮಿಕೊಂಡ ಶಾಂತಿ ಸಭೆ ನಡೆಯಿತು. ದೇವರಹಿಪ್ಪರಗಿ ಪೊಲೀಸ್ ಠಾಣೆಯ ಪಿಎಸ್ಐ ಸಚೇನ್ ಆಲಮೇಲಕರ, ಅಂಜುಮನ್ ಇಸ್ಲಾಂ ಕಮೀಟಿ ಅಧ್ಯಕ್ಷ ಮಹಿಬೂಬ ಹುಂಡೇಕಾರ, ಮುಖಂಡರಾದ ಶಂಕರಗೌಡ ಪಾಟೀಲ, ಪಪಂ ಅಧ್ಯಕ್ಷರ ಪ್ರತಿನಿಧಿ ಬಸವರಾಜ ದೇವಣಗಾಂವ, ಪ್ರಕಾಶ ಮಲ್ಹಾರಿ, ಶಬ್ಬಿರ ಮುಲ್ಲಾ, ಅಜೀಜ ಯಲಗಾರ, ಮುನ್ನಾ ಮಳಖೇಡ, ಕಾಸು ಜಮಾದಾರ, ಕಾಶೀನಾಥ ಬಜಂತ್ರಿ, ತಾರಾಸಿಂಗ ರಾಠೋಡ ಸೇರಿದಂತೆ ಗಣ್ಯರು, ಸಾರ್ವಜನಿಕರು, ಸಿಬ್ಬಂಧಿ ಪಾಲ್ಗೊಂಡಿದ್ದರು.

ಗ್ರಾಮಗಳ ಅಭಿವೃದ್ಧಿಯಿಂದ ದೇಶದ ಪ್ರಗತಿ

ದೇವರಹಿಪ್ಪರಗಿ: ಗ್ರಾಮೀಣ ಭಾಗದಲ್ಲಿ ಸಿಸಿ ರಸ್ತೆ ನಿರ್ಮಾಣ, ದೇವಸ್ಥಾನಗಳ ಜೀರ್ಣೋದ್ದಾರ, ಸಮುದಾಯ ಭವನಗಳ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಕ್ರಮ ಕೈಗೊಳ್ಳಲಾಗಿದ್ದು, ಕ್ಷೇತ್ರದ ಸಂಪೂರ್ಣ ಅಭಿವೃದ್ದಿಯೇ ನನ್ನ ಬದ್ದತೆ. ಗ್ರಾಮಗಳ ಅಭಿವೃದ್ಧಿಯಿಂದ ದೇಶದ ಪ್ರಗತಿ ಸಾಧ್ಯ ಎಂದು ಶಾಸಕ ರಾಜುಗೌಡ ಪಾಟೀಲ ಕುದರಿಸಾಲವಾಡಗಿ ಹೇಳಿದರು. ತಾಲೂಕಿನ ಹುಣಶ್ಯಾಳ ಗ್ರಾಮದಲ್ಲಿ ಸೋಮವಾರ ಸುಮಾರು 50ಲಕ್ಷ ರೂ.ವೆಚ್ಚದ ಸಿ.ಸಿ.ರಸ್ತೆ, ಸಮುದಾಯ ಭವನಕ್ಕೆ 5 ಲಕ್ಷ ಹಾಗೂ ಮಸೀದಿ ಜೀರ್ಣೋದ್ದಾರಕ್ಕೆ 5ಲಕ್ಷ ರೂ ವೆಚ್ಚದ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದ ರಸ್ತೆ ಅಭಿವೃದ್ಧಿಗೆ ನನ್ನ ಅಧಿಕಾರ ಅವಧಿಯಲ್ಲಿ ಹೆಚ್ಚಿನ ಆದ್ಯತೆ ನೀಡಲಾಗಿದ್ದು ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಪ್ರತಿ ಗ್ರಾಮಗಳಿಗೆ ಹಂತ ಹಂತವಾಗಿ ಕಲ್ಪಿಸುವ ಕೆಲಸ ನಿರಂತರವಾಗಿ ನಡೆಯುತ್ತಿದೆ ಎಂದರು. ಯಾವುದೇ ರೀತಿಯ ರಾಜಕೀಯ ಮಾಡದೆ ನಿರಂತರವಾಗಿ ಅಭಿವೃದ್ಧಿ ಕೆಲಸಗಳನ್ನು ಕ್ಷೇತ್ರದ ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಿಕೊಂಡು ಹೋಗುತ್ತಿದ್ದೇನೆ. ರಸ್ತೆ ಕಾಮಗಾರಿಗಳನ್ನು ಗುಣಮಟ್ಟದಿಂದ ಹಾಗೂ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದಲ್ಲಿ ಸಾರ್ವಜನಿಕರ ಸಹಕಾರವೂ ಅಗತ್ಯವಾಗಿದೆ ಎಂದು ಹೇಳಿದರು. ಮುಖಂಡರು, ಪ್ರಮುಖರು, ಗಣ್ಯರು, ಕೆಆರ್ ಐಡಿಎಲ್ ವಿಭಾಗದ ಸಹಾಯಕ ಎಂಜಿನಿಯರ್‌ಗಳು, ಗುತ್ತಿಗೆದಾರರು ಉಪಸ್ಥಿತರಿದ್ದರು.




ದೇವರಹಿಪ್ಪರಗಿ: ತಾಲೂಕಿನ ಹುಣಶ್ಯಾಳ ಗ್ರಾಮದಲ್ಲಿ ಸೋಮವಾರ ಸುಮಾರು 50ಲಕ್ಷ ರೂ.ವೆಚ್ಚದ ಸಿ.ಸಿ.ರಸ್ತೆ, ಸಮುದಾಯ ಭವನಕ್ಕೆ 5 ಲಕ್ಷ ಹಾಗೂ ಮಸೀದಿ ಜೀರ್ಣೋದ್ದಾರಕ್ಕೆ 5ಲಕ್ಷ ರೂ ವೆಚ್ಚದ ಕಾಮಗಾರಿಗಳಿಗೆ ಶಾಸಕ ರಾಜುಗೌಡ ಪಾಟೀಲ ಕುದರಿಸಾಲವಾಡಗಿ ಭೂಮಿಪೂಜೆ ನೆರವೇರಿಸಿದರು. ಮುಖಂಡರು, ಪ್ರಮುಖರು, ಕೆಆರ್ ಐಡಿಎಲ್ ವಿಭಾಗದ ಸಹಾಯಕ ಎಂಜಿನಿಯರ್‌ಗಳು ಉಪಸ್ಥಿತರಿದ್ದರು.

ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಆರೋಗ್ಯ ಸೇವೆ ಲಭ್ಯವಾಗಲಿ: ಪಾಟೀಲ

ದೇವರಹಿಪ್ಪರಗಿ: ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಆರೋಗ್ಯ ಸೇವೆ ಲಭ್ಯವಾದರೆ ಜನರು ನಗರ ಪ್ರದೇಶಗಳಿಗೆ ಅಲೆಯುವುದು ತಪ್ಪುತ್ತದೆ. ಆದ್ದರಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಒತ್ತು ನೀಡಲಾಗುವುದು ಎಂದು ಶಾಸಕ ರಾಜುಗೌಡ ಪಾಟೀಲ ಕುದರಿಸಾಲವಾಡಗಿ ಹೇಳಿದರು.

ತಾಲೂಕಿನ ಆಲಗೂರ ಗ್ರಾಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ 65 ಲಕ್ಷ ರೂ.ಅನುದಾನದ ಆಯುಷ್ಮಾನ್ ಆರೋಗ್ಯ ಮಂದಿರ, ಸುಮಾರು10 ಲಕ್ಷ ರೂ, ವೆಚ್ಚದ ಸಿದ್ದಾರೂಡ ದೇವಸ್ಥಾನದ ಹತ್ತಿರ ಸಮುದಾಯ ಭವನ ಹಾಗೂ ಸುಮಾರು 50 ಲಕ್ಷ ರೂ, ವೆಚ್ಚದ ಸಿ.ಸಿ ರಸ್ತೆ ನಿರ್ಮಾಣಕ್ಕೆ ಸೋಮವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಈ ಭಾಗಗಳಲ್ಲಿ ಹಲವಾರು ಸಣ್ಣ ಗ್ರಾಮಗಳಿದ್ದು, ಕೂಲಿ ಕಾರ್ಮಿಕರು, ರೈತರು, ಬಡವರೇ ಅಧಿಕ ವಾಸವಿದ್ದಾರೆ. ಸಣ್ಣಪುಟ್ಟ ಅನಾರೋಗ್ಯ ಸಮಸ್ಯೆಗಳಿಗೂ ಇಲ್ಲಿನ ಜನರು ಪಟ್ಟಣಗಳಿಗೆ ಹೋಗುವುದನ್ನು ತಪ್ಪಿಸಲು ಇಲ್ಲಿ ಆರೋಗ್ಯ ಕೇಂದ್ರ ನಿರ್ಮಾಣಕ್ಕೆ ಆಯ್ಕೆ ಮಾಡಿದ್ದು, ಸುಸಜ್ಜಿತ ಕಟ್ಟಡ ಶೀಘ್ರ ನಿರ್ಮಾಣವಾಗಲಿದೆ ಎಂದರು.



ಶಾಸಕನಾದ ಬಳಿಕ ಶಿಕ್ಷಣ, ನೀರಾವರಿ, ರಸ್ತೆ, ಸಿಸಿ ರಸ್ತೆ, ಸಮುದಾಯ ಭವನ ಸೇರಿದಂತೆ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಆರೋಗ್ಯ ಕ್ಷೇತ್ರದ ಸೌಲಭ್ಯಗಳ ಉನ್ನತೀಕರಣಕ್ಕೆ ಒತ್ತು ನೀಡಿದ್ದು, ದೇವರಹಿಪ್ಪರಗಿಸಮುದಾಯಆರೋಗ್ಯ ಕೇಂದ್ರ, ಕೋರವಾರ ಪ್ರಾಥಮಿಕ ಆರೋಗ್ಯ ಕೇಂದ್ರದ ಆಸ್ಪತ್ರೆ ಮೂಲಸೌಕರ್ಯಕ್ಕೆ ಮೊದಲ ಆದ್ಯತೆ ನೀಡಿದ್ದೇನೆ. ಮೂಲಭೂತ ಸೌಕರ್ಯ, ಸ್ಪೆಷಲ್ ವಾರ್ಡ್ ನಿರ್ಮಾಣಕ್ಕೆ ಕ್ರಮ ವಹಿಸಲಾಗಿದೆ. ಬಡವರಿಗೆ ಉತ್ತಮ ಚಿಕಿತ್ಸೆ ದೊರೆಯಬೇಕು ಎನ್ನುವುದು ನಮ್ಮ ಕಾಳಜಿ ಎಂದರು.

ಜೆಡಿಎಸ್ ಪಕ್ಷದ ತಾಲೂಕು ಘಟಕದ ಅಧ್ಯಕ್ಷರಾದ ಸಾಯಿಬಣ್ಣ ಬಾಗೇವಾಡಿ, ಮುಖಂಡರಾದ ಶರಣು ಧರಿ ಅವರು ಮಾತನಾಡಿ, ಮತಕ್ಷೇತ್ರದ ಅಭಿವೃದ್ಧಿಗೆ ಶಾಸಕರು ಅನುದಾನವನ್ನು ತಂದು ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಬರುವಂತ ದಿನಗಳಲ್ಲಿ ನಾವೆಲ್ಲರೂ ಅವರ ಬೆಂಬಲಕ್ಕೆ ನಿಲ್ಲಬೇಕು ಎಂದರು.

ಮುಖಂಡರಾದ ಬಸವಂತ್ರಾಯ ಇಮ್ಮಾಪುರ, ಮಹಾಂತೇಶ ಮುರ್ಕನಾಳ, ಕಂಟೆಪ್ಪ ಜನ್ನಪ್ಪಗೋಳ, ಮಡಿವಾಳಪ್ಪ ವಾಲೀಕಾರ, ಈರಣ್ಣ ಜಾಲವಾದಿ, ಶಿವಣ್ಣ ಬಸರಕೋಡ, ಬಾಪುಗೌಡ ಬಿರಾದಾರ, ಬಾಬು ದಾಲಾಲ, ರವಿ ಚಿಗರಿ,ಆರೋಗ್ಯ ಇಲಾಖೆಯ ಎಇ ಮಹೇಶ ಜಾದವ, ಗುತ್ತಿಗೆದಾರ ಪ್ರಭಾಕರ ಬಿರಾದಾರ ಸೇರಿದಂತೆ ಗ್ರಾಮದ ಪ್ರಮುಖರು, ಗಣ್ಯರು ಹಾಗೂ ಇತರರು ಉಪಸ್ಥಿತರಿದ್ದರು.

ಮಹಿಳಾ ವಿವಿಗೆ ರನ್ನರ್ ಅಪ್: ಸಂತಸ

ವಿಜಯಪುರ: ತುಮಕೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಹಾಗೂ ವಿವಿ ಕಲಾ ಕಾಲೇಜಿನ ಪತ್ರಿಕೋದ್ಯಮ ವಿಭಾಗ ಜಂಟಿಯಾಗಿ ಹಮ್ಮಿಕೊಂಡಿದ್ದ ಇಂಪ್ರೆಶನ್ -2026 ಮಾಧ್ಯಮ ಹಬ್ಬದಲ್ಲಿ ಮಹಿಳಾ ವಿವಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿನಿಯರು ಸಮಗ್ರ ರನ್ನರ್‌ಅಪ್ ಗಳಿಸಿದ್ದಕ್ಕೆ ಮಹಿಳಾ ವಿವಿಯ ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಹಾಗೂ ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್.ಲಕ್ಕಣ್ಣವರ ಹಾಗೂ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಪ್ರೊ.ಓಂಕಾರ ಕಾಕಡೆ ಅಭಿನಂದಿಸಿದ್ದಾರೆ.

ತುಮಕೂರಿನಲ್ಲಿ ಎರಡು ದಿನಗಳ ಕಾಲ ನಡೆದ 'ಇಂಪ್ರೆಶನ್-2026' ಮಾಧ್ಯಮ ಹಬ್ಬದಲ್ಲಿ ಮಾಧ್ಯಮಕ್ಕೆ ಸಂಬಂಧಿಸಿದ ಹಲವಾರು ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ರಾಜ್ಯದ ವಿವಿಧ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ 30ಕ್ಕೂ ಹೆಚ್ಚು ತಂಡಗಳು ಈ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದವು. ಈ ಸ್ಪರ್ಧೆಗಳಲ್ಲಿ ಮಹಿಳಾ ವಿವಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿನಿಯರು ಹಲವು ಬಹುಮಾನಗಳನ್ನು ಗಳಿಸಿದ್ದಾರೆ.

ಬಹುಮಾನಗಳ ವಿವರ: ಅಮೃತಾ ಗುರಾಯಿ-ವರದಿಗಾರಿಕೆ (ದ್ವಿತೀಯ), ಬಸಮ್ಮಾ ಹಾಗೂ ಜ್ಯೋತಿ ಎಸ್- ಡಿಬೆಟ್ (ತೃತೀಯ), ಜ್ಯೋತಿ ಎಸ್- ಪಿಟಿಸಿಯಲ್ಲಿ (ತೃತೀಯ), ಜ್ಯೋತಿ ಎಸ್-ಟಿವಿ ಸುದ್ದಿ ನಿರೂಪಣೆಯಲ್ಲಿ (ತೃತೀಯ), ಭಾಗ್ಯಶ್ರೀ ಲೋಕೂರ-ರೀಲ್ ನಿರ್ಮಾಣದಲ್ಲಿ (ತೃತೀಯ), ಸುಕನ್ಯಾ ಹತ್ತಿ-ಪೋಸ್ಟರ್ ನಿರ್ಮಾಣ (ತೃತೀಯ), ಅಮೃತಾ, ಸಾರಿಕಾ, ಸುಕನ್ಯಾ, ಬಸಮ್ಮ, ಜ್ಯೋತಿ, ವಿದ್ಯಾಶ್ರೀ ಹಾಗೂ ಮೇಘಪುಷ್ಪ-ನೃತ್ಯ (ದ್ವಿತೀಯ), ಪವಿತ್ರಾ ಇಟೇಕರ್, ಪ್ರಮೀಳಾ ಚಲವಾದಿ, ವರ್ಷಾ ಕಾಂಬಳೆ, ನೀಲಮ್ಮ ವಸ್ತ್ರದ ಹಾಗೂ ಶ್ವೇತಾ ಸಲಗಲ್ ಜಾಹೀರಾತು ನಿರ್ಮಾಣದಲ್ಲಿ (ತೃತೀಯ) ಸ್ಥಾನ ಪಡೆದಿದ್ದಾರೆ.

ಸಹಾಯಕ ಪ್ರಾಧ್ಯಾಪಕರಾದ ಡಾ.ತಹಮೀನಾ ನಿಗಾರ ಸುಲ್ತಾನಾ, ಸಂದೀಪ ಸಂಶೋಧನಾ ವಿದ್ಯಾರ್ಥಿನಿಯರಾದ ಪವಿತ್ರಾ ಕಂಬಾರ, ಜಯಶ್ರೀ ತಳವಾರ, ಸಿಬ್ಬಂದಿ ಇದ್ದರು.



ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಿ

ವಿಜಯಪುರ: ಪ್ರಾಥಮಿಕ ಹಂತದಲ್ಲಿಯೇ ಮಕ್ಕಳಿಗೆ ಸ್ಪರ್ಧಾತ್ಮಕ ತರಬೇತಿಯನ್ನು ಕೊಡುವುದರಿಂದ ಭವಿಷ್ಯದಲ್ಲಿ ಅವರು ಉತ್ತಮ ಜ್ಞಾನವನ್ನು ಹೊಂದಿ ದೊಡ್ಡ ದೊಡ್ಡ ಅಧಿಕಾರಿಗಳಾಗಲು ಸಾಧ್ಯ. ಕನಕ ನವೋದಯ ಕೋಚಿಂಗ್ ಸೆಂಟರ್‌ನಲ್ಲಿ ಓದಿದ ಅನೇಕ ವಿದ್ಯಾರ್ಥಿಗಳು ವಿವಿಧ ವಸತಿ ಶಾಲೆಗಳಿಗೆ ಆಯ್ಕೆ ಆಗಿದ್ದು, ಹೆಮ್ಮೆಯ ಸಂಗತಿ. ಈ ಕನಕ ಪಬ್ಲಿಕ ಶಾಲೆಯು ಒಳ್ಳೆಯ ಪ್ರತಿಭಾವಂತ ಆಡಳಿತ ಮಂಡಳಿಯನ್ನು ಮತ್ತು ಶಿಕ್ಷಕರನ್ನು ಒಳಗೊಂಡಿದೆ ಪಾಲಕರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡಿಸಲು ಮುಂದಾಗಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಹೇಶ ಪೋದ್ದಾರ ಹೇಳಿದರು.

ಕರ್ನಾಟಕ ಕನಕದಾಸ ಶಿಕ್ಷಣ ಸಂಸ್ಥೆಯ ಕನಕ ಪಬ್ಲಿಕ್ ಸ್ಕೂಲ್ ಹಾಗೂ ನವೋದಯ ಕೋಚಿಂಗ್ ಸೆಂಟರ್‌ನಲ್ಲಿ ಹಮ್ಮಿಕೊಂಡ ವಿವಿಧ ವಸತಿ ಶಾಲೆಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸನ್ಮಾನ ಹಾಗೂ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಗುಣಮಟ್ಟದ ಕಲಿಕೆಯನ್ನು ನೀಡುವುದರ ಮುಖೇನ ಅವರ ಸರ್ವಾಂಗಿನ ಬೆಳವಣಿಗೆಗೆ ಪೂರಕವಾದ ಶಿಕ್ಷಣವನ್ನ ನೀಡಲು ಮುಂದಾಗಬೇಕು ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹಾಸಿಂಪೀರ್ ವಾಲಿಕಾರ, ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯ ಡಾ.ಕುಶಾಲ ಬರಗೂರು, ರವಿ ಕಿತ್ತೂರು ಮಾತನಾಡಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿಯ ಸದಸ್ಯ ಸಂಗಮೇಶ ಚೂರಿ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು ಮತ್ತು ಏಕಾಗ್ರತೆ ಹೊಂದಬೇಕೆಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಜಯಪ್ರಭು ಕೊಳಮಲಿ, ವಿ.ಜಿ.ಹಗರಗೊಂಡ, ಎಲ್.ಕೆ. ಬಿರಾದಾರ, ಬಾಬು ತಳೇವಾಡ, ಪ್ರೊ.ಎ.ಎಚ್.ಕೊಳಮಲಿ, ವಿಠ್ಠಲ ಮಾನೆ, ಪಾಟ್ಲು ಕರಾಡೆ, ಸುಭಾಷ್ ಪವಾರ, ವಿಠ್ಠಲಗೌಡ ಬಿರಾದಾರ, ಯಲ್ಲುಗೌಡ ಬಿರಾದಾರ, ರಾಮಸ್ವಾಮಿ ಕೊಳಮಲಿ, ಶ್ರೀಶೈಲ ಕಂಬಳಿ, ಸಿದ್ದಪ್ಪ ಕಂಬಳಿ, ಸಂಗಮೇಶ ಕೊಳಮಲಿ, ಗಣಪತಿ ಒಡೆಯರ, ಸಿದ್ದಪ್ಪ ಪೂಜಾರಿ, ಬಾಜೀರಾಯ ಕರೆ, ಶಿಕ್ಷಕಿ ಲಕ್ಷ್ಮಿ ಮುಂಜೇಲಿ, ಶಿಕ್ಷಕಿ ಸುಧಾರಾಣಿ ಬಿರಾದಾರ ಉಪಸ್ಥಿತರಿದ್ದರು.



ವಿವಿ ಅಕ್ರಮ ಪರಿಶೀಲನೆ ಪಾರದರ್ಶಕವಾಗಿ ನಡೆಸಲು ಮನವಿ

ವಿಜಯಪುರದ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಕೇಳಿಬಂದಿರುವ ಅಕ್ರಮಗಳನ್ನು ತಡೆಯಲು ಪರಿಶೀಲನಾ ಸಮಿತಿ ರಚಿಸಿರುವುದನ್ನು ಆಮ್ ಆದ್ಮಿ ಪಾರ್ಟಿ ಸ್ವಾಗತಿಸುತ್ತದೆ. ಮತ್ತು ಪರಿಶೀಲನೆಯನ್ನು ಪಾರದರ್ಶಕವಾಗಿ ಮತ್ತು ಕ್ರಮಬದ್ಧವಾಗಿ ನಡೆಸುವಂತೆ ಆಮ್ ಆದ್ಮಿ ಪಾರ್ಟಿ ಒತ್ತಾಯಿಸುತ್ತದೆ ಎಂದು ಆಮ್ ಆದ್ಮಿ ಜಿಲ್ಲಾಧ್ಯಕ್ಷ ಭೋಗೇಶ ಸೋಲಾಪುರ ಹೇಳಿದರು.

ಅವರು ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ಸಂದರ್ಭದಲ್ಲಿ ಹೇಳಿದರು.

ಪರಿಶೀಲನಾ ಸಮಿತಿಯಲ್ಲಿ ವಿಶ್ವವಿದ್ಯಾಲಯದ ಉನ್ನತಾಧಿಕಾರಿಗಳನ್ನು ಒಳಗೊಂಡ ಸದಸ್ಯರಗಳ ಜೊತೆಗೆ ಹೊರಗಿನ ಸದಸ್ಯರು ಏಕಿಲ್ಲ ಎಂದು ಆಕ್ರೋಶ ಹೊರಹಾಕಿದರು. ಆಮ್ ಆದ್ಮಿ ಪಾರ್ಟಿ ವಿಜಯಪುರ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಪ್ರವೇಶಾತಿ, ಮಾರ್ಗದರ್ಶನ ಮತ್ತು ಪದವಿ ಪ್ರಧಾನ ಪ್ರಕ್ರಿಯೆಯಲ್ಲಿ ನಡೆದಿರುವ ಯು.ಜಿ.ಸಿ ನಿಯಮ ಉಲ್ಲಂಘನೆ, ಅಕ್ರಮ ಮತ್ತು ಭ್ರಷ್ಟಾಚಾರ ಆರೋಪ ಹಾಗೂ ವಿವಿಧ ಅಕ್ರಮಗಳ ಬಗ್ಗೆ ಗಂಭೀರವಾಗಿ ಎಚ್ಚರವಹಿಸಲು ಸೂಚಿಸಿದರು. ವಿಶ್ವವಿದ್ಯಾಲಯದ ಉನ್ನತಾಧಿಕಾರಿಗಳನ್ನು ಒಳಗೊಂಡ ಪರಿಶೀಲನಾ ಸಮಿತಿ ಯಾರ ಅಧ್ಯಕ್ಷತೆಯಲ್ಲಿ ರಚನೆಯಾಗಿದೆ. ಸಮಿತಿಗೆ ವರದಿ ನೀಡಲು ನೀಡಿರುವ ಕಾಲಾವಕಾಶ ಎಷ್ಟು ಎಂಬುದು ಬಹಿರಂಗ ಪಡಿಸಬೇಕು. 2024-25 ಮತ್ತು 2025-26 ನೇ ಸಾಲಿನಲ್ಲಿ ನಡೆದ ಎಲ್ಲಾ ನೇಮಕಾತಿ, ಹಣಕಾಸು ವ್ಯವಹಾರ, ಪರೀಕ್ಷೆ, ಮೌಲ್ಯಮಾಪನ ಮತ್ತು ಇತರ ಆಡಳಿತಾತ್ಮಕ ಅಕ್ರಮಗಳನ್ನು ಸಮಗ್ರವಾಗಿ ಪರಿಶೀಲಿಸುವುದು. ತಪ್ಪು ಮಾಡಿದ ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದು. ಸಂಜು ಶೆಟಗಾರ ಇದ್ದರು.



ಜಿಲ್ಲಾಧ್ಯಕ್ಷರಾಗಿ ಯಂಡಿಗೇರಿ ನೇಮಕ



ವಿಜಯಪುರ: ಮಲ್ಲಿ ಕಾರ್ಜುನ ಯಂಡಿಗೇರಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ವಕ್ತಾರ ಮತ್ತು ಜೆಡಿಎಸ್ ಹಿಂದಿನ ಅಧ್ಯಕ್ಷರಿಗೆ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರು, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಆದೇಶದ ಮೇರೆಗೆ ಮತ್ತು ಮಾಜಿ ಮುಖ್ಯಮಂತ್ರಿಗಳು ಹಾಗೂ ರಾಜ್ಯಾಧ್ಯಕ್ಷರು ಎಚ್.ಡಿ.ಕುಮಾರಸ್ವಾಮಿ ಇವರ ಸಮ್ಮುಖದಲ್ಲಿ ವಿಜಯಪುರ ಜಿಲ್ಲಾ ಜೆಡಿಎಸ್ ಪಕ್ಷದ ನೂತನ ಅಧ್ಯಕ್ಷರನ್ನಾಗಿ ಆದೇಶ ನೀಡಿ ಪಕ್ಷದ ಸಂಘಟನೆಗೆ ಕಾರ್ಯೋನ್ಮುಖರಾಗಲು ಆದೇಶಿಸಿದ್ದಾರೆ. ಮಾಜಿ ಸಚಿವ ವೆಂಕಟರಾವ ನಾಡಗೌಡರ, ಮಾಜಿ ಶಾಸಕ ಎಚ್.ಎಸ್.ಶಿವಶಂಕರ ಇದ್ದರು. ಎಸ್.ಎಸ್.ಖಾದ್ರಿ ಇನಾಮದಾರ ಅಭಿನಂದನೆ ಸಲ್ಲಿಸಿದರು.

ಕ್ರಿಕೆಟ್: ವಿಜೇತರಿಗೆ ಬಹುಮಾನ ವಿತರಣೆ

ಮುದ್ದೇಬಿಹಾಳ: ನಗರದ ವಿಬಿಸಿ ಹೈಸ್ಕೂಲ ಮೈದಾನದಲ್ಲಿ ಸೋಮವಾರ ನಡೆದ ಪ್ರೀಮಿಯರ್ ಲೀಗ್ ಕ್ರಿಕೆಟ್ ಸೀಸನ್ 1ರ ಚಾಂಪಿಯನ್ ತಂಡವಾದ ಸುಶಾಂತ ಚಳಗೇರಿ 11 ಬೂದಿಹಾಳ ತಂಡಕ್ಕೆ ಒಂದು ಕಪ್ ಹಾಗೂ ಎರಡು ಲಕ್ಷದ ಒಂದು ರೂ. (200001) ಪ್ರಥಮ ಬಹುಮಾನವನ್ನು ಕಾಂಗ್ರೆಸ್ ಮುಖಂಡರು ಹಾಗೂ ಅಸ್ಕಿ ಫೌಂಡೇಶನ್ ಅಧ್ಯಕ್ಷಸಿ.ಅಸ್ಕಿ (ಕೊಣ್ಣೂರ) ವಿತರಿಸಿದರು. ದ್ವಿತೀಯ ಬಹುಮಾನ, 100001 ರೂ.ಪಲ್ಲವಿ ನಾಡಗೌಡ ಅಧ್ಯಕ್ಷರು ದೇವಿಕಾ ಸುಬ್ಬರಾವ್ ಫೌಂಡೇಷನ್ ಅವರು ಆರ್.ಕೆ.ರಾಕರ್ಸ್ ಆಲಮಟ್ಟಿ ತಂಡಕ್ಕೆ ಕೊಡಲಾಯಿತು. ಪುರಸಭೆ ಮಾಜಿ ಅಧ್ಯಕ್ಷ ಮಹಿಬೂಬ ಗೊಳಸಂಗಿ, ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ, ಬೆಂಗಳೂರು ಬೇಕರಿ ಮಾಲೀಕ ಪ್ರವೀಣ, ಹುಸೇನ ಮುಲ್ಲಾ, ಮಹ್ಮದರಫೀಕ ಶಿರೋಳ, ರಂಜಾನ್ ನದಾಫ, ಸಂಗಣ್ಣ ಮೇಲನಮನಿ, ಹುಲಗೇಶ ಇಳಗೇರ ಇದ್ದರು.



ರಸ್ತೆ ಬದಿಯಲ್ಲಿ ವ್ಯಾಪಾರ: ಸವಾರರಿಗೆ ಕಿರಿಕಿರಿ

ಬಸವನಬಾಗೇವಾಡಿ: ಸ್ಥಳೀಯ ಕೊಲ್ಹಾರ ರಸ್ತೆಯಲ್ಲಿರುವ ನಂದಿ ತರಕಾರಿ ಮಾರುಕಟ್ಟೆಯಲ್ಲಿ ಸೋಮವಾರ ನಡೆಯುವ ಸಂತೆಯಲ್ಲಿ ತರಕಾರಿ ವ್ಯಾಪಾರಸ್ಥರ ಅರ್ಧ ಜಾಗೆಯನ್ನು ಖಾಸಗಿ ವಾಹನಗಳೆ ಕಸೆದುಕೊಂಡತ್ತೆ ಭಾಸವಾಗುತ್ತಿದೆ.

ಪಟ್ಟಣದಲ್ಲಿ ರಸ್ತೆ ಬದಿಯಲ್ಲಿ ವ್ಯಾಪಾರ ವ್ಯವಹಾರ ಮಾಡುವುದ್ದರಿಂದ ಯಾವುದೇ ಅಪಘಾತ ಸಂಭವಿಸಬಾರದು ಎನ್ನುವ ಹಿನ್ನೆಲೆಯಲ್ಲಿ ಹಲವು ವರ್ಷಗಳ ಹಿಂದೆ ಪಟ್ಟಣದ ಹೃದಯ ಭಾಗ ಬಸವೇಶ್ವರ ದೇವಸ್ಥಾನದ ಪಕ್ಕದ ಆವರಣ ಈಗಿನ ಮೆಗಾ ಮಾರುಕಟ್ಟೆಯ ಜಾಗೆಯಲ್ಲಿ ಸೋಮವಾರ ನಡೆಯುವ ಸಂತೆ ಬಜಾರವನ್ನು ನಂದಿ ತರಕಾರಿ ಮಾರುಕಟ್ಟೆಗೆ ಸ್ಥಳಾಂತರ ಮಾಡಿದರೂ ಸಹ ಅದೇ ರಾಗ, ಅದೇ ಹಾಡು ಎಂಬತ್ತಾಗಿದೆ, ನಂದಿ ತರಕಾರಿ ಮಾರುಕಟ್ಟೆಯಲ್ಲಿ ದೊಡ್ಡ ಆವರಣವಿದ್ದರೂ ಸಹ ಕೃಷಿ ಇಲಾಖೆಗೆ ಹೋಗುವ ರಸ್ತೆ, ಬೀಳಗಿ ಬಾರಖೇಡ ರಾಜ್ಯ ಹೆದ್ದಾರಿ ಸಂತೆ ದಿನ ಕಿಕ್ಕೇರಿದು ತುಂಬುವತ್ತಾಗಿದ್ದು ಇದ್ದರಿಂದ ವಾಹನ ಸವಾರರಿಗೆ, ಇಲಾಖೆಯವರಿಗೂ, ಹಾಸ್ಟೇಲ್ ವಿದ್ಯಾರ್ಥಿಗಳಿಗೆ, ಕಾಲೂನಿಯ ನಿವಾಸಿಗಳಿಗೆ ಸಂಕಷ್ಟ ಎದುರಾಗುತ್ತಾಯಿದೆ.



ಮಾರುಕಟ್ಟೆಯಲ್ಲಿ ಲಕ್ಷಾಂತರ ರೂಪಾಯಿಗಳನ್ನು ವ್ಯಯ ಮಾಡಿ ತರಕಾರಿ ಮಾರಾಟ ಮಾಡಲು ಕಟ್ಟಿ ಕಟ್ಟಿಸಿ ಪಾತ್ರಾಸ ಶೆಡ್ಡುಗಳನ್ನು ಹಾಕಿಕೊಟ್ಟಿರುವುದು ವಾಹನಗಳ ನಿಲುಗಡೆಗೆಯೇ ಎಂಬತ್ತಾಗಿದೆ ಇದನ್ನೆಲ್ಲಾ ನೋಡಿದ ಅಧಿಕಾರಿಗಳು ವಾಹನ ಸವಾರರ ಸುಗಂಮ ಸಂಚಾರಕ್ಕೆ ಅನುವು ಮಾಡಿಕೊಡುವರೇ ಕಾಯ್ದು ನೋಡಬೇಕು.

ಹೆದ್ದಾರಿ ಪಕ್ಕದಲ್ಲಿ ಖಾರದ ಮೆಣಸಿನಕಾಯಿ ಮಾಡುವುದರಿಂದ ಬೈಕ್ ಸವಾರರ ಕಣ್ಣಿಗೆ ಮೆಣಸಿನಕಾಯಿ ದೊಸು ಹೋಗಿ ಅಪಘಾತ ಸಂಭವಿಸುವ ಸಾಧ್ಯತೆ ಇದೇ ಎಂಬುವುದು ಪ್ರಜ್ಞಾವಂತ ನಾಗರಿಕರ ಮಾತು.

ಸ್ಮಶಾನ ಜಾಗ ಅತಿಕ್ರಮಣ ತೆರವಿಗೆ ಮನವಿ

ನಾಲತವಾಡ: ಪಟ್ಟಣದ ಸರ್ವೆ ನಂಬರ 615 ರ ಜಾಗವನ್ನು ಅತಿಕ್ರಮಣ ಮಾಡಿಕೊಂಡಿದ್ದು, ಕೂಡಲೇ ತೆರವು ಕಾರ್ಯ ಕೈಗೊಳ್ಳಬೇಕು ಎಂದು ಆಗ್ರಹಿಸಿ ದಲಿತ ಸಂಘರ್ಷ ಸಮಿತಿ (ಸಂಯೋಜಕ) ವತಿಯಿಂದ ಸೋಮವಾರ ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಈ ಕುರಿತು ಸಲ್ಲಿಸಿದ ಮನವಿಯಲ್ಲಿ, ನಾಲತವಾಡ ಪಟ್ಟಣ ಪಂಚಾಯತಿ ವ್ಯಾಪ್ತಿಗೆ ಬರುವ ಸರ್ವೆ ನಂ. 615ರಲ್ಲಿ ಸ್ಮಶಾನಕ್ಕೆ ಮೀಸಲಾಗಿದ್ದ ಜಾಗವನ್ನು ಕೆಲ ಸಾರ್ವಜನಿಕರು ಅತಿಕ್ರಮಣ ಮಾಡಿಕೊಂಡು ಅನಧಿಕೃತವಾಗಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ಇದರಿಂದ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಸಲು ಜಾಗವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದ್ದು, ಮೃತರ ಅಂತ್ಯಕ್ರಿಯೆ ನಡೆಸಲು ಸಾರ್ವಜನಿಕರು ಪರದಾಡುವಂತಹ ಸ್ಥಿತಿ ಎದುರಾಗಿದೆ ಎಂದು ದೂರಲಾಗಿದೆ.

ಕರ್ನಾಟಕ ಭೂ ಕಂದಾಯ ಕಾಯ್ದೆ, ಪಟ್ಟಣ ಪಂಚಾಯತಿ ಕಾಯ್ದೆ ಹಾಗೂ ಸರ್ಕಾರದ ನಿಯಮಾವಳಿಗಳಿಗೆ ಇದು ಸ್ಪಷ್ಟ ಉಲ್ಲಂಘನೆಯಾಗಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ಅತಿಕ್ರಮಣ ತೆರವುಗೊಳಿಸಬೇಕು. ಒಂದು ವೇಳೆ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಮನವಿ ಪತ್ರದಲ್ಲಿ ಎಚ್ಚರಿಸಲಾಗಿದೆ.



ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಯೋಜಕ ಮಂಜುನಾಥ ಕಟ್ಟಿಮನಿ, ಹುಲಗಪ್ಪ ವಡ್ಡರ, ಪ್ರಭು ಮಡಿಕೇಶ್ವರ, ದೇವು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶಿಕ್ಷಕರ ಸಮಸ್ಯೆಗಳಿಗೆ ಸದಾ ಸ್ಪಂದಿಸುವೆ: ಕೆರೂರ

ವಿಜಯಪುರ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ವಿಜಯಪುರ ನಗರ ಘಟಕಕ್ಕೆ ಆಯ್ಕೆಯಾದ ನೂತನ ಪದಾಧಿಕಾರಿಗಳಿಗೆ ಸಿಂದಗಿ ತಾಲೂಕು ಹಾಗೂ ನಗರ ವಲಯದ ಸಮಸ್ತ ಶಿಕ್ಷಕರ ಪರವಾಗಿ ಗೌರವ ಸನ್ಮಾನ ನಡೆಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ನಗರ ವಲಯದ ನೂತನ ಅಧ್ಯಕ್ಷ ಸಯ್ಯದ ಜುಬೇರ ಕೆರೂರ, ಹಲವಾರು ವರ್ಷಗಳಿಂದ ಶಿಕ್ಷಕರ ಸೇವೆಯನ್ನು ಪ್ರಾಮಾಣಿಕವಾಗಿ ಮಾಡುತ್ತ ಬಂದಿರುವೆ. ಆದಕ್ಕಾಗಿ ಹೊಸ ಜವಾಬ್ದಾರಿ ದೊರೆತಿದ್ದು, ಮುಂಬರುವ ದಿನಗಳಲ್ಲಿ ಶಿಕ್ಷಕರ ಸಮಸ್ಯೆಗಳಿಗೆ ಹೆಚ್ಚಿನ ರೀತಿಯಲ್ಲಿ ಸ್ಪಂದಿಸಿ ಕಾರ್ಯ ನಿರ್ವಹಿಸುತ್ತೇನೆ ಎಂದರು.



ಸಿಂದಗಿ ತಾಲೂಕು ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಯು ಐ ಶೇಖ ಮಾತನಾಡಿ, ಶಿಕ್ಷಕರ ಸಮಸ್ಯೆಗಳಿಗೆ ಸದಾ ಧ್ವನಿಯಾಗಿ ಸಂಘ ಕಾರ್ಯ ನಿರ್ವಹಿಸಬೇಕು. ಈ ಸಲ ಆಯ್ಕೆಯಾದ ನೂತನ ಪದಾಧಿಕಾರಿಗಳೆಲ್ಲರು ಕ್ರೀಯಾಶೀಲರಾಗಿದ್ದು, ಉತ್ತಮ ಕಾರ್ಯ ನಿರ್ವಹಣೆ ಮಾಡುವ ಭರವಸೆಯಿದೆ. ಅಧಿಕಾರ ಸಿಕ್ಕಾಗ ಉತ್ತಮ ಸೇವೆ ಮಾಡುವ ಗುರಿ ಹೊಂದಿರಬೇಕು ಈ ನಿಟ್ಟಿನಲ್ಲಿ ಕೆಲಸ ಮಾಡಬೇಕೆಂದರು.

ನೂತನ ಪದಾಧಿಕಾರಿಗಳಾದ ಮಂಜುನಾಥ ಆರೆಶಂಕರ, ಬಸೀರ ನದಾಫ, ಅಜೀಜ ಅರಳಿಮಟ್ಟಿ, ಶಿವಾನಂದ ರೂಗಿ, ಕಬೂಲ್ ಕೊಕಟನೂರ ಇವರನ್ನು ಸಿಂದಗಿ ತಾಲೂಕು ಹಾಗೂ ವಿಜಯಪುರ ನಗರದ ಸಮಸ್ತ ಶಿಕ್ಷಕರ ಪರವಾಗಿ ಸನ್ಮಾನ ಮಾಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ರಿಯಾಜ ತಮದಡ್ಡಿ, ಅಲ್ತಾಪ ಸಾಲೋಟಗಿ, ಸರತಾಜ ಬಗಲಿ, ಲತೀಫ ಬಾಗವಾನ, ಝಮೀರ ನಾಗರಬೌಡಿ, ಅಬೀದ ಬುರಕಾಪೋಷ, ಅಜರ್ ಮುಲ್ಲಾ, ಹಾಶಿಂಪೀರ ಇನಾಮದಾರ, ಪಿ.ಎ.ಚಿಕ್ಕಗಸಿ, ಫಯಾಝು ತಮದಡ್ಡಿ ಸೇರಿದಂತೆ ನೂರಾರು ಶಿಕ್ಷಕರು ಪಾಲ್ಗೊಂಡಿದ್ದರು.

ಕಿರುಸುದ್ದಿ

ಪೂರ್ವಭಾವಿ ಸಭೆ



◆ **ಕುಷ್ಟಗಿ:** ತಾಲೂಕಿನ ಹಿರೇಮನ್ನಾಪುರ ಗ್ರಾಮದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಕುಷ್ಟಗಿ ಹಾಗೂ ಹೋಬಳಿ ಘಟಕ ಹಿರೇಮನ್ನಾಪುರ ಇವರುಗಳ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಜಿಲ್ಲಾ ಸಾಹಿತ್ಯ ಸಮ್ಮೇಳನ ಕುರಿತು ಪೂರ್ವಭಾವಿ ಸಭೆ ಜರುಗಿತು. 14ನೇ ಜಿಲ್ಲಾ ಸಾಹಿತ್ಯ ಸಮ್ಮೇಳನ ಹಿರೇಮನ್ನಾಪುರ ಗ್ರಾಮದಲ್ಲಿ ಅದ್ದೂರಿಯಾಗಿ ಆಚರಿಸಲು ಈ ತಿಂಗಳಾಂತ್ಯದಲ್ಲಿ ಮಾಡಲು ಗ್ರಾಮದ ಹಿರಿಯರು ಯುವಕರು ಕನ್ನಡಪರ ಸಂಘಟನೆಗಳು ಸಾಹಿತಿಗಳು ಕಲಾವಿದರು ತೀರ್ಮಾನ ಕೈಗೊಂಡರು. ಶಿವಾನಂದ ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ವೇಳೆ ಮಾಜಿ ಜಿಪಂ ಸದಸ್ಯ ದೊಡ್ಡಯ್ಯ ಗದ್ದಡಕಿಮಠ, ವಿ.ಎಸ್.ಕಾಡಗಿಮಠ, ರವೀಂದ್ರ ಬಾಕಳೆ, ಹನುಮೇಶ ಗುಮಗೇರಿ, ಮಲ್ಲಯ್ಯ ಲೈನದ, ನಿಂಗಪ್ಪ ಸಜ್ಜನ, ಪರಸಪ್ಪ ಹಳ್ಳಿ, ಮಂಜುನಾಥ್ ಕಜ್ಜಿ, ಸುರೇಶ್ ಗೋಟೂರ, ಪ್ಯಾಟೆಪ್ಪ ಸೂಡಿ, ದೇವಣ್ಣ ಬಳಿಗಾರ, ಶಿವಪುತ್ರಪ್ಪ ಗುರಿಕಾರ, ಕೆ.ಹುಸೇನಸಾಬ, ಜೆ.ಪಂಪಣ್ಣ, ಪುಂಡಲಿಕಪ್ಪ ಬಡಕುಂಟಿ, ಗೋಪಾಲ್ ಕಲಾಲ, ಪ್ರಹ್ಲಾದ್ ದಾಸರ, ಮಹಿಳಾ ಪ್ರತಿನಿಧಿಗಳಾದ ಸುರೇಖಾ ಕಂಪಾಪುರಮಠ, ಜಯಮ್ಮ ಹಿರೇಮಠ, ಗಿರಿಜಾ ಹಿರೇಮಠ, ಶಶಿಕಲಾ ಹಸಬಿ ಉಪಸ್ಥಿತರಿದ್ದರು. ಶರಣಪ್ಪ ಲೈನದ ನಿರ್ವಹಿಸಿ ವಂದಿಸಿದರು.

ಸಂಗೀತ ಪರಂಪರೆ ಉತ್ಸವ ಇಂದು

◆ **ಕುಷ್ಟಗಿ:** ಸಮೀಪದ ಶಾಖಾಪೂರು ಗ್ರಾಮದ ದುರ್ಗಾದೇವಿ ದೇವಸ್ಥಾನದ ಆವರಣದಲ್ಲಿ ಮೇ 27 ರಂದು ಗಾನಯೋಗಿ ಸಂಗೀತ ಕಲಾ ಸಂಘ (ರಿ) ಲಿಂಗನಬಂಡಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ 2025-26 ನೇ ಸಾಲಿನ ಸಂಘ ಸಂಸ್ಥೆ ಧನ ಸಹಾಯ ಪರಿಶಿಷ್ಟ ಜಾತಿ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಸಂಗೀತ ಪರಂಪರೆ ಉತ್ಸವ ಜರುಗಲಿದೆ.ಶಾಸಕ ದೊಡ್ಡನಗೌಡ ಪಾಟೀಲ ಉದ್ಘಾಟಿಸಲಿದ್ದಾರೆ. ಕೊಪ್ಪಳ ವಿವಿ ಕುಲಪತಿ ಡಾ.ಎಸ್.ವಿ.ಡಾಣಿ, ಕಲಬುರಗಿ ವಿಭಾಗೀಯ ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ ಜಂಟಿ ನಿರ್ದೇಶಕ ಬಸವರಾಜ ಹೂಗಾರ, ಮುಖ್ಯ ಅತಿಥಿಗಳಾಗಿ ಹಿರಿಯ ವರದಿಗಾರ ನಾರಾಯಣರಾವ್ ಕುಲಕರ್ಣಿ, ಮುಖೇಶ ನಿಲೋಗಲ್, ಮಂಜುನಾಥ ಮಹಾಲಿಂಗಪೂರು ಸೇರಿದಂತೆ ಇನ್ನಿತರ ಗಣ್ಯರು ಹಾಗೂ ಶಾಖಾಪೂರು ಗ್ರಾಮದ ಗಣ್ಯರು ಗುರು, ಹಿರಿಯರು ಪಾಲ್ಗೊಳ್ಳಲಿದ್ದಾರೆ ಎಂದು ಹನಮಂತ ಕುಮಾರ ಗವಾಯಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಘನತ್ಯಾಜ್ಯ ವಸ್ತು ನಿರ್ವಹಣೆ ಜಾಗೃತಿ ಅಭಿಯಾನ

◆ **ಸಿಂಧನೂರು:** ಘನತ್ಯಾಜ್ಯ ವಸ್ತು ನಿರ್ವಹಣೆ-2026ರ ನಿಯಮಗಳ ಅನುಷ್ಠಾನ ಕುರಿತು ನಗರಸಭೆ ವತಿಯಿಂದ ನಗರದ 11ನೇ ವಾರ್ಡ್ ನ ನಟರಾಜ್ ಕಾಲೊನಿಯಲ್ಲಿ ಜಾಗೃತಿ ಅಭಿಯಾನ ನಡೆಸಲಾಯಿತು.ಈ ವೇಳೆ ನಗರಸಭೆ ಪೌರಾಯುಕ್ತ ಪಾಂಡುರಂಗ ಇಟಗಿ ಮಾತನಾಡಿದರು. ಈ ವೇಳೆ ಪರಿಸರ ಎಂಜಿನಿಯರ್ ಚೇತನ್ ಕುಮಾರ, ಆರೋಗ್ಯ ನಿರೀಕ್ಷಕ ಕಿಶನ್ ರಾವ್, ಹಣಮಂತ ಯಾದವ, ವೆಂಕಟೇಶ ಕುಮಾರ, ಲಕ್ಷ್ಮೀಪತಿ, ಲಿಂಗರಾಜ ಸೇರಿದಂತೆ ನಗರಸಭೆ ಸಿಬ್ಬಂದಿಗಳು ಇದ್ದರು.

ನಿಧನ ಸುದ್ದಿ

ಶಾಂತರಾಜ ಪಾರ್ಶ್ವನಾಥ

◆ **ಕುಷ್ಟಗಿ:** ಪಟ್ಟಣದ ಪೊಲೀಸ್ ಸ್ಟೇಷನ್ ಪಕ್ಕದ ನಿವಾಸಿ,ಜೈನ ಸಮುದಾಯದ ಹಿರಿಯರು ಮಹಾವೀರ್ ಸಾಮಿಲ್ಲಿನ ಮಾಲಕರು ಶಾಂತರಾಜ ಪಾರ್ಶ್ವನಾಥ ಗೋಗಿ ನಿಧನರಾದರು.



ಮೃತರು ಶ್ರೇಣಿಕ್ ಗೋಗಿ, ಸುಮಿತ್ ಗೋಗಿ, ಹಾಗೂ ಸನ್ಮತ್ ಗೋಗಿ, ಇವರ ತಂದೆಯವರು. ಮೃತರು ಅಭಿನಂದನ್ ಗೋಗಿ (ಮಹಾವೀರ ಕ್ಲಾತ್ ಸ್ಟೋರ್)ಇವರ ತಮ್ಮನವರು. ಮೃತರು ಹೆಂಡತಿ, ಮಕ್ಕಳು, ಮೊಮ್ಮಕ್ಕಳು, ಹಾಗೂ ಅಪಾರ ಬಂಧು ಬಳಗವನ್ನು ಆಗಲಿದ್ದಾರೆ.

ತೀವ್ರ ಸಂತಾಪ : ಮೃತ ಶಾಂತರಾಜ ಗೋಗಿಯವರ ನಿಧನಕ್ಕೆ ದುಬೈದಲ್ಲಿರುವ ಉದ್ಯಮಿ ಗುಣಶೀಲ ಶೆಟ್ಟಿ,. ಕಸಾಪ ಅಧ್ಯಕ್ಷ ಲೆಂಕಪ್ಪ ವಾಲಿಕಾರ, ಗೌರವ ಕಾರ್ಯದರ್ಶಿ ಶರಣಪ್ಪ ಲೈನದ ವೀರೇಶ ಬಂಗಾರಶೆಟ್ಟರ್. ಅಮರೇಶ ಮುದೇನೂರು,ರವಿಂದ್ರ ಬಾಕಳೆ, ಪರಶಿವಮೂರ್ತಿ ಮಾಟಲದಿನ್ನಿ ಭೀಮನರಾವ್ ಕುಲಕರ್ಣಿ ದೊಡ್ಡಪ್ಪ ಕೈಲವಾಡಗಿ ಪವಾಡೆಪ್ಪ ಚೌಡಕಿ ನಾಗರಾಜ ಹಚಾಳ, ಶಿವಕುಮಾರ್ ಗಂಧದ ಮಠ, ನಾಗರಾಜ ಬಡಿಗೇರ,ಬಾಬು ಘೋರ್ಪಡೆ, ನಟರಾಜ ಸೋನಾರ, ಭರತೇಶ ಜೋಶಿ, ಚಂದ್ರು ಪುರದ, ಸೇರಿದಂತೆ ಶಿಲೆಗಳು ಸಂಗೀತ ಬಳಗದವರು ಸಂತಾಪ ಸೂಚಿಸಿ ಅಗಲಿದ ಆತ್ಮಕ್ಕೆ ಚಿರಶಾಂತಿ ಕೋರಿದ್ದಾರೆ.



ಕುಕನೂರು: ತಾಲೂಕಿನ ತಳಕಲ್ ಗ್ರಾಮದಲ್ಲಿ ಪ್ರಗತಿ ಜ್ಞಾನ ವಿಕಾಸ ಕೇಂದ್ರದಲ್ಲಿ ಸ್ವ-ಉದ್ಯೋಗ ಪ್ರೇರಣಾ ಶಿಬಿರ ಕಾರ್ಯಕ್ರಮವನ್ನು ಆರ್ ಸೇಟ್ ಸಂಸ್ಥೆ ಉಪನ್ಯಾಸಕ ಲಕ್ಷ್ಮಿಕಾಂತ ಪ್ರಸಾದ ಇತ್ತೀಚೆಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಪ್ರಸ್ತಾವಿಕವಾಗಿ ಮಾತನಾಡಿದರು. ಚಂಪಮ್ಮ ಅಧ್ಯಕ್ಷತೆ ವಹಿಸಿದರು. ವಲಯದ ಮೇಲ್ವಿಚಾರಾದ ರೇಖಾ ಮುಲಿಮನಿ, ಸೇವಾಪ್ರತಿನಿ, ಕೇಂದ್ರದ ಸದಸ್ಯರು ಉಪಸ್ಥಿತರಿದ್ದರು.

ಗೋ ಸಾಗಾಟ, ಹತ್ಯೆ ತಡೆಗಟ್ಟಲು ಮನವಿ

◆ **ಸಿಂಧನೂರು:** ತಾಲೂಕಿನ ವಿವಿಧ ಭಾಗಗಳಲ್ಲಿ ಅಕ್ರಮವಾಗಿ ಗೋ ಸಾಗಾಟ ಮತ್ತು ಗೋಹತ್ಯೆ ನಡೆಯುತ್ತಿರುವ ಬಗ್ಗೆ ಕ್ರಮ ಕೈಗೊಳ್ಳುವಂತೆ ವಿಶ್ವ ಹಿಂದೂ ಪರಿಷತ್ ಹಾಗೂ ಭಜರಂಗ ದಳದ ತಾಲೂಕು ಘಟಕದ ಪದಾಧಿಕಾರಿಗಳು ತಹಶೀಲ್ದಾರರಿಗೆ ಹಾಗೂ ಗ್ರಾಮೀಣ ಪೊಲೀಸ್ ಠಾಣೆ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಈ ಕುರಿತು ಮನವಿ ಸಲ್ಲಿಸಿರುವ ಸಂಘಟನೆಗಳ ಪದಾಧಿಕಾರಿಗಳು, ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧ ಮತ್ತು ಸಂರಕ್ಷಣಾ ಅಧಿನಿಯಮ 2020ರ ಅಡಿಯಲ್ಲಿ ಗೋ ಹತ್ಯೆ ನಿಷೇಧಿಸಲಾಗಿದ್ದರೂ ಕೆಲವರು ಕಾನೂನು ಉಲ್ಲಂಘಿಸಿ ಅಕ್ರಮ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಎಂದು ಆರೋಪಿಸಿದ್ದಾರೆ. ಇದಲ್ಲದೆ ಅಕ್ರಮವಾಗಿ ಗೋ ಸಾಗಾಟ ಮಾಡುತ್ತಿರುವ ವಾಹನಗಳನ್ನು ತಡೆದು ಪರಿಶೀಲನೆ ನಡೆಸಬೇಕು, ಗೋ ಹತ್ಯೆಗೆ ಸಹಕರಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಪೊಲೀಸ್ ಇಲಾಖೆಯವರು ರಾತ್ರಿ ವೇಳೆ ವಿಶೇಷ ತಪಾಸಣೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಲಾಗಿದೆ. ಅಷ್ಟೇ ಅಲ್ಲದೆ ಗೋ ರಕ್ಷಣೆಗಾಗಿ ವಿಶೇಷ ಪೊಲೀಸ್ ತಂಡ ರಚಿಸಿ,ತಾಲೂಕಿನಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಯಂತ್ರಿಸಬೇಕು. ತಾಲೂಕಿನ ವಿವಿಧ ಗ್ರಾಮಗಳಲ್ಲಿ ರಾತ್ರಿ ಸಮಯದಲ್ಲಿ ಅನುಮಾನಾಸ್ಪದ ವಾಹನಗಳ ಸಂಚಾರ ಹೆಚ್ಚಾಗಿದೆ ಎಂಬ ಆರೋಪವನ್ನು ಮಾಡಿ ಮನವಿ ಸಲ್ಲಿಸಿದರು. ಈ ವೇಳೆ ವಿಶ್ವ ಹಿಂದೂ ಪರಿಷತ್ ಹಾಗೂ ಭಜರಂಗದಳದ ಪ್ರಮುಖ ಮುಖಂಡರಾದ ದೇವರಾಜ ಪಾಟೀಲ, ನಾಗರಾಜ ಪವಾರ್, ತಿಮ್ಮಪ್ಪ ಕೆಂಗೋಡಮಾರ ಸೇರಿದಂತೆ ಹಲವು ಕಾರ್ಯಕರ್ತರು ಉಪಸ್ಥಿತರಿದ್ದರು.



ಮಸ್ಕಿ: ಪಟ್ಟಣದಲ್ಲಿ ಪುರಸಭೆ ವತಿಯಿಂದ ಘನ ತ್ಯಾಜ್ಯ ನಿರ್ವಹಣೆ ಕುರಿತು ಮಂಗಳವಾರ ಜಾಗೃತಿ ಅಭಿಯಾನ ನಡೆಯಿತು. ಈ ವೇಳೆ, ನೈರ್ಮಲ್ಯ ವಿಭಾಗದ ಅಧಿಕಾರಿ ಸೋಮನಾಥ ನಾಯಕ ಮಾತನಾಡಿದರು. ಈ ವೇಳೆ,ಪುರಸಭೆ ಮುಖ್ಯಾಧಿಕಾರಿ ಗಳಾದ ನರಸರೆಡ್ಡಿ,ಅಜರ್ ಹಾಗೂ ಸಮುದಾಯ ಸಂಚಾಲಕರು ಸೇರಿದಂತೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

5 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಪೋಲಿಯೋ ಲಸಿಕೆ ಹಾಕಿಸಿ: ಡಿಸಿ

◆ **ಕಲಬುರಗಿ:** ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಜೂ.28ರಂದು ನಡೆಯಲಿದೆ. ಈ ಹಿನ್ನೆಲೆಯಲ್ಲಿ 0-5 ವರ್ಷದೊಳಗಿನ ಮಕ್ಕಳು ಲಸಿಕೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಿ. 'ಹೈ ರಿಸ್ಕ್' ಪ್ರದೇಶಗಳಾದ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಹಾಗೂ ಹೆದ್ದಾರಿಗಳ ಚೆಕ್‌ಪೋಸ್ಟ್‌ಗಳ ಮೇಲೆ ತೀವ್ರ ನಿಗಾವಹಿಸಿ ಎಂದು ಜಿಲ್ಲಾಧಿಕಾರಿ ಮಹ್ಮದ್ ಇಕ್ರಮೂಲ್ಲಾ ಶರೀಫ್ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಟಾಸ್ಕ್ ಪೋರ್ಸ್ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳಿಂದ ಜಾಥಾ ಕಾರ್ಯಕ್ರಮ ಆಯೋಜಿಸಬೇಕು ಎಂದರು.

28 ರಂದು ಜಿಲ್ಲಾದ್ಯಂತ ಬೂತ್‌ಗಳಲ್ಲಿ ಲಸಿಕೆ ಹಾಕಲಾಗುವುದು. ಜೂ 29,30, ಜುಲೈ 1 ರವರೆಗೆ ಮೂರು ದಿನಗಳ ಕಾಲ 1,475 ತಂಡಗಳು ಲಸಿಕೆ ಹಾಕದ ಮಕ್ಕಳನ್ನು ಪತ್ತೆ ಮಾಡಲು ಮನೆ ಮನೆಗೆ ಭೇಟಿ ನೀಡಿ 5 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಲಸಿಕೆ ನೀಡಬೇಕು. ಯಾವುದೇ ಕಾರಣಕ್ಕೂ ಮಗುವೂ ಲಸಿಕೆಯಿಂದ ವಂಚಿತವಾಗಬಾರದು ಎಂದು ಹೇಳಿದರು.

ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮಕ್ಕೆ ಜಿಲ್ಲೆಯಲ್ಲಿ 5 ವರ್ಷದೊಳಗಿನ ಒಟ್ಟು ಅಂದಾಜು 3,51,716 ಮಕ್ಕಳಿಗೆ ಲಸಿಕೆ ಹಾಕಲು ಗುರಿ ನೀಡಲಾಗಿದೆ. ಮಕ್ಕಳಿಗೆ ಲಸಿಕೆಗಳನ್ನು ನೀಡಲು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ 1,519 ಲಸಿಕಾ ಕೇಂದ್ರಗಳಿಂದ (ಬೂತ್‌ಗಳು) ಮಕ್ಕಳಿಗೆ ಲಸಿಕೆ ಹಾಕಲಾಗುವುದು. ಇದಕ್ಕಾಗಿ 3,364 ಲಸಿಕೆ ಹಾಕುವ ಸಿಬ್ಬಂದಿ ಹಾಗೂ 334 ಮೇಲ್ವಿಚಾರಕರನ್ನು ನಿಯೋಜಿಸಲಾಗಿದೆ. 132 ಟ್ರಾನ್ಸಿಟ್ ತಂಡಗಳು ಹಾಗೂ ದೂರದ ಪ್ರದೇಶಗಳಿಗಾಗಿ 31 ಸಂಚಾರಿ ತಂಡಗಳು ಕಾರ್ಯಾಚರಣೆ ನಡೆಸಲಿವೆ. ಅಂಗನವಾಡಿ ಹಾಗೂ ಶಾಲೆಗಳಲ್ಲಿ ಕೇಂದ್ರಗಳನ್ನು ತೆರೆಯಲು ಸಿದ್ಧತೆಮಾಡಿಕೊಳ್ಳಿ ಎಂದು ಸೂಚನೆ ನೀಡಿದರು.

ಉನ್ನತ ಅಧಿಕಾರಿಗಳ ತಂಡವು ಖುದ್ದಾಗಿ ಹೈ ರಿಸ್ಕ್ ಪ್ರದೇಶಗಳಿಗೆ ಭೇಟಿ ನೀಡಿ ವಾಸ್ತವ ಸ್ಥಿತಿ ಪರಿಶೀಲಿಸಬೇಕು. ಪೋಷಕರು ತಮ್ಮ ಮಕ್ಕಳಿಗೆ ತಪ್ಪದೇ ಪೋಲಿಯೋ ಲಸಿಕೆ ಹಾಕಿಸಿ ರಾಷ್ಟ್ರೀಯ ಅಭಿಯಾನವನ್ನು ಯಶಸ್ವಿಗೊಳಿಸಬೇಕು ಕೋರಿದರು.

ಕರಪತ್ರ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಹೆಚ್ಚು ಪ್ರಚಾರ ನೀಡಬೇಕು. ಪಲ್ಸ್ ಪೋಲಿಯೋ ಕಾರ್ಯಕ್ರಮದ ಯಶಸ್ವಿಗೆ ಶಿಕ್ಷಣ ಇಲಾಖೆ, ಸಾರಿಗೆ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಟ್ಟಡ ಕಾರ್ಮಿಕ ಇಲಾಖೆ, ಪೊಲೀಸ ಇಲಾಖೆ ಸೇರಿದಂತೆ ಬೇರೆ ಬೇರೆ ಇಲಾಖೆಗಳು ಒಗ್ಗೂಡಿ ಕಾರ್ಯನಿರ್ವಹಿಸಬೇಕೆಂದರು. ಸರ್ವೇಲೈಸ್ ಅಧಿಕಾರಿ ಅನಿಲ ತಾಳಿಕೋಟಿ ಪಿಪಿಟಿ ಮೂಲಕ ಮಾಹಿತಿ ನೀಡಿದರು.

ಈ ವೇಳೆ ಪಲ್ಸ ಪೋಲಿಯೋ ಪೋಸ್ಟರ್ ಗಳನ್ನು ಬಿಡುಗಡೆ ಮಾಡಿದರು.ಸಭೆಯಲ್ಲಿ ಜಿಪಂ ಸಿಇಒ ರಾಹುಲ ಸಂಕನೂರ್, ಮಹಾನಗರ ಪಾಲಿಕೆಯ ಆಯುಕ್ತ ಅವಿನಾಶ ಶಿಂಧೆ, ಡಿಎಚ್ಒ ಡಾ.ಶರಣಬಸಪ್ಪ ಕ್ಯಾತನಾಳ, ಜಿಲ್ಲಾ ಸರ್ಜನ್ ಡಾ.ರೂಕ್ಕಿಯ್ಯ ಅಸನಾ ರಬ್,ಆರ್.ಸಿ.ಹೆಚ್. ಅಧಿಕಾರಿ ಡಾ.ಸಿದ್ದು ಪಾಟೀಲ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ಶಂಕ್ರಮ್ಮ ಡವಳಗಿ, ಮಹಿಳಾ ಮತ್ತು ಮಕ್ಕಳ ಉಪನಿರ್ದೇಶಕ ರಾಜ ಕುಮಾರ್ ರಾಠೋಡ, ತಾಲೂಕಿನ ತಹಶೀಲ್ದಾರು, ವೈದ್ಯಾಧಿಕಾರಿಗಳು, ಅಂಗನವಾಡಿ, ಆಶಾ ಕಾರ್ಯಕರ್ತರು ಉಪಸ್ಥಿತರಿದ್ದರು.

ಬಲ್ಡೋಟ ತೊಲಗಿಸಿ ಕೊಪ್ಪಳ ಉಳಿಸಿ 208ನೇ ದಿನದ ಧರಣಿ ಯಶಸ್ವಿ

◆ **ಕೊಪ್ಪಳ:** ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆಯಿಂದ ನಡೆಸುತ್ತಿರುವ ಬಲ್ಡೋಟ ಹಟಾವೋ ಕೊಪ್ಪಳ-ಭಾಗ್ಯನಗರ ಬಚಾವೋ ಧರಣಿ 208ನೇ ದಿನ ಪೂರ್ಣಗೊಳಿಸಿತು.

ವಿಪರೀತ ಮಾಲಿನ್ಯ ಮಾಡುತ್ತಿರುವ ಸ್ಪಾಂಜ್ ಐರನ್, ಪೆಲ್ಲೆಟ್, ಸ್ಟೀಲ್, ಸಿಮೆಂಟ್, ಆಸಿಡ್, ಸುಣ್ಣ, ಕ್ರಿಮಿನಾಶಕ, ರಸಾಯನ ಗೊಬ್ಬರ, ಕಲ್ಲಿದ್ದಲು ಸುಟ್ಟು ವಿದ್ಯುತ್ ತಯಾರಿಸುವ 28 ಬೃಹತ್ ಕಾರ್ಖಾನೆಗಳು ಇಲ್ಲಿನ ತುಂಗಭದ್ರಾ ನೀರು, ರೈತರ ಫಲವತ್ತಾದ ಭೂಮಿ, ಅಂತರ್ಜಲ, ಕೃಷಿಭೂಮಿ-ಬೆಳೆ ಮುಖ್ಯವಾಗಿ 22 ಗ್ರಾಮಗಳಲ್ಲಿ ಮತ್ತು ನಗರದ ಅರ್ಧ ಭಾಗದಲ್ಲಿ ಕಪ್ಪು ಮತ್ತು ಕಂದು ಧೂಳು, ಕಪ್ಪು ಹೊಗೆ, ಕರಿ ಹಾರುಬೂದಿ ಆವರಿಸಿ ಮಾಲಿನ್ಯವಾಗುತ್ತಿದೆ. ಈ ಕಾರ್ಖಾನೆಗಳ ವಿಷ ರಸಾಯನಯುಕ್ತ ದ್ರವತ್ಯಾಜ್ಯ ಮತ್ತು ಘನತ್ಯಾಜ್ಯವನ್ನು ಖಾಲಿ ಬೋರವೆಲ್ ಮೂಲಕ ಭೂಗರ್ಭಕ್ಕೆ ಸೇರುತ್ತದೆ. ಹಳ್ಳ, ಕೊಳ್ಳಗಳ ಮೂಲಕ ತುಂಗಭದ್ರಾ ಜಲಾಶಯ ಮತ್ತು ನದಿ ಸೇರುತ್ತದೆ. ನಾವೆಲ್ಲ ಕುಡಿಯುವ ತುಂಗಭದ್ರಾ ನೀರನ್ನು ಸಂಪೂರ್ಣ ವಿಷಗೊಳಿಸಲಾಗಿದೆ. ಹಿರೇಬಗನಾಳ, ಅಲ್ಲಾನಗರ ಪಕ್ಕದ ಸ್ಪಾಂಜ್ ಐರನ್ ಕಾರ್ಖಾನೆಗಳನ್ನು ಕೇಂದ್ರ ಪರಿಸರ ಇಲಾಖೆ ವರದಿಯ ಶಿಫಾರಸಿನಂತೆ ನಿರ್ಜನ ಪ್ರದೇಶಕ್ಕೆ ಸ್ಥಳಾಂತರಿಸಬೇಕೆಂದು, ಕಾರ್ಖಾನೆ ಧೂಳು ಬಾತ 22 ಹಳ್ಳಿಗಳ ಪುನರುಜ್ಜೀವನ ಮಾಡಲು ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸಬೇಕೆಂದು, ಎ.ಐ.ಐ.ಎಂ.ಎಸ್ ಸಂಸ್ಥೆ ಮತ್ತು ಐ.ಐ.ಎಸ್.ಸಿ ಸಂಸ್ಥೆಯಿಂದ ಜನರ ಆರೋಗ್ಯ ಮತ್ತು ಪರಿಸರ ಹಾನಿಯ ಸಮೀಕ್ಷೆ ನಡೆಸಬೇಕೆಂದು ನಗರಸಭೆ ಆವರಣದಲ್ಲಿ ಧರಣಿ ನಡೆಯುತ್ತಿದೆ.

ಧರಣಿಯಲ್ಲಿ ಪ್ರಧಾನ ಸಂಚಾಲಕ ಅಲ್ಲಮಪ್ರಭು ಬೆಟ್ಟದೂರು, ಸಂಚಾಲಕ ಮಲ್ಲಿಕಾರ್ಜುನ ಗೋನಾಳ, ಮಂಜುನಾಥ ಗೊಂಡಬಾಳ, ನಿವೃತ್ತ ಉಪನ್ಯಾಸಕರಾದ ಡಾ. ಬಸವರಾಜ ಪೂಜಾರ, ಶಂಭುಲಿಂಗಪ್ಪ ಹರಗೇರಿ, ಶಿವಾನಂದಯ್ಯ ಬೀಳಗಿಮಠ, ಸರೋಜಾ ಬಾಕಳೆ, ರವಿ ಕಾಂತನವರ, ಮೂಕಪ್ಪ ಮೇಸ್ತ್ರಿ ಬಸಾಪುರ, ಬಸವರಾಜ ಪೂಜಾರ ಕಾಸನಕಂಡಿ, ಅಬ್ದುಲ್ ಗಫಾರ್ ಹೊಸಪೇಟೆ, ಎಸ್.ಮಹಾದೇವಪ್ಪ ಮಾವಿನಮಡು, ಮಂಜುನಾಥ ಕವಲೂರು, ಶಿವಪ್ಪ ಜಲ್ಲಿ ಇತರರು ಇದ್ದರು.



ಕಾರ್ಯಕರ್ತನ ಮನೆಗೆ ಬಿಜೆಪಿ ನಿಯೋಗ ಭೇಟಿ

◆ **ಕೊಪ್ಪಳ:** ಮಣ್ಣು ಅಕ್ರಮ ಬಯಲಿಗೆಳೆದಿದ್ದಕ್ಕೆ ಶಾಸಕ ರಾಘವೇಂದ್ರ ಹಿಟ್ನಾಳ್ ಬೆಂಬಲಿಗನಾಗಿರುವ ಜಿಪಂ ಮಾಜಿ ಸದಸ್ಯೆ ಪತಿ ಭರಮಪ್ಪ ನಗರ ಎಂಬ ವ್ಯಕ್ತಿಯಿಂದ ದೌರ್ಜನ್ಯಕ್ಕೆ ಒಳಗಾಗಿರುವ ತಾಲೂಕಿನ ನೆಲೋಪುರ ಗ್ರಾಮದ ಬಿಜೆಪಿ ಹಿರಿಯ ಕಾರ್ಯಕರ್ತನ ಮನೆಗೆ ಮಂಗಳವಾರ ಕಮಲ ಪಡೆಯ ನಾಯಕರು ಹಾಗೂ ಕಾರ್ಯಕರ್ತರು ಭೇಟಿ ನೀಡಿ, ಧೈರ್ಯ ತುಂಬಿದರು.

ಕೊಪ್ಪಳ ತಾಲೂಕಿನ ನೆಲೋಗಿಪುರ ಗ್ರಾಮದ ಬಳಿಯ ತುಂಗಭದ್ರಾ ಹಿನ್ನೀರು ಪ್ರದೇಶದಲ್ಲಿನ ಮಣ್ಣನ್ನು ಅಕ್ರಮವಾಗಿ ಎತ್ತಿ ಬೇರೆಡೆ ಸುಮಾರು 2 ಎಕರೆ ಪ್ರದೇಶದಲ್ಲಿ ಸಂಗ್ರಹಣೆ ಮಾಡಿರುವ ಗಂಭೀರ ಅಕ್ರಮವನ್ನು ಬೆಳಕಿಗೆ ತಂದಿದ್ದ ಹಿನ್ನಲೆ ಬಿಜೆಪಿ ಪಕ್ಷದ ಹಿರಿಯ ಕಾರ್ಯಕರ್ತ ಭೀಮೇಶ ಹಳ್ಳಿಕೇರಿ ಅವರಿಗೆ ಭರಮಪ್ಪ ಹಟ್ಟಿ ಜೀವ ಬೆದರಿಕೆ ಹಾಕಿದ್ದರು.

ಈ ಹಿನ್ನಲೆ ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್, ಕೊಪ್ಪಳ ಲೋಕಸಭಾ ಕ್ಷೇತ್ರದ ನಿಕಟಪೂರ್ವ ಅಭ್ಯರ್ಥಿ ಬಸವರಾಜ ಕ್ಯಾವಟರ್ ಸೇರಿದಂತೆ ಮುಖಂಡರು ಹಾಗೂ ಕಾರ್ಯಕರ್ತರು ಭೀಮೇಶ ಹಳ್ಳಿಕೇರಿಗೆ ಧೈರ್ಯ ತುಂಬಿ, ನಿಮ್ಮ ಜತೆ ನಾವಿದ್ದೇವೆ, ಎದೆಗುಂದಬೇಡಿ ಎಂದು ಧೈರ್ಯ ತುಂಬಿದರು. ಒಬ್ಬ ಕಾರ್ಯಕರ್ತ ಅಕ್ರಮದ ವಿರುದ್ಧ ಧ್ವನಿ ಎತ್ತಿದರೆ ಅವನನ್ನು ಪೊಲೀಸರು ಬೆದರಿಸುವುದು ಕೇವಲ ವ್ಯಕ್ತಿಯ ಮೇಲಿನ ದಾಳಿ ಅಲ್ಲ, ಅದು ಪ್ರಜಾಪ್ರಭುತ್ವ ಮತ್ತು ಸತ್ಯದ ಧ್ವನಿಯ ಮೇಲಿನ ದಾಳಿ ಎಂದು ಬಿಜೆಪಿ ಪಕ್ಷದ ನಾಯಕರು ಇದೇ ವೇಳೆ ಆಕ್ರೋಶ ವ್ಯಕ್ತಪಡಿಸಿದರು.

ಕೊನೆಗೆ ''ನೀವು ಸತ್ಯಕ್ಕಾಗಿ ಹೋರಾಟ ಮಾಡುತ್ತಿದ್ದೀರಿ, ನಿಮ್ಮೊಂದಿಗೆ ನಾವು ಗಟ್ಟಿಯಾಗಿ ನಿಲ್ಲುತ್ತೇವೆ'' ಎಂಬ ವಿಶ್ವಾಸವನ್ನು ಬಿಜೆಪಿ ಕಾರ್ಯಕರ್ತ ಭೀಮೇಶನಿಗೆ ಮುಖಂಡರು ನೀಡಿದರು.

ಈ ವೇಳೆ ಗ್ರಾಮೀಣ ಮಂಡಲ ಅಧ್ಯಕ್ಷ ವೀರೇಶ ಸಜ್ಜನ, ಮುಖಂಡರಾದ ಮಹಾಂತೇಶ ಪಾಟೀಲ್ ಮೈನಳ್ಳಿ, ಮುಖಂಡ ಪ್ರದೀಪ ಹಿಟ್ನಾಳ್, ಗಣೇಶ್ ಹೊರತಟ್ನಾಳ, ಉಮೇಶ್ ಕುರ್ಡೇಕರ್, ಡಾ . ಸಿದ್ದಲಿಂಗಸ್ವಾಮಿ, ಅಂದಪ್ಪ ಯಲ್ಲಮ್ಮನವರ್ ಹಾಗೂ ಗ್ರಾಮದ ಹಿರಿಯರು ಉಪಸ್ಥಿತರಿದ್ದರು.



ಪರಿಸರ ಸಂರಕ್ಷಣೆಗೆ ಎಲ್ಲರೂ ಹೆಚ್ಚಿನ ಸಹಕಾರ ನೀಡಿ: ನಾಗೇಶ

◆ **ಯಲಬುರ್ಗಾ:** ಪಟ್ಟಣದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ರಸ್ತೆ ಬದಿಗಳಲ್ಲಿ ತ್ಯಾಜ್ಯ ಎಸೆಯುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದ್ದು, ನಿಯಮ ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪಪಂ ಮುಖ್ಯಾಧಿಕಾರಿ ನಾಗೇಶ ಎಚ್ ಎಚ್ಚರಿಸಿದರು.



ಪಟ್ಟಣದ ಪಪಂ ಕಚೇರಿಯಲ್ಲಿ ಮಂಗಳವಾರ ಘನತ್ಯಾಜ್ಯ ನಿರ್ವಹಣಾ-2026 ಕಾಯ್ದೆಯ ಪರಿಣಾಮಕಾರಿ ಅನುಷ್ಠಾನ ಹಾಗೂ ಪಟ್ಟಣದ ಸ್ವಚ್ಛತಾ ವ್ಯವಸ್ಥೆ ಸುಧಾರಣೆ ಕುರಿತು ನಡೆದ ಸಭೆಯಲ್ಲಿ ಮಾತನಾಡಿ, ಪಟ್ಟಣದ ಸೌಂದರ್ಯಕರೀಣಕ್ಕೆ ಸಾರ್ವಜನಿಕರ ಸಹಭಾಗಿತ್ವ ಅಗತ್ಯವಾಗಿದೆ ಎಂದರು. ನಗರದ ಸ್ವಚ್ಛತೆ ಕಾಪಾಡುವುದು ಬರೀ ಪೌರಕಾರ್ಮಿಕರ ಜವಾಬ್ದಾರಿಯಲ್ಲ, ಸಾರ್ವಜನಿಕರ ಸಹಕಾರವೂ ಅತ್ಯಂತ ಮುಖ್ಯವಾಗಿದೆ. ಮೆಡಿಕಲ್ ತ್ಯಾಜ್ಯ, ಪ್ಲಾಸ್ಟಿಕ್, ಗಾಜು ಹಾಗೂ ಇತರೆ ಅಪಾಯಕಾರಿ ತ್ಯಾಜ್ಯಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸುವ ಮೂಲಕ ಪರಿಸರ ಸಂರಕ್ಷಣೆಗೆ ಎಲ್ಲರೂ ಹೆಚ್ಚಿನ ಸಹಕಾರ ನೀಡಬೇಕು ಎಂದರು.

ಸುಪ್ರೀಂ ಕೋರ್ಟ್ ಆದೇಶದ ಅನ್ವಯ ಸ್ವಚ್ಛತಾ ನಿಯಮ ಉಲ್ಲಂಘಿಸುವವರ ವಿರುದ್ಧ ದಂಡಾತ್ಮಕ ಕ್ರಮ ಜರುಗಿಸಲಾಗುವುದು. ಪಟ್ಟಣದಲ್ಲಿ ಎಲ್ಲೆಂದರಲ್ಲಿ ಕಸ ಎಸೆಯುವುದು, ರಸ್ತೆ ಬದಿಯಲ್ಲಿ ತ್ಯಾಜ್ಯ ಸುರಿಯುವುದು, ಚರಂಡಿಗಳಿಗೆ ಪ್ಲಾಸ್ಟಿಕ್ ತ್ಯಾಜ್ಯ ಹಾಕುವುದು ಮುಂತಾದ ಅಸ್ವಚ್ಛ ಚಟುವಟಿಕೆಗಳಿಂದ ಪರಿಸರ ಹಾನಿಯಾಗುವುದಲ್ಲದೇ ಸಾರ್ವಜನಿಕ ಆರೋಗ್ಯಕ್ಕೂ ಧಕ್ಕೆಯಾಗುತ್ತದೆ. ಇಂತಹ ಕೃತ್ಯಗಳನ್ನು ನಿಯಂತ್ರಿಸಲು ಪಪಂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ ಎಂದು ಎಚ್ಚರಿಸಿದರು.ಈ ವೇಳೆಯಲ್ಲಿ ಪಪಂ ಸಿಬ್ಬಂದಿಗಳಾದ ಸುಮಾ ಕಂಚಿ, ವನರಾಜ, ಸುಭಾಷ ಭಾವಿಮನಿ, ರಮೇಶ ಬೆಲೇರಿ, ನಾರಾಯಣ ಗಂಗಾಖೇಡ, ಯಂಕಣ್ಣ ಜೋಶಿ, ಶಿವಕುಮಾರ ಸರಗಣಾಚಾರ,ರವಿ ತಾಳಿಕೋಟಿ ಸೇರಿದಂತೆ ಮತ್ತಿತರರಿದ್ದರು.

ಮುಂಗಾರು ಬಿತ್ತನೆಗೆ ಸಜ್ಜಾದ ರೈತರಿಗೆ ಬೀಜ ವಿತರಣೆ

◆ **ಹನುಮಸಾಗರ:** ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಸೋಮವಾರ ಆಯೋಜಿಸಿದ್ದ ಬೀಜ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿ, ಅವರು, ಉತ್ತಮ ಇಳುವರಿ ಪಡೆಯಲು ಪ್ರಮಾಣಿತ ಹಾಗೂ ಗುಣಮಟ್ಟದ ಬೀಜಗಳ ಬಳಕೆ ಅಗತ್ಯವಾಗಿದೆ ಎಂದು ಹೇಳಿದರು.



ಮುಂಗಾರು ಬಿತ್ತನೆಗೆ ರೈತರು ಈಗಾಗಲೇ ತಮ್ಮ ಜಮೀನುಗಳನ್ನು ಸಿದ್ದಪಡಿಸಿಕೊಂಡಿದ್ದು, ಅಗತ್ಯ ಬೀಜಗಳನ್ನು ಮುಂಚಿತವಾಗಿ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಬೀಜ ವಿತರಣೆಯ ವೇಳೆ ರೈತರುತಮ್ಮ ಜಮೀನಿನ ಎಫ್ಐಡಿ (ಈಚಿಡಿಟ ಖಆ) ನೋಂದಣಿಯನ್ನು ಕಡ್ಡಾಯವಾಗಿ ಮಾಡಿಸಿಕೊಂಡಿರಬೇಕು. ಇದರಿಂದ ಸರ್ಕಾರದ ವಿವಿಧ ಯೋಜನೆಗಳ ಪ್ರಯೋಜನಗಳನ್ನು ಸುಲಭವಾಗಿ ಪಡೆಯಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.ಪ್ರಸ್ತುತ ರೈತ ಸಂಪರ್ಕ ಕೇಂದ್ರದಲ್ಲಿ ತೊಗರಿ 60 ಕ್ವಿಂಟಾಲ್, ಮೆಕ್ಕೆಜೋಳ 45 ಕ್ವಿಂಟಾಲ್, ಹೆಸರು 5 ಕ್ವಿಂಟಾಲ್, ಸೂರ್ಯಕಾಂತಿ 5 ಕ್ವಿಂಟಾಲ್ ಹಾಗೂ ಸಜ್ಜೆ 3 ಕ್ವಿಂಟಾಲ್ ಬೀಜಗಳು ಲಭ್ಯವಿದ್ದು, ರೈತರ ಬೇಡಿಕೆಗೆ ಅನುಗುಣವಾಗಿ ಇನ್ನಷ್ಟು ಬೀಜಗಳನ್ನು ತರಿಸಲಾಗುವುದು ಎಂದು ಹೇಳಿದರು. ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳು ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ರೈತರಿಗೆ ಗುಣಮಟ್ಟದ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದ್ದು, ರೈತರು ಸರ್ಕಾರದ ಈ ಸೌಲಭ್ಯದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕೃಷಿ ಅಧಿಕಾರಿ ಆಕಾಶ ದಾನಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಕೃಷಿ ಅಧಿಕಾರಿ ವೀರೇಶ ಪಟ್ಟೇದ, ಸಹಾಯಕ ಕೃಷಿ ಅಧಿಕಾರಿ ಮಹಾನಂದಿ ಹಡಪದ, ಲೆಕ್ಕ ಸಹಾಯಕ ಅಂದಾನಗೌಡ ಹುಗ್ಗಿ, ಭೀಮಸೇನ ಉಸಲಕೊಪ್ಪ, ಸಂಜೀವಿನಿ ಯೋಜನೆಯ ತಾಂತ್ರಿಕ ಸಹಾಯಕ ನಜೀರ ಹುನಗುಂದ, ಶರಣಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಲಿಂಗನಬಂಡಿ ಗ್ರಾಮದಲ್ಲಿ ಸ್ವಚ್ಛತೆ ಮಾಯ ವರದಿಗೆ ಪಿಡಿಒ ಸ್ಪಂದನೆ

◆ **ಯಲಬುರ್ಗಾ:** ತಾಲೂಕಿನ ಲಿಂಗನಬಂಡಿ ಗ್ರಾಮದಲ್ಲಿ ತ್ಯಾಜ್ಯದಿಂದ ತುಂಬಿ ದುರ್ವಾಸನೆ ಬೀರುತ್ತಿದ್ದು, ಸ್ವಚ್ಛತೆಗೆ ಆದ್ಯತೆ ನೀಡಬೇಕಾದ ಗ್ರಾಪಂ ಆಡಳಿತ ಮೌನವಹಿಸಿದ್ದು, ಗ್ರಾಮಸ್ಥರು ಹಿಡಿಶಾಪ ಹಾಕುತ್ತಿದ್ದಾರೆ.



ಹಿರೇಅರಳಹಳ್ಳಿ ಗ್ರಾಮದಲ್ಲಿ ಗ್ರಾಪಂನ ಕೇಂದ್ರ ಸ್ಥಾನ ಹೊಂದಿದೆ. ಗ್ರಾಮದಲ್ಲಿ 2500ಕ್ಕೂ ಹೆಚ್ಚು ಜನರು ವಾಸಿಸುತ್ತಿದ್ದಾರೆ. ಗ್ರಾಮದಲ್ಲಿ ಸ್ವಚ್ಛತೆ ಮರೀಚಿಕೆಯಾಗಿದ್ದು, ಎಲ್ಲಿ ನೋಡಿದರಲ್ಲಿ ತ್ಯಾಜ್ಯ ಕಾಣುತ್ತಿದೆ. ಚರಂಡಿಗಳು ತ್ಯಾಜ್ಯದಿಂದ ತುಂಬಿವೆ. ಗ್ರಾಮದ ಬೀದಿಗಳ ಸಿಸಿ ರಸ್ತೆಯಲ್ಲಿ ನೀರು ಹರಿದು ಹೋಗುವ ಹರಿಯಲ್ಲಿ ಕಸ ಕಡ್ಡಿ, ಪ್ಲಾಸ್ಟಿಕ್ ತ್ಯಾಜ್ಯ ತುಂಬಿತುಳುಕುತ್ತಿದೆ.

ದಿಗಂತ ವರದಿ ಪರಿಣಾಮ

ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯದೆ ರಸ್ತೆ ಕೆಲವೆಡೆ ನೀರು ಪಾಚಿಕಟ್ಟಿದ್ದು, ರಸ್ತೆ ಮೇಲೆ ನೀರು ಹರಿಯುವುದರಿಂದ ಜನರು ಸಂಚರಿಸಲು ತೊಂದರೆ ಅನುಭವಿಸುತ್ತಿದ್ದಾರೆ. ರೋಗದ ಭೀತಿಯಲ್ಲಿ ಗ್ರಾಮಸ್ಥರು: ಗ್ರಾಮದ ಚರಂಡಿಗಳು ತ್ಯಾಜ್ಯದಿಂದ ತುಂಬಿ ದುರ್ವಾಸನೆ ಬೀರುತ್ತಿರುವುದರಿಂದ ಸೊಳ್ಳೆಗಳು ಹೆಚ್ಚಾಗಿವೆ. ಇವುಗಳ ಕಡಿತದಿಂದ ಜನರು ನೆಮ್ಮದಿಯಿಂದ ಜೀವಿಸಲು ಆಗುತ್ತಿಲ್ಲ. ಗ್ರಾಮದಲ್ಲಿ ಡೆಂಗೆ. ಚಿಕೂನ್ ಗುನ್ಯಾ, ಮಲೇರಿಯಾ ಹರಡುವ ಭಯ ಕಾಡುತ್ತಿದೆ. ಗ್ರಾಮದ ಸ್ವಚ್ಛತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂಬುವದು ಗ್ರಾಮಸ್ಥರ ಒತ್ತಾಯವಾಗಿದೆ.

ಆದರೆ ಮೇ,26,2026 ರಂದು ಹೊಸದಿಗಂತ ಪತ್ರಿಕೆಯು ಈಸಮಸ್ಯೆಯನ್ನು ವಿಶೇಷ ವರದಿಯಾಗಿ ಪ್ರಕಟಿಸಿತ್ತು.ಈ ವರದಿ ಸಾರ್ವಜನಿಕ ಸಮಸ್ಯೆಯನ್ನು ಬೆಳಕಿಗೆ ತಂದಿತ್ತು.ಪತ್ರಿಕೆಯ ಈ ಜವಾಬ್ದಾರಿಯುತ ನಡೆಗೆ ಸ್ಪಂದಿಸಿದ ಗ್ರಾಪಂ ಪಿಡಿಒ ಬಸವರಾಜ ಯರಗೇರ ತಕ್ಷಣ ಕ್ರಮಕೈಗೊಂಡು ಕಸದ ವಿಲೇವಾರಿ ವಾಹನ ಸಮ್ಮೇತ ಪೌರಕಾರ್ಮಿಕರನ್ನು ಕರೆಸಿ ಸ್ವಚ್ಛತೆ ಪ್ರಾರಂಭಿಸಿದರು. ಚರಂಡಿ ಸ್ವಚ್ಛತೆ ಹಾಗೂ ಮಲಿನ ನೀರು ರಸ್ತೆಯ ಮೇಲೆ ಹರಿಯದಂತೆ ವ್ಯವಸ್ಥೆ ಸರಿಪಡಿಸಿದರು.


ಲಿಂಗನಬಂಡಿ ಗ್ರಾಮದಲ್ಲಿ ಸ್ವಚ್ಛತೆ ಮಾಯ

ಶಿವಮೂರ್ತಿ ಇಟಗಿ

ಲಿಂಗನಬಂಡಿ ಗ್ರಾಮದ ಮುಖ್ಯ ರಸ್ತೆಯ ಬದಿ ತಿಪ್ಪೆಯಿಂದ ತುಂಬಿರುವುದು. ಗ್ರಾಮದ ಸ್ವಚ್ಛತೆಗಾಗಿ ಎರಡೂರು ದಿನಗಳಲ್ಲಿ ಚರಂಡಿ ಸ್ವಚ್ಛಗೊಳಿಸಲಾಗುತ್ತದೆ. ಸಾರ್ವಜನಿಕರಿಗೆ ಯಾವ ತೊಂದರೆಯಾಗದಂತೆ ತ್ವರಿತಗತಿಯಲ್ಲಿ ಸ್ವಚ್ಛತೆಗೆ ಕ್ರಮಕೈಗೊಳ್ಳುತ್ತೇನೆ.

■ ಬಸವರಾಜ ಯರಗೇರಾ, ಹಿರೇಅರಳಹಳ್ಳಿ ಗ್ರಾಪಂ ಪಿಡಿಒ

ಪತ್ರಿಕೆ ವಿಶೇಷ ವರದಿ ಪರಿಣಾಮವಾಗಿ ಸಮಸ್ಯೆಗೆ ಪರಿಹಾರ ಸಿಕ್ಕಿರುವುದರಿಂದ ಸಾರ್ವಜನಿಕರು ಸಂತೋಷ ವ್ಯಕ್ತಪಡಿಸಿದ್ದು,ತಮ್ಮ ಸಮಸ್ಯೆಗೆ ನ್ಯಾಯ ಒದಗಿಸಿದ ಹೊಸದಿಗಂತ ಪತ್ರಿಕೆಗೆ ಹೃತ್ಪೂರ್ವ ಕೃತಜ್ಞತೆ ಸಲ್ಲಿಸಿದ್ದಾರೆ. ಈ ಘಟನೆ ಪತ್ರಿಕಾ ಶಕ್ತಿಯ ಮಹತ್ವವನ್ನು ಮತ್ತೋಮ್ಮೆ ಸಾಬೀತು ಪಡಿಸಿದ್ದು,ಸಾರ್ವಜನಿಕ ಹಿತಾಸಕ್ತಿಗಾಗಿ ಮಾಧ್ಯಮಗಳ ಎಷ್ಟು ಪರಿಣಾಮಕಾರಿಯಾಗಿರಬಹುದು ಎಂಬುದಕ್ಕೆ ಈ ವರದಿಯೇ ಸಾಕ್ಷಿಯಾಗಿದೆ.

ಸುಸಜ್ಜಿತ ಆಡಳಿತ ಕಚೇರಿ ಮರುನಿರ್ಮಾಣಕ್ಕೆ ಆಗ್ರಹಿಸಿ ಪ್ರತಿಭಟನೆ

◆ **ಕಲಬುರಗಿ:** ಎಪಿಎಂಸಿ ಮುಖ್ಯ ಪ್ರಾಂಗಣದಲ್ಲಿ ನೆಲಸಮಗೊಳಿಸಲಾದ ಹಳೆ ಆಡಳಿತ ಕಚೇರಿ ಜಾಗದಲ್ಲೇ ಹೊಸ ಸುಸಜ್ಜಿತ ಗಣಕೀಕೃತ ಟೆಂಡರ್ ಹಾಲ್ ಹಾಗೂ ಸಮಿತಿ ಆಡಳಿತ ಕಚೇರಿ ಮರುನಿರ್ಮಾಣ ಮಾಡಬೇಕೆಂದು ಆಗ್ರಹಿಸಿ ಆಹಾರ ಧಾನ್ಯ ಮತ್ತು ಬೀಜ ವ್ಯಾಪಾರಿಗಳ ಸಂಘದ ನೇತೃತ್ವದಲ್ಲಿ ಇತ್ತೀಚಿಗೆ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಗಂಜ್ ಪ್ರದೇಶದ ಹನುಮಾನ ಮಂದಿರದಿಂದ ಎಪಿಎಂಸಿ ಕಚೇರಿಯವರೆಗೆ ಬೃಹತ್ ರ್‍ಯಾಲಿ ನಡೆಸಿದ ಪ್ರತಿಭಟನಾಕಾರರು, ಎಲ್ಲಾ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ ಜಿಲ್ಲಾಡಳಿತದ ವಿರುದ್ಧ ತೀವ್ರ ಆಕ್ರೋಶ ಹೊರಹಾಕಿದರು. ಬಳಿಕ ಕೃಷಿ ಮಾರಾಟ ಮಂಡಳಿ ನಿರ್ದೇಶಕರಿಗೆ ಮನವಿ ಸಲ್ಲಿಸಲಾಯಿತು.

ನೆಲಸಮಗೊಳಿಸಲಾದ ಜಾಗದಲ್ಲಿ ಮಾಜಿ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರು ಅವರ ಪ್ರತಿಮೆ ಅನಾವರಣಗೊಳಿಸಲು ಸಕಲ ಸಿದ್ಧತೆಗಳು ನಡೆಯುತ್ತಿರುವುದಕ್ಕೆ ವರ್ತಕರು ತೀವ್ರ ವಿರೋಧ ವ್ಯಕ್ತಪಡಿಸಿದರು. ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಮೂರ್ತಿ ಅಥವಾ ಪ್ರತಿಮೆ ಸ್ಥಾಪಿಸಬಾರದು ಎಂಬ ಸುಪ್ರೀಂ ಕೋರ್ಟ್‌ನ ಕಡ್ಡಾಯ ಆದೇಶವಿದ್ದರೂ, ಅದನ್ನು ಧಿಕ್ಕರಿಸಿ ಪ್ರತಿಮೆ ಸ್ಥಾಪಿಸುವುದು ನ್ಯಾಯಾಲಯದ ನಿಂದನೆಯಾಗುತ್ತದೆ. ಈ ಜಾಗದಲ್ಲಿ ಯಾವುದೇ ಮೂರ್ತಿ ಸ್ಥಾಪನೆ ಬೇಡ. ಒಂದು ವೇಳೆ ನಿಯಮ ಮೀರಿ ಪ್ರತಿಮೆ ಸ್ಥಾಪನೆಗೆ ಮುಂದಾದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸಂಘದ ಅಧ್ಯಕ್ಷ ಸಂತೋಷ ಲಂಗರ, ಗೌರವ ಕಾರ್ಯದರ್ಶಿ ಬಸವರಾಜ ಎಚ್. ತಡಕಲ್, ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಎಂ.ಎಸ್.ಪಾಟೀಲ ನರಿಬೋಳ, ಗಂಜ್ ಅಸೋಸಿಯೇಷನ್ ಮಾಜಿ ಅಧ್ಯಕ್ಷ ಶ್ರೀಮಂತ ಉದನೂರ, ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ ಲಕ್ಷ್ಮೀಕಾಂತ ಸ್ವಾದಿ, ರಾಮಸೇನೆ ಜಿಲ್ಲಾಧ್ಯಕ್ಷ ಮಹೇಶ ಕೆಂಬಾವಿ, ಬಹುಜನ ಪಾರ್ಟಿ ರಾಜ್ಯ ಕಾರ್ಯದರ್ಶಿ ಹುಚ್ಚೇಶ್ವರ ವಠಾರ ಸೇರಿದಂತೆ ನೂರಾರು ವರ್ತಕರು, ರೈತರು ಭಾಗವಹಿಸಿದ್ದರು.



ಎಪಿಎಂಸಿ ಆಡಳಿತ ಕಚೇರಿ ಜಾಗದಲ್ಲಿ ಪಾಲಿಕೆಯು ನೆಹರು ಮೂರ್ತಿ ಸ್ಥಾಪಿಸಲು ಮುಂದಾಗಿರುವುದಕ್ಕೆ ನಮ್ಮ ತೀವ್ರ ವಿರೋಧವಿದೆ. ಐದು ಕೋಟಿ ರೂ. ವೆಚ್ಚದಲ್ಲಿ ಹೊಸ ಕಟ್ಟಡದ ನೀಲಿನಕ್ಷೆ ಸಿದ್ಧವಾಗಿದೆ. ಸಾವಿರಾರು ರೈತರು, ವರ್ತಕರ ಹಿತದೃಷ್ಟಿಯಿಂದ ಇಲ್ಲಿ ಮೂರ್ತಿ ಬೇಡ, ಆಡಳಿತ ಕಚೇರಿಯನ್ನೇ ನಿರ್ಮಿಸಬೇಕು.

■ **ಸಂತೋಷ ಲಂಗರ,** ಅಧ್ಯಕ್ಷ ಆಹಾರ ಧಾನ್ಯ ಮತ್ತು ಬೀಜ ವ್ಯಾಪಾರಿಗಳ ಸಂಘ

ಕಿರುಸುದ್ದಿ

ಬಿತ್ತನೆ ಬೀಜಗಳ ವಿತರಣೆ



ಕುರುಗೋಡು: ತಾಲೂಕಿನಾದ್ಯಂತ ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳು ಚುರುಕುಗೊಂಡಿದ್ದು, ರೈತರ ಅನುಕೂಲಕ್ಕಾಗಿ ಸ್ಥಳೀಯ ರೈತ ಸಂಪರ್ಕ ಕೇಂದ್ರದಲ್ಲಿ ರಿಯಾಯಿತಿ ದರದಲ್ಲಿ ಗುಣಮಟ್ಟದ ಬಿತ್ತನೆ ಬೀಜಗಳ ವಿತರಣೆ ಪ್ರಾರಂಭಿಸಲಾಗಿದೆ ಎಂದು ಕೃಷಿ ಅಧಿಕಾರಿ ದೇವರಾಜ ತಿಳಿಸಿದರು.ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ರೈತರಿಗೆ ಬಿತ್ತನೆ ಬೀಜ ವಿತರಣೆ ಸಂದರ್ಭದಲ್ಲಿ ಅವರು ಮಾತನಾಡಿ, ಮುಂಗಾರು ಹಂಗಾಮಿಗೆ ಸೂಕ್ತವಾದ ಸೂರ್ಯಕಾಂತಿ, ತೊಗರಿ, ಭತ್ತ ಮತ್ತು ಸಿರಿಧಾನ್ಯವಾದ ಸಜ್ಜೆ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ. ಬಿತ್ತನೆ ಬೀಜಗಳನ್ನು ಪಡೆಯಲು ಬಯಸುವ ರೈತರು ತಮ್ಮ ಆಧಾರ್ ಕಾರ್ಡ್ ಪ್ರತಿ, ಇತ್ತೀಚಿನ ಪಹಣಿ ಮತ್ತು ಫ್ರೂಟ್ಸ್ ಐಡಿ ಸಂಖ್ಯೆಯನ್ನು ತರಬೇಕು. ಅಲ್ಲದೆ ಕೃಷಿ ಇಲಾಖೆಯಿಂದ ವಿತರಿಸಲಾಗುವ ಈ ಬೀಜಗಳು ಉತ್ತಮ ಮೊಳಕೆ ಸಾಮರ್ಥ್ಯ ಹೊಂದಿದ್ದು, ಅಧಿಕ ಇಳುವರಿ ನೀಡಲು ಸಹಕಾರಿಯಾಗಿವೆ. ರೈತರು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆ ಕೊಟ್ಟು ಬೀಜಗಳನ್ನು ಖರೀದಿಸುವ ಬದಲು ಸರ್ಕಾರದ ಈ ಸೌಲಭ್ಯವನ್ನು ಬಳಸಿಕೊಳ್ಳಬೇಕು ಎಂದು ಮಾಹಿತಿ ನೀಡಿದರು. ವೇಳೆ ಕೇಂದ್ರದ ತಾಂತ್ರಿಕ ವ್ಯವಸ್ಥಾಪಕ ಸಿದ್ದಮ್ಮನಹ ಹಳ್ಳಿ ಹನುಮಂತರೆಡ್ಡಿ. ಮಲ್ಲಪ್ಪ ಮುಸ್ಟಗಟ್ಟಿ, ಸಹಾಯಕ ರೇಣುಕಾರಾಧ್ಯ ರೈತರು ಇದ್ದರು.

ವಸ್ತ್ರ ಸಂಹಿತೆ ಎಲ್ಲರ ಭಾವನೆಗೆ ಪೂರಕವಾಗಿರಲಿ

ಹೂವಿನಹಡಗಲಿ: ರಾಜ್ಯ ಸರ್ಕಾರ ಜಾರಿಗೊಳಿಸುವ ವಸ್ತ್ರ ಸಂಹಿತೆ ಎಲ್ಲ ಜನಾಂಗದ ಭಾವನೆಗಳಿಗೆ ಪೂರಕವಾಗಿರಬೇಕು. ಯಾವುದೇ ಒಂದು ಧರ್ಮವನ್ನು ಗುರಿಯಾಗಿಸಿಕೊಂಡು ಅಥವಾ ಹೊಣೆಹೊಲಿಸುವ ರೀತಿಯಲ್ಲಿ ನಿಯಮ ರೂಪಿಸಬಾರದು ಎಂದು ವಿಜಯನಗರ ಜಿಲ್ಲಾ ಬಿಜೆಪಿ ಪಕ್ಷದ ಮುಖಂಡ ಎಂ.ಬಿ.ಬಸವರಾಜ ಹೇಳಿದರು.

ಅವರು ಭಾನುವಾರ ನಮ್ಮ ಪತ್ರಿಕಾ ಪ್ರತಿನಿಯೊಂದಿಗೆ ಮಾತನಾಡಿ, ರಾಜ್ಯದಲ್ಲಿ ಎಲ್ಲ ಧರ್ಮಗಳ ಜನರು ಸಹಬಾಳ್ವೆಯಿಂದ ಬದುಕುತ್ತಿದ್ದು, ವಸ್ತ್ರ ಸಂಹಿತೆ ಹೆಸರಿನಲ್ಲಿ ಸಮಾಜದಲ್ಲಿ ಭಿನ್ನಾಭಿಪ್ರಾಯ ಉಂಟಾಗುವಂತ ಕ್ರಮ ತಪ್ಪಿಸಬೇಕು. ಅಭಿವೃದ್ಧಿ ಎಂದರೆ ಕೇವಲ ಜನರಿಗೆ ಉಚಿತ ಯೋಜನೆಗಳು ನೀಡುವುದಲ್ಲ. ಶಿಕ್ಷಣ, ಆರೋಗ್ಯ ಹಾಗೂ ಮೂಲಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಿ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಸರ್ಕಾರವೇ ಜನಪರ ಸರ್ಕಾರವಾಗಿರಬೇಕು. ಆದರೆ ಪ್ರಸ್ತುತ ರಾಜ್ಯ ಸರ್ಕಾರದಲ್ಲಿ ಅದು ಕಾಣಿಸುತ್ತಿಲ್ಲ ಎಂದರು. ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಆರ್ಥಿಕ ಸಮತೋಲನವನ್ನು ಗಮನದಲ್ಲಿಟ್ಟು ಯೋಜನೆಗಳನ್ನು ಜಾರಿಗೊಳಿಸಬೇಕು ಎಂದು ಬಸವರಾಜ ಆಗ್ರಹಿಸಿದರು.

ಕಸ ವಿಂಗಡಣೆ ಕಡ್ಡಾಯ

ವಿಜಯನಗರ: ನಗರದ ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆಗಾಗಿ ಹೊಸಪೇಟೆ ನಗರಸಭೆ ಘನತ್ಯಾಜ್ಯ ವಸ್ತುಗಳ(ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮ ಕಡ್ಡಾಯವಾಗಿ ಜಾರಿಗೊಳಿಸಿದೆ.



ಸಾರ್ವಜನಿಕರು ಹಾಗೂ ಉದ್ದಿಮೆದಾರರು ಇನ್ನು ಮುಂದೆ ಕಸವನ್ನು ಕಡ್ಡಾಯವಾಗಿ ವಿಂಗಡಿಸಿ ನೀಡಬೇಕಾಗಿದ್ದು, ನಿಯಮ ಉಲ್ಲಂಘಿಸಿದರೆ ದಂಡ ತೆರಬೇಕಾಗುತ್ತದೆ ಎಂದು ನಗರಸಭೆ ಪೌರಾಯುಕ್ತ ಯರಗುಡಿ ಶಿವಕುಮಾರ ಎಚ್ಚರಿಸಿದ್ದಾರೆ. ಪ್ರತಿಯೊಬ್ಬ ನಾಗರಿಕರು, ವ್ಯಾಪಾರಸ್ಥರು, ಕಲ್ಯಾಣ ಮಂಟಪ, ಬಾರ್ ಮತ್ತು ರೆಸ್ಟೋರೆಂಟ್‌ಗಳ ಮಾಲೀಕರು ತಮ್ಮಲ್ಲಿ ಉತ್ಪತ್ತಿಯಾಗುವ ಕಸವನ್ನು ಕಡ್ಡಾಯವಾಗಿ ಹಸಿ ತ್ಯಾಜ್ಯ, ಒಣ ತ್ಯಾಜ್ಯ, ಸ್ಯಾನಿಟರಿ ತ್ಯಾಜ್ಯ ಮತ್ತು ಸ್ಪೆಷಲ್ ಕೇರ್ ವೇಸ್ಟ್ ಎಂಬುದಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಬೇಕು. ವಿಂಗಡಿಸಿದ ತ್ಯಾಜ್ಯವನ್ನು ನಗರಸಭೆ ಕಸದ ವಾಹನಗಳಿಗೆ ನೀಡಬೇಕು. ಘನತ್ಯಾಜ್ಯ ವಸ್ತುಗಳ ವ್ಯವಸ್ಥಾಪನೆ ಮತ್ತು ನಿರ್ವಹಣೆ ನಿಯಮಗಳು-2026ರ ಪ್ರಕಾರ, ಮೂಲದಲ್ಲಿಯೇ ಕಸ ವಿಂಗಡಿಸದೆ ನಿರ್ಲಕ್ಷ್ಯ ವಹಿಸುವವರ ವಿರುದ್ಧ ದಂಡ ವಿಸಲಾಗುವುದು. ಜಿಲ್ಲೆಯನ್ನು ಸುಂದರ ಮತ್ತು ಸ್ವಚ್ಛ ನಗರವಾಗಿಸಲು ಸಾರ್ವಜನಿಕರು ಹಾಗೂ ಬೃಹತ್ ತ್ಯಾಜ್ಯ ಉತ್ಪಾದಕರು ನಗರಸಭೆಯೊಂದಿಗೆ ಕೈಜೋಡಿಸಿ, ಕಸ ವಿಂಗಡಣೆ ಕಡ್ಡಾಯವಾಗಿ ಪಾಲಿಸಬೇಕು ಎಂದು ಪೌರಾಯುಕ್ತ ಶಿವಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವಿಜಯನಗರ: ಬಲ್ದೋಟ ಸಮೂಹದ ಎಂಎಸ್‌ಪಿಎಲ್, ಶಂಕರ ಆನಂದ ಸಿಂಗ್ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಘಟಕದ ಸಹಯೋಗದಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಯಿತು. ಶ್ರಮದಾನದಲ್ಲಿ ಕಾಲೇಜಿನ ಒಟ್ಟು 78 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಪ್ರಾಚಾರ್ಯ ವೀರಭದ್ರಪ್ಪ ತಂಬ್ರಳ್ಳಿ, ಎನ್‌ಎಸ್‌ಎಸ್ ಸಂಯೋಜಕ ಮಲ್ಲಿಕಾರ್ಜುನ ಕಪ್ಪಿ, ವೀರೇಶ್ ಹಳೆಮನೆ, ಎಂಎಸ್‌ಪಿಎಲ್ ಸಂಸ್ಥೆಯ ಅಶ್ವಿನ್ ಕುಮಾರ್, ಸಿಎಸ್‌ಆರ್ ಜನರಲ್ ಮ್ಯಾನೇಜರ್ ರವಿ ಕೆ. ಬಿಸಗುಪ್ಪಿ, ಬಿ.ಎಂ. ನಾಗರಾಜ್, ಕೃಷ್ಣರಾವ್ ಹಾಗೂ ಕಾಲೇಜಿನ ಸಿಬ್ಬಂದಿ ವರ್ಗ ಸೇರಿದಂತೆ ಇತರರಿದ್ದರು.

ಶಿರಿಗೇರಿ ಪೊಲೀಸ್ ತಂಡಕ್ಕೆ ಪ್ರಥಮ ಸ್ಥಾನ

ಕುರುಗೋಡು: ಸಮೀಪದ ಶಿರಿಗೇರಿ ಗ್ರಾಮದಲ್ಲಿ 4 ನೇ ವರ್ಷದ ಶಿರಿಗೇರಿ ಪ್ರಿಮಿಯಾರ್ ಲೀಗ್ ನ 15 ದಿನಗಳಿಂದ 8 ತಂಡಗಳು ಕ್ರಿಕೆಟ್ ಪಂದ್ಯಾವಳಿಗಳು ಸರ್ಕಾರಿ ಬಾಲಕರ ಪ್ರೌಢ ಶಾಲೆಯಲ್ಲಿ ಜರುಗಿದವು. ಫೈನಲ್ ಪಂದ್ಯದಲ್ಲಿ ಮುದ್ದಟ್ಟನೂರು ದೋಸ್ತಿ ವಾರಿಯರ್ಸ್ ವಿರುದ್ಧ ಪೊಲೀಸ್ ತಂಡಕ್ಕೆ ವಿಜಯ ಗಳಿಸಿ ಪ್ರಥಮ ಸ್ಥಾನಗಳಿಸಿದ್ದಾರೆ.ಪೊಲೀಸ್ ತಂಡಕ್ಕೆ ಬಳ್ಳಾರಿ ಬುಡಾ ಮಾಜಿ ಅಧ್ಯಕ್ಷರಾದ ಪಾಲಣ್ಣ ಬಹುಮಾನ ವಿತರಿಸಿದರು.ನಂತರ ಮಾತನಾಡಿದ ಅವರು, ಸಿರಿಗೇರಿ ಗ್ರಾಮದ ಜನರು ಎಂದಿಗೂ ಒಳ್ಳೆಯ ಜನರಿದ್ದಾರೆ. ನಾನು ಗ್ರಾಮಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಕ್ರೀಡೆಯನ್ನು ಕ್ರೀಡಾ ಮನೋಭಾವದಿಂದ ಆಡಿ ಎಂದು ಸಲಹೆ ನೀಡಿದರು.ಮೊದಲನೇ ಬಹುಮಾನ ಯುವ ಮುಖಂಡ ಆರೀಫ್ 21000 ಟ್ರೋಫಿ, ಮೆಡಲ್ ಗಳನ್ನು, ದ್ವಿತೀಯ ಬಹುಮಾನವನ್ನು ಬಿಚ್ಚುಗತ್ತಿ ಮಲ್ಲಯ್ಯ 11000 ಟ್ರೋಫಿ, ಮೆಡಲ್ ನೀಡಿದ್ದಾರೆ. ಪಂದ್ಯ ಶ್ರೇಷ್ಠ, ಬೆಸ್ಟ್ ಬ್ಯಾಟ್ಸಮನ್, ಬೆಸ್ಟ್ ಬೌಲರ್, ಅತ್ಯುತ್ತಮ ಆಯೋಜಕ ಎಂದು ವಿಶೇಷ ಟ್ರೋಪಿ ನೀಡಲಾಯಿತು. ಪಂದ್ಯದ ಆಯೋಜಕ ಪಾಲಣ್ಣ ಟೈಗರ್ಸ್ ತಂಡದ ಚಾನಾಳ್ ರಾಘು, ಎನ್.ಶ್ರೀ ರಾಮ, ಲತೀಫ್, ಮೋಹನ್, ಹರೀಶ್, ರಿಜ್ಜು, ಗುರುದೇವ, ಪ್ರಮುಖರಾದ ಸೀನ ಅಡಿವೆಯ್ಯ ಸ್ವಾಮಿ, ಬಿಚ್ಚುಗತ್ತಿ ಮಲ್ಲಯ್ಯ, ಭಜಂತ್ರಿ ರಮೇಶ, ಪಿಎಸ್‌ಐ ವೈ.ಶಶಿಧರ, ಗುರುದೇವ, ಪವಾಡಿ ನಾಯಕ್, ಗುಜರಿ ಮೌಲಾಸಾಬ್, ಗುಡಟ್ಟಿ ಈರಣ್ಣ, ವಿ.ಹನುಮೇಶ, ವಕೀಲ ರಾಮಬಾಬು ಇತರರಿದ್ದರು.



ಕುರುಗೋಡು: ಸಮೀಪದ ಶಿರಿಗೇರಿ ಗ್ರಾಮದಲ್ಲಿ 4ನೇ ವರ್ಷದ ಶಿರಿಗೇರಿ ಪ್ರಿಮಿಯಾರ್ ಲೀಗ್‌ನ 15 ದಿನಗಳಿಂದ 8 ತಂಡಗಳು ಕ್ರಿಕೆಟ್ ಪಂದ್ಯಾವಳಿಗಳು ಸರ್ಕಾರಿ ಬಾಲಕರ ಪ್ರೌಢ ಶಾಲೆಯಲ್ಲಿ ಜರುಗಿದವು. ಫೈನಲ್ ಪಂದ್ಯದಲ್ಲಿ ಮುದ್ದಟ್ಟನೂರು ದೋಸ್ತಿ ವಾರಿಯರ್ಸ್ ವಿರುದ್ಧ ಪೊಲೀಸ್ ತಂಡಕ್ಕೆ ವಿಜಯ ಗಳಿಸಿ ಪ್ರಥಮ ಸ್ಥಾನಗಳಿಸಿದ್ದಾರೆ.

ಬಿಡಿಸಿಸಿಐನ ಸೇವೆ ಶ್ಲಾಘನೀಯ: ಗಾದೆಪ್ಪ

ಬಳ್ಳಾರಿ: ಸರ್ಕಾರ ಆಯೋಜಿಸಬೇಕಾಗಿರುವ ಕೃಷಿ ಮೇಳವನ್ನು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ಆಯೋಜಿಸಿರುವುದು ಅತ್ಯಂತ ಶ್ಲಾಘನೀಯ ಎಂದು ಮಹಾನಗರ ಪಾಲಿಕೆ ಮೇಯರ್ ಪಿ. ಗಾದೆಪ್ಪ ಅವರು ಹೇಳಿದರು.

ನಗರದ ಎಪಿಎಂಸಿ ಆವರಣದಲ್ಲಿ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೇತೃತ್ವದಲ್ಲಿ ಜಿಲ್ಲಾಡಳಿತ, ವಿವಿಧ ಇಲಾಖೆಗಳು, ಬಳ್ಳಾರಿ ಎಪಿಎಂಸಿ ದಲ್ಲಾಲಿ ವರ್ತಕರ ಸಂಘ, ಬಳ್ಳಾರಿ ಎಪಿಎಂಸಿ ವರ್ತಕರ ಸಂಘ, ಹತ್ತಿ ಬೆಳೆಗಾರರು ಮತ್ತು ರೈತ ಸಮೂಹಗಳ ಸಹಕಾರದೊಂದಿಗೆ ಮಂಗಳವಾರ ಆಯೋಜಿಸಿದ್ದ 'ಗುಣಮಟ್ಟದ ಬೀಜ ಮತ್ತು ವೈಜ್ಞಾನಿಕ ಬಿತ್ತನೆ' ವಿಷಯದ ಕೃಷಿ ಮೇಳಕ್ಕೆ ಚಾಲನೆ ನೀಡಿ ಮಾತನಾಡಿ, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಸಹಕಾರದಲ್ಲಿ 'ರಾಸಾಯನಿಕ ಮುಕ್ತ' ಹಣ್ಣುಗಳು ಮತ್ತು ತರಕಾರಿ ಮಾರಾಟಕ್ಕೆ ಮಹಾನಗರ ಪಾಲಿಕೆಯು 'ರೈತ ಸಂತೆ'ಗಳನ್ನು ಏರ್ಪಡಿಸಲು ಉತ್ಸುಕವಾಗಿದೆ. ಈ ಕುರಿತು ಶೀಘ್ರದಲ್ಲೇ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದರು.

ಬಳ್ಳಾರಿ ಶಾಸಕ ನಾರಾ ಭರತ ರೆಡ್ಡಿ ಅವರು ಮಾತನಾಡಿ, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಜನಪರ ಕಾಳಜಿ-ಕಳಕಳಿ ಗಮನಾರ್ಹ. ಈ ಸಂಸ್ಥೆಯು ಎಲ್ಲ ಕ್ಷೇತ್ರಗಳಲ್ಲಿ ಗಮನಾರ್ಹವಾಗಿ ಸೇವೆ ಸಲ್ಲಿಸುತ್ತಿದೆ ಎಂದರು.

ಲಿಡ್ಕರ್ ಅಧ್ಯಕ್ಷ ಮುಂಡ್ರಗಿ ನಾಗರಾಜ, ಜಿಲ್ಲಾ ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ತುಂಗಭದ್ರ ರೈತ ಸಂಘದ ಅಧ್ಯಕ್ಷ ಡಾ.ಪುರುಷೋತ್ತಮ ಗೌಡ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಎಂ. ಸೋಮಸುಂದರ ಮಾತನಾಡಿದರು.

ಕೃಷಿ ವಿಜ್ಞಾನಿಗಳಾದ ಡಾ. ಎ.ಜಿ.ಶ್ರೀನಿವಾಸ, ಡಾ.ರವಿಶಂಕರ ಜಿ.ಡಾ.ಪಾಲಯ್ಯ, ಡಾ.ಎಂ. ಭೀಮಣ್ಣ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ, ಉಪನ್ಯಾಸ ನೀಡಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಅವ್ವಾರು ಮಂಜುನಾಥ್ ಅವರು ಸ್ವಾಗತಿಸಿದರು. ಡಾ.ಶ್ರೀನಿವಾಸ ರೆಡ್ಡಿ ಅವರು ಕಾರ್ಯಕ್ರಮ ನಿರೂಪಿಸಿದರು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ಸಿ. ಸುರೇಶಬಾಬು ವಂದಿಸಿದರು.

ಕೃಷಿ ಮತ್ತು ಆಧುನಿಕ-ವೈಜ್ಞಾನಿಕತೆಯನ್ನು ಒಟ್ಟಾಗಿ ಒಳವಡಿಸಿಕೊಂಡಿರುವ ಆದರ್ಶ ರೈತರಾಗಿರುವ ಕೆ.ಜೆ. ಜಯರಾಂ ಮತ್ತು ವದ್ದಟ್ಟಿಯ ಗಂಟ ಪಾಪಾರಾವ್ ಅವರನ್ನು ಈ ವೇಳೆ ಗೌರವಿಸಲಾಯಿತು.

ಬಳ್ಳಾರಿ ಜಿಲ್ಲಾ ಕಾಟನ್ ಅಸೋಸಿಯೇಷನ್ ನ ಡಿ. ತಿಪ್ಪೇಸ್ವಾಮಿ, ಕರ್ನಾಟಕ ರಾಜ್ಯ ಕೃಷಿ ಪರಿಕರಗಳ ಮಾರಾಟಗಾರರ ಸಂಘದ ಜಿಲ್ಲಾ ಘಟಕದ ಎಚ್. ತಿಮ್ಮನಗೌಡ, ರಾಜ್ಯ ಸಂಚಾಲಕ ಗಣಪಾಲ ಐನಾಥರೆಡ್ಡಿ, ಬಳ್ಳಾರಿ ಎಪಿಎಂಸಿ ವರ್ತಕರ ಸಂಘದ ಟಿ. ಚಿದಾನಂದಪ್ಪ, ಅಗ್ರಿ ಎಂಪ್ಲಾಯೀಸ್ ಅಸೋಸಿಯೇಷನ್ ನ ಕೆ.ಟಿ. ಚೌಹ್ವಾಣ್, ಬಳ್ಳಾರಿ ದಲ್ಲಾಲಿ ವರ್ತಕರ ಸಂಘ, ಬಿಡಿಸಿಸಿಐನ ಮಾಜಿ ಅಧ್ಯಕ್ಷ ಸಿ.ಶ್ರೀನಿವಾಸರಾವ್, ಬಿ.ಮಹಾರುದ್ರಗೌಡ, ಹಿರಿಯ ಉಪಾಧ್ಯಕ್ಷ ಎಸ್. ದೊಡ್ಡನಗೌಡ, ಉಪಾಧ್ಯಕ್ಷ ಸೊಂತ ಗಿರಿಧರ, ಪಿ.ಪಾಲಣ್ಣ, ಜಂಟಿ ಕಾರ್ಯದರ್ಶಿ ಡಾ.ಮರ್ಚೆಡ್ ಮಲ್ಲಿಕಾರ್ಜುನ ಗೌಡ, ವಿ.ರಾಮಚಂದ್ರ, ಖಜಾಂಚಿ ಸಿ.ಎಸ್. ಸತ್ಯನಾರಾಯಣ ಸೇರಿದಂತೆ ಇತರರಿದ್ದರು.



ಸಾಂಸ್ಕೃತಿಕ ನೃತ್ಯ ಪ್ರದರ್ಶನ

ಕಲಾಕ್ಷೇತ್ರ ತಂಡ, ಅವನಿ ಗಂಗಾವತಿ, ಅಭಿಷೇಕ್ ಮತ್ತು ಸಂಗಡಿಗರು ಸಾಂಸ್ಕೃತಿಕ ನೃತ್ಯಗಳನ್ನು ಪ್ರದರ್ಶಿಸಿದರು. ಕೃಷಿ ಮೇಳದ ನಿಮಿತ್ತ ನಗರದ ಶ್ರೀ ನಗರೇಶ್ವರ ದೇವಸ್ಥಾನದಿಂದ ಜೋಡೆತ್ತಿ ಬಂಡಿ, ಹಕ್ಕಿಪಿಕ್ಕಿ ತಂಡ, ಕೋಲಾಟ, ಡೊಳ್ಳು ಕುಣಿತ, ವೀರಭದ್ರ ಕುಣಿತ ಸೇರಿ ವಿವಿಧ ಕಲಾಪ್ರಕಾರಗಳ ಜಾಥಾ ಆಕರ್ಷಕವಾಗಿ ನಡೆಯಿತು.

ರಸಗೊಬ್ಬರ, ತೈಲ ಬೆಲೆ ಇಳಿಕೆಗೆ ಆಗ್ರಹ

ಸಿರುಗುಪ್ಪ: ರಸಗೊಬ್ಬರ ಬೆಲೆ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಿಂದ ರೈತರಿಗೆ ಉಂಟಾಗುತ್ತಿರುವ ಆರ್ಥಿಕ ಹೊರೆ ಕಡಿಮೆ ಮಾಡುವಂತೆ ಸಂಯುಕ್ತ ಕರ್ನಾಟಕ ಹೋರಾಟ ತಾಲೂಕು ಸಮಿತಿ ಒತ್ತಾಯಿಸಿದರು.

ನಗರದ ತಹಶೀಲ್ದಾರ್ ಕಚೇರಿಯಲ್ಲಿ ಉಪ ತಹಶೀಲ್ದಾರ್ ಯಕ್ಯೂಬ್ ಅವರಿಗೆ ಮಂಗಳವಾರ ಮನವಿ ಪತ್ರ ಸಲ್ಲಿಸಿದರು.

ಸಂಯುಕ್ತ ಕರ್ನಾಟಕ ಹೋರಾಟ ಸಮಿತಿಯ ತಾಲ್ಲೂಕು ಅಧ್ಯಕ್ಷ ವಿ.ಮಾರುತಿ ಮಾತನಾಡಿ, ಈಗಾಗಲೇ ಪೆಟ್ರೋಲ್, ಡೀಸೆಲ್ ಬೆಲೆ 10 ದಿನದಲ್ಲಿ 4ನೇ ಬಾರಿಗೆ ಏರಿಕೆಯಾಗಿದೆ. ಇದರ ನಡುವೆ ರಸಗೊಬ್ಬರದ ದರವೂ ಹೆಚ್ಚಳವಾಗಿದೆ. ಮುಂಗಾರು ಬಿತ್ತನೆಗೆ ಸಿದ್ಧತೆ ನಡೆಸುತ್ತಿರುವ ರೈತರಿಗೆ ರಸಗೊಬ್ಬರ ಮತ್ತು ತೈಲ ಬೆಲೆ ಏರಿಕೆ ತೀವ್ರ ಆಘಾತ ಉಂಟು ಮಾಡಿದೆ.

ಡೀಸೆಲ್ ಬೆಲೆ ನಿರಂತರವಾಗಿ ಏರಿಕೆ ಆಗುತ್ತಿರುವುದರಿಂದ ಟ್ರ್ಯಾಕ್ಟರ್ ಉಳುಮೆ, ನೀರಾವರಿ ಪಂಪ್ ಸೆಟ್ ಬಳಕೆ ಮತ್ತು ಬೆಳೆ ಸಾಗಾಣಿಕೆ ವೆಚ್ಚ ದುಪ್ಪಟ್ಟಾಗಿದೆ. ಹೀಗಾಗಿ ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಬಿತ್ತನೆ ಮಾಡುವುದೇ ಕಷ್ಟವಾಗಿದೆ. ಹೀಗಾಗಿ ರಸಗೊಬ್ಬರ ಬೆಲೆಯನ್ನು ಕೂಡಲೇ ಇಳಿಕೆ ಮಾಡಬೇಕು. ರೈತರಿಗೆ ನೇರ ನಗದು ವರ್ಗಾವಣೆ ಮೂಲಕ ಹೆಚ್ಚುವರಿ ಸಹಾಯಧನ ಒದಗಿಸಬೇಕು. ಮತ್ತು ಕೃಷಿ ಚಟುವಟಿಕೆಗಳಿಗೆ ಅನುಕೂಲ ಆಗುವಂತೆ ಡೀಸೆಲ್ ಅನ್ನು ರಿಯಾಯಿತಿ ದರದಲ್ಲಿ ವಿತರಿಸಬೇಕು ಎಂದು ರೈತರು ಆಗ್ರಹಿಸಿದ್ದಾರೆ.

ಡಾ.ಸ್ವಾಮಿನಾಥನ್ ವರದಿಯನ್ನು ಜಾರಿಗೆ ತರಬೇಕು ಕೃಷಿಯಲ್ಲಿ ಶೇಕಡ 50 ಪರ್ಸೆಂಟಕ್ಕೂ ಹೆಚ್ಚು ಸಹಾಯಧನ ನೀಡಬೇಕು. ರಸ ಗೊಬ್ಬರ ಕೃತಕ ಅಭಾವ ಸೃಷ್ಟಿಸಿ ಕಾಳ ಸಂತೆಯಲ್ಲಿ ಮಾರಾಟ ಮಾಡುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕ. ಎಲ್ಲಾ ರೈತರ ಸಾಲ ಮನ್ನ ಮಾಡಬೇಕು ಕೇರಳ ಮಾದರಿಯಲ್ಲಿ ಋಣಮುಕ್ತ ಕಾಯ್ದೆ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ಹೋರಾಟ ಸಮಿತಿ ತಾಲೂಕು ಪ್ರಧಾನ ಕಾರ್ಯದರ್ಶಿ ಜೆ.ಸಿದ್ದರಾಮನಗೌಡ, ಸದಸ್ಯರಾದ ಬಿ.ಸುರೇಶ್, ಬಿ.ಎಲ್. ಈರಣ್ಣ, ಎಚ್.ಬಿ.ಓಬಳೇಶಪ್ಪ, ಎಂ.ಹುಲಪ್ಪ, ಎಂ.ಲಕ್ಷ್ಮಣ, ಕೆ.ಬಸವರಾಜ, ನಾಗರಾಜಗೌಡ ಭಾಗವಹಿಸಿದ್ದರು.



ಯುವಕರಿಗೆ ತರಬೇತಿ: ಉದ್ಯೋಗಪತ್ರ ವಿತರಣೆ

ಸಂಡೂರು: ಜೆಎಸ್‌ಡಬ್ಲ್ಯೂ ಗ್ರಾಮೀಣ ಯುವಕರಿಗೆ ಉತ್ತಮ ಗುಣಮಟ್ಟದ ತರಬೇತಿ ಕೇಂದ್ರ ಸ್ಥಾಪಿಸಿ ತರಬೇತಿ ನೀಡಿ ಉದ್ಯೋಗ ಪ್ರಮಾಣ ಪತ್ರ ವಿತರಿಸುತ್ತಿರುವುದು ಶ್ಲಾಘನೀಯ. ಯುವಕರು ಕೌಶಲ್ಯವಂತರಾಗಿ ಉತ್ತಮ ಜೀವನ ರೂಪಿಸಿಕೊಳ್ಳಬೇಕು ಎಂದು ಸಂಡೂರು ಶಾಸಕಿ ಅನ್ನಪೂರ್ಣ ತುಕಾರಾಂ ಹೇಳಿದರು.

ತಾಲೂಕಿನ ಸರ್ಕಾರಿ ಐಟಿಐ ಕಾಲೇಜಿನಲ್ಲಿ ಜೆಎಸ್‌ಡಬ್ಲ್ಯೂ ಫೌಂಡೇಶನ್ ವತಿಯಿಂದ ಗ್ರಾಮೀಣ ಯುವಕರಿಗಾಗಿ ವಿದ್ಯುತ್ ತಂತ್ರಜ್ಞ ತರಬೇತಿ ಕಾರ್ಯಕ್ರಮ ಕಳೆದ ಡಿಸೆಂಬರ್‌ನಲ್ಲಿ ಪ್ರಾರಂಭಿಸಿತ್ತು. ಪ್ರಸ್ತುತದಲ್ಲಿ ಮೊದಲ ಹಂತದ ತರಬೇತಿ ಪೂರ್ಣಗೊಂಡಿದ ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ ಪ್ರಮಾಣ ಪತ್ರ ಮತ್ತು ಉದ್ಯೋಗ ಪತ್ರ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಫೌಂಡೇಶನ್ ದಕ್ಷಿಣ ವಿಭಾಗದ ಮುಖ್ಯಸ್ಥ ಪೆದ್ದಣ್ಣ ಬೀಡಲಾ ಮಾತನಾಡಿ ಇಲೆಕ್ಟ್ರಿಕಲ್ ಟೆಕ್ನಿಷಿಯನ್ ತರಬೇತಿ ಕಾರ್ಯಕ್ರಮವು 3 ತಿಂಗಳುಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಇದರಲ್ಲಿ ಒಟ್ಟು 120 ವಿದ್ಯಾರ್ಥಿಗಳು ದಾಖಲಾಗಿ ತರಬೇತಿ ಪಡೆದು ಪ್ರಮಾಣಪತ್ರ ಪಡೆದಿದ್ದಾರೆ. ಇವರಲ್ಲಿ 66 ವಿದ್ಯಾರ್ಥಿಗಳಿಗೆ ಸ್ನಾಯ್ದರ್ ಎಲೆಕ್ಟ್ರಿಕಲ್, ಟೊಯೋಟಾ ಮತ್ತು ಸ್ಟೋರ್ ಕ್ರಾಫ್ಟ್ ಬೆಂಗಳೂರು ಸಂಸ್ಥೆಗಳಲ್ಲಿ ಉದ್ಯೋಗ ದೊರೆತಿದೆ. ಅವರಿಗೆ ಸರಾಸರಿ 18 ಸಾವಿರ ವೇತನ ದೊರೆಯುತ್ತಿದೆ. ಈ ಮೂಲಕ ಜೆಎಸ್‌ಡಬ್ಲ್ಯೂ ಫೌಂಡೇಶನ್ ಕೈಗಾರಿಕಾ ಕೌಶಲ್ಯಾಭಿವೃದ್ಧಿ ಹೆಚ್ಚಿಸಿ ಯುವಕರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಗುರಿ ಹೊಂದಿದೆ ಎಂದರು.

ಜೆಎಸ್‌ಡಬ್ಲ್ಯೂ ಸ್ಟೀಲ್ ಲಿಮಿಟೆಡ್‌ನ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಮಯೂರೇಶ ಬಾಪತ್ ಮಾತಾಡಿ, ಜೆಎಸ್‌ಡಬ್ಲ್ಯೂ ಯುವಕರಲ್ಲಿ ಕೌಶಲ್ಯ, ಆತ್ಮವಿಶ್ವಾಸ ಮತ್ತು ಸ್ವಾವಲಂಬನೆ ಬೆಳೆಸುವ ಮೂಲಕ, ಕೈಗಾರಿಕೆಗಳ ಅಗತ್ಯಗಳಿಗೆ ತಕ್ಕ ಪರಿಣತ ಮಾನವ ಸಂಪನ್ಮೂಲವನ್ನು ಸಿದ್ಧಗೊಳಿಸುತ್ತಿದೆ ಎಂದರು.

ಜೆಎಸ್‌ಡಬ್ಲ್ಯೂ ಎನರ್ಜಿ ಲಿಮಿಟೆಡ್‌ನ ಶ್ರೀಕಾಂತ ಹೆಗಡೆ, ಸಿಎಸ್‌ಆರ್ ವಿಭಾಗದ ಶ್ರೇಷ್ಠ ಮತ್ತು ಅನುಷ್ಠಾನ ಸಂಸ್ಥೆ ಗ್ರಾಮ ವಿಕಾಸ ಸೊಸೈಟಿ ಸಚಿನ ಅಳವಟಗಿ, ಕಾಲೇಜಿನ ಆಡಳಿತಾಧಿಕಾರಿ ಶಾಂತಪ್ಪ ಎಚ್, ವಿದ್ಯಾರ್ಥಿಗಳು, ಸಿಬ್ಬಂದಿಗಳು ಭಾಗವಹಿಸಿದ್ದರು.



ಗ್ರಾಮೀಣ ಸಾಂಸ್ಕೃತಿಕ ಸಂಭ್ರಮ

ಬಳ್ಳಾರಿ: ಭಾರತ ಹಳ್ಳಿಗಳ ದೇಶ ಕಲೆ ಸಂಸ್ಕೃತಿ ಇಲ್ಲಿಯ ನೆಲದಲ್ಲಿಯೇ ಇದೆ, ಗ್ರಾಮೀಣ ಭಾಗದಲ್ಲಿ ಗ್ರಾಮೀಣ ಸೊಗಡನ್ನು ಹೊಸ ಪೀಳಿಗೆಗೆ ಪರಿಚಯಿಸುವ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಹೇಳಿದರು.

ತಾಲೂಕಿನ ಶ್ರೀಧರಗಡ್ಡೆ ಗ್ರಾಮದಲ್ಲಿ ಶ್ರೀಮಹಾ ದೇವತಾತ ಕಲಾ ಸಂಘ, ಹಂದ್ಯಾಳು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಗ್ರಾಮೀಣ ಸಾಂಸ್ಕೃತಿಕ ಸಂಭ್ರಮ-2026 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಗ ಮಠಗಳಲ್ಲಿ ಪರಂಪರೆ ಸಾರ್ವಜನಿಕರಲ್ಲಿ ಸಾಂಸ್ಕೃತಿಕ ಮನೋಭಾವ ಮೂಡಲು ಈ ರೀತಿಯ ಕಾರ್ಯಕ್ರಮ ಸಹಕಾರ ಆಗುತ್ತದೆ. ಈ ನಿಟ್ಟನಲ್ಲಿ ಶ್ರೀಮಹಾದೇವ ತಾತ ಕಲಾ ಸಂಘವು ಎರಡು ಮೂರು ದಶಕಗಳಿಂದ ಹೆಚ್ಚಾಗಿ ಹಳ್ಳಿಗಳಲ್ಲಿ ವಿವಿಧ ಕಲಾ ಪ್ರಕಾರ ಹಮ್ಮಿಕೊಂಡು ಬಂದಿರೋದು ವಿಶೇಷವಾಗಿದೆ ಎಂದರು.

ಶ್ರೀಮಠಿ ಕೊಟ್ಟೂರು ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಗ್ರಾಮೀಣ ಪ್ರತಿಭೆಗಳನ್ನು ಹೊರ ತರುವಲ್ಲಿ ಮಹಾದೇವ ತಾತಾ ಕಲಾ ಸಂಘ ನಿರಂತರ ಶ್ರಮವಹಿಸಿದೆ. ಈ ರೀತಿಯ ಕಾರ್ಯಕ್ರಮದಿಂದ ಜನರಲ್ಲಿ ಸಂಸ್ಕಾರ ಮತ್ತು ಸಂಸ್ಕೃತಿ ಮೂಡುತ್ತದೆ ಎಂದರು.



ಈ ವೇಳೆ ಬಸವೇಶ್ವರ ಟ್ರಸ್ಟ್ ಕಮಿಟಿ ಅಧ್ಯಕ್ಷ ಎ.ನಾಗೇಂದ್ರಪ್ಪ, ಅಖಿಲ ಭಾರತ ವೀರಶೈವ ಸಂಘ ತಾಲ್ಲೂಕು ಅಧ್ಯಕ್ಷ ಎಸ್.ಬಿ.ವೀರನಗೌಡ, ಗ್ರಾಮದ ಹಿರಿಯ ಮುಖಂಡರಾದ ಬರು ಘಂಟರ ಸಣ್ಣ ಪಂಪಣ್ಣ, ಭಜನೆ ಸಂಘದ ಹಿರಿಯ ಸದಸ್ಯ ಕರ್ಚೇಡು ಮಾರೆಪ್ಪ, ಕಲಾಶ್ರೀ ಪ್ರಶಸ್ತಿ ಪುರಸ್ಕೃತ ಎಸ್.ಕೆ.ಆರ್.ಜಿಲಾನಿ ಭಾಷ, ಭೀಮನೇನಿ ಪ್ರಸಾದ, ಜಿ. ಲಿಂಗಪ್ಪ, ನಿರಂಜನ, ಹಳ್ಳಿಮನೆದೊಡ್ಡ ಬಸಪ್ಪ ಉಪಸ್ಥಿತರಿದ್ದರು. ಕುಮಾರಿ ಸಾಯಿ ಶೃತಿ ವಂದಿಸಿದರು. ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಡಿ. ಪಂಪನಗೌಡ ಬಳ್ಳಾರಿ ತಂಡದಿಂದ ಭಜನೆ, ಕವಿತ ಕೆ ಬಳ್ಳಾರಿ ತಂಡದಿಂದ ಸುಗಮ ಸಂಗೀತ, ಎರ್ರೆಮ್ಮ ತಂಡದಿಂದ ರಂಗಗೀತೆ ಗಾಯನ, ಎಸ್ ಕೆ ಆರ್ ಜಿಲಾನಿ ತಂಡ ಸಮೂಹಿಕ ನೃತ್ಯ ಮತ್ತು ಗಣೇಶ ಕುಮಾರ್ ಬಿ ತಂಡದಿಂದ ಶರಣ ಸಂಗಮ ಐತಿಹಾಸಿಕ ನಾಟಕ ಗಮನಸೆಳೆಯಿತು.

ರೈತರಿಗೆ ಬಿತ್ತನೆ ಬೀಜ ವಿತರಣೆ

ಹೂವಿನಹಡಗಲಿ: ಪ್ರಸಕ್ತ 2026-27ನೇ ಸಾಲಿನ ಮುಂಗಾರು ಹಂಗಾಮಿನ ವಿವಿಧ ಬೆಳೆಗಳ ಬಿತ್ತನೆ ಬೀಜ ವಿತರಣೆ ಕಾರ್ಯಕ್ರಮವನ್ನು ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಶಾಸಕ ಕೃಷ್ಣನಾಯಕ ಇವರ ನೇತೃತ್ವದಲ್ಲಿ ಕಾರ್ಯಕ್ರಮ ಜರುಗಿತು.

ಕೃಷಿಕ ಸಮಾಜದ ಅಧ್ಯಕ್ಷ ದೀಪದ ಕೃಷ್ಣಪ್ಪ ಮಾತನಾಡಿ, ಮುಂಗಾರು ಹಂಗಾಮಿಗೆ ರಾಜ್ಯದಲ್ಲಿ ಬಿತ್ತನೆ ಬೀಜ ವಿತರಣೆ ಆರಂಭಗೊಂಡಿದೆ. ಕೃಷಿ ಇಲಾಖೆ ರೈತ ಸಂಪರ್ಕ ಕೇಂದ್ರಗಳ ಮೂಲಕ ಸೋಯಾಬೀನ್, ಶೇಂಗಾ, ರಾಗಿ, ಭತ್ತ ಹಾಗೂ ಮೆಕ್ಕೆಜೋಳ ಸೇರಿದಂತೆ ವಿವಿಧ ಬೆಳೆಗಳ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ವಿತರಿಸುತ್ತಿದ್ದು, ಯಾವುದೇ ಕೊರತೆಯಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ. ರೈತರಿಗೆ ಆತಂಕವಿಲ್ಲದಂತೆ ಅಗತ್ಯ ಪ್ರಮಾಣದ ಬಿತ್ತನೆ ಬೀಜಗಳನ್ನು ದಾಸ್ತಾನು ಮಾಡಲಾಗಿದೆ. ಸೋಯಾಬೀನ್ ಹಾಗೂ ಶೇಂಗಾ ಬೀಜಗಳಿಗೆ ಬೇಡಿಕೆಗೆ ಅನುಗುಣವಾಗಿ ಪೂರೈಕೆ ಮಾಡಲಾಗುತ್ತಿದೆ. ಪ್ರಮಾಣೀಕೃತ ಮತ್ತು ಅಧಿಕೃತ ಬಿತ್ತನೆ ಬೀಜಗಳನ್ನು ಪೂರೈಸಲಾಗುತ್ತಿದೆ ಎಂದರು.

ಕೃಷಿ ಸಹಾಯಕ ನಿರ್ದೇಶಕ ಮಂಜುನಾಥ ಕೆಟಿ ಮಾತನಾಡಿ, ನಿಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರಗಳು, ತಾಲೂಕು ಕೃಷಿ ಕೇಂದ್ರಗಳು ಮತ್ತು ಅಧಿಕೃತ ರೈತ ಸಹಕಾರಿ ಸಂಘಗಳ ಮೂಲಕ ಬೀಜಗಳನ್ನು ಪಡೆಯಬಹುದು.ಹೊರಗಿನಿಂದ ಬ್ರ್ಯಾಂಡ್ ಇಲ್ಲದ ಅಥವಾ ಕಳಪೆ ಗುಣಮಟ್ಟದ ಬೀಜ ಖರೀದಿಸಬೇಡಿ. ಬಿತ್ತನೆ ಬೀಜಗಳು, ರಸಗೊಬ್ಬರ ಮತ್ತು ಕೀಟನಾಶಕಗಳನ್ನು ಕಡ್ಡಾಯವಾಗಿ ಪರವಾನಗಿ ಪಡೆದ ಅಧಿಕೃತ ಡಿಲರ್‌ಗಳ ಬಳಿ ಮಾತ್ರ ಖರೀದಿಸಿ ಮತ್ತು ಬಿಲ್ ಪಡೆಯಿರಿ ಎಂದರು.

ಈ ವೇಳೆ ಕೃಷಿ ಅಧಿಕಾರಿ ಕಿರಣ, ವಕೀಲರಾದ ಗಂಗಾಧರ, ಆತ್ಮ ಸಿಬ್ಬಂದಿ ಕೃಷಿ ಇಲಾಖೆ ವರ್ಗದವರು, ವಿವಿಧ ರೈತ ಮುಖಂಡರು, ಮಹಿಳೆಯರು ಉಪಸ್ಥಿತರಿದ್ದರು.



ರಾಜ್ಯ ಸರ್ಕಾರದ ವೈಫಲ್ಯ ಖಂಡಿಸಿ ಪ್ರತಿಭಟನೆ

ಯಾದಗಿರಿ: ರಾಜ್ಯ ಸರ್ಕಾರದ ವೈಫಲ್ಯ ಖಂಡಿಸಿ ಬಿಜೆಪಿಯಿಂದ ನಗರದಲ್ಲಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು. ನಗರದ ಮೈಲಾಪುರ ಬೇಸ್‌ನಿಂದ ನಗರಸಭೆ ಕಚೇರಿವರೆಗೆ ಸಾವಿರಾರು ಕಾರ್ಯಕರ್ತರು ಕಾಲ್ನಡಿಗೆಯಲ್ಲಿ ಆಗಮಿಸಿ ಯಾದಗಿರಿ ಕ್ಷೇತ್ರದ ಶಾಸಕ ಚನ್ನಾರಡ್ಡಿ ಪಾಟೀಲ್ ವಿರುದ್ಧ ಹರಿಹಾಯ್ದರು.

ಮಾಜಿ ಸಂಸದ ಉಮೇಶ ಜಾಧವ್, ಮಾಜಿ ಸಂಸದ ರಾಜಾ ಅಮರೇಶ ನಾಯಕ, ಬಿಜೆಪಿ ರಾಜ್ಯ ಕಾರ್ಯಕಾರಿ ಸದಸ್ಯ ಮಹೇಶರೆಡ್ಡಿ ಮುದ್ನಾಳ ಮಾತನಾಡಿದರು.

ಮುಖಂಡ ರಾಚನಗೌಡ ಮುದ್ನಾಳ ಮಾತನಾಡಿ, ನಗರಸಭೆಯಲ್ಲಿ ಎಲ್ಲ ಕೆಲಸಕ್ಕೂ ಲಂಚ ಫಿಕ್ಸ್ ಮಾಡಲಾಗಿದೆ. ಅಕಾರಿ, ಸಿಬ್ಬಂದಿ ಕೆಲಸ ಮಾಡುತ್ತಿದೆ. ನಗರಕ್ಕೆ ಶುದ್ಧ ಕುಡಿಯುವ ನೀರು ಸರಬರಾಜು ಆಗುತ್ತಿಲ್ಲ, ಸಮರ್ಪಕ ವಿದ್ಯುತ್ ಕೊಡುವಲ್ಲಿ ಜೆಸ್ಕಾಂ ಅಕಾರಿಗಳು ವಿಫಲರಾಗಿದ್ದಾರೆ ಎಂದು ಹರಿಹಾಯ್ದರು.

ಜಿಲ್ಲಾಧ್ಯಕ್ಷ ಬಸವರಾಜ ವಿಭೂತಿಹಳ್ಳಿ, ಬಿಜೆಪಿ ವಿಭಾಗ ಸಹ ಪ್ರಭಾರಿ ಶರಣಪ್ಪ ತಳವಾರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪರಶುರಾಮ್ ಕುರಕುಂದಾ, ನಾಗರತ್ನ ಕುಪ್ಪಿ, ದೇವೇಂದ್ರನಾಥ ನಾದ್, ಜಿಲ್ಲಾ ವಕ್ತಾರ ಹಣಮಂತ ಇಟಗಿ, ಸಿದ್ದಣ್ಣಗೌಡ ಕಾಡಂನೋರ, ಸಿದ್ದಪ್ಪ ಹೊಟ್ಟಿ, ಖಂಡಪ್ಪ ದಾಸನ್, ಮಲ್ಲಣ್ಣಗೌಡ ಹತ್ತಿಕುಣಿ, ವೆಂಕಟರಡ್ಡಿ ಅಬ್ಬೆತುಮಕೂರು, ಸದಾಶಿವಪ್ಪಗೌಡ ರೋಟ್ನಡಗಿ, ಸುನೀತಾ ಚವ್ಹಾಣ, ಬಸವರಾಜ ಸೊನ್ನದ, ವೀಣಾ ಮೋದಿ, ರುದ್ರುಗೌಡ ಪಾಟೀಲ್, ಸ್ವಾಮಿದೇವ ದಾಸನಕೇರಿ, ದೊಡ್ಡಪ್ಪ ದೇಸಾಯಿ, ಶರಣಗೌಡ ತಂಗಡಗಿ, ರಾಜಶೇಖರಯ್ಯ ಸ್ವಾಮಿ ಆಲಂಪಲ್ಲಿ, ಚಂದ್ರಕಾಂತ ಮಡ್ಡಿ, ರಮೇಶ್ ದೊಡ್ಡಮನಿ, ಮಲ್ಲಿಕಾರ್ಜುನ ಕಟ್ಟಿಮನಿ,ರವಿ ಬಾಪುರೆ, ನಾಗರಡ್ಡಿ ಇಬ್ರಾಹಿಂಪುರ,ಚನ್ನವೀರಯ್ಯ ಸ್ವಾಮಿ,ಶಾಂತಗೌಡ ಪಗಲಾಪುರ, ಗೋಪಾಲ ದಾಸನಕೇರಿ, ಮಹಾದೇವಪ್ಪ ಗಣಪುರ ಇದ್ದರು.



ಯಾದಗಿರಿ ಕ್ಷೇತ್ರದಲ್ಲಿ ಅಭಿವೃದ್ಧಿ ನಿಂತ ನೀರಾಗಿದೆ. ಸ್ಥಳೀಯ ಶಾಸಕರು ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಹೀಗಾಗಿ ನಾವು ಜನರ ಹಿತಾಸಕ್ತಿ ಕಾಪಾಡಲು ಇನ್ನು ಮುಂದೆ ನಿರಂತರ ಹೋರಾಟ ನಡಸುತ್ತೇವೆ.
■ **ಮಹೇಶರಡ್ಡಿ ಮುದ್ನಾಳ, ಬಿಜೆಪಿ ಯುವ ನಾಯಕ**

ನೂತನ ವಸತಿ ಗೃಹಗಳ ಉದ್ಘಾಟನೆ

ಹೂವಿನಹಡಗಲಿ: ತಾಲೂಕಿನ ಇಟ್ಟಿಗಿ ಗ್ರಾಮದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕೆಎಂಇಆರ್‌ಸಿ ವತಿಯಿಂದ ನಿರ್ಮಿಸಲಾದ ವೈದ್ಯರ ವಸತಿ ಗೃಹ ಹಾಗೂ ಗ್ರೂಪ್-ಡಿ ಸಿಬ್ಬಂದಿಗಳ ವಸತಿ ಗೃಹಗಳನ್ನು ಶಾಸಕ ಎಲ್.ಕೃಷ್ಣ ನಾಯ್ಕ ಮಂಗಳವಾರ ಅಧಿಕೃತವಾಗಿ ಉದ್ಘಾಟಿಸಿದರು.

ಉತ್ತಮ ಕಾಮಗಾರಿಗೆ ಶ್ಲಾಘನೆ, ನೂತನ ವಸತಿ ಗೃಹಗಳ ಸುಂದರ ಕಟ್ಟಡ ಕಾಮಗಾರಿ ಪೂರ್ಣಗೊಳಿಸಿದ ಗುತ್ತಿಗೆದಾರರಾದ ಎಂ.ಚೇತನ ಕುಮಾರ, ಸುಬ್ಬರಾವ್ ಎ. ಕೆಲಸದ ವೈಖರಿಯನ್ನು ಶಾಸಕರು ಹಾಗೂ ಆಸ್ಪತ್ರೆ ವೈದ್ಯಾಧಿಕಾರಿಗಳು ಮುಕ್ತಕಂಠದಿಂದ ಶ್ಲಾಘಿಸಿ, ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಪ್ರಮುಖರು ಡಾ.ಶೀಲಾ ದಂತರೋಗ ತಜ್ಞರು, ಡಾ.ಮಧು, ಡಾ.ಶಿವಕುಮಾರ, ಡಾ.ಶಿವುನಾಗಪ್ಪ, ಗ್ರಾಮದ ಮುಖಂಡರು, ಸಾರ್ವಜನಿಕರು, ಸಮುದಾಯ ಆರೋಗ್ಯ ಕೇಂದ್ರದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ನೂರಾರು ಎಕರೆ ಸೂರ್ಯಕಾಂತಿ ಬೆಳೆ ನಷ್ಟ ಭೀತಿ

▶ **ಪುಷ್ಪವತಿ ಬಸಯ್ಯ ಜಿಎಂ**


ಕುರುಗೋಡು: ಪಟ್ಟಣ ಸೇರಿದಂತೆ ಗ್ರಾಮೀಣ ಭಾಗದಲ್ಲಿನ ಶುಕ್ರವಾರ ಹಾಗೂ ಶನಿವಾರ ಸುರಿದ ಗುಡುಗು, ಸಿಡಿಲು ಭಾರೀ ಗಾಳಿ ಸಹಿತ ಕೃತಿಕಾ ಮಳೆಯ ಅಬ್ಬರಕ್ಕೆ ಜನಜೀವನ ಅಸ್ತವ್ಯಸ್ತಗೊಂಡಿದೆ. ಈ ಭಾಗದಲ್ಲಿ ಸೂರ್ಯಕಾಂತಿ ಬೆಳೆಗೆ ನಿರತ ಮಳೆಯಿಂದ ಹೂ ಹಂತದಲ್ಲಿನ ಬೆಳವಣಿಗೆ ತಂಪು ಹೆಚ್ಚಾಗಿದ್ದು, ರೈತರರಿಗೆ ಬೆಳೆನಷ್ಟದ ಭೀತಿ ಎದುರಾಗಿದೆ.

ಕಳೆದ ರಾತ್ರಿ ಮೋಡಕವಿದ ವಾತಾವರಣದ ಜೊತೆಗೆ ಗಾಳಿಯ ಅಬ್ಬರ ಮಾತ್ರ ಅಧಿಕವಾಗಿತ್ತು. ಆದರೆ, ಕಳೆದ 3-4 ದಿನಗಳಿಂದ ಬೆಳಗಿನ ಜಾವ ಹಾಗೂ ರಾತ್ರಿ ಗುಡುಗು, ಸಿಡಿಲು ಸಹಿತ ಭಾರೀ ಮಳೆ ಸುರಿಯಿತಲ್ಲದೆ, ನಂತರ ಜಿಟಿ ಜಿಟಿ ಮಳೆಯೂ ಸಹಿ ಅರ್ಧ ಗಂಟೆಗಳ ಕಾಲ ಸುರಿಯಿತು. ಬಿಸಿಲಿನ ತಾಪದಿಂದ ಕಂಗೆಟ್ಟಿದ ಜನತೆಗೆ ಇಂದು ಬೆಳಗಿನ ಜಾವ ಸುರಿದ ಮಳೆ ತಂಪೆನ್ನರೆದಿದೆ.

ಭಾರೀ ಬಿಸಿಲಿನಿಂದ ಜಮೀನುಗಳೆಲ್ಲಾ ಬರಿದಾಗಿದ್ದು, ಸಹಿತ ಹಸಿರು ಮೇವು, ಕುಡಿಯಲು ನೀರು ಇಲ್ಲದೆ ಜಾನುವಾರುಗಳಿಗೆ ತೀವ್ರವಾದ ತೊಂದರೆಯಾಗಿತ್ತು. ಆದರೆ, ಬೆಳಗಿನ ಜಾವ ಸುರಿದ ಮಳೆಯಿಂದ ರಸ್ತೆ ಬದಿಯ ತಗ್ಗಿನ ಪ್ರದೇಶಗಳಲ್ಲಿ ಗುಡ್ಡಗಳಲ್ಲಿನ ಗುಂಡಿಗಳಲ್ಲಿ ಹಾಗೂ ಚೆಕ್ ಡ್ಯಾಂಗಳಲ್ಲಿ ನೀರು ಸಂಗ್ರಹವಾಗಿದ್ದು, ಜಾನುವಾರುಗಳಿಗೆ ಅಲ್ಪ ಮಟ್ಟಿಗೆ ನೀರಿನ ಬವಣೆ ತಪ್ಪಿದಂತಾಗಿದೆ. ಜೊತೆಗೆ ಮಳೆಯಿಂದಾಗಿ ಬರಿದಾದ ಜಮೀನಿನಲ್ಲಿ ಪ್ರದೇಶಗಳಲ್ಲಿ ಹಸಿರು ಮೇವು ಬೆಳೆಯಲಿದ್ದು, ಇದರಿಂದ ಜಾನುವಾರುಗಳಿಗೆ ಮೇವಿನ ಬವಣೆಯೂ ತಪ್ಪಲಿದೆ.

ಮಳೆಯಿಂದಾಗಿ ಬರಿದಾದ ಜಮೀನಿನಲ್ಲಿ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಹಸಿರು ಮೇವು ಬೆಳೆಯಲಿದ್ದು, ಇದರಿಂದ ಜಾನುವಾರುಗಳಿಗೆ ಮೇವಿನ ಬವಣೆಯೂ ತಪ್ಪಲಿದೆ.

ಎಮ್ಮಿಗನೂರು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ವಿದ್ಯುತ್ ಕಂಬಗಳು ವಾಲಿವೆ. ಹಾನಿಯಾದ ವಿದ್ಯುತ್ ಕಂಬಗಳ ದುರಸ್ತಿ ಕಾರ್ಯ ಈಗಾಗಲೇ ನಡೆದಿದೆ ಎಂದು ಬಸವರಾಜ 33 ಕೆವಿ ಶಾಖಾ ಅಧಿಕಾಗಳು ಎಮ್ಮಿಗನೂರು ತಿಳಿಸಿದರು.



ಭಾರೀ ಗಾಳಿ ಮಳೆಯಿಂದ ಯಾವುದೇ ಪ್ರಾಣಾಪಾಯವಾಗಿಲ್ಲ. ತಾಲೂಕಿನಲ್ಲಿ ಮುಂಗಾರು ಪೂರ್ವ ಮಳೆ ಆರಂಭವಾಗಿರುವುದರಿಂದ ಗ್ರಾಮಾಡಳಿತಾಧಿಕಾರಿಗಳನ್ನು ಕೇಂದ್ರ ಸ್ಥಾನದಲ್ಲಿಯೇ ಇರುವಂತೆ ಸೂಚಿಸಲಾಗಿದೆ. ಯಾವುದೇ ಸಂಭವನೀಯ ಅಪಾಯ ನಿಯಂತ್ರಿಸಲು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ.
■ **ಜೂಗಲ್ ಮಂಜುನಾಯಕ, ತಹಶೀಲ್ದಾರ್**